ಸಂವಾದ

ಡಿಸೆಂಬರ್ ೨೦೧೦ ರೂ. ೨೦

ಹೊಸ ಅಂಕಣ



ಬಿಜೆಪಿಯ ಸೈದ್ಧಾಂತಿಕ ನೆಲೆಗಟ್ಟು

ಜಾತಿ ವಿನಾಶಕ್ಕಾಗಿ ಜಾತಿ ಜನಗಣತಿ

ಸಂವಾದ

ಮಾಸ ಪತ್ರಿಕೆ

ಸಂಪುಟ ೮ ಸಂಚಿಕೆ ೨
ನವಂಬರ್ ೨೦೧೦

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :

ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು–೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ **Editorial: 9448048306**
✆ **Circulation: 9945264687, 080-23480278**
e-mail : **samvaada@hotmail.com**
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

❑ ಪತ್ರಗಳು ೦೩

❑ ಹೊಸ ಪುಸ್ತಕ ೨೧

❑ ಸಂಪಾದಕರೊಂದಿಗೆ ಸಂವಾದ:
- ಎನ್.ಕೆ. ಮೋದನ್ ರಾಂ ೦೪
- ಮಲ್ಲಿಕಾರ್ಜುನ ಗುಮ್ಮಗೋಳ ೦೫
- ಬಿ. ಮಹೇಶ ೦೬

❑ ಪ್ರಶಸ್ತಿ ತಿರಸ್ಕಾರ: ಸುದ್ದಿಯಾಗದ ಸೋಜಿಗ!
- ಡಿ.ಎಸ್ ನಾಗಭೂಷಣ ೦೮

❑ ಹಳ್ಳಿಗಳ ರಕ್ತಹೀನತೆ ಮತ್ತು ರೊಕ್ಕಹೀನತೆ: ಅರ್ಥವಿಲ್ಲದ ಅರ್ಥಶಾಸ್ತ್ರ
- ಕೃಷ್ಣಮೂರ್ತಿ ಬಿಳಿಗೆರೆ ೧೦

❑ ಉದುರಿ ಬಿದ್ದ ಮರದ ಎಲೆಗಳು...
- ಮುರಳಿ ಮೋಹನ್ ಕಾಟಿ ೧೩

❑ ಜಾನುವಾರು ಹತ್ಯಾ ನಿಷೇಧ ಮಸೂದೆ : ದ್ವೇಷ ರಾಜಕಾರಣದ ಹುನ್ನಾರ
- ಸುರೇಶ ಭಟ್ ಬಾಕ್ರಬೈಲು ೧೪

❑ ಜಾತಿ ವಿನಾಶಕ್ಕಾಗಿ ಜಾತಿ ಜನಗಣತಿ!?
- ಶಿವಸುಂದರ್ ೧೬

❑ ನೀನ್ಯಾರಿಗಾದೆಯೋ ಎಲೆ ಮಾನವ (ಮುಂದುವರೆದ ಭಾಗ)
- ಡಾ.ಹಿ.ಶಿ. ರಾಮಚಂದ್ರೇಗೌಡ ೨೨

❑ 'ಭೋಧಿವೃಕ್ಷ' ಮತ್ತು 'ಭೋಧಿವರ್ಧನ' ಪ್ರಶಸ್ತಿಗಳು ೨೬

❑ ಜನಸತ್ತೆಯ ಕರಾಳ ಮುಖಗಳು
- ನಾ ದಿವಾಕರ ೨೮

❑ ಬಿ.ಜೆ.ಪಿ.ಯ ಸೈದ್ಧಾಂತಿಕ ನೆಲೆಗಟ್ಟು
- ಬಿ.ಹೆಚ್. ಸತ್ಯನಾರಾಯಣ ೩೪

❑ ಹಾಗೆ ನೋಡಿದರೆ....೧
- ಡಾ. ಬಂಜಗೆರೆ ಜಯಪ್ರಕಾಶ ೪೨

❑ ದಲಿತ್ ಡೈರಿ
- ಚಂದ್ರಭಾನ್ ಪ್ರಸಾದ್/ಸತ್ಯಪ್ರಕಾಶ್ ೪೬

❑ ಬುದ್ಧಾಯಣ
- ಸಿ. ಎಚ್ ರಾಜಶೇಖರ್ ೫೦

ಕವನಗಳು : ❑ ಸಮಯ ಸಂದರ್ಭ ಬಂದಾಗ ನಾನೇ ಹೇಳುತ್ತೇನೆ ೨೫









ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಹೊಲಸು ರಾಜಕೀಯದ ದುರ್ವಾಸನೆ

ಪ್ರಿಯ ಸಂಪಾದಕರೇ,

ಭಾರತ ಪ್ರಜಾಪ್ರಭುತ್ವ ರಾಷ್ಟ್ರವೆಂದು ಕರೆಯಲಾಗುತ್ತಿದೆ. ಜನರಿಂದ ಚುನಾಯಿತರಾದ ಜನ ಪ್ರತಿನಿಧಿಗಳು ಜನಸಾಮಾನ್ಯರ ಒಳಿತಿಗಾಗಿ ಕಾಯಿದೆ ಕಾನೂನುಗಳನ್ನು ಜಾರಿಗೊಳಿಸುತ್ತಾರೆಂಬುದು ಕಾನೂನು ರಚನಾಕಾರರ ಆಶಯವಾಗಿತ್ತು. ಶತ ಶತಮಾನಗಳಿಂದ ಹಸಿವಿನಿಂದ, ರೋಗಗಳಿಂದ, ಬಡತನದಿಂದ ನರಕಯಾತನೆ ಅನುಭವಿಸುತ್ತಿರುವ ನೊಂದ ಜನಗಳ ಕಣ್ಣಲ್ಲಿ ನಗುವಿನ ಕಿರಣಗಳು ಮೂಡುವವೆಂಬ ದೂರದ ಕನಸು ಹೊತ್ತ ಅಂದಿನ ಕೆಲವು ಮನಸ್ಸುಗಳು ನಿಟ್ಟುಸಿರು ಬಿಟ್ಟಿದ್ದವು. ಸ್ವಾತಂತ್ರ್ಯಾ ನಂತರ ಭಾರತೀಯರು ಬ್ರಿಟೀಷರ ಭಯದಿಂದ ಮುಕ್ತರಾಗಿ ಸಮಾಜದಲ್ಲಿ ತಲೆ ಎತ್ತಿ ಬದುಕು ಸಾಗಿಸುತ್ತಾರೆಂಬುದು ಸ್ವಾತಂತ್ರ್ಯ ಸಂಗ್ರಾಮದ ಕ್ರಾಂತಿಕಾರಿಗಳ ನಂಬಿಕೆಯಾಗಿತ್ತು. ಅದಕ್ಕಾಗಿ ಅವರು ತಮ್ಮ ಅಮೂಲ್ಯ ಪ್ರಾಣವನ್ನೇ ಬಲಿಕೊಟ್ಟರು.

ಲಕ್ಷಾಂತರ ಯುವ ಚೇತನಗಳು ದಾಸ್ಯದ ಬಿಡುಗಡೆಗಾಗಿ ಸಾವನ್ನು ಮುಂದಿಟ್ಟುಕೊಂಡು ಹೋರಾಡಿದ್ದನ್ನು ನಾವು ಮರೆಯಬಾರದು. ಆದರೆ ಅದೇ ಸಂದರ್ಭದಲ್ಲಿ ಅಂದಿನ ಕೆಲ ಕ್ರಾಂತಿಕಾರಿಗಳಾದ ನೇತಾಜಿ, ಭಗತ್ಸಿಂಗ್, ಚಂದ್ರಶೇಖರ್ ಆಜಾದ್‌ರಂತಹ ಅನೇಕ ಕ್ರಾಂತಿಕಾರಿಗಳು ಬಹಳ ಎಚ್ಚರಿಕೆಯಿಂದ ಒಂದು ಗಂಭೀರವಾದ ಮಾತನ್ನು ಹೇಳಿದ್ದರು. "ಭಾರತವೇನೋ ಸ್ವಾತಂತ್ರ್ಯವಾಗುತ್ತದೆ. ಬ್ರಿಟೀಷರು ಇಲ್ಲಿಂದ ತೊಲಗುತ್ತಾರೆ. ಆದರೆ ಅವರ ಜಾಗದಲ್ಲಿ ನಮ್ಮದೇ ದೇಶದ ಶೋಷಕ ವರ್ಗ ನಮ್ಮವರನ್ನೇ ಶೋಷಿಸಲು ಹವಣಿಸುತ್ತಿರುವಂತೆ ಕಾಣುತ್ತಿದೆ." ಎಂಬ ಸಂಶಯವನ್ನು ವ್ಯಕ್ತಪಡಿಸಿದ್ದರು.

ಅದರಂತೆಯೇ ಇಂದು ಪ್ರಜಾಪ್ರಭುತ್ವದ ಆಶಯವನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವ ಭಾರತೀಯ ಬಂಡವಾಳಶಾಹಿವರ್ಗ ಜನತೆಯನ್ನು ಅಜ್ಞಾನದ ಅಂಧಕಾರದಲ್ಲಿಟ್ಟು ಹಸಿವಿನ ಅರಮನೆಯಲ್ಲಿ ಬಡತನದ ಹಾಸಿಗೆಯನ್ನು ಹಾಸಿ, ಮೌಢ್ಯದ ಹೊದಿಕೆಯನ್ನು ಹೊದಿಸಿ, ಹಣೆಬರಹದ ಗಾಳಿಯನ್ನು ಹಾಕುತ್ತಲೇ ಬರುತ್ತಿದೆ. ಇಂತಹದ್ದರ ಮಧ್ಯೆ ಅನ್ಯಾಯದ

ಪತ್ರಗಳು

ವಿರುದ್ಧ ಸಿಡಿದೇಳುವ ಜನತೆಯ ಎದುರು ಜಾತಿ, ಭಾಷೆ, ಹಾಗೂ ಧರ್ಮದ ಗೋಡೆಯನ್ನು ಕಟ್ಟಿ ಅವರ ಒಗ್ಗಟ್ಟನ್ನು ಮುರಿದು ಛಿದ್ರ ಛಿದ್ರ ಮಾಡುತ್ತಲಿದೆ.

ಈ ಶೋಷಕವರ್ಗ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ತಮ್ಮ ಪಾದಸೇವೆ ಮಾಡಲು ಅರ್ಹ ಕಳ್ಳ ಖದೀಮರನ್ನು ಚುನಾವಣೆಗೆ ನಿಲ್ಲಿಸಿ ಅವರ ಗೆಲುವಿಗಾಗಿ ಹಣದ ಹೊಳೆಯನ್ನೇ ಹರಿಸುತ್ತಾರೆ. ಹಣದ ಅಮಿಶವೊಡ್ಡಿ ಮತದಾರರನ್ನೂ ಭ್ರಷ್ಟಾರನ್ನಾಗಿ ಮಾಡುತ್ತಿದ್ದಾರೆ.

ಮತದಾನದ ಮೌಲ್ಯವನ್ನೇ ಅರಿಯದ ಅದೆಷ್ಟೋ ಮುಗ್ದರು ಈ ಕಪಟ ರಾಜಕಾರಣಿಗಳ ಮಾತಿಗೆ ಮರುಳಾಗಿ ಮತವನ್ನು ಮಾರಿಕೊಳ್ಳುವ ಮೂಲಕ ತಮಗರಿವಿಲ್ಲದಂತೆ ತಾವೇ ಮಾರಾಟಕ್ಕಿದ್ದಾರೆ. ಇಂತಹ ವ್ಯಾಪಾರದ ಚುನಾವಣೆಗಳಲ್ಲಿ ಗೆದ್ದು ಬರುವ ಜನಪ್ರತಿನಿಧಿಗಳು ಪ್ರಜಾಪ್ರಭುತ್ವದ ಆಶಯವನ್ನು ಎತ್ತಿ ಹಿಡಿಯುತ್ತಾರೆ ಎಂದು ಯಾರಾದರು ನಂಬಿದರೆ ಅದು ಶುದ್ಧ ಮೂರ್ಖತನವಾಗುತ್ತದೆ.

ಕರ್ನಾಟಕ ಅಷ್ಟೇ ಅಲ್ಲ ದೇಶದ ರಾಜಕೀಯ ವ್ಯವಸ್ಥೆಯೇ ಇಂದು ಹೊಲಸೆದ್ದು ನಾರುತ್ತಿದೆ. ಸದಾ ಹಣ ಮತ್ತು ಅಧಿಕಾರಕ್ಕಾಗಿ ಹಪಹಪಿಸುವ ನೀಚ ರಾಜಕಾರಣಿಗಳೇ ತುಂಬಿಹೋಗಿದ್ದಾರೆ. ಮತ ಚಲಾಯಿಸಲು ಮತದಾರನಿಗೆ ನೂರು ಇನ್ನೂರು ರೂಪಾಯಿ ಹಂಚಿ ಗೆಲವು ಸಾದಿಸಿದ ಶಾಸಕ ಇಂದು ಕೋಟಿ ಕೋಟಿ ಹಣಕ್ಕೆ ಖರೀದಿಯಾಗುತ್ತಿದ್ದಾರೆ. ಕ್ಷೇತ್ರದ ಜನರ ಕಣ್ಣೀರು ಒರೆಸಬೇಕಾದ ಶಾಸಕರು ಅವರ ಆಶಯವನ್ನು ಮಣ್ಣು ಪಾಲು ಮಾಡುತ್ತಿರುವುದು ಪ್ರಜಾಪ್ರಭುತ್ವದ ಅವನತಿಗೆ ಹಿಡಿದ ಕನ್ನಡಿಯಾಗಿದೆ.

ಕರ್ನಾಟಕದ ರಾಜಕೀಯದಲ್ಲಿ ಮಂತ್ರಿ ಸ್ಥಾನಕ್ಕಾಗಿ ಭಿನ್ನಮತದ ಹೆಸರಿನಲ್ಲಿ ನಡೆದ ರೆಸಾರ್ಟ್ ರಾಜಕೀಯ ನೋಡಿ ಟಿ.ವಿ.ಯನ್ನೇ ಒಡೆದು ಹಾಕುವಷ್ಟು ಸಿಟ್ಟು ಬರುತ್ತಿತ್ತು. ಈ ಹಿಂದೆ ಕದ್ದು-ಮುಚ್ಚಿ ನಡೆಯುತ್ತಿದ್ದ ಶಾಸಕರ ಕುದುರ ವ್ಯಾಪಾರ ಇಂದು ಬಹಿರಂಗವಾಗಿ ಹರಜಾಗುತ್ತಿರುವುದು ನೋಡಿದರೆ ರಾಜಕೀಯ ಇಂದು ತೊಳೆಯಲಿಕ್ಕೆ ಸಾಧ್ಯವಾದಷ್ಟು ಹೊಲಸೆಯಿದಿದೆ. ಅಂತಯೇ ಸಜ್ಜನರು, ಪ್ರಾಮಾಣಿಕರು, ಉನ್ನತ ನೀತಿ, ಸಂಸ್ಕೃತಿ, ಮೌಲ್ಯಗಳನ್ನು ಮೈಗೂಡಿಸಿ ಕೊಂಡವರು ಇಂದಿನ ಚುನಾವಣೆಗಳಲ್ಲಿ ಗೆಲ್ಲಲಾಗದೆ ಕೊಚ್ಚಿಕೊಂಡು ಹೋಗುತ್ತಿದ್ದಾರೆ.

ಆದ್ದರಿಂದ ಹರಿದ ಅಂಗಿಯಂತಾದ ಈ ಭ್ರಷ್ಟಾ ವ್ಯವಸ್ಥೆಗೆ ತೇಪೆಹಾಕುವ ಕೆಲಸವನ್ನು ಕೈಬಿಟ್ಟು, ಹರಿದ ಅಂಗಿಯನ್ನು ಕಿತ್ತೆಸೆದು ಹೊಸದೊಂದು ಅಂಗಿಯನ್ನು ತೊಡಬೇಕಾಗಿದೆ. ಅಂದರೆ ಭ್ರಷ್ಟಾಚಾರದ ಕೂಪವಾಗಿರುವ ಈ ಕೊಳಕು ವ್ಯವಸ್ಥೆಯ ಬದಲಾವಣೆಗಾಗಿ ಜನತೆ ಸಜ್ಜಾಗಬೇಕಿದೆ.

"ಇಂದು ಪ್ರಪಂಚವು ಬದುಕಲಾಗದಂತಹ ಕೆಟ್ಟ ಸ್ಥಳವಾಗುತ್ತಿದೆ. ಅದು ಹೀಗೆ ಆಗುತ್ತಿರುವುದು ಕೆಟ್ಟವರಿಂದಲ್ಲ. ಒಳ್ಳೆಯವರ ಮೌನದಿಂದ." ಎಂಬ ಆಂಗ್ಲ ಕವಿ ಷೇಕ್ಸ್‌ಪಿಯರ್ ಹೇಳಿದ್ದನ್ನು ನಾವು ಗಂಭೀರವಾಗಿ ಪರಿಗಣಿಸಿ ಶತಮಾನಗಳಿಂದ ಮುಂದುವರೆಸಿಕೊಂಡು ಬರಲಾಗಿರುವ ಮೌನವನ್ನು ಮುರಿದು ಸುಸಂಸ್ಕೃತ ಸಮಾಜವನ್ನು ಕಟ್ಟಲು ಮುಂದಾಗಬೇಕಿದೆ.

ಮಡಿವಾಳಪ್ಪ. ಎಸ್.ಕೆ, ಗುಲಬರ್ಗಾ

ಗುರಾಣಿಯಾದ ಜಾತಿ!

ಪ್ರಿಯ ಸಂಪಾದಕರೇ,

ನೀತಿ ಮತ್ತು ಜನತಂತ್ರದ ಪರಧಿಯಲ್ಲಿ ಆಡಳಿತ ನಡೆಸದ ಮುಖ್ಯಮಂತ್ರಿ ಯಡಿಯೂರಪ್ಪನವರ ಭಂಡತನಕ್ಕೂ ಒಂದು ಮಿತಿಯಿರಬೇಕು. ತಾವು ಎಸಗಿದ ಮಿತಿಮೀರಿದ ಭ್ರಷ್ಟಾಚಾರ ಹಾಗೂ ಸ್ವಜನ ಪಕ್ಷಪಾತ ದಾಖಲೆ ಸಹಿತ ಜಗಜ್ಜಾಹಿರಾಗಿ ಹಾದಿ-ಬೀದಿಯಲ್ಲಿ ಜನ ಛೀ-ಥೂ ಎನ್ನುತ್ತಿದ್ದರೂ ಕುರ್ಚಿ ಬಿಡಲೊಲ್ಲರು. ರಾಜಿನಾಮೆ ನೀಡಿ ಎಂಬ ಹೈಕಮಾಂಡ್‌ನ ಒತ್ತಾಯಕ್ಕೂ ಬಗ್ಗದ ಇವರ ಶಿಸ್ತು, ದೇಶಪ್ರೇಮ ಎಂಬುದೆಲ್ಲಾ ಲೊಳಲೊಟ್ಟೆಯೆಂದು ಮತ್ತೊಮ್ಮೆ ಸಾಬೀತಾಗಿದೆ. ಕನಿಷ್ಟ ಮಾನ ಮರ್ಯಾದೆ ಇರುವ ಯಾರೂ ಈ ರೀತಿ ವರ್ತಿಸುತ್ತಿರಲಿಲ್ಲ.

ತಮ್ಮೆಲ್ಲಾ ಹಗರಣಗಳನ್ನು ಮುಚ್ಚಿಕೊಳ್ಳಲು ಮತ್ತು ಮುಖ್ಯಮಂತ್ರಿ ಗಾದಿಯನ್ನು ಉಳಿಸಿಕೊಳ್ಳಲು ತನ್ನ ಜಾತಿಯನ್ನು ಗುರಾಣಿ ಮಾಡಿಕೊಂಡಿದ್ದು ದುರದೃಷ್ಟಕರ. ಹಾಗಾದರೆ, ಪ್ರಭಲ ಜಾತಿಯ ರಕ್ಷಣೆಯಿದ್ದರೆ, ನಿಯಮಗಳನ್ನು ಗಾಳಿಗೆ ತೂರಿ ಅಕ್ರಮವೆಸಗಬಹುದೆ ಹಾಗೂ ಅದನ್ನು ದಕ್ಕಿಸಿಕೊಳ್ಳಬಹುದೆ? ಸ್ಥಾಪಿತ ಹಿತಾಸಕ್ತಿಗಳ ವಿರುದ್ಧ ಬಂಡೆದ್ದು ಪ್ರಗತಿಪರ ಆಶಯಗಳೊಂದಿಗೆ ಉದಯವಾದ ಶರಣ ಸಮುದಾಯ ಯಡಿಯೂರಪ್ಪನವರ ಕರ್ಮಕಾಂಡವನ್ನು ಕಂಡಿಸದೆ ಅವರನ್ನೇ ಸಮರ್ಥಿಸಿದ್ದು ದುರಂತ. ಇವರು ಬಸವಣ್ಣನವರ ಅನುಯಾಯಿಗಳೆಂದು ಹೇಳಿಕೊಳ್ಳಲು ನಾಚಿಕೆ ಪಟ್ಟುಕೊಳ್ಳಬೇಕು.

ಮಠಾಧಿಪತಿಗಳ ದಿವಾಳಿತನ ಬಟ್ಟಬಯಲಾಗಿದೆ. ಹಾದಿ ತಪ್ಪಿದವರನ್ನ ಸರಿದಾರಿಗೆ ತರಬೇಕಾದವರೇ ಭ್ರಷ್ಟಾರ ರಕ್ಷಣೆಗೆ ನಿಂತರೆ ಹೇಗೆ. ಮುಲಾಜಿಗೆ ಒಳಗಾದರೆ ಅಧೋಗತಿಗೆ ಇಳಿಯಬೇಕಾಗುತ್ತದೆ ಎಂಬ ಅರಿವು ಇವರಿಗಿದೆಯೆ? ಅಧಿಕಾರ ಬರುತ್ತದೆ ಹೋಗುತ್ತದೆ. ಅದು ಯಾರ ಸೊತ್ತೂ ಅಲ್ಲ. ಆದರೆ ಒಮ್ಮೆ ಎಸಗಿದ ಅಪಚಾರ ಇತಿಹಾಸದಲ್ಲಿ ಕಪ್ಪುಚುಕ್ಕೆಯಾಗಿ ಉಳಿಯುತ್ತದೆ. ಇದನ್ನು ವೀರಶೈವ ಸಮುದಾಯ ಮನಗಾಣುವುದೇ?

ಮಮತ, ನೆಲಮಂಗಲ



ಪ್ರಕಟಣೆ: ಅನಿವಾರ್ಯ ಕಾರಣಗಳಿಂದಾಗಿ ಈ ಬಾರಿ ಮುಜಾಫರ್ ಅಸ್ಸಾದಿ ಮತ್ತು ಜ್ಯೋತಿ ಗುರುಪ್ರಸಾದ್ ಅವರ ಅಂಕಣ ಪ್ರಕಟವಾಗುತ್ತಿಲ್ಲ. -ಸಂ

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ ೩ ವರ್ಷಕ್ಕೆ ೫ ವರ್ಷಕ್ಕೆ

ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ

ರೂ.೨೦೦/- ರೂ.೫೦೦/- ರೂ.೮೦೦/-

ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ

ರೂ.೨೪೦/- ರೂ.೬೦೦/- ರೂ.೧೦೦೦

ವಿಶೇಷ ಹಿತೈಷಿ ಚಂದದಾರರಿಗೆ

ರೂ.೫೦೦/- ರೂ.೧೫೦೦/- ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-

ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು. ಚೆಕ್ಕು-ಡಿಡಿಗಳು 'ಸಂವಾದ' ಹೆಸರಿನಲ್ಲಿರಲಿ.

ದೇವನೂರು ಸಹನೆ ಕಳೆದುಕೊಳ್ಳಬಾರದು!

ಸಂಪಾದಕರೊಡನೆ ಸಂವಾದ

ಎನ್.ಕೆ. ಮೋಹನ್ ರಾಂ

ಪ್ರಿಯ ಇಂದೂಧರ,

ದೇವನೂರು ಮಹಾದೇವ ಸಹನೆ ಕಳೆದುಕೊಳ್ಳಬಾರದು. ತಾವು ಬಯಸುವ ಹೊಸ ಸಮಾಜ ತಮ್ಮ ಜೀವಿತ ಅವಧಿಯಲ್ಲೇ ಆಗಬೇಕು ಅಂತ ಅವರು ಬಯಸುವುದು ತಪ್ಪು. ಮಾರ್ಕ್ಸ್‌ನ ವಿಕಾಸವಾದದಲ್ಲಿ ಸ್ವಲ್ಪವಾದರೂ ನಂಬಿಕೆ ಇರುವ ದೇವನೂರು, ತಮ್ಮ 40 ವರ್ಷಗಳ ಅನುಭವ ತೀರ ಚಿಕ್ಕದು ಎಂದು ಅವರೂ ಒಪ್ಪುತ್ತಾರೆ. ಹೇಳಿದ್ದನ್ನೇ ಮತ್ತೆ ಹೇಳುವುದಾದರೆ ಎರಡು ಸಾವಿರ ವರ್ಷದ ಮುಂದೆ 40 ವರ್ಷ ಲೆಕ್ಕಕ್ಕೇ ಇಲ್ಲ. ದೇವನೂರು ಕಾಯಬೇಕು. ತಾಳ್ಮೆ ಕಳೆದುಕೊಳ್ಳಬಾರದು. ನಾನು ಇದನ್ನು ಹೇಳುವ ಅವಶ್ಯಕತೆಯಿಲ್ಲ.

ಈ 40 ವರ್ಷಗಳಲ್ಲಿ ಬದಲಾವಣೆ ಆಗಿದೆ. 1970ರಲ್ಲಿ ಮಾನಸ ಗಂಗೋತ್ರಿಯಲ್ಲಿ ಹುಟ್ಟಿದ ದೇವನೂರರ ದಸಂಸ ಈವತ್ತು ಕರ್ನಾಟಕದ ಅತಿ ಕುಗ್ರಾಮ ತಲುಪಿದೆ. ತಮ್ಮ ಮೇಲಿನ ಹಲ್ಲೆಗಳಿಗೆ ಸಮ ಉತ್ತರ ಕೊಡಲು ದಲಿತರು ಸಮರ್ಥರಾಗಿದ್ದಾರೆ. ಇದರ ಜೊತೆಯಲ್ಲೇ ನಗರಗಳಿಗೆ ದಲಿತರ ವಲಸೆ, ಉನ್ನತ ಶಿಕ್ಷಣ, ಹುದ್ದೆಗಳು ದಲಿತರನ್ನು ಭೀಮಕಾಯರನ್ನಾಗಿಸಿವೆ. ಈ ಸಕಾರಾತ್ಮಕ ಕ್ರಿಯೆಯಲ್ಲಿ ದೇವನೂರು ಮತ್ತು ಗೆಳೆಯರ ಕೊಡುಗೆ ಅಪಾರ.

ಇದೇ ಕಾಲದ ನಕಾರಾತ್ಮಕ ಅಂಶಗಳೂ ಇವೆ. ದಲಿತರಷ್ಟೇ ಆರ್ಥಿಕವಾಗಿ-ಸಾಮಾಜಿಕವಾಗಿ ಹಿಂದುಳಿದ ಜಾತಿಯವರು ಇನ್ನೂ ಅಲ್ಲೇ ಇರುವುದು, ಹಾಗೇ ಇರುವುದು. ತನ್ನ ಹಾಗೆಯೇ ಇದ್ದ ದಲಿತ ತನ್ನ ಕಣ್ಣ ಮುಂದೆಯೇ ಮೇಲೇರಿದ್ದು ಒಪ್ಪಲಾರದ ಸ್ಥಿತಿ. ಒಂದು ವೇಳೆ ಮಂಡಲ್ ವರದಿ, ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದವರಿಗೆ ಮೀಸಲಾತಿ ಬರದಿದ್ದರೆ, ದಲಿತ ಮತ್ತು ಹಿಂದುಳಿದವರ ರಕ್ತ ಕೋಡಿಯೇ ಹರಿಯುತ್ತಿತ್ತೇನೋ? ಈಗ ಉತ್ತರ ಪ್ರದೇಶ, ಬಿಹಾರ, ತಮಿಳುನಾಡು ರಾಜಕಾರಣದಲ್ಲಿರುವುದು ಅದೇ ಹಿಂದುಳಿದ ವರ್ಗ ವರ್ಸಸ್ ದಲಿತರು.

ಇನ್ನು ಸರಕಾರಿ ಕಛೇರಿಗಳಲ್ಲಿ ಈ ದ್ವೇಷ ಹೆಚ್ಚಾಗುತ್ತಲೇ ಇದೆ. ಒಂದೇ ದಿನ ಅದೇ ಹುದ್ದೆಗಳಿಗೆ ಸೇರಿಕೊಂಡ ಹಿಂದುಳಿದ ಮತ್ತು ದಲಿತರಲ್ಲಿ, ದಲಿತ ಬೇಗ ಬಡ್ತಿ ಪಡೆದು ಮೇಲೇರಿದ್ದನ್ನು ಹಿಂದುಳಿದವನು ಒಪ್ಪಲಾರ. ಇದೇ ಪರಿಸ್ಥಿತಿ ಹಳ್ಳಿ-ಹಳ್ಳಿಗಳಲ್ಲಿ ವ್ಯವಸಾಯ-ವ್ಯಾಪಾರದಲ್ಲೂ, ಮನೆ, ಜಮೀನು ಹಂಚಿಕೆಯಲ್ಲೂ ಇದೆ.

ಜಾತಿ ಅಳಿಯಲಿಲ್ಲ ಅಂತರ್‌ಜಾತಿ ವಿವಾಹಗಳು ನಿರೀಕ್ಷಿತ ಮಟ್ಟದಲ್ಲಿ ಆಗುತ್ತಿಲ್ಲ ಎಂಬುದು ದೇವನೂರರ ವಿಷಾದ. ಮದುವೆ ಬರೀ ಜಾತಿಯ ಮೇಲೇ ನಿಂತಿಲ್ಲ. ಎರಡು ಮನಸ್ಸುಗಳ- ದೇಹಗಳ ಸಂಬಂಧ ಅದು. ಅದರ ಜೊತೆಗೇ ಆರ್ಥಿಕ ಸ್ಥಿತಿ, ರುಚಿ-ಅಭಿರುಚಿ ಇನ್ನೂ ಅನೇಕ ವಿಷಯಗಳೂ ತಾಳೆಯಾಗಬೇಕು. 40 ವರ್ಷದ ಹಿಂದಕ್ಕೂ ಈ ದಿನಕ್ಕೂ ಸಾಕಾಷ್ಟು ಬದಲಾವಣೆಯಾಗಿದೆ. ಅಂತರ್‌ಜಾತಿ ವಿವಾಹಗಳು ಹೆಚ್ಚಾಗಿವೆ. ಬ್ರಾಹ್ಮಣರಲ್ಲಿ ಹುಡುಗಿಯರ ಕೊರತೆ ಎಷ್ಟಾಗಿದೆಯೆಂದರೆ ಜಾತಕ, ಗೋತ್ರ ಎಲ್ಲವನ್ನೂ ಬಿಟ್ಟಾಕಿದ್ದಾರೆ. ಹೆಣ್ಣು ಸಿಕ್ಕರೆ ಸಾಕು ಎನ್ನುವಂತಾಗಿದೆ. ಈಚೆಗೆ ಬ್ರಾಹ್ಮಣ ಜಾತಿಯ ಹವ್ಯಕರಲ್ಲಿ ಹುಡುಗಿಯರೇ ಸಿಗದೆ ಅವರ ಸ್ವಾಮಿಗಳು ತಮ್ಮ ಜಾತಿಯ ಹುಡುಗರು ಯಾವ ಜಾತಿಯವರನ್ನು ಮದುವೆಯಾದರೂ ಅದಕ್ಕೆ ತಮ್ಮ ಮಠದ ಬೆಂಬಲವಿದೆ, ಎಂಬ ಫರ್ಮಾನು ಹೊರಡಿಸಿದ್ದಾರೆ.

ಮಣಿಪುರ ರಾಜ್ಯದ ವಾಸ್ತವ ಹೀಗಿದೆ. ಅಲ್ಲಿನ ಶೇ. 70ರಷ್ಟು ಜನ ಮೈಟೆ ಎಂಬ ಜಾತಿಗೆ ಸೇರಿದವರು. ಇವರು ಹಿಂದೂಗಳು, ಕ್ಷತ್ರಿಯರು. ಸ್ವಾತಂತ್ರ್ಯದವರೆಗೂ ಮಣಿಪುರವನ್ನು ಆಳುತ್ತಿದ್ದರು. ಹಾಡು, ಸಂಗೀತ, ಮಣಿಪುರಿ ನೃತ್ಯ, ಆಧುನಿಕ ರಂಗಭೂಮಿ, ಕ್ರೀಡೆಗಳಲ್ಲಿ ಬಹು ದೊಡ್ಡ ಹೆಸರು ಈ ಮೈಟೆಗಳದ್ದು. 1947ರಲ್ಲಿ ಇವರನ್ನು ಬುಡಕಟ್ಟು ಜನಾಂಗಕ್ಕೆ ಸೇರಿಸಹೊರಟಾಗ, ಇವರು ಬೇಡ ಅಂದರು. ಅದರ ಪರಿಣಾಮ ಈ 60 ವರ್ಷಗಳಲ್ಲಿ ಮಣಿಪುರ ಸರಕಾರದಲ್ಲೆಲ್ಲ ಶೇ.20ರಷ್ಟಿರುವ ಗುಡ್ಡಗಾಡು ಜನಾಂಗ ಮೀಸಲಾತಿಯಿಂದಾಗಿ ಕೂತಿದ್ದಾರೆ. ಈಗ ಮೈಟೆಗಳು ಮೈ ಪರಚಿಕೊಳ್ಳುತ್ತಿದ್ದಾರೆ. ಮಣಿಪುರದ ಘರ್ಷಣೆಗೆ, ಬಂಡುಕೋರರ ಚಟುವಟಿಕೆಗಳಿಗೆ ಈ ಮೀಸಲಾತಿಯೂ ಒಂದು ಕಾರಣ.

ಇದನ್ನು ಹೇಳುತ್ತಿರುವುದರ ಮುಖ್ಯ ಕಾರಣ ಹಿಂದುಳಿದವರನ್ನೂ ದಲಿತರೊಟ್ಟಿಗೆ ಸಮಾನವಾಗಿ ಕಾಣದಿದ್ದರೆ, ಇನ್ನೂ ಜಾತಿ ಎಲ್ಲಿ ಹೋಗುತ್ತದೆ? ಏಕೆಂದರೆ, ಕರ್ನಾಟಕದಲ್ಲಿ ಮೇಲ್ಜಾತಿ ಮತ್ತು ಅಲ್ಪ ಸಂಖ್ಯಾತರನ್ನು ಬಿಟ್ಟರೆ ದಲಿತ-ಹಿಂದುಳಿದವರ ಸಂಖ್ಯೆ ಸುಮಾರು ಶೇ70ರಷ್ಟಿದೆ. ಈವತ್ತು ಗ್ರಾಮೀಣ ಪ್ರದೇಶದಲ್ಲಿ ಘರ್ಷಣೆ ಇರುವುದು ಹಿಂದುಳಿದವರು ಮತ್ತು ದಲಿತರ ನಡುವೆ.

ಜಾತಿ ಅಳಿಯಲಿಲ್ಲ. ಅಂತರ್‌ಜಾತಿ ವಿವಾಹಗಳು ನಿರೀಕ್ಷಿತ ಮಟ್ಟದಲ್ಲಿ ಆಗುತ್ತಿಲ್ಲ ಎಂಬುದು ದೇವನೂರರ ವಿಷಾದ. ಮದುವೆ ಬರೀ ಜಾತಿಯ ಮೇಲೇ ನಿಂತಿಲ್ಲ. ಎರಡು ಮನಸ್ಸುಗಳ-ದೇಹಗಳ ಸಂಬಂಧ ಅದು. ಅದರ ಜೊತೆಗೇ ಆರ್ಥಿಕ ಸ್ಥಿತಿ, ರುಚಿ-ಅಭಿರುಚಿ ಇನ್ನೂ ಅನೇಕ ವಿಷಯಗಳೂ ತಾಳೆಯಾಗಬೇಕು. 40 ವರ್ಷದ ಹಿಂದಕ್ಕೂ ಈ ದಿನಕ್ಕೂ ಸಾಕಾಷ್ಟು ಬದಲಾವಣೆಯಾಗಿದೆ. ಅಂತರ್‌ಜಾತಿ ವಿವಾಹಗಳು ಹೆಚ್ಚಾಗಿವೆ. ಬ್ರಾಹ್ಮಣರಲ್ಲಿ ಹುಡುಗಿಯರ ಕೊರತೆ ಎಷ್ಟಾಗಿದೆಯೆಂದರೆ ಜಾತಕ, ಗೋತ್ರ ಎಲ್ಲವನ್ನೂ ಬಿಟ್ಟಾಕಿದ್ದಾರೆ. ಹೆಣ್ಣು ಸಿಕ್ಕರೆ ಸಾಕು ಎನ್ನುವಂತಾಗಿದೆ. ಈಚೆಗೆ ಬ್ರಾಹ್ಮಣ ಜಾತಿಯ ಹವ್ಯಕರಲ್ಲಿ (ಕೆ.ವಿ. ಸುಬ್ಬಣ್ಣ ಈ ಜಾತಿಯವರು) ಹುಡುಗಿಯರೇ ಸಿಗದೆ ಅವರ ಸ್ವಾಮಿಗಳು ತಮ್ಮ ಜಾತಿಯ ಹುಡುಗರು ಯಾವ ಜಾತಿಯವರನ್ನು ಮದುವೆಯಾದರೂ ಅದಕ್ಕೆ ತಮ್ಮ ಮಠದ ಬೆಂಬಲವಿದೆ ಎಂಬ ಫರ್ಮಾನು ಹೊರಡಿಸಿದ್ದಾರೆ. ಈಚೆಗೆ ಶಿವಮೊಗ್ಗದ ಪುರೋಹಿತರ ಹುಡುಗಿಯೊಬ್ಬಳು ಮುಸ್ಲಿಂ ಹುಡುಗನನ್ನು ಮದುವೆಯಾದದ್ದು, ಅದೇರೀತಿ ಮುಸ್ಲಿಂ ಹುಡುಗಿಯೊಬ್ಬಳು ಹಿಂದೂ ಹುಡುಗನನ್ನು ಪೋಲಿಸ್ ಠಾಣೆಯಲ್ಲಿ ಮದುವೆಯಾದದ್ದು; ಇದೆಲ್ಲ 40 ವರ್ಷಗಳ ಹಿಂದೆ ಇಷ್ಟು ಸುಲಭವಾಗಿ ನಡೆಯುತ್ತಿರಲಿಲ್ಲ. ಅಷ್ಟೇ ಅಲ್ಲ, ನನ್ನ ಕುಟುಂಬದ ಆಜುಬಾಜಿನಲ್ಲೇ ಮೂವರು ಹುಡುಗಿಯರು ಮುಸ್ಲಿಮರನ್ನು ಮದುವೆಯಾಗಿ ಸಂತೋಷದಿಂದ ಬಾಳ್ವೆ ನಡೆಸುತ್ತಿದ್ದಾರೆ. ದೇವನೂರು ತಿಳಿಯ ಬೇಕಾದ್ದು -ಮೇಲೆ ಹೇಳಿದವರಾರೂ ಲೋಹಿಯಾವಾದಿಗಳಲ್ಲ, ದಸಂಸ ಅಲ್ಲ, ಪ್ರಗತಿಪರ ಹೋರಾಟದಿಂದ ಬಂದವರಲ್ಲ, ಜಾತಿ ವಿನಾಶ ಸಮ್ಮೇಳನಗಳಲ್ಲಿ ಭಾಗವಹಿಸಿದವರಲ್ಲ, ಪೇಜಾವರರ ಶಿಷ್ಯರೂ ಅಲ್ಲ.

ವಿದ್ಯೆ, ಆರ್ಥಿಕ ಅನುಕೂಲತೆಗಳು, ಅವಕಾಶಗಳು ಬೆಳೆದಂತೆಲ್ಲ ಜಾತಿಯೂ ಹೋಗುತ್ತದೆ. ದೇವನೂರು ಕಾಯಬೇಕು. ನಾಯಕನೊಬ್ಬ ನಿಸ್ಸಹಾಯಕತೆ ಸುಸ್ತುಗಳನ್ನು ತೋರಿಸಿಕೊಳ್ಳಬಾರದು. ದೇವನೂರು ಬಯಸುವ ಬದಲಾವಣೆ ಸುಗ್ರೀವಾಜ್ಞೆಗಳಿಂದ, ಆದೇಶಗಳಿಂದ ಆಗಲಾರದವು. ಇನ್ನೂ ನೂರಾರು ವರ್ಷ ಕಾಯಬೇಕು. ಆತುರ ಪಟ್ಟರೆ ಅಂತರ್‌ಜಾತಿ ವಿವಾಹಗಳೇ ಎಕ್ಕೂಟ್ಟಿ ಹೋಗಿ ಪ್ರತಿ ತಾಲ್ಲೂಕುಗಳಲ್ಲಿ ಕೌಟುಂಬಿಕ ನ್ಯಾಯಾಲಯಗಳನ್ನು ತೆರೆಯ ಬೇಕಾಗುತ್ತದೆ.

ದೇವನೂರು, ಮುಂದಿನ ಜನ್ಮದ ಕತೆಯನ್ನಾದರೂ ಬಳಸಿಕೊಳ್ಳಲಿ ಎನ್ನುತ್ತಾರೆ. ಮುಂದಿನ ಜನ್ಮದ ಬಗ್ಗೆ ಜನ ಮಾತನಾಡುತ್ತಾರೆ. ಆದರೆ ಎಲ್ಲರೂ ಈ ಜನ್ಮದಲ್ಲೇ ಎಲ್ಲವನ್ನು ಮುಗಿಸಬೇಕು ಅಂತಾರೆ. ಈ ಜನ್ಮದಲ್ಲಿ ನೀವು ನಮ್ಮ ಸೇವೆ ಮಾಡಿ ಮುಂದಿನ ಜನ್ಮದಲ್ಲಿ ನೀವು ಬ್ರಾಹ್ಮ

ಣರಾಗಿ ಹುಟ್ಟುತ್ತೀರ ಎಂದು ಬ್ರಾಹ್ಮಣರು ದಲಿತರಿಗೆ ಹೇಳುತ್ತಾರೆ. ಇನ್ನು ಮೇಲ್ಜಾತಿಯವರು ಈ ಜನ್ಮದಲ್ಲಿ ಮಾಡುವ ತಪ್ಪುಗಳಿಗೆ ನೂರಾರು ದೇವರುಗಳು, ಹೋಮ, ವ್ರತ, ಪೂಜೆಗಳಿವೆ. ಪೇಜಾವರರು ಏನೂ ಹೇಳಿದರೂ ಆಗುವುದು ಅಷ್ಟರಲ್ಲೇ ಇದೆ.

ಈ ಹಿಂದೂ ಧರ್ಮ ಎಷ್ಟು ಗಟ್ಟಿ ಎನ್ನುವುದು ದೇವನೂರರಿಗೆ ಗೊತ್ತು. ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳು ವಿಶ್ವದ ಯಾವುದೇ ಭಾಗಕ್ಕೆ ಹೋದರೂ ನೂರಕ್ಕೆ ನೂರರಷ್ಟು ಅವರ ಧರ್ಮಗಳನ್ನು ಅಲ್ಲೆಲ್ಲಾ ಸ್ಥಾಪಿಸಿದ್ದಾರೆ. ಆದರೆ 700 ವರ್ಷಗಳ ಇಸ್ಲಾಂ, 300 ವರ್ಷಗಳ ಕ್ರೈಸ್ತ ಧರ್ಮಗಳು ಈ ದಿಸೆಯಲ್ಲಿ ಸೋತಿದ್ದು ಇಲ್ಲೇ. ಇದನ್ನು ಭೈರಪ್ಪನವರ ದನಿಯಲ್ಲಿ ಹೇಳುತ್ತಿಲ್ಲ. ಅಲ್ಲದೆ 75 ವರ್ಷಗಳ ರಷ್ಯಾ ಮತ್ತು 60 ವರ್ಷಗಳ ಚೈನಾದಲ್ಲಿ ಕಮ್ಯುನಿಸ್ಟ್ ಪಕ್ಷ ಸಹ ಧರ್ಮವನ್ನು, ಜಾತಿಯನ್ನು ಸಂಪೂರ್ಣವಾಗಿ ಅಳಿಸಲಾಗಿಲ್ಲ.

ಕಳೆದ 40 ವರ್ಷಗಳಲ್ಲಿ ದೇವನೂರರ ಮಾತು ಕೇಳಿಲ್ಲ ಅಂದರೆ, ಅವರು ಹೇಳುವುದರಲ್ಲಿ ಅಥವಾ ಹೇಳುವ ರೀತಿಯಲ್ಲಿ ತಪ್ಪಿರುವುದು ಖಚಿತ. ಕರ್ನಾಟಕದಲ್ಲಿ ನಾವು ಬಯಸಿದ ಸಮಾಜವಾಗಲಿ ಅಥವಾ ಸರಕಾರವಾಗಲಿ ಬರಲಿಲ್ಲ. ಹಾಳಾಗಿ ಹೋಗಲಿ. ಆದರೆ ನಾವು ಎಂದೂ ಬಯಸದಿದ್ದ ಸರ್ಕಾರ ಬಂದಿದೆ. ನಮ್ಮ ತಪ್ಪುಗಳನ್ನು ಕಂಡುಕೊಳ್ಳಬೇಕಿದೆ. ಹೀಗಾಗಿ ಪೇಜಾವರ, ಮಾದಾರ, ಮುರುಘ ಸ್ವಾಮಿಗಳು ತಮಗೆ ಬೇಕಾದ್ದನ್ನು ಮಾಡಿಕೊಳ್ಳಲಿ. ಒಳ್ಳೆಯದಾದರೆ ಸಂತೋಷ. ಆಗದಿದ್ದರೆ ಯಥಾ ಸ್ಥಿತಿಗೇನೂ ಆತಂಕವಿಲ್ಲ. ಜನ ಬುದ್ಧಿವಂತರು ಬೇಕಿದ್ದರೆ ಒಪ್ಪಿಕೊಳ್ಳುತ್ತಾರೆ. ಬೇಡವಾದರೆ ಕಿತ್ತಾಕುತ್ತಾರೆ. ಆದ್ದರಿಂದ ಸ್ವಲ್ಪ ದಿನ ಸುಮ್ಮನಿರುವದು ಒಳ್ಳೆಯದು. ಹೇಳಿದ್ದೇ ಹೇಳುವುದನ್ನು ನಿಲ್ಲಿಸುವುದು ಉತ್ತಮ.

ದೇವನೂರು ಹೇಳಿರುವ ದಾಸಯ್ಯಗಳ ಜೊತೆಗೆ ಅದೇ ಸಂವಾದದಲ್ಲಿ ಎಚ್. ಮಾರುತಿ ಬರೆದಿರುವುದನ್ನು ಇಲ್ಲಿ ಗಮನಿಸಬೇಕು. "ಪರಿಶಿಷ್ಟ ಜಾತಿಗಳಲ್ಲಿನ ಜಾತಿ ಕ್ರೌರ್ಯತನ ಯಾರಿಗಾದರೂ ಅರ್ಥವಾಗ ಬೇಕಾದಲ್ಲಿ ಮೊದಲು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದರೆ ಸಾಕು. ಬಹುತೇಕ ಪ್ರಾಧ್ಯಾಪಕರು ಹೊಲೆಯ ಜಾತಿಗೆ ಸೇರಿದವರಾಗಿದ್ದಾರೆ. ತಮ್ಮ ಜಾತಿಯ ಅಮಲಿಗೆ ಎಷ್ಟು ಕುರುಡರಾಗಿದ್ದಾರೆ ಎಂದರೆ ಬೇರೆ ಜಾತಿಯವರಿಗೆ ಗೈಡ್ ಆಗುವುದು ಬಹಳ ಕಷ್ಟ".

ಕೊನೆಯದಾಗಿ – 40 ವರ್ಷಗಳ ಪ್ರಗತಿಪರ, ಬಂಡಾಯ, ದಲಿತ ಹೋರಾಟಗಳಿಗಿಂತ ಕಳೆದ 10 ವರ್ಷಗಳ ಜಾಗತೀಕರಣ, ಖಾಸಗೀಕರಣ, ನಾರಾಯಣ ಮೂರ್ತಿಯ ಸಾಫ್ಟ್‌ವೇರ್ ಉದ್ಯಮಗಳಿಂದಾಗಿ ಹೆಚ್ಚು ಅಂತರ್‌ಜಾತಿ ವಿವಾಹಗಳಾಗಿವೆ. ಈ ಬಗ್ಗೆ ಅಂಕಿ–ಅಂಶಗಳು ಸ್ಪಷ್ಟವಾಗಿದೆ. ಇದಕ್ಕೆ ದೇವನೂರು ಏನಂತಾರೆ? ರೀ, ದೇವನೂರ್–ಪಶ್ಚಿಮ ಬಂಗಾಳದಲ್ಲಿ ಜಾತಿಯಿಲ್ಲ ಕಣ್ರೀ. ಅಲ್ಲಿ ಕೆಲಸ ಮಾಡಿದ ನಾಲ್ಕೂವರೆ ವರ್ಷಗಳಲ್ಲಿ ನಾನು ಅಲ್ಲಿ ಬ್ರಾಹ್ಮಣ, ಠಾಕೂರ ಮಹಾಸಭಾಗಳಾಗಲಿ, ದಲಿತ ಸಂಘಟನೆಗಳಾಗಲಿ, ಯಾವುದೇ ಕಛೇರಿಯಲ್ಲಿ ಎಸ್‌ಸಿ/ಎಸ್‌ಟಿ ನೌಕರರ ಸಂಘಟನೆಗಳಾಗಲಿ, ರಸ್ತೆಗಳಲ್ಲಿ ಅಂಬೇಡ್ಕರ್ ಪ್ರತಿಮೆಗಳಾಗಲಿ ಕಾಣಲಿಲ್ಲ. 20ನೇ ಶತಮಾನದ ಆದಿಯಲ್ಲೇ ಭಾರತ ಕಂಡ ಅತಿ ದೊಡ್ಡ ವಿಜ್ಞಾನಿ ಮೇಘಾನಂದ ಸಹಾ ದಲಿತರು. ಅಲ್ಲಿ ಜಾತಿ ಯಾಕಿಲ್ಲ ಅಂತ ನೀವು ಕೇಳಿದರೆ ಬರೆಯುತ್ತೇನೆ. ಬಂಗಾಳದಲ್ಲಿ ಗೆದ್ದಿರುವುದು ಇಲ್ಲಿಯೂ ಆಗಬಾರದೆಂದಿಲ್ಲ. □

ಸಂಪಾದಕರೊಡನೆ ಸಂವಾದ

ಈ ದೇಶಕ್ಕೊಂದು ಸಂವಿಧಾನ ಯಾಕೆ ಬೇಕು?

ಮಲ್ಲಿಕಾರ್ಜುನ ಗುಮ್ಮಗೋಳ.

ಮಾನ್ಯ ಸಂಪಾದಕರೇ,

ಹೆಂಡತಿ ಮಾರಣಾಂತಿಕ ಕಾಯಿಲೆಯಿಂದ ಹಾಸಿಗೆ ಹಿಡಿದಿದ್ದಾಳೆ. ಗಂಡ ಉನ್ನತ ವ್ಯಾಸಂಗಕ್ಕಾಗಿ ವಿದೇಶಕ್ಕೆ ಹೊರಟು ನಿಂತಿದ್ದಾನೆ. ಸಾವು ಬದುಕಿನ ನಡುವೆ ಹೋರಾಟ ಮಾಡುತ್ತಿರುವ ತನ್ನ ಹೆಂಡತಿಗಿಂತ ಉನ್ನತ ಶಿಕ್ಷಣವೇ ಆತನಿಗೆ ಮಹತ್ವವಾಯಿತೆ? ಇವನೆಂತಹ ಹೃದಯ ಹೀನ! ಎಂದು ಒಂದು ಕ್ಷಣವಾದರೂ ನಮಗೆ ಅನ್ನಿಸದಿರದು. ಹೌದು, ತಾನು ಅನುಭವಿಸಿದ ನೋವು, ಅವಮಾನಗಳು ಅವರನ್ನು ಅಷ್ಟೊಂದು ಕಠೋರ ವ್ಯಕ್ತಿಯನ್ನಾಗಿ ಮಾಡಿದ್ದವು.

ಈ ದೇಶದ ಜಾತಿ ವ್ಯವಸ್ಥೆಯ ವಿರುದ್ಧ ಸೇಡು ತೀರಿಸಿಕೊಳ್ಳಬೇಕು. ದಾಸ್ಯಕ್ಕೆ ಸಿಕ್ಕ ಜನರ ಪಾಲಿಗೆ ಹೊಸ ಬದುಕು ಕಟ್ಟಬೇಕು ಎಂಬ ಮಹತ್ವಾಕಾಂಕ್ಷೆಯನ್ನು ಇಟ್ಟುಕೊಂಡು, ಅಂದು ಡಾ. ಬಾಬಾಸಾಹೇಬ ಅಂಬೇಡ್ಕರರು ತಮ್ಮ ವೈಯಕ್ತಿಕ ಬದುಕಿಗಿಂತ ಈ ದೇಶದ ಹಿತ ಮುಖ್ಯವೆಂದು ಉನ್ನತ ವ್ಯಾಸಂಗಕ್ಕಾಗಿ ವಿದೇಶಕ್ಕೆ ತೆರಳಿದರು. ಬುದ್ಧನ ನಿರ್ಮೋಹಿತ್ವವನ್ನು ಇಟ್ಟುಕೊಂಡು ಹಗಲಿರುಳು ಶ್ರಮವಹಿಸಿದರು. ಈ ದೇಶಕ್ಕೊಂದು ಸಂವಿಧಾನವನ್ನು ರಚಿಸಿಕೊಟ್ಟರು.

ಆದರೆ ಇವೊತ್ತು ಆ ಸಂವಿಧಾನದ ಕಥೆ ಏನಾಗಿದೆ. ಅದನ್ನು ಹೇಗೆ ಮತ್ತು ಯಾತಕ್ಕಾಗಿ ನಾವು ಬಳಸಿಕೊಳ್ಳುತ್ತಿದ್ದೇವೆ? ಸಮಾಜವಾದಿ, ಜಾತ್ಯಾತೀತ, ಪ್ರಜಾಸತ್ತಾತ್ಮಕ ಗಣರಾಜ್ಯದ ಕನಸು ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ಹಾಸ್ಯಾಸ್ಪದವೆನ್ನಿಸುತ್ತಿದೆ. ಸ್ವಾತಂತ್ರ್ಯ ಹೋರಾಟದ ಹಿನ್ನೆಲೆ ಹಾಗೂ ಸಂವಿಧಾನ ಸಿದ್ಧಾಂತದ ಸ್ಫೂರ್ತಿ ಇಂದು ಯಾರನ್ನೂ ಪ್ರಭಾವಿಸುತ್ತಿಲ್ಲ. ರಾಜನೀತಿಯ ಜಾಗದಲ್ಲಿ ಅನುಕೂಲ ಸಿಂಧು ರಾಜಕಾರಣ ತಾಂಡವವಾಡುತ್ತಿದೆ. ಪ್ರಜಾಪ್ರಭುತ್ವ ಕೇವಲ ಕಾರ್ಯಾತ್ಮಕವಾಗಿ ಮಾತ್ರ ನಡೆದುಕೊಂಡು ಹೋಗುತ್ತಿದೆ. ಆದರೆ ವಾಸ್ತವದಲ್ಲಿ ಬಂಡವಾಳಶಾಹಿಗಳ ಹಿಡಿತ ಎಲ್ಲ ಕ್ಷೇತ್ರಗಳಲ್ಲೂ ತಲೆಯುತ್ತಿದೆ. ರಾಜಕಾರಣವೆಂಬ ಸಮಾಜ ಸೇವೆಗೆ ಬರುವವರು ಬೆಳಗಾಗುವದರಲ್ಲಿ ಕೋಟ್ಯಾಧಿಪತಿಗಳಾಗುತ್ತಾರೆ. ರಾಜಕಾರಣ ಎಂದರೆ ದುಡ್ಡು ಹೊಡೆಯುವ ದಂಧೆಯಾಗಿದೆ.

ಪ್ರಜಾಪ್ರಭುವಿನ ಹಿತವೇ ಮುಖ್ಯವಾಗಬೇಕಾಗಿದ್ದ ಈ ಪ್ರಜಾಪ್ರಭುತ್ವದಲ್ಲಿ ಅರಸೊತ್ತಿಗೆಯ ಧರ್ಪ–ದೌಲುಗಳು ಇಂದಿನ ಪ್ರತಿನಿಧಿಗಳಲ್ಲಿ ಕಂಡುಬರುತ್ತಿದೆ. ಸ್ವಾತಂತ್ರ್ಯ ಸಿಕ್ಕು ಆರು ದಶಕಗಳೇ ಕಳೆದು ಹೋಗಿವೆ. ಆದರೂ ಅರ್ಧದಷ್ಟು ಜನ ಬಡತನ ರೇಖೆಯ ಕೆಳಗೆ ಜೀವಿಸುತ್ತಿದ್ದಾರೆ. ಹಾಗಾದರೆ ಸ್ವಾತಂತ್ರ್ಯದ ಉದ್ದೇಶ ಏನಾಗುತ್ತಿದೆ? ಜಾತಿ ಆಧರಿಸಿ ಚುನಾವಣೆಯಲ್ಲಿ ಅಭ್ಯರ್ಥಿಗೆ ಟಿಕೆಟ್, ಜಾತಿ ಆಧರಿಸಿ ಮತ ಇವುಗಳು ಜಾತ್ಯಾತೀತತೆಯ ಲಕ್ಷಣಗಳೆ? ಸಂಪತ್ತಿನ ಅಸಮಾನ ಹಂಚಿಕೆ, ಬಂಡವಾಳಶಾಹಿಗಳಿಗೆ ಮಣೆ ಇವುಗಳು ಸಮಾಜವಾದಿ ಸಿದ್ಧಾಂತದ ಲಕ್ಷಣಗಳೆ? ಇಲ್ಲವೆಂದಾದರೆ ನಮಗೆ ಈ ಸಂವಿಧಾನ, ಈ ಪ್ರಜಾಪ್ರಭುತ್ವವಾದರೂ ಯಾಕೆ ಬೇಕು.

ಅಲ್ಲಿ ಉತ್ತರ ಕರ್ನಾಟಕದಲ್ಲಿ ನೆರೆ ಪ್ರವಾಹಕ್ಕೆ ಸಿಕ್ಕ ಜನರು ಅನ್ನ, ಆಶ್ರಯವಿಲ್ಲದೆ ಸಾಯುತ್ತಿದ್ದಾರೆ. ಇಲ್ಲಿ ಬೆಂಗಳೂರಿನಲ್ಲಿ ರೈತನ ಭೂಮಿಯನ್ನು ನುಂಗಿದ ತಿಮಿಂಗಿಲಗಳು ಕಚ್ಚಾಡುತ್ತಿವೆ. ಇವರ್‍ಯಾರಿಗೂ ಹೃದಯವೇ ಇಲ್ಲವೆ? ತುತ್ತು ಅನ್ನಕ್ಕಾಗಿ ಜನ ಹಸಿದು ಕಾಯುತ್ತಿದ್ದಾರೆ. ಯಾರೊಬ್ಬರೂ ಅವರ ಬಗ್ಗೆ ಯೋಚಿಸುತ್ತಿಲ್ಲ. ಪಾದಯಾತ್ರೆ, ಸಮಾವೇಶ, ರೆಸಾರ್ಟ್ ರಾಜಕಾರಣ, ಮಂತ್ರಿಗಿರಿಗಾಗಿ ಹಾದಿ ಬೀದಿ ಬಡಿದಾಟ ಇವನ್ನೆಲ್ಲ ನೋಡಿದರೆ ಮನುಷತ್ವವೆಂಬುದು ಸತ್ತುಹೋಗಿದೆಯೇನೋ ಅನ್ನಿಸುತ್ತಿದೆ. ಇಂತಹ ರಾಜಕಾರಣಿಗಳು ನಮಗೆ ಬೇಕೆ?

'ಪ್ರತಿಯೊಂದು ಆತ್ಮದಲ್ಲಿ ದೇವರಿದ್ದಾನೆ ಆತ್ಮಕ್ಕೆ ಸೇವೆ ಸಲ್ಲಿಸುವದು ದೇವರಿಗೆ ಸೇವೆ ಸಲ್ಲಿಸಿದ ಹಾಗೆ' ಎಂದು ಸ್ವಾಮಿ ವಿವೇಕಾಂದರು ಹೇಳುತ್ತಿದ್ದರು. ಅಧಿಕಾರಕ್ಕಾಗಿ, ಸಂಪತ್ತ್ ವೃದ್ಧಿಗಾಗಿ ಗುಡಿ ಗುಂಡಾರಗಳ ಹುಂಡಿಗೆ ಹಣ ಸುರಿಯುವವರು ಹಸಿದ ಆತ್ಮಗಳ ಬಾಯಿಗೆ ಒಂದು ಹಿಡಿ ಅನ್ನವನ್ನು ಹಾಕದಷ್ಟು ಪಾಪಿಗಳಾಗಿದ್ದಾರೆ. ಯಾವ ನೈತಿಕ ಪ್ರಜ್ಞೆಯೂ ಕಾಡದ ಇಂತಹ ಜನರಿಗೆ ಸಂವಿಧಾನವಾದರೂ ಏನು ಮಾಡುತ್ತದೆ. ಅದು ಮಂಗಿ ಉದುವವನ ಮುಂದಿನ ಹಾವಿನಂತಾಗಿದೆ.

ಕಾಲ ಮೀರುತ್ತಿದೆ, ಜನ ಎಚ್ಚೆತ್ತುಕೊಳ್ಳಬೇಕಾಗಿದೆ. ಕೋರ್ಟು, ಕಾಯಿದೆ, ಲೋಕಪಾಲ, ಲೋಕಾಯುಕ್ತ, ಚುನಾವಣಾ ಆಯೋಗ ಹಾಗೂ ಸುದ್ದಿ ಮಾಧ್ಯಮಗಳಂತಹ ಸಂಸ್ಥೆಗಳ ಕೈ ಬಲಪಡಿಸಬೇಕಾಗಿದೆ. ಮಾಹಿತಿ ಹಕ್ಕು ಕಾಯ್ದೆಯನ್ನು ಸದ್ಬಳಕೆ ಮಾಡಿಕೊಳ್ಳುವ ಮೂಲಕ ರಕ್ತ ಹೀರುವ ಜಿಗಣೆಗಳನ್ನು ಹೊಸಕಬೇಕಾಗಿದೆ. ಮತ

ಉತ್ತರ ಕರ್ನಾಟಕದಲ್ಲಿ ನೆರೆ ಪ್ರವಾಹಕ್ಕೆ ಸಿಕ್ಕ ಜನರು ಅನ್ನ, ಆಶ್ರಯವಿಲ್ಲದೆ ಸಾಯುತ್ತಿದ್ದಾರೆ. ಇಲ್ಲಿ ಬೆಂಗಳೂರಿನಲ್ಲಿ ರೈತನ ಭೂಮಿಯನ್ನು ನುಂಗಿದ ತಿಮಿಂಗಿಲಗಳು ಕಚ್ಚಾಡುತ್ತಿವೆ. ಇವರ್‍ಯಾರಿಗೂ ಹೃದಯವೇ ಇಲ್ಲವೆ? ತುತ್ತು ಅನ್ನಕ್ಕಾಗಿ ಜನ ಹಸಿದು ಕಾಯುತ್ತಿದ್ದಾರೆ. ಯಾರೊಬ್ಬರು ಅವರ ಬಗ್ಗೆ ಯೋಚಿಸುತ್ತಿಲ್ಲ.

ದಾನವೆಂಬ ಪ್ರಬಲ ಅಸ್ತ್ರವನ್ನು ಸರಿಯಾಗಿ ಬಳಸಿ ನಮ್ಮ ಹಿತವನ್ನು ನಾವು ಕಾಯ್ದುಕೊಳಬೇಕು. ಬಲ ಮತ್ತು ತಂತ್ರಗಾರಿಕೆಯಿಂದ ಭಾರತದ ರಾಜಕೀಯ ಅಧಿಕಾರವು ಅರಸೊತ್ತಿಗೆಯಿಂದ- ವಸಾಹತುಶಾಹಿಗೆ- ಬಂಡವಾಳಶಾಹಿಗೆ- ವಂಶಾಡಳಿತಕ್ಕೆ ಹಸ್ತಾಂತರವಾಗುತ್ತ ಬಂದಿದೆ. ವಂಶ ಪರಂಪರೆಯ ರಾಜಕಾರಣ ಅಂತ್ಯಗೊಂಡು ಮಾಸ್ ಲೀಡರ್‌ಗಳ ಕೈಯಿಗೆ ಅಧಿಕಾರ ಬರಬೇಕಿದೆ.

ಭಾರತದ ಪ್ರಧಾನ ವೃತ್ತಿಯಾದ ಕೃಷಿಯ ಕುರಿತು ಹಾಗೂ ಅದಕ್ಕೆ ಪೂರಕವಾದ ಗೃಹ ಮತ್ತು ಗುಡಿ ಕೈಗಾರಿಕೆಗಳ ಬಗ್ಗೆ ದಿವ್ಯ ನಿರ್ಲಕ್ಷ್ಯವನ್ನು ಇಂದಿನ ಸರಕಾರಗಳು ತಾಳುತ್ತಿವೆ. ರಾಷ್ಟ್ರೀಯ ಆದಾಯವನ್ನು ದಿಡೀರನೆ ಹೆಚ್ಚಿಸಿಕೊಳ್ಳುವ ಸಲುವಾಗಿ ವಿಶೇಷ ಆರ್ಥಿಕ ವಲಯ (ಎಸ್.ಇ.ಜಡ್)ಗಳ ಹೆಸರಿನಲ್ಲಿ ಬಂಡವಾಳ ಶಾಹಿಗಳಿಗೆ ಮಣೆ ಹಾಕಿ ಕೃಷಿ ಕ್ಷೇತ್ರವನ್ನು ಬಲಿಕೊಡಲಾಗುತ್ತಿದೆ. ಕೈಗಾರಿಕಾ ಅಭಿವೃದ್ಧಿಯ ನೆಪದಲ್ಲಿ ಬಂಡವಾಳ ಶಾಹಿಗಳು, ಕೋಟಿ ವೀರರು ಸೃಷ್ಟಿಯಾಗುತ್ತಿದ್ದಾರೆ. ಆದರೆ ದುಡಿಯುವ ವರ್ಗ ಅತ್ಯಂತ ದಯನೀಯ ಸ್ಥಿತಿಯಲ್ಲಿ ಬದುಕು ಸಾಗಿಸುತ್ತಿದೆ. ಕೃಷಿ ಕ್ಷೇತ್ರವಂತೂ ಸಬ್ಸಿಡಿ ಮತ್ತು ಬೆಂಬಲ ಬೆಲೆಯನ್ನು ನೆಚ್ಚಿಕೊಂಡು ಉಸಿರಾಡುತ್ತಿದೆ. ರೈತರ ಉತ್ಪನ್ನಗಳಿಗೆ ಏಕರೂಪ ಮತ್ತು ನಿಗದಿತ ದರ ನಿರ್ಧರಣೆಯಾಗುತ್ತಿಲ್ಲ. ಅನ್ನದಾತ ಎಂದು ಹಾಡಿ ಹೊಗಳಿ ಆತನ ಜಮಿನಿಗೆ ಕನ್ನ ಹಾಕಲಾಗುತ್ತಿದೆ. ಹೀಗಾದರೆ ಗಾಂಧೀಜಿ ಕಂಡ ಗ್ರಾಮ ರಾಜ್ಯ, ಗುಡಿ ಮತ್ತು ಗೃಹ ಕೈಗಾರಿಕೆಗಳ ಕನಸು ಸಾಕಾರವಾಗಲು ಸಾಧ್ಯವಿಲ್ಲ. ಈ ದೇಶದ ಮೂಲ ಕಸಬು ಅವಸಾನದ ಅಂಚಿಗೆ ಬಂದು ನಿಂತಿದೆ.

ದೇಶದಲ್ಲಿ ಕೋಟ್ಯಾಧಿಪತಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಆದರೆ ಅದಕ್ಕಿಂತ ಸಾವಿರಾರು ಪಟ್ಟು ಬಡವರ - ನಿರುದ್ಯೋಗಿಗಳ ಸಂಖ್ಯೆ ಬೆಳೆಯುತ್ತಲೇ ಇದೆ. ನಮ್ಮನ್ನು ಪ್ರತಿನಿಧಿಸುವ 545ಜನ ಸಂಸದರಲ್ಲಿ 340ಜನ ಕೋಟ್ಯಾಧಿಪತಿಗಳು. ಅವರು ಬಹುವಾಗಿ ಬಂಡವಾಳ ಶಾಹಿಗಳೇ. ಒಂದರ್ಥದಲ್ಲಿ ಶ್ರೀಮಂತರಿಂದ ಆಳಲ್ಪಡುವ ಬಡವರಿಂದ ಕೂಡಿದ ಶ್ರೀಮಂತ ದೇಶ ನಮ್ಮದು. ಒಂದೆಡೆ ಸಂಪತ್ತಿನ ವೈಭೋಗ ಮತ್ತೊಂದೆಡೆ ಬಡತನದ ಆರ್ಥನಾದ. ಈ ಅಸಮಾನತೆಯನ್ನು ತೊಲಗಿಸುವ ಶಕ್ತಿ ಪ್ರಜಾಪ್ರಭುತ್ವಕ್ಕೆ ಇಲ್ಲದೆ ಇರುವದೇ ದೊಡ್ಡ ದುರಂತವಾಗಿದೆ. □

ಕಳೆದು ಕೊಳ್ಳಬೇಕು

ಹರಿದ ಜಾಗದಲ್ಲಿ ಮತ್ತೆ ಹರಿಯದ
ನದಿಯಂತೆ
ಹಿಮದ ಕೂರ್ಗಾಳಿಗೆ
ಬೆತ್ತಲೆ ಮೈ ಒಡ್ಡಿದಂತೆ
ಹಕ್ಕಿಯ ಗಂಟಲಿನಿಂದ ಹೊರಟಿದ್ದ
ಇಂಚರದಂತೆ
ಗಂಟಲ ಸುಟ್ಟು ಮೈ ಮರೆಸುವ
ಮದಿರೆಯಂತೆ
ದಿನದಿನವೂ ಕಳೆದುಕೊಳ್ಳಬೇಕು
ಕನ್ಯತ್ವವನ್ನು
ಇಲ್ಲ ಎನ್ನಬೇಡ.

○ ಡಾ॥ ಕೆ.ಬಿ ಸರಸ್ವತಿ

ಸಂಪಾದಕರೊಡನೆ ಸಂವಾದ

ಮತಾಂತರ ಮಾಡುತ್ತಿರುವ ಪೇಜಾವರ

ಬಿ. ಮಹೇಶ

ಮಾನ್ಯ ಸಂಪಾದಕರೇ,

ಪೇಜಾವರ ಸ್ವಾಮೀಜಿಗಳು ದಲಿತರನ್ನು ಮತಾಂತರ ಮಾಡುತ್ತಿದ್ದಾರೆ. ಸ್ವಾಮೀಜಿಯವರು ಪ್ರತಿಪಾದಿಸುವ ವೈದಿಕ ವ್ಯವಸ್ಥೆಯ ಲವಲೇಶ ಅಂಶವೂ ಸಹ ದಲಿತ ಸಂಸ್ಕೃತಿಯಲ್ಲಿ ಕಂಡುಬರುವುದಿಲ್ಲ. ದಲಿತ ಸಾಂಸ್ಕೃತಿಕಲೋಕ ಅದೊಂದು ಜೀವಂತಿಕೆಯ ಸ್ವರೂಪ. ಮಂಟೆಸ್ವಾಮಿ, ಸಿದ್ದಪ್ಪಾಜಿ, ಮಲೆಮಹದೇಶ್ವರ ಮುಂತಾದ ಸಿದ್ಧಿ ಪುರುಷರನ್ನು ಪೂಜಿಸುವ ಗೌರವಿಸುವ ಹಾಡಿ-ಹೊಗಳುವ ಪರಿನೇ ಬೇರೆ. ವೈದಿಕ ವ್ಯವಸ್ಥೆಯಲ್ಲಿ ಇವರನ್ನು ಪೂಜಿಸುವುದಿಲ್ಲ, ಗೌರವಿಸುವುದಿಲ್ಲ. ದಲಿತ ಸಾಂಸ್ಕೃತಿಕ ಅಂಶಗಳು ವೈದಿಕ ವ್ಯವಸ್ಥೆಯ ವಿರುದ್ಧ ಹುಟ್ಟಿಕೊಂಡಿರುವ ನಡವಳಿಕೆಯಾಗಿದೆ. ವೈದಿಕ ವ್ಯವಸ್ಥೆಯು ಪ್ರಾರಂಭದಿಂದಲೂ ಮನುಧರ್ಮಶಾಸ್ತ್ರವನ್ನು ಒಪ್ಪಿ ಅದರಂತೆ ನಡೆದುಕೊಂಡಿದೆ. ಚಾತುರ್‌ವರ್ಣ-ಸಿದ್ಧಾಂತವನ್ನು ಅನುಸರಿಸುವ ಸ್ವಾಮಿಗಳು ಅದನ್ನು ಒಪ್ಪದೇ ಇರುವ ದಲಿತರನ್ನು ತಮ್ಮ ವೈದಿಕ ವ್ಯವಸ್ಥೆಯನ್ನು ಗಟ್ಟಿಮಾಡಿಕೊಳ್ಳುವ ಸಲುವಾಗಿ ದಲಿತರನ್ನು ಮತಾಂತರ ಮಾಡುತ್ತಿದ್ದಾರೆ.

ಕ್ರೈಸ್ತರು ದಲಿತ ಕೇರಿಗೆ ಬಂದರೆ ಅವರನ್ನು ಹಿಡಿದು ಹೊಡೆಯುವ ಕೆಲಸವಾಗುತ್ತದೆ. ಮುಸ್ಲಿಮರು ಬಂದರೆ ಅವರು ಟೆರರಿಸ್ಟ್ ಅವರು ದಲಿತರನ್ನು ತಮ್ಮ ಧರ್ಮಕ್ಕೆ ಸೇರಿಸಿಕೊಳ್ಳುವ ಹುನ್ನಾರ ನಡೆಸುತ್ತಿದ್ದಾರೆ ಎನ್ನುತ್ತಾರೆ? ಪ್ರಗತಿಪರ ಸಂಘಟನೆಗಳು ದಲಿತರ ಬಗ್ಗೆ ಮಾತನಾಡಿದರೆ ಅವರು ನಕ್ಸಲೇಟ್ಸ್ ಎನ್ನುತ್ತಾರೆ? ಸ್ವಾಮೀಜಿ ಏನು ಮಾಡುತ್ತಿದ್ದಾರೆ? ಅವರ ದಲಿತ ಕೇರಿಯ ಭೇಟಿಯ ಮರ್ಮವೇನು? ಎನ್ನುವುದನ್ನು ದಲಿತ ಬಂಧುಗಳು ವಿಚಾರ ಮಾಡಬೇಕು. ಅಂಬೇಡ್ಕರ್‌ರವರು "untochabales and not ltindns they and seperate entity" ಎಂದು ಹೇಳಿದ್ದಾರೆ. "The present wutochadlus and eartwhile bnddist of this country" ಎಂದು ಹೇಳಿದ್ದಾರೆ. ಹಿಂದೂ ಅಸಮಾನತೆಯನ್ನು ಸಹಿಸದ ಬಾಬಾಸಾಹೇಬರು ಸಮಾನತೆ ಸಾರುವ ಬೌದ್ಧ ಧರ್ಮ ಅವಲಂಬಿಗಳಾದರು. ಅವರ ಅನುಯಾಯಿಗಳು ದಿನನಿತ್ಯ ಬೌದ್ಧ ಧರ್ಮವಲಂಬಿಗಳಾಗುತ್ತಿದ್ದಾರೆ. ದಲಿತರು ಬೌದ್ಧ ಧರ್ಮಾವಲಂಬಿಗಳಾದರೆ ಗುಡಿ-ಗೋಪುರ-ದೇವಸ್ಥಾನಗಳೆಲ್ಲವು ಆದಾಯವಿಲ್ಲದೆ ಪುರೋಹಿತರು ಇತರರಂತೆ ಕೂಲಿ ಕೆಲಸ ಮಾಡಬೇಕಾಗುತ್ತದೆ. ಇದೇ ಮಾತನ್ನು ಕುವೆಂಪುರವರು ಹೇಳಿದ್ದಾರೆ. ದಲಿತರು ಬೇರೆ ಧರ್ಮವನ್ನು ಸ್ವೀಕರಿಸಿದರೆ ಸೇವೆ ಮಾಡುವ ಜಾತಿ ಇಲ್ಲವಾಗುತ್ತದೆ. ಅವರನ್ನು ವೈದಿಕ ವ್ಯವಸ್ಥೆಯಲ್ಲಿಯೇ ಮುಂದುರಿಸಿದರೆ ಸೇವೆ ಮಾಡುವ ವರ್ಗ ಖಾಯಂ ಆಗಿ ಉಳಿಯುತ್ತದೆ. ಆದ್ದರಿಂದ ಪೇಜಾವರ ಸ್ವಾಮಿಗಳು ದಲಿತರು ಯಾವಕಡೆಯೂ ಮತಾಂತರವಾಗಬಾರದು, ಕೊಳೆತ ವ್ಯವಸ್ಥೆಯಲ್ಲಿಯೇ ಇರಬೇಕೆಂದು ಬಯಸಿದ್ದಾರೆ.

ಸ್ವಾಮಿಜಿಯವರು 1992ರಲ್ಲಿ ಬಾಬರಿಮಸೀದಿ ಧ್ವಂಸ ಕಾರ್ಯದಲ್ಲಿ ಮುಖಂಡತ್ವ ವಹಿಸಿದ್ದರು. ಮಸೀದಿ ಧ್ವಂಸಕ್ಕೂ ಮೊದಲು ರಥಯಾತ್ರೆಯ ಮುಂಚೂಣಿಯಲ್ಲಿದ್ದರು. ಇಟ್ಟಿಗೆ ಮೆರವಣಿಗೆ ಮಾಡಿ ರಾಮನಾಮ ಜಪಿಸುತ್ತಾ, ರಾಮ ಜನ್ಮತಳೆದ ಜಾಗವನ್ನು ಮುಸಲ್ಮಾನರು ಅತಿಕ್ರಮಿಸಿದ್ದಾರೆ, ಹಿಂದೂ ಧರ್ಮಕ್ಕೆ ಕೇಡುಗಾಲ ಬಂದಿದೆ. ಅದನ್ನು ಉಳಿಸುವ ಜವಬ್ದಾರಿ ನಮ್ಮ ಮೇಲೆ ಇದೆ ಎಂದು ಜನರನ್ನು ಉದ್ರೇಕಿಸಿ ಮತೀಯ ಸಾಮರಸ್ಯವನ್ನು ಹಾಳು ಮಾಡಿದವರು. ರಾಮ ಜನ್ಮ ಭೂಮಿಯ ಸಮಸ್ಯೆಯ ಮೂಲಕ ಸಾಂಸ್ಕೃತಿಕ ಚಳವಳಿಯನ್ನು ನೆಡೆಸಿ ಆ ಮೂಲಕ ರಾಜಕೀಯ ಬದಲಾವಣೆಗೆ ಕಾರಣಕರ್ತರಾದರು. ಬಿ.ಜೆ.ಪಿ. ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬರಲು ಕಾರಣರಾದರು ಆ ಕಾರಣದಿಂದಲೇ ಎಲ್.ಕೆ. ಅಡ್ವಾನಿಯವರು ಸ್ವಾಮೀಜಿಗಳನ್ನು ಪೂಜ್ಯ ಭಾವನೆಯಿಂದ ಆರಾಧಿಸುತ್ತಾರೆ. ಆರ್.ಎಸ್.ಎಸ್.ನ ಒಂದು ಭಾಗವಾಗಿ ಸ್ವಾಮೀಜಿಯವರು ಕೆಲಸ ನಿರ್ವಹಿಸುತ್ತಿದ್ದಾರೆ.

ಈಗ ಸ್ವಾಮಿಗಳು ದಲಿತರ ಕೇರಿಗಳಿಗೆ ಹೋಗುವುದರ ಹಿಂದೆ ಇನ್ಯಾವ ಉದ್ದೇಶವಿದೆ. ಇನ್ಯಾವ ಮಸೀದಿ ಚರ್ಚುಗಳನ್ನು ಕೆಡುವಬೇಕೆಂದಿದ್ದಾರೆ. ಸ್ವಾಮಿಗಳು ತುಂಬಾ ಜಾಣ್ಮೆಯಿಂದ ದೂರದ ಉದ್ದೇಶಗಳ ಸಾಧನೆಗೆ ದಲಿತ ಮುಗ್ಧರನ್ನು ಸಂಘಟಿಸುತ್ತಿದ್ದಾರೊ ತಿಳಿಯದು. ಗೋಹತ್ಯೆ ನಿಷೇಧಿಸುವ ಪರವಾಗಿರುವ ಸ್ವಾಮೀಜಿಯವರು ಗೋಮಾಂಸ ಆಹಾರ ಕ್ರಮವಾಗಿರುವ ದಲಿತರನ್ನು ಒಪ್ಪಿಕೊಳ್ಳಲು ಸಾಧ್ಯವೆ? ಆಹಾರ ಪದ್ದತಿ, ಅದೊಂದು ಸಾಂಸ್ಕೃತಿಕ ವಿಷಯ ಭೂ ಪ್ರದೇಶ, ನಿಸರ್ಗಸಂಪತ್ತು, ಅಲ್ಲಿ ದೊರೆಯಬಹುದಾದ ಪ್ರಾಣಿ-ಪಕ್ಷಿ, ಸಸ್ಯ ಇವುಗಳ ಕ್ರಮಕ್ಕನುಗುಣವಾಗಿ ಆಹಾರ ಪದ್ದತಿ, ರೂಪುಗೊಂಡಿದೆ. ಬ್ರಾಹ್ಮಣರಾದಿಯಾಗಿ ಎಲ್ಲರೂ ಪ್ರಾಣಿಗಳ ಬಲಿಕೊಟ್ಟು ಮಾಂಸ ಭಕ್ಷಣೆ ಮಾಡಿಸುತ್ತಿದ್ದರು ಎನ್ನುವುದು ಸ್ವಾಮೀಜಿಯವರಿಗೂ ಗೊತ್ತಿರುವ ವಿಷಯ. ಸಹಭೋಜನದ ಬಗ್ಗೆ ಪ್ರಶ್ನೆ ಕೇಳಿದರೆ ಮಾಂಸ, ಮಧ್ಯ, ಸೇವಿಸುವವರ ನಡುವೆ ಸಹಭೋಜನ ಸಲ್ಲದು ಎಂದು ಹೇಳುತ್ತಾರೆ. ಇವರಲ್ಲಿ ಇನ್ನೆಂತಹ ಸಮಾನತೆ ಇದೆ. ವ್ಯಕ್ತಿ ಸ್ವಾತಂತ್ರ್ಯಕ್ಕೆ ಇವರು ಕೊಡುವ ಗೌರವ ಎಂತಹದು. ಸಹೋದರ ಭಾವ ಇದರಿಂದ ಬೆಳೆಯಲು ಸಾಧ್ಯವೇ.

ಸುರರು ಅಂದರೆ ದೇವತೆಗಳು ಅಸುರರು ಎಂದರೆ ರಾಕ್ಷಸರು ಎಂದು ಹೇಳುತ್ತಾರೆ. ಸುರರು ಎಂದರೆ ಮಧ್ಯವನ್ನು ಸೇವಿಸುವವರು ಎಂದು ಅಸುರರು ಮಧ್ಯ ಸೇವಿಸುವುದಿಲ್ಲ. ಸ್ವಾಮೀಜಿಗಳು ಪೂಜಿಸುವ ದೇವಾನುದೇವತೆಗಳೆಲ್ಲರು ಮಧ್ಯ ಸೇವಿಸುವವರು ಆದರೆ ಮಧ್ಯ ಸೇವಿಸುವವರ ನಡುವೆ ಸಹಭೋಜನ ಸಲ್ಲದು ಎಂದು ಹೇಳುತ್ತಾರೆ.

ಇದೆಂತಾ ದ್ವಂದ್ವ, ವೈಷ್ಣವ ದೀಕ್ಷೆ ನೀಡುತ್ತೇನೆ ಎಂದು ಹೇಳುತ್ತಾರೆ. ವೈಷ್ಣವ ದೀಕ್ಷೆಯ ತಾತ್ವಿಕ ಸಿದ್ಧಾಂತವೇನು? ತಾರ್ಕಿಕ ಬದುಕಿನ ಸಮಸ್ಯೆಗಳಿಂದ ಜನರನ್ನು ದೂರ ಸರಿಸಲು ಅವರು ತಮ್ಮ ಕಷ್ಟ ಸುಖಗಳನ್ನು ಬಗೆಹರಿಸಿಕೊಳ್ಳಲು ಶಕ್ತರಾಗದಂತೆ ಮಾಡುವುದೇ ವೈಷ್ಣವ ದೀಕ್ಷೆ. ಪರಾವಲಂಬಿ ಬದುಕಿನ ಪಾಠವೇ ವೈಷ್ಣವ ದೀಕ್ಷೆ, ಇದರ ಅಗತ್ಯತೆ ಇಂದು ದಲಿತರಿಗೆ ಬೇಕಿಲ್ಲ.

ಅಂಧಾನುಕರಣೆಯಿಂದ ದಲಿತರು ಮೌಢ್ಯ, ಮೂಢನಂಬಿಕೆಗಳಿಂದ ಹೊರಬಂದಲ್ಲಿ ಪೇಜಾವರ ಸ್ವಾಮೀಗಳಂತಹ ಸಾವಿರಾರು ಸ್ವಾಮಿಗಳು ಈ ದೇಶದಲ್ಲಿದ್ದರೂ ಸಹ ಜಾತಿ, ಅಸಮಾನತೆ ಹೋಗಿಲ್ಲ. ಹಳ್ಳಿಗಳಲ್ಲಿ ಜಾತಿಯತೆ ಅದರ ನಿಜರೂಪದಲ್ಲಿದ್ದರೆ ಪಟ್ಟಣಗಳಲ್ಲಿ ಅದರ ರೂಪ ಬದಲಾಗಿದೆ. ಒಬ್ಬ ದಲಿತ ಅಧಿಕಾರಿ ಬಾಡಿಗೆ ಮನೆ ಕೇಳಿದರೆ ಜಾತಿ ಕೇಳುತ್ತಾರೆ. ಮಾಂಸಹಾರಿನೊ? ಸಸ್ಯಹಾರಿನೊ? ಎಂದು ಕೇಳುತ್ತಾರೆ. ಮನೆ ಕೆಲಸಕ್ಕೆ ಮುಸುರೆ ತೊಳೆಯಲಿಕ್ಕೆ ಕೆಳಜಾತಿಯ ಜನರು ಬರುವುದಿಲ್ಲ. ಮಾದಿಗರ ಮನೆಯಲ್ಲಿ ಮನೆಗೆಲಸಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ. ಕಛೇರಿಗಳಲ್ಲಿ ಬಡ್ತಿ ನೀಡುವಾಗ ಅನ್ಯಾಯ, ಓಟಿನ ಸಂದರ್ಭದಲ್ಲಿ ಜಾತಿ ಈ ತರಹದ ಅನ್ಯಾಯಗಳನ್ನು ಸಾವಿರಾರು ಪಟ್ಟಿ ಮಾಡಬಹುದು. ಇವೆಲ್ಲ ಪಾಪ ಸ್ವಾಮೀಜಿಯವರಿಗೆ ತಿಳಿದಿಲ್ಲವೇನೊ.

ದಲಿತರ ಮುಂದಿರುವ ಪ್ರಶ್ನೆಯೆಂದರೆ ಅವರ ಉದ್ಧಾರಕ್ಕಾಗಿ ಹಗಲಿರುಳು ಅವಿಶ್ರಾಂತವಾಗಿ ಸಾವಿನವರೆವಿಗೂ ದುಡಿದ ಬಾಬಾಸಾಹೇಬ್ ಅಂಬೇಡ್ಕರ್‌ರವರ ಅನುಯಾಯಿಗಳಾಗಬೇಕೆ ಅಥವಾ ಪರಕೀಯತೆಯನ್ನೆ ಮೈದುಂಬಿಕೊಂಡಿರುವ ಪೇಜಾವರ ಸ್ವಾಮೀಜಿಯವರ ಅನುಯಾಯಿಗಳಾಗಬೇಕೋ ಚಿಂತಿಸಿ. ಅಂಬೇಡ್ಕರ್‌ರವರು ಅನುಭವಿಸಿದ ಕಷ್ಟ-ನಷ್ಟ ನೋವುಗಳು ಪೇಜಾವರ ಸ್ವಾಮಿಗಳಿಗೇನು ಗೊತ್ತು? ಅಂಬೇಡ್ಕರ್‌ರವರು ಅನುಭವಿಸಿದ ನೋವುಗಳನ್ನು ಪೇಜಾವರ ಸ್ವಾಮಿಗಳು ಅನುಭವಿಸಿದ್ದಾರೆಯೇ? ಯಾರಾದರು ನಮ್ಮಪ್ಪನನ್ನು ನಿನ್ನ ಮಗನನ್ನು ಏಕೆ ಓದಿಸುತ್ತಿದ್ದೀಯ ಎಂದು ಕೇಳಿದರೆ, ನಾನು ಜೀತ ಇದ್ದದ್ದು ಸಾಕು ನನ್ನ ಮಗ ಜೀತ ಇರಬಾರದು ಎಂದು ಹೇಳುತ್ತಿದ್ದ. ಅದೇ ರೀತಿ ಬಾಬಾಸಾಹೇಬರು ನಾನು ಜಾತಿ ನೋವು ಅನುಭವಿಸಿದ್ದು ಸಾಕು ನನ್ನ ಜನ ಅದನ್ನು ಅನುಭವಿಸಬಾರದು ಎಂದು ತಂದೆಯ ಸ್ಥಾನದಲ್ಲಿದ್ದು ಎಲ್ಲರನ್ನು ಎಚ್ಚರಿಸಿದ್ದಾರೆ. ಆ ಮಾತನ್ನು ಕೇಳಬೇಕೋ ಪುರೋಹಿತರ ಮುಖಂಡರಾಗಿರುವ ಸ್ವಾಮೀಜಿಯವರ ಮಾತನ್ನು ಕೇಳಬೇಕೋ ನಿರ್ಧಾರ ಶೋಷಿತ ಮತ್ತು ದಲಿತರಿಗೆ ಬಿಟ್ಟ ವಿಚಾರ.

ಬ್ರಾಹ್ಮಣರ ಸ್ವಾಮಿ ದಲಿತ ಕೇರಿಗೆ ಬಂದರು ಎಂದುಹೇಳಿ ಮಾದರಸ್ವಾಮಿ ಬ್ರಾಹ್ಮಣರ ಕೇರಿಗೆ ಹೋದರೆ ಬಂದ ಲಾಭವೇನು. ಜಾತಿ-ವಿನಾಶ ಸಾಧ್ಯವೇ? ಮಾದರ ಸ್ವಾಮಿಗಳು ಜಾತಿಯತೆಗೆ ಕಾರಣವಾದ ತಾತ್ವಿಕ ಸಿದ್ಧಾಂತ ಒಂದಿದೆ ಅದರ ವಿರುದ್ಧ ಹೋರಾಟ ಮಾಡಬೇಕು, ಮಡಿ -ಮೈಲಿಗೆ, ಮೂಢನಂಬಿಕೆ, ಕಂದಾಚಾರ, ಶ್ರೇಷ್ಠ-ಕನಿಷ್ಠ, ಉಚ್ಚ-ನೀಚ, ಸ್ವರ್ಗ-ನರಕ, ಈ ಅಂಶಗಳು ವೈದಿಕ ವ್ಯವಸ್ಥೆಯ ಒಂದು ಭಾಗ. ಅದನ್ನು ಮೈಗೂಡಿಸಿ ಕೊಂಡಿರುವ ಯಾರೇ ಆದರೂ ಅವರ ವಿರುದ್ಧ ತಾತ್ವಿಕ, ಪ್ರಜಾತಾಂತ್ರಿಕ ಅಂಶಗಳ ಆಧಾರದಲ್ಲಿ ಸಂಘರ್ಷ ನೆಡೆಯಬೇಕು ಆ ಕೆಲಸವನ್ನು ಮಾದರ ಚೆನ್ನಯ್ಯ ಸ್ವಾಮೀಜಿಯವರು ಮಾಡಲು ಮುಂದಾಗಬೇಕು ನಾವೆಲ್ಲ ಅವರ ಬೆಂಬಲಕ್ಕಿದ್ದೇವೆ.

ದಲಿತರ ಮುಂದಿರುವ ಪ್ರಶ್ನೆಯೆಂದರೆ ಅವರ ಉದ್ಧಾರಕ್ಕಾಗಿ ಹಗಲಿರುಳು ಅವಿಶ್ರಾಂತವಾಗಿ ಸಾವಿನವರೆವಿಗೂ ದುಡಿದ ಬಾಬಾಸಾಹೇಬ್ ಅಂಬೇಡ್ಕರ್‌ರವರ ಅನುಯಾಯಿಗಳಾಗಬೇಕೆ ಅಥವಾ ಪರಕೀಯತೆಯನ್ನೆ ಮೈದುಂಬಿಕೊಂಡಿರುವ ಪೇಜಾವರ ಸಾಮೀಜಿಯವರ ಅನುಯಾಯಿಗಳಾಗಬೇಕೋ ಚಿಂತಿಸಿ. ಅಂಬೇಡ್ಕರ್‌ರವರು ಅನುಭವಿಸಿದ ಕಷ್ಟ-ನಷ್ಟ ನೋವುಗಳು ಪೇಜಾವರ ಸ್ವಾಮಿಗಳಿಗೇನು ಗೊತ್ತು? ಅಂಬೇಡ್ಕರ್‌ರವರು ಅನುಭವಿಸಿದ ನೋವುಗಳನ್ನು ಪೇಜಾವರ ಸ್ವಾಮಿಗಳು ಅನುಭವಿಸಿದ್ದಾರೆಯೇ? ಯಾರಾದರು ನಮ್ಮಪ್ಪನನ್ನು ನಿನ್ನ ಮಗನನ್ನು ಏಕೆ ಓದಿಸುತ್ತಿದ್ದೀಯ ಎಂದು ಕೇಳಿದರೆ, ನಾನು ಜೀತ ಇದ್ದದ್ದು ಸಾಕು ನನ್ನ ಮಗ ಜೀತ ಇರಬಾರದು ಎಂದು ಹೇಳುತ್ತಿದ್ದ. ಅದೇ ರೀತಿ ಬಾಬಾಸಾಹೇಬರು ನಾನು ಜಾತಿ ನೋವು ಅನುಭವಿಸಿದ್ದು ಸಾಕು ನನ್ನ ಜನ ಅದನ್ನು ಅನುಭವಿಸಬಾರದು ಎಂದು ತಂದೆಯ ಸ್ಥಾನದಲ್ಲಿದ್ದು ಎಲ್ಲರನ್ನು ಎಚ್ಚರಿಸಿದ್ದಾರೆ. ಆ ಮಾತನ್ನು ಕೇಳಬೇಕೋ ಪುರೋಹಿತರ ಮುಖಂಡರಾಗಿರುವ ಸ್ವಾಮೀಜಿಯವರ ಮಾತನ್ನು ಕೇಳಬೇಕೋ ನಿರ್ಧಾರ ಶೋಷಿತ -ದಲಿತರಿಗೆ ಬಿಟ್ಟ ವಿಚಾರ. ಬ್ರಾಹ್ಮಣರ ಸ್ವಾಮಿ ದಲಿತಕೇರಿಗೆ ಬಂದರು ಎಂದುಹೇಳಿ ಮಾದರಸ್ವಾಮಿ ಬ್ರಾಹ್ಮಣರ ಕೇರಿಗೆ ಹೋದರೆ ಬಂದ ಲಾಭವೇನು?

ಈ ಹಿಂದೆ ಜಾತಿ-ವಿನಾಶ ಚಳವಳಿಯನ್ನು ಮಂಗೂರಾಮ್‌ರವರು-ಪಂಜಾಬ್‌ನಲ್ಲಿ ಪ್ರಾರಂಭ ಮಾಡಿದರು. ಅದರ ಹಿನ್ನೆಡೆಗೆ ಪುರೋಹಿತಶಾಹಿಗಳು ಅನೇಕ ಸಂಚನ್ನು ರೂಪಿಸಿದರು. ಬ್ರಹ್ಮ ಸಮಾಜ-ಆರ್ಯ ಸಮಾಜದ ಮೂಲಕ ದಲಿತರು ಅಂಬೇಡ್ಕರ್‌ರವರ ಚಳವಳಿಯಲ್ಲಿ ಭಾಗವಹಿಸಲು ತಡೆದರು. ಮತಾಂತರವನ್ನು ತಡೆಯುವ ಸಲುವಾಗಿ ಮೂಲಭೂತವಾದಿಗಳು ಕಾಲಕಾಲಕ್ಕೆ ಹೊಸ-ಹೊಸ ತಂತ್ರಗಳನ್ನು ಬಳಸಿ ದಲಿತರು ಬದಲಾಗದಂತೆ ತಡೆದಿದ್ದಾರೆ. ಪೇಜಾವರರ ದಲಿತ ಕೇರಿಯ ಭೇಟಿ ಪ್ರಯೋಗವು ಸಹ ಅಂತಹದೇ ಆಗಿದೆ. □

ಸಂವಾದ

ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯುವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಚೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಾಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಮೊದಲು ಕನ್ನಡ ಮಾಧ್ಯಮ, ನಂತರ ಪ್ರಶಸ್ತಿ

ಇವರಿಗೆ,
ಡಾ|| ನಲ್ಲೂರು ಪ್ರಸಾದ್ ಆರ್.ಕೆ.
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು.
ಬೆಂಗಳೂರು

ಮಾನ್ಯರೇ

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ನೃಪತುಂಗ ಸಾಹಿತ್ಯ ಪ್ರಶಸ್ತಿಗೆ ಕನ್ನಡ ಸಾಹಿತ್ಯ ಪರಿಷತ್ತು ನನ್ನನ್ನು ಆಯ್ಕೆ ಮಾಡಿರುವುದಕ್ಕಾಗಿ ಕೃತಜ್ಞತೆ ಸಲ್ಲಿಸುತ್ತಾ ಈ ಸಂದರ್ಭದಲ್ಲಿ - ಒಂದು ವಿನಂತಿಯನ್ನು ತಮ್ಮ ಮುಂದಿಡುವೆ:

ಉನ್ನತ ಶಿಕ್ಷಣದವರೆಗೂ ಕನ್ನಡ ಮಾಧ್ಯಮವಾಗುವುದನ್ನೇ ಹಂಬಲಿಸುತ್ತಾ ಅದನ್ನು ಕಾಣದೆ ಕಣ್ಮುಚ್ಚಿದ ಮಹಾಕವಿ ಕುವೆಂಪು ಅವರನ್ನು ನೆನೆಸಿಕೊಳ್ಳುತ್ತಾ, ಹಾಗೇ, 'ಕನ್ನಡ ಶಿಕ್ಷಣ ಮಾಧ್ಯಮಕ್ಕಾಗಿ ಚಿಕ್ಕ ಹುಡುಗನಾಗಿದ್ದಾಗ ಪ್ಲೆಕಾರ್ಡ್ ಹಿಡಿದುಕೊಂಡು ಕೂಗಾಡುತ್ತಿದ್ದೆ. ಈಗ ವಯಸ್ಸಾದ ಮೇಲೆ ಕೋಲು ಹಿಡಿದುಕೊಂಡು ಅದೇ ಬೇಡಿಕೆ ಕೇಳುತ್ತಿದ್ದೇನೆ, ಪರಿಸ್ಥಿತಿಯಲ್ಲಿ ಏನೂ ವ್ಯತ್ಯಾಸವಾಗಲಿಲ್ಲ-ನನಗೆ ವಯಸ್ಸಾದದ್ದೊಂದನ್ನು ಬಿಟ್ಟು' ಎನ್ನುತ್ತಿದ್ದ ಡಾ|| ಹಾ.ಮಾ. ನಾಯಕರ ಮಾತುಗಳೂ ಅವರೊಡನೇ ಕಾಲವಶವಾಗಿವೆ.

ಇಂದು ಕನ್ನಡದ ಪರಿಸ್ಥಿತಿಯನ್ನು ನೋಡಿದರಂತೂ ಕನ್ನಡವು ಶಿಕ್ಷಣ ಮಾಧ್ಯಮವಾಗದೆ ಕನ್ನಡದ ಪಾದಗಳು ಶಕ್ತಿಹೀನವಾಗಿ, ನಡೆಯಲು ಕಷ್ಟಪಡುತ್ತ ಕಂಕಳು ಕೋಲು ಹಿಡಿದುಕೊಂಡು ಯಾತನಾಮಯವಾಗಿ ನಡೆಯುತ್ತಿರುವಂತೆ ಕಾಣುತ್ತದೆ. ಇಲ್ಲಿಯವರೆಗಿನ ಎಲ್ಲಾ ಸರ್ಕಾರಗಳೂ ಕನ್ನಡದ ಬಗ್ಗೆ ಜುಟ್ಟಿಗೆ ಮಲ್ಲಿಗೆ ಹೂ ಮಾತಾಡಿಕೊಂಡೇ ಬಂದಿವೆ.

ಹೀಗಿರುವಾಗ ಯಾವುದಾದರೂ ಕನ್ನಡ ಸಂಘವೋ ಅಥವಾ ಕನ್ನಡ ಸಾಹಿತ್ಯ ಪರಿಷತ್ತೋ ಕೊಡಮಾಡುವ ಯಾವುದೇ ಪ್ರಶಸ್ತಿ ಪಡೆಯುವುದು ಅಥವಾ ಅವು ನಡೆಸುವ ಯಾವುದೇ ಸಮ್ಮೇಳನಗಳಲ್ಲಿ ಭಾಗವಹಿಸುವುದು ನನಗೆ ಕಸಿವಿಸಿಯಾಗುತ್ತದೆ. ಇಂದಿನ ವ್ಯವಹಾರಿಕ ಕಾರಣಕ್ಕಾಗಿ ಒಂದು ಭಾಷೆಯಾಗಿ ಒಂದನೆಯ ತರಗತಿಯಿಂದಲೇ ಇಂಗ್ಲಿಷ್ ಕಲಿಕೆಯನ್ನು ಅರ್ಥಮಾಡಿಕೊಳ್ಳಬಹುದು: ಆದರೆ ಮಾಧ್ಯಮವನ್ನು ಮಾತೃಭಾಷೆಯನ್ನಾಗಿಸುವ ವಿಚಾರ ವಿವೇಕವಾಗದೆ ನಗೆಪಾಟಲಾಗಿರುವ ದುರಂತಕ್ಕೆ ಕಾರಣರು ಯಾರು?

ಆದ್ದರಿಂದ ನನ್ನ ಬೇಡಿಕೆ- ಈಗಲಾದರೂ ನಮ್ಮ ಸರ್ಕಾರ ಹೃತ್ಪೂರ್ವಕತೆ ಮತ್ತು ಇಚ್ಛಾಶಕ್ತಿ ಪಡೆದು- 'ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ರಾಜ್ಯಭಾಷೆ ಅಥವಾ ಮಾತೃಭಾಷೆಯ ಶಿಕ್ಷಣ ಮಾಧ್ಯಮ ಜಾರಿಗೆ ತರುತ್ತೇನೆ' ಎಂದು ಘೋಷಿಸಿದರೆ ಅಥವಾ ಕನ್ನಡ ಸಾಹಿತ್ಯ ಪರಿಷತ್ "ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ರಾಜ್ಯಭಾಷೆ ಅಥವಾ ಮಾತೃ ಭಾಷೆಯ ಶಿಕ್ಷಣ ಮಾಧ್ಯಮವನ್ನು ಜಾರಿಗೆ ತರುವವರೆಗೂ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸದೆ, ರಾಜ್ಯ ಭಾಷೆ ಅಥವಾ ಮಾತೃಭಾಷೆ ಎಂದರೆ ಕನ್ನಡ ಶಿಕ್ಷಣ ಮಾಧ್ಯಮಕ್ಕಾಗಿ ಹೋರಾಡುತ್ತದೆ' ಎಂದು ಘೋಷಿಸಿದ ನಾಳೆಗೇ ಕನ್ನಡ ಸಾಹಿತ್ಯ ಪರಿಷತ್ ಕಛೇರಿಗೆ ಬಂದು ನಾನು ಈ ಪ್ರಶಸ್ತಿ ಪಡೆಯುತ್ತೇನೆ, ಜೊತೆಗೇ ಕನ್ನಡ ಶಿಕ್ಷಣ ಮಾಧ್ಯಮದ ಹೋರಾಟದಲ್ಲಿ ನಾನೂ ನಿಮ್ಮೊಂದಿಗೆ ಜೊತೆಗೂಡುತ್ತೇನೆ. ಇದಕ್ಕೆ ಅವಕಾಶ ಕಲ್ಪಿಸಿಕೊಡಿ ಎಂದು ವಿನಂತಿಸುತ್ತೇನೆ. ಅಲ್ಲಿಯವರೆಗೂ ಕ್ಷಮೆ ಇರಲಿ.

ಇತಿ
ವಂದನೆಗಳೊಂದಿಗೆ

(ದೇವನೂರ ಮಹಾದೇವ)

ಪ್ರಶಸ್ತಿ ತಿರಸ್ಕಾರ: ಸುದ್ದಿಯಾಗದ ಸೋಜಿಗ!

ಡಿ.ಎಸ್ ನಾಗಭೂಷಣ

ರಾಜ್ಯದಲ್ಲಿನ ಸಾಹಿತ್ಯ ಕ್ಷೇತ್ರದ ಅತ್ಯುನ್ನತ 'ಬೆಲೆ'ಯದೆಂದು ಹೇಳಲಾಗುವ 'ನೃಪತುಂಗ' ಪ್ರಶಸ್ತಿಯನ್ನು ಕನ್ನಡ ಸಾಹಿತ್ಯ ಪರಿಷತ್ತು ಕನ್ನಡದ ಅತಿ ವಿಶಿಷ್ಟ ಬರಹಗಾರರಲ್ಲೊಬ್ಬರಾದ ದೇವನೂರ ಮಹಾದೇವ ಅವರಿಗೆ ಪ್ರಕಟಿಸಿದಾಗ ಅದು ರಾಜ್ಯ ಮಟ್ಟದ ಸುದ್ದಿಯಾಯಿತು. ಆದರೀಗ ಮಹಾದೇವ ಅವರು ಆ ಪ್ರಶಸ್ತಿಯನ್ನು ತಿರಸ್ಕರಿಸಿರುವಾಗ ಅದೇನೂ ರಾಜ್ಯ ಮಟ್ಟದ ಸುದ್ದಿಯಾಗಿಲ್ಲ! ಇದು ನಮ್ಮ ಸದ್ಯದ ಮಾಧ್ಯಮ ಪ್ರಪಂಚದ ಸೋಜಿಗಗಳಲ್ಲೊಂದಾಗಿದೆ.

ಇದಕ್ಕೆ ಕಾರಣವಿದೆ. ಮಹಾದೇವ ರಾಜ್ಯದ ಶಾಲೆಗಳಲ್ಲಿ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮವನ್ನು ಕಡ್ಡಾಯವಾಗಿ ಜಾರಿಗೆ ತರುವ ತನಕ ಮತ್ತು ಈ ದಿಸೆಯಲ್ಲಿ ಸರ್ಕಾಗ ಕ್ರಮ ಕೈಗೊಳ್ಳುವವರೆಗೆ ಸಾಹಿತ್ಯ ಸಮ್ಮೇಳನ ನಡೆಸುವುದಿಲ್ಲವೆಂದು ಕನ್ನಡ ಸಾಹಿತ್ಯ ಪರಿಷತ್ ಘೋಷಿಸುವ ತನಕ ತಾವು ಈ ಪ್ರಶಸ್ತಿಯನ್ನು ಸ್ವೀಕರಿಸುವುದಿಲ್ಲವೆಂದು ಪ್ರಕಟಿಸಿದ್ದಾರೆ. ಇದು ಅಷ್ಟೇನೂ ಜನಪ್ರಿಯವಲ್ಲದ ನಿರ್ಧಾರವಾಗಿದೆ. ಆದರೆ ಕನ್ನಡ ಸಂಸ್ಕೃತಿಯ ಮೂಲ ಲಾಕ್ಷಣಿಕ ಗ್ರಂಥವೆನಿಸಿದ 'ಕವಿರಾಜಮಾರ್ಗ'ದ ಕೃತಿಕಾರನ ಹೆಸರಲ್ಲಿ ಸ್ಥಾಪಿಸಲಾಗಿರುವ ಈ ಪ್ರಶಸ್ತಿಯನ್ನು, ಇಂದು ಬಹು ಒತ್ತಡದಲ್ಲಿ ಸಿಲುಕಿ ತನ್ನ ಮೂಲ ಅಸ್ಮಿತೆಯನ್ನೇ ಕಳೆದುಕೊಳ್ಳುವ ಅಪಾಯದಲ್ಲಿರುವ ಕನ್ನಡ ಸಂಸ್ಕೃತಿಯನ್ನು ಉಳಿಸುವ ಒಂದು ನಿರ್ಣಾಯಕ ಪ್ರಯತ್ನದ ಭಾಗವಾಗಿ ತಿರಸ್ಕರಿಸುವ ಮೂಲಕ ಮಹಾದೇವ ಇಂದಿನ ನಿಜವಾದ ಕನ್ನಡ ಚಳುವಳಿಕಾರರೆನಿಸಿದ್ದಾರೆ.

ಮೂರು-ನಾಲ್ಕು ವರ್ಷಗಳ ಹಿಂದೆ ರಾಜ್ಯದ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಮಕ್ಕಳಿಗೆ ಇಂಗ್ಲಿಷ್ ಕಲಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರಿ, ಅದನ್ನು ಇಂಗ್ಲಿಷ್ ಶಿಕ್ಷಣದ ಮಾಫಿಯಾದ ಬೆಂಬಲದೊಂದಿಗೆ ಸಾಧ್ಯ ಮಾಡಿದ ಕೆಲವು ಬುದ್ಧಿಜೀವಿ ಹೋರಾಟಗಾರರಿಗೆ ದೇವನೂರರು ಬೆಂಬಲ ನೀಡಿದ್ದರು. ಸರ್ಕಾರದ ಈ ಕ್ರಮದಿಂದ ಸರ್ಕಾರಿ ಶಾಲೆಗಳಿಗೆ ಹೋಗುವ ದಲಿತ ಮತ್ತು ಹಿಂದುಳಿದ ಜಾತಿಗಳ ಮಕ್ಕಳಿಗೆ ಅನುಕೂಲವಾಗುವುದೆಂದೂ, ಇದರ ಫಲವಾಗಿ ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಹೆಚ್ಚಾಗಿ ಅವುಗಳು ಸುಧಾರಿಸುವ ಅವಕಾಶ ಹೆಚ್ಚೆಂದೂ ತಮ್ಮ ನಿಲುವನ್ನು ಅವರು ಸಮರ್ಥಿಸಿಕೊಂಡಿದ್ದರು. ಮಹಾದೇವ ಅವರು ನಮ್ಮ ನಡುವೆ ಈಗಲೂ ನೈತಿಕ ಬಲ ಉಳಿಸಿಕೊಂಡಿರುವ ಕೆಲವೇ ಕೆಲವು ಸಾಂಸ್ಕೃತಿಕ ವ್ಯಕ್ತಿತ್ವಗಳಲ್ಲಿ ಒಬ್ಬರಾಗಿರುವುದರಿಂದ, ಅವರ ಆ ನಿಲುವಿನಿಂದಾಗಿ ಅಂದಿನ ಇಂಗ್ಲಿಷ್‌ವಾದಿಗಳಿಗೆ ಹೆಚ್ಚಿನ ನೈತಿಕ ಬೆಂಬಲವೂ ದೊರಕಿದಂತಾಗಿತ್ತು.

ಆದರೆ ಸರ್ಕಾರದ ಆ ಕ್ರಮ ದಲಿತ-ಹಿಂದುಳಿದ ಜಾತಿಗಳ ಮಕ್ಕಳ ಕ್ಷೇಮಾಭ್ಯುದಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಕೈಗೊಳ್ಳಲಾಗಿರುವ ಕ್ರಮವಲ್ಲವೆಂದೂ, ಇದು ಮುಕ್ತ ಮಾರುಕಟ್ಟೆ ನೀತಿಯ ಹೆಸರಲ್ಲಿ ಜಗತ್ತನ್ನೇ ಮತ್ತು ಆ ಮೂಲಕ ಮನುಷ್ಯ ಬದುಕನ್ನೇ ಒಂದು ಮಾರುಕಟ್ಟೆಯನ್ನಾಗಿ ಮಾಡಿ ಹಣ ಲೂಟಿ ಮಾಡಬಯಸಿರುವ ಜಾಗತೀಕರಣವಾದಿಗಳ ಸಾಂಸ್ಕೃತಿಕ ರಾಜಕಾರಣದ

ಕರ್ನಾಟಕದಲ್ಲಿ ಕನ್ನಡದ ಹೆಸರಲ್ಲಿ ಹೊಸ ಹೊಸ ವೇದಿಕೆಗಳೂ, ದಳಗಳೂ, ಸೇನೆಗಳೂ ಹುಟ್ಟಿಕೊಳ್ಳುತ್ತಿದ್ದಂತೆ, ಸರ್ಕಾರ ಕನ್ನಡ ಪರವಾದ ಹೊಸ ಹೊಸ ಘೋಷಣೆಗಳನ್ನು ಕೂಗುತ್ತಿದ್ದಂತೆ ಮತ್ತು ಹಿಂಡು ಹಿಂಡು ರಾಜ್ಯೋತ್ಸವ ಪ್ರಶಸ್ತಿಗಳನ್ನು ಪ್ರಕಟಿಸುತ್ತಿದ್ದಂತೆ ಹಾಗೂ ಶಾಸ್ತ್ರೀಯ ಭಾಷೆಯ ಸ್ಥಾನಮಾನದ ಹೆಸರಲ್ಲಿ ಕನ್ನಡದ ಉದ್ಧಾರಕ್ಕಾಗಿ ನಮ್ಮ ಗಬ್ಬೆದ್ದು ಹೋಗಿರುವ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೆ ಕೋಟ್ಯಾಂತರ ರೂಪಾಯಿಗಳ ಅನುದಾನ ಬಿಡುಗಡೆಯಾಗುತ್ತಿದ್ದಂತೆ, ಕರ್ನಾಟಕದಲ್ಲಿ ಕನ್ನಡ ಶಕ್ತಿಯ ಮೂಲ ಕೇಂದ್ರಗಳಂತಿರುವ ಕನ್ನಡ ಶಾಲೆಗಳು ಒಂದೊಂದಾಗಿ ಮುಚ್ಚಿಹೋಗುತ್ತಾ, ಕನ್ನಡ ಕಲಿಕೆ ಎಂಬುದು ಕ್ರಮೇಣ ಯಾರಿಗೂ ಬೇಕಾಗದ ವಿದ್ಯಮಾನವಾಗುತ್ತಿದೆ.

ಹುನ್ನಾರವೆಂದೂ; ಹಾಗಾಗಿ ಇದು ಕನ್ನಡದ ಮೇಲೆ ಮಾಡಲಾಗುತ್ತಿರುವ ಉದ್ದೇಶಪೂರ್ವಕ ಪ್ರಹಾರವೆಂದೂ ನಾವು ಕೆಲವರು ವಾದಿಸಿದ್ದೆವು. ಹಾಗೇ, ಶಾಲಾ ಮಟ್ಟದಲ್ಲಿ ಕನ್ನಡ ಮಾಧ್ಯಮವನ್ನು ಕಡ್ಡಾಯ ಮಾಡಿದ ನಂತರ ಬೇಕಾದರೆ, ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವ ಕ್ರಮ ಕೈಗೊಳ್ಳಲಿ ಎಂದೂ ಸೂಚಿಸಿದ್ದೆವು.

ಆದರೆ ಏಕೋ ಏನೋ ಆಗ ನಮ್ಮ ಮಾತಿಗೆ ಕಿವಿಗೊಡದ ಮಹಾದೇವ ಅವರು ಈಗ ರಾಜ್ಯಾದ್ಯಂತ ಕನ್ನಡ ಶಾಲೆಗಳು ಒಂದೊಂದಾಗಿ ಮುಚ್ಚತೊಡಗಿರುವುದನ್ನು ನೋಡಿ ಗಾಬರಿಯಾಗಿಯೋ ಏನೋ, ತಮ್ಮ ತಪ್ಪನ್ನು ತಿದ್ದಿಕೊಳ್ಳಬಯಸಿದಂತೆ ನೃಪತುಂಗ ಪ್ರಶಸ್ತಿಯನ್ನು ಕನ್ನಡಪರ ಷರತ್ತುಗಳೊಂದಿಗೆ ತಿರಸ್ಕರಿಸುವ ನಿರ್ಧಾರ ಕೈಗೊಂಡಿದ್ದಾರೆ. ಅವರಿಗೆ ಜಾಗತೀಕರಣ ವಿರೋಧದ ಭಾಗವಾಗಿ ಕನ್ನಡ ಶಿಕ್ಷಣಪರವಾದಿಗಳಾಗಿರುವವರ ಪರವಾಗಿ ಅಭಿನಂದನೆಗಳು.

ರಾಜ್ಯದಲ್ಲಿ ಜನಸಂಖ್ಯೆ ಹೆಚ್ಚುತ್ತಿದ್ದಂತೆ, ಹೊಸ ಕನ್ನಡ ಶಾಲೆಗಳ ಆರಂಭ ಕ್ಷೀಣವಾಗುತ್ತಿದ್ದರೂ, ಇರುವ ಕನ್ನಡ ಶಾಲೆಗಳು ಮುಚ್ಚಲ್ಪಡುವ ಪರಿಸ್ಥಿತಿ ಈವರೆಗೆ ಉಂಟಾಗಿರಲಿಲ್ಲ. ಆದರೆ ಕಳೆದ ನಾಲ್ಕೈದು ವರ್ಷಗಳಲ್ಲಿ ರಾಜ್ಯಾದ್ಯಂತ ಕನ್ನಡ ಶಾಲೆಗಳು ಅತಿ ವೇಗದಲ್ಲಿ ಮುಚ್ಚಲ್ಪಡುತ್ತಿರುವ ವಿದ್ಯಮಾನವನ್ನು ನಾವು ನೋಡುತ್ತಿದ್ದೇವೆ. ಇದಕ್ಕೆ, ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವ ಒತ್ತಾಯದ 'ಚಳುವಳಿ' ಮತ್ತು ಅದಕ್ಕೇ ಕಾಯುತ್ತಿದ್ದಂತೆ ಸರ್ಕಾರ ಅದಕ್ಕೆ ಮಾನ್ಯತೆ ನೀಡಿದ ಕ್ರಮದ ಹಿಂದೆ ಕರ್ನಾಟಕದಲ್ಲಿ ಮೊದಲ ಬಾರಿಗೆ ಯಾವುದೇ ಸಂಕೋಚವಿಲ್ಲದೆ ಧೈರ್ಯದಿಂದ ಪ್ರತಿಪಾದಿಸಲ್ಪಟ್ಟ ಕನ್ನಡವನ್ನು ಎರಡನೇ ದರ್ಜೆಯ ಭಾಷೆಯ ಸ್ಥಾನಕ್ಕೆ ತಳ್ಳಿ ಇಂಗ್ಲಿಷ್‌ನ್ನು ಮೊದಲ ದರ್ಜೆಯ ಭಾಷೆಯನ್ನಾಗಿ ಮಾನ್ಯ ಮಾಡಿದ 'ವ್ಯಾವಹಾರಿಕ' ರಾಜಕಾರಣವೇ ಕಾರಣವಾಗಿದೆ ಎಂದರೆ ತಪ್ಪಾಗಲಾರದು. ಇದರಿಂದಾಗಿ ಇಂದು ಬೆಂಗಳೂರಿನಲ್ಲಿ ಮಾತ್ರವಲ್ಲ, ರಾಜ್ಯದ ಬಹುಪಾಲು ಎಲ್ಲ ಪಟ್ಟಣಗಳಲ್ಲಿ ಕನ್ನಡ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸಬಯಸುವ ತಂದೆ ತಾಯಿಗಳಿಗೆ ಒಳ್ಳೆಯ ಕನ್ನಡ ಶಾಲೆಗಳೇ ಇಲ್ಲವಾಗಿವೆ. ಇದರಿಂದಾಗಿ ಸಣ್ಣ ಸಣ್ಣ ಊರುಗಳೂ ಸೇರಿದಂತೆ ರಾಜ್ಯಾದ್ಯಂತ ಕನ್ನಡ ಶಿಕ್ಷಣದ ಅವಕಾಶಗಳು ಕಿರಿದಾಗುತ್ತಾ ಇಂಗ್ಲಿಷ್ ಶಿಕ್ಷಣವೆಂಬ ವಿಷವೃತ್ತವೊಂದು ಸೃಷ್ಟಿಯಾಗತೊಡಗಿದೆ.

ಕನ್ನಡದ ಮಕ್ಕಳನ್ನು ಈ ವಿಷವೃತ್ತದಿಂದ ಪಾರು ಮಾಡಬೇಕಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಿದ್ದ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಶಿಕ್ಷಣಕ್ಕೂ ತನಗೂ ಏನೂ ಸಂಬಂಧವಿಲ್ಲವೆಂಬಂತೆ, ಭರ್ಜರಿ ಟಿಎ ಡಿಎ ಆಧಾರಿತ ಭಾಷಣ-ಭೀಷಣಗಳ ಬರಡು ಕಾರ್ಯಕ್ರಮಗಳಲ್ಲಿ ತೊಡಗಿದೆ. ಇನ್ನು ಐದನೇ ತರಗತಿಯವರೆಗಾದರೂ ಕನ್ನಡ ಮಾಧ್ಯಮವನ್ನು ಕಡ್ಡಾಯ ಮಾಡುವುದಾಗಿ ತನ್ನ ಕನ್ನಡ ಬದ್ಧತೆಯನ್ನು ಘೋಷಿಸಿಕೊಂಡು ಪಕ್ಷಾತೀತವಾಗಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದ್ದ ಸದ್ಯದ ಸರ್ಕಾರ ನ್ಯಾಯಾಲಯದಲ್ಲಿ ಅದನ್ನು ಸಾಧಿಸಿಕೊಳ್ಳುವಲ್ಲಿ ಯಾವುದೇ ಆಸಕ್ತಿಯನ್ನಾಗಲೀ, ತುರ್ತನ್ನಾಗಲೀ ತೋರುತ್ತಿಲ್ಲ. ಪ್ರಕರಣ ಸರ್ವೋಚ್ಚ ನ್ಯಾಯಾಲಯದ ಮೆಟ್ಟಿಲೇರಿ ಎರಡು ಶೈಕ್ಷಣಿಕ ವರ್ಷಗಳು ಮುಗಿಯುತ್ತಾ ಬಂದಿದ್ದರೂ, ಅದು ಇನ್ನೂ ವಿಚಾರಣೆಗೆ ಬಂದಂತಿಲ್ಲ. ನಮ್ಮ ನ್ಯಾಯಾಲಯಗಳಿಗೂ ಶಿಕ್ಷಣ ಮಾಧ್ಯಮದ ಪ್ರಶ್ನೆ ಮಹತ್ವದ ಪ್ರಶ್ನೆಯೇ ಆಗಿಲ್ಲವೆಂಬುದು ನಮ್ಮ ರಾಷ್ಟ್ರ ಜೀವನವೆಂಬುದು ಎಂತಹ ತಲೆಕೆಳಗಾದ ಆದ್ಯತೆಗಳಿಂದ ನರಳುತ್ತಿದೆ ಎಂಬುದನ್ನು ಸೂಚಿಸುತ್ತದೆ.

ಕರ್ನಾಟಕದಲ್ಲಿ ಕನ್ನಡದ ಹೆಸರಲ್ಲಿ ಹೊಸ ಹೊಸ ವೇದಿಕೆಗಳೂ, ದಳಗಳೂ, ಸೇನೆಗಳೂ ಹುಟ್ಟಿಕೊಳ್ಳುತ್ತಿದ್ದಂತೆ, ಸರ್ಕಾರ ಕನ್ನಡ ಪರವಾದ ಹೊಸ ಹೊಸ ಘೋಷಣೆಗಳನ್ನು ಕೂಗುತ್ತಿದ್ದಂತೆ ಮತ್ತು ಹಿಂಡು ಹಿಂಡು ರಾಜ್ಯೋತ್ಸವ ಪ್ರಶಸ್ತಿಗಳನ್ನು ಪ್ರಕಟಿಸುತ್ತಿದ್ದಂತೆ ಹಾಗೂ ಶಾಸ್ತ್ರೀಯ ಭಾಷೆಯ ಸ್ಥಾನಮಾನದ ಹೆಸರಲ್ಲಿ ಕನ್ನಡದ ಉದ್ಧಾರಕ್ಕಾಗಿ ನಮ್ಮ ಗಬ್ಬೆದ್ದು ಹೋಗಿರುವ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೆ ಕೋಟ್ಯಾಂತರ ರೂಪಾಯಿಗಳ ಅನುದಾನ ಬಿಡುಗಡೆಯಾಗುತ್ತಿದ್ದಂತೆ, ಕರ್ನಾಟಕದಲ್ಲಿ ಕನ್ನಡ ಶಕ್ತಿಯ ಮೂಲ ಕೇಂದ್ರಗಳಂತಿರುವ ಕನ್ನಡ ಶಾಲೆಗಳು ಒಂದೊಂದಾಗಿ ಮುಚ್ಚಿಹೋಗುತ್ತಾ, ಕನ್ನಡ ಕಲಿಕೆ ಎಂಬುದು ಕ್ರಮೇಣ ಯಾರಿಗೂ ಬೇಕಾಗದ ವಿದ್ಯಮಾನವಾಗುತ್ತಿದೆ.

ಇಂತಹ ದುರಂತಮಯ ವಿಪರ್ಯಾಸದ ಸಂದರ್ಭದಲ್ಲಿ ದೇವನೂರ ಮಹಾದೇವ ಅವರ ಪ್ರತಿಭಟನೆ ಸಾಂಕೇತಿಕವಾದುದಾದರೂ, ಅವರ ಸಾಹಿತ್ಯದಂತೆಯೇ ಆಳದ ಪರಿಣಾಮಶೀಲತೆಯಿಂದ ಕೂಡಿದುದಾಗಿದೆ. ಅದನ್ನು ಸರ್ಕಾರ ಮತ್ತು ಕನ್ನಡ ಸಾಹಿತ್ಯ ಪರಿಷತ್ತು ಗಂಭೀರವಾಗಿ ಪರಿಗಣಿಸಬೇಕಿದೆ. ಕನ್ನಡ ಚಳುವಳಿಗಾರರು, ಸಾಹಿತಿ ಮಿತ್ರರು ಮತ್ತು ಕನ್ನಡ ಸಂಸ್ಕೃತಿ ಚಿಂತಕರು ಇದು ಕನ್ನಡ ಬದುಕಿನ ನಿರ್ಣಾಯಕ ಪ್ರಶ್ನೆಯೆಂಬಂತೆ ಬೆಂಬಲಿಸಬೇಕಿದೆ. □

ಹನಿ ಕವನಗಳು

ಮಹಾಗುರು

ಹೊಳೆ
ದಾಟಿದ ಮೇಲೂ
ಅಂಬಿಗ
ನನ್ನವನಾಗುಳಿದ
ಯಾಕೆಂದರೆ
ಬಾಳ ದೋಣಿಯ
ನಡೆಸುವುದ
ಕಲಿಸಿದಾತ
ನನ್ನೊಳಗೆ
ಮಹಾಗುರುವಾಗಿ ಬೆಳೆದ!

ಜೀತ

ದಿನಗಳು
ಸುಮ್ಮನೇ
ಬರುವುದಿಲ್ಲ
ಜೀತಕ್ಕಿಟ್ಟಿವೆ
ನಮ್ಮನ್ನವು
ಹೊಟ್ಟು, ಬಟ್ಟೆಗೆ
ದೊಡ್ಡಟ್ಟಿಗೆ!

ಗುರುತು

ಅವಳ
ಹೆಜ್ಜೆಗೆ
ನನ್ನ
ಹೆಜ್ಜೆ
ಸೇರಿಸಿ
ನಡೆಯುವನಿದ್ದೆ
ಗುರುತೇ
ಉಳಿಸದಂತೋದಳು!

○ಹಳ್ಳಿ ವೆಂಕಟೇಶ್

ಹಳ್ಳಿಗಳ ರಕ್ತಹೀನತೆ ಮತ್ತು ರೊಕ್ಕಹೀನತೆ: ಅರ್ಥವಿಲ್ಲದ ಅರ್ಥಶಾಸ್ತ್ರ

ಕೃಷ್ಣಮೂರ್ತಿ ಬಿಳಿಗೆರೆ

ಕೃಷಿಕಾರ್ಮಿಕರು, ಮತ್ತು ರೈತರಿಗೆ ಒಟ್ಟೊಟ್ಟಿಗೆ ಹಣ ನುಗ್ಗಿ ಬರುವುದಿಲ್ಲ. ಕಂತೆಗಟ್ಟಲೆ ಹಣವನ್ನು ಬ್ಯಾಂಕಿನಿಂದ ಬಿಡಿಸಿಕೊಳ್ಳುವುದು ಸಾಧ್ಯವಿಲ್ಲ. ಅದೇನಿದ್ದರೂ ಕಣಕಣವಾಗಿ ಎಳೆ ಎಳೆಯಾಗಿ ಕಾಳುಕಾಳಿನ ರೂಪದಲ್ಲಿ ಬರುತ್ತದೆ. ಆದರೆ ಖರ್ಚಾಗುವುದು ಮಾತ್ರ ರಭಸವಾಗಿಯೇ. ಸಮಸ್ಯೆ ಇರುವುದು ಇಲ್ಲಿ. ಹಳ್ಳಿಗಳಿಂದ ಸಂಪತ್ತು ಹೊರ ಹೋಗುವುದಕ್ಕೂ, ಒಳ ಬರುವುದಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಈ ವ್ಯತ್ಯಾಸವೇ ಹಳ್ಳಿಗಳ ಬಡತನಕ್ಕೂ, ಬವಣೆಗೂ ಕಾರಣವಾಗಿದೆ. ಕ್ವಿಂಟಾಲು, ಟನ್‌ಗಟ್ಟಲೆ ಹಳ್ಳಿಗಳಿಂದ ಸಂಪತ್ತು ಹೊರಹೋಗುತ್ತದೆ. ಕೆ.ಜಿ. ಮತ್ತು ಎಂ.ಎಲ್. ಗ್ರಾಂ.ಗಳ ರೂಪದಲ್ಲಿ ಒಳಕ್ಕೆ ಬರುತ್ತದೆ. ಹೊರಹೋಗುವ ವಸ್ತುಗಳ ಕಿಮ್ಮತ್ತು ಕಾಲ ಕಸದ್ದು, ಒಳಗೆ ಬರುವ ವಸ್ತುಗಳ ಬೆಲೆ ಕೈಗೆ ಸಿಗಲಾರದ್ದು.

ಹಳ್ಳಿಯ ವಸ್ತುಗಳ ಬಗೆಗೆ ಹಳ್ಳಿಗಳಿಗೆ ಅಲರ್ಜಿಯಾಗುವಂತೆ ಬಣ್ಣದ ಪಾಕೇಟುಗಳಲ್ಲಿ ಮಿರಿಗುಟ್ಟುವ ನುಣ್ಣನೆಯ ವಸ್ತುಗಳಿಗೆ ಅದೇ ಹಳ್ಳಿಗರು ಮುಗಿಬೀಳುವಂತೆ ವ್ಯವಸ್ಥಿತ ಸಂಚು ಹೂಡಲಾಗಿದೆ. ಅವು ಜಾಹೀರಾತಿನ ಮೂಲಕ ಹೂಡಲಾದ ಸಂಚುಗಳು. ಸುಳ್ಳುಗಳನ್ನು ಅರೆ ಸತ್ಯಗಳನ್ನು ಸಾವಿರಾರು ಸಲ, ಸಾವಿರಾರು ಚಂದಗಳ ಮೂಲಕ, ಜನಪ್ರಿಯ ವ್ಯಕ್ತಿಗಳ ಮೂಲಕ (ಇವರೂ ಸುಳ್ಳು ಪ್ರಚಾರದ ಮೂಲಕ ಜನಪ್ರಿಯರಾದವರೆ) ಮತ್ತೆ ಮತ್ತೆ ಹೇಳಿಸುತ್ತಾ, ತೋರಿಸುತ್ತಾ ಹೋದರೆ ಅವುಗಳೇ ಸತ್ಯದರ್ಶನಗಳಾಗಿ ಮಾರ್ಪಡುತ್ತವೆ. ಈ ಬಗೆಯ ಜನವಿರೋಧಿ, ದುಡಿಮೆಗಾರ ವಿರೋಧಿ, ಉತ್ಪಾದಕ ವಿರೋಧಿ, ಕುಟಿಲ ಅರ್ಥಶಾಸ್ತ್ರದ ಭರಾಟೆ ಈಗ್ಗೆ ಹತ್ತು ವರ್ಷಗಳಲ್ಲಿ ಮುಗಿಲು ಮುಟ್ಟಿದೆ.

ಇದಕ್ಕೂ ಮುನ್ನ ಅನೇಕ ದಶಕಗಳಿಂದಲೂ ಮಹಾಪಿತೂರಿಯ ಭಾಗವಾಗಿ, ಈ ಹಳ್ಳಿಗರು ಸಾವಿರಾರು ವರ್ಷಗಳಿಂದ ರೂಪಿಸಿ ಕೊಂಡಿದ್ದ ದೇಶಿ ತಂತ್ರಜ್ಞಾನದ ಉಪಕರಣಗಳು, ಸರಳ ಸ್ವಾವಲಂಬಿ ಜೀವನ ವಿಧಾನಗಳು, ಆಹಾರ ಪದ್ಧತಿಗಳನ್ನೆಲ್ಲಾ ಅಳಿಸಿಹಾಕಿ ಸದರಿ ಹಳ್ಳಿಗಳ ನೆಲೆಯನ್ನೇ ದುರ್ಬಲಗೊಳಿಸಲಾಗಿದೆ. ಈ ಹಳ್ಳಿಗಳು ಇದ್ದರೂ ಒಂದೇ ಇಲ್ಲದಿದ್ದರೂ ಒಂದೇ ಎಂಬ ಸ್ಥಿತಿಗೆ ತಳ್ಳಲಾಗಿದೆ.

ಈ ಪಿತೂರಿಯಲ್ಲಿ ವಸಾಹತುಶಾಹಿ, ಬಂಡವಾಳಶಾಹಿಗಳು, ಅವಿರತವಾಗಿ ಶ್ರಮಿಸಿವೆ. ಇದೇ ಹೊತ್ತಿನಲ್ಲಿ ಹಳ್ಳಿಗಳಲ್ಲಿನ ಜಾತಿ, ಅಸ್ಪೃಶ್ಯತೆ, ಲಿಂಗಭೇದ, ಮೌಢ್ಯ ಮುಂತಾದ ವಿಷಯಗಳು ಹಾಗೆ ಇರುವಂತೆಯೂ ಮಾಡಿದ್ದು, ಇದಕ್ಕಾಗಿ ನಾವೇ ರೂಪಿಸಿಕೊಂಡ ಶಿಕ್ಷಣ ವ್ಯವಸ್ಥೆಯ ಸಿಲಬಸ್ ಮಾದರಿಗಳು ಇವರಿಗೆ ಸೆಂಟ್ ಪರ್ಸೆಂಟ್ ಪೂರಕವಾಗಿ ನಿಂತದ್ದು ಮಾತ್ರ ವಿಪರ್ಯಾಸ.

ಅರ್ಥವಿಲ್ಲದ ಅರ್ಥಶಾಸ್ತ್ರದ ಕೆಲವು ಮಾದರಿಗಳು:

ಈ ಅರ್ಥಶಾಸ್ತ್ರದ ಮೂಲ ಆಶಯ ಹಳ್ಳಿಗಳನ್ನು ಅಭಿವೃದ್ಧಿ ಪಡಿಸಬೇಕು ಎಂಬುದು. ಇದರ ಪ್ರಕಾರ ಹಳ್ಳಿಗಳ ಅಭಿವೃದ್ಧಿ ಎಂದರೆ ಹಳ್ಳಿಗಳನ್ನು ನಗರಗಳ ಅಡಿಯಾಳಾಗಿಸುವುದು. ಹಳ್ಳಿಗಳ ಎಲ್ಲಾ ಸಂಪತ್ತು, ನೈಸರ್ಗಿಕ ಮತ್ತು ಮಾನವ ಸಂಪತ್ತನ್ನು ಸಾರಾಸಗಟಾಗಿ ನಗರ ಕೇಂದ್ರಿತ ಕೈಗಾರಿಕೆಗಳಿಗೆ ಸೀಯುವುದು. ಅಭಿವೃದ್ಧಿಯ ಆರ್ಭಟ ಹೆಚ್ಚಾದ ಈ ಎರಡು ದಶಕಗಳಲ್ಲಿ ಹಳ್ಳಿಗಳು, ಹಳ್ಳಿಗರು ಏನಾಗಿದ್ದಾರೆ ಎಂಬ ವಾಸ್ತವ ಚಿತ್ರಗಳು ಕಣ್ಮುಂದೆ ಇವೆ. ನಿರುದ್ಯೋಗ, ಹಸಿವು, ಬಡತನ ಹೆಚ್ಚಾಗಿದೆ. ಆಹಾರ ಉತ್ಪಾದನೆಯಲ್ಲಿ ಕುಸಿತ ಉಂಟಾಗಿದೆ. ಆರೋಗ್ಯವೂ ಅಷ್ಟೇ. ಹಳ್ಳಿಯ ಶಿಕ್ಷಣದ ಸ್ಥಿತಿಯನ್ನು ಬಲ್ಲವರೇಬಲ್ಲರು. ಇನ್ನೂ ವಿದ್ಯುತ್ ಕಂಬದಡಿ ಓದಿ ಉದ್ಧಾರವಾದ ಎಂ. ವಿಶ್ವೇಶ್ವರಯ್ಯನವರ ಉದಾಹರಣೆಯನ್ನೇ ಕೊಟ್ಟುಕೊಟ್ಟು ಹಳ್ಳಿಗಳ ದರಿದ್ರ ಸ್ಥಿತಿಯನ್ನೇ ಸ್ಥಿರೀಕರಿಸುವ ಪ್ರಯತ್ನಗಳು ನಡೆಯುತ್ತಿವೆ.

ಹಳ್ಳಿಯಿಂದ ಹೊರಗೆ ಹೋಗುವ ಸಾಮಗ್ರಿಗಳು ಮತ್ತು

ಹಳ್ಳಿಯ ವಸ್ತುಗಳ ಬಗೆಗೆ ಹಳ್ಳಿಗಳಿಗೆ ಅಲರ್ಜಿಯಾಗುವಂತೆ ಬಣ್ಣದ ಪಾಕೇಟುಗಳಲ್ಲಿ ಮಿರಿಗುಟ್ಟುವ ನುಣ್ಣನೆಯ ವಸ್ತುಗಳಿಗೆ ಅದೇ ಹಳ್ಳಿಗರು ಮುಗಿಬೀಳುವಂತೆ ವ್ಯವಸ್ಥಿತ ಸಂಚು ಹೂಡಲಾಗಿದೆ. ಅವು ಜಾಹೀರಾತಿನ ಮೂಲಕ ಹೂಡಲಾದ ಸಂಚುಗಳು. ಸುಳ್ಳುಗಳನ್ನು ಅರೆಸತ್ಯಗಳನ್ನು ಸಾವಿರಾರು ಸಲ, ಸಾವಿರಾರು ಚಂದಗಳ ಮೂಲಕ, ಜನಪ್ರಿಯ ವ್ಯಕ್ತಿಗಳ ಮೂಲಕ (ಇವರೂ ಸುಳ್ಳು ಪ್ರಚಾರದ ಮೂಲಕ ಜನಪ್ರಿಯರಾದವರೆ) ಮತ್ತೆ ಮತ್ತೆ ಹೇಳಿಸುತ್ತಾ, ತೋರಿಸುತ್ತಾ ಹೋದರೆ ಅವುಗಳೇ ಸತ್ಯದರ್ಶನಗಳಾಗಿ ಮಾರ್ಪಡುತ್ತವೆ. ಈ ಬಗೆಯ ಜನವಿರೋಧಿ, ದುಡಿಮೆಗಾರ ವಿರೋಧಿ, ಉತ್ಪಾದಕ ವಿರೋಧಿ, ಕುಟಿಲ ಅರ್ಥಶಾಸ್ತ್ರದ ಭರಾಟೆ ಈಗ್ಗೆ ಹತ್ತು ವರ್ಷಗಳಲ್ಲಿ ಮುಗಿಲು ಮುಟ್ಟಿದೆ.

ಹಳ್ಳಿಯ ಒಳಗೆ ಬರುವ ಸಾಮಗ್ರಿಗಳ ಒಂದಿಷ್ಟು ಪಟ್ಟಿಯನ್ನು, ಮತ್ತದರ ಬೆಲೆಗಳ ತಾರತಮ್ಯಗಳನ್ನು ನೋಡಿದರೆ, ಹಳ್ಳಿಗಳು ಎಷ್ಟೇ ದುಡಿದರೂ, ಸರಳವಾಗಿದ್ದರೂ, ರಕ್ತಹೀನತೆಯಿಂದಲೂ, ರೊಕ್ಕಹೀನತೆಯಿಂದಲೂ ಮತ್ತು ಮುಖಹೀನತೆಗಳಿಂದ ಯಾಕೆ ನರಳುತ್ತಿವೆ ಎಂಬುದು ಅರಿವಾಗುತ್ತದೆ. ಹಾಗೆಯೇ ಪರಿಹಾರದ ದಾರಿಗಳು ಗೋಚರಿಸಿದರೂ ಗೋಚರಿಸಬಹುದು.

ದವಸ ಧಾನ್ಯ:

ರೈತರಿಗೀಗ ಆಯ್ಕೆಗಳೇ ಇಲ್ಲ. ರೈತರು ಈಗ ಇಷ್ಟಪಡಲಿ ಬಿಡಲಿ ಆಹಾರ ಪದಾರ್ಥಗಳು ಕಣಗಾಲದಲ್ಲಿ ಹಳ್ಳಿಯಿಂದ ಮಂಗ ಮಾಯವಾಗುತ್ತವೆ. ಈಗ್ಗೆ 40–50 ವರ್ಷಗಳ ಹಿಂದೆ ಕನಿಷ್ಠ ತಮಗೆ ಅಗತ್ಯವಾದಷ್ಟನ್ನಾದರೂ ರೈತರು ವಾಡೆ, ಮೂಡೆ, ಗುಡಾಣ, ಕಣಜಗಳಲ್ಲಿ ತುಂಬಿಟ್ಟುಕೊಂಡು ಒಂದಿಷ್ಟಾದರೂ ಘನತೆಯಿಂದ ಬದುಕಿದ್ದರು. ಈಗ ಸುಗ್ಗಿಯ ಕಾಲದಲ್ಲೇ ರಾಗಿ, ಭತ್ತ, ಜೋಳ, ಸಜ್ಜೆ, ಸಾವೆ, ಮುಸುಕಿನ ಜೋಳ, ಗೋಧಿ, ಮತ್ತಿತರ ದವಸ, ಅವರೆ, ಹೆಸರು, ತೊಗರಿ, ಉದ್ದು ಮುಂತಾದ ಧಾನ್ಯಗಳು ದಲ್ಲಾಳಿಗಳ ಕೈಚಳಕದಿಂದ ನಾಪತ್ತೆಯಾಗುತ್ತವೆ. ಸದಾ ಬರಿಗೈದಾಸರೇ ಆಗಿರುವ, ಸಾಲದ ಶೂಲದಡಿಯಲ್ಲೇ ವಾಸಿಸುವ ರೈತರು ಸದರಿ ದವಸ ಧಾನ್ಯಗಳನ್ನು ಮಾರದೇ ಅನ್ಯ ಮಾರ್ಗವೇ ಇಲ್ಲ. ರೈತರ ಬಳಿ ಇದ್ದಾಗ ಮೂರು ಕಾಸಿನ ಬೆಲೆಯ ಸರಕುಗಳು ವರ್ತಕರ ಗೋದಾಮು ಸೇರಿದ ಮರುಗಳಿಗೆಗೇ ಅವುಗಳ ಬೆಲೆ ಆರು ಕಾಸಾಗಿರುತ್ತದೆ. ರೈತರು ಸರಕನ್ನು ಮಾರಿದ ಮರುದಿನದಿಂದಲೇ ಅವರೇ ತಮ್ಮ ಸರಕುಗಳನ್ನು ಆರು ಕಾಸಿಗೆ ಕೊಳ್ಳತೊಡಗುವ ದುರ್ಗತಿಗೆ ಸಿಲುಕುತ್ತಾರೆ.

ಇತ್ತ ಇನ್ನೂ ಮುಂದೆ ಹೋದ ಅದೇ ರೈತರ ಸರಕುಗಳು ಕೈಗಾರಿಕೆಗಳತ್ತ ಚಲಿಸಿ ಒಂಭತ್ತು ಕಾಸಿನ ಬೆಲೆ ಪಡೆಯುತ್ತವೆ. ಅವೇ ಸರಕುಗಳು ಮಾಲ್ಟ್‌ಗಳಾಗಿ, ಬೋರ್ನ್‌ವಿಟಾ, ಸಿರಿಲ್ಯಾಕ್, ಪಿಲ್ಸಬರಿ, ಪಾಪ್‌ಕಾರ್ನ್, ಕ್ಯಾಡಬರೀಸ್ ಬಿಸ್ಕೆಟ್‌ಗಳೇ ಮುಂತಾಗಿ ಬಣ್ಣಗಳ ವೇಷತೊಟ್ಟು ಅಂಗಡಿಗಳಲ್ಲಿ ಅಂದವಾಗಿ ಜೋಡಿಸಲ್ಪಟ್ಟಾಗ ಎಲ್ಲವೂ ಗ್ರಾಂ ಲೆಕ್ಕದಲ್ಲೆ. ಬೆಲೆಯೂ ಅಷ್ಟೇ ಅವರು ಅದರ ಮೇಲೆ ಮುದ್ರಿಸಿದಷ್ಟು, ಆಗ ಅವುಗಳನ್ನು ಕೊಳ್ಳದಿರುವವರು ಯಾರು. ಇವುಗಳ ಕಣ್ಣುಕುಕ್ಕುವ ಜಾಹೀರಾತು

ಕೃಷಿ ಕೆಲಸಗಳ ಜೊತೆಗೆ ಹಸು, ಎಮ್ಮೆಗಳೊಂದಿಗೆ ಹೆಣಗಿ, ಸಗಣಿ, ಗಂಜಲದಲ್ಲಿ ಮಿಂದು, ಬೂಸಾ, ಹುಲ್ಲು, ಸೊಪ್ಪುಗಳನ್ನು ಹಾಲಾಗಿಸಿದರೆ ಅದಕ್ಕೆ ಸಿಗುವುದು ಲೀಟರ್‌ಗೆ 15 ರೂಪಾಯಿ. ಈ ಹಾಲು ನಗರದ ಜನರಿಗೆ ನೀರಿಗಿಂತಲೂ ಕಡಿಮೆ ದರದಲ್ಲಿ ಸಿಗುತ್ತದೆ. ಹಳ್ಳಿಯಿಂದ ಹರಿದ ನೀರು ಬಾಟಲಿಗಳಲ್ಲಿ ಸೇರಿದಾಗ ಅದರ ಬೆಲೆ 16 ರೂಪಾಯಿ ವರೆಗೆ ಏರುತ್ತದೆ. "ಹಳ್ಳಿಗೇನು ನೀರಿನ ಹಕ್ಕು, ಹರಿಯುವ ನೀರಿಗೆ ದೊಣ್ಣೆ ನಾಯಕನ ಅಪ್ಪಣೆಯೇ" ಎಂದು ಕೇಳುವ ಅರ್ಥಶಾಸ್ತ್ರಜ್ಞರು ಇದ್ದೇ ಇರುತ್ತಾರೆ.

ಫಲಕಗಳು ನಮ್ಮ ಹಳ್ಳಿಗರನ್ನು, ಮುದ್ದೆ, ಅನ್ನ, ಸಾರು, ರೊಟ್ಟಿ, ಪಲ್ಯಗಳನ್ನು ಅಣಕಿಸತೊಡಗುತ್ತವೆ. ಜಾಹೀರಾತು ಗೆಲ್ಲುತ್ತವೆ. ಹಳ್ಳಿಗಳು ಸೋಲುತ್ತವೆ. ಈ ಹಳ್ಳಿಗಳನ್ನು ಸೋಲಿಸುವುದಷ್ಟೆ ಅಲ್ಲ. ಸಾಯಿಸುವುದರಲ್ಲಿಯೂ ಮೀಡಿಯಾಗಳ ಪಾತ್ರ ಬಹುದೊಡ್ಡದು.

ಹಾಲು, ನೀರು, ಜೇನು :

ಕೃಷಿ ಕೆಲಸಗಳ ಜೊತೆಗೆ ಹಸು, ಎಮ್ಮೆಗಳೊಂದಿಗೆ ಹೆಣಗಿ, ಸಗಣಿ, ಗಂಜಲದಲ್ಲಿ ಮಿಂದು, ಬೂಸಾ, ಹುಲ್ಲು, ಸೊಪ್ಪುಗಳನ್ನು ಹಾಲಾಗಿಸಿದರೆ ಅದಕ್ಕೆ ಸಿಗುವುದು ಲೀಟರ್‌ಗೆ 15 ರೂಪಾಯಿ. ಈ ಹಾಲು ನಗರದ ಜನರಿಗೆ ನೀರಿಗಿಂತಲೂ ಕಡಿಮೆ ದರದಲ್ಲಿ ಸಿಗುತ್ತದೆ. ಹಳ್ಳಿಯಿಂದ ಹರಿದ ನೀರು ಬಾಟಲಿಗಳಲ್ಲಿ ಸೇರಿದಾಗ ಅದರ ಬೆಲೆ 16 ರೂಪಾಯಿವರೆಗೆ ಏರುತ್ತದೆ. "ಹಳ್ಳಿಗೇನು ನೀರಿನ ಹಕ್ಕು, ಹರಿಯುವ ನೀರಿಗೆ ದೊಣ್ಣೆ ನಾಯಕನ ಅಪ್ಪಣೆಯೇ" ಎಂದು ಕೇಳುವ ಅರ್ಥಶಾಸ್ತ್ರಜ್ಞರು ಇದ್ದೇ ಇರುತ್ತಾರೆ. ಅವರಿಗಿದು ಉತ್ತರ: ಕೃಷಿಗೆ ನೀರು ಬೇಕು. ಅದು ಮೇಲಿಂದಲೂ ಬರಬೇಕು, ಮಣ್ಣಿನೊಳಗೂ ಇರಬೇಕು. ಹೀಗೆ ಅನ್ನ ಬೆಳೆಯುವ ನೀರನ್ನು ನದಿಗಳಿಂದ, ಸರೋವರಗಳಿಂದ, ಬೋರ್‌ವೆಲ್ ಲೂಟಿಯ ಮೂಲಕ, ಬಾಟಲಿ ನೀರಿನ ಕಂಪನಿಗಳು ಖಾಲಿ ಮಾಡತೊಡಗಿದರೆ ಜನ ಅನ್ನ ತಿನ್ನುವ ಬದಲು ಮಣ್ಣು ತಿಂದು ಬಾಟಲಿ ನೀರು ಕುಡಿಯ ಬೇಕಾಗುತ್ತದೆ. ಅಲ್ಲದೆ ಅವರು ಸದರಿ ನೀರಿಗೆ ತೆರುವ ಬೆಲೆ ಕೇವಲ 25 ಪೈಸೆ. ಕೆಲವೊಮ್ಮೆ ಇವರು ಎತ್ತುವ ನೀರಿಗೆ ಲೆಕ್ಕವೂ ಇಲ್ಲ. ಪತ್ರವೂ ಇಲ್ಲ. ಜಗತ್ತಿನ ತುಂಬಾ ಇವರು ಚುರುಕಾಗಿದ್ದಾರೆ. 2001ರಲ್ಲಿಯೇ ಜಗತ್ತಿಗೆ ಇವರು ವಾರ್ಷಿಕ ಒಂದು ಸಾವಿರ ಕೋಟಿ ಡಾಲರ್‌ನ ನೀರು ಕುಡಿಸಿದ್ದಾರೆ.

ನೀರು ಬಹುಜನರ ಸಂಪತ್ತಾಗಬೇಕೋ ಹೀಗೆ ಕೆಲವೇ ಕಂಪನಿಗಳ ಹೊಟ್ಟೆಯೊಳಗೆ ಬಂಧಿಸಲ್ಪಡಬೇಕೋ? ಸಹಜ ನೀರಿನ 10000 ಪಟ್ಟು ಬೆಲೆ ತೆತ್ತು ಆ ನೀರು ಕುಡಿದರೆ ಮಾತ್ರ ಜೀವ ಉಳಿಯುವುದೋ? ನೀರಿಗೆ ಕಂಪನಿಗಳ ಮೊರೆ ಹೋದವರು ಗಾಳಿಗೂ ಅವರ ಬಳಿ ಅಂಗಲಾಚಬೇಕಾದೀತು. ತಂಪು ಪಾನೀಯಗಳ ಕತೆ ಇದರ ಎರಡುಪಟ್ಟು ಅಪಾಯಕಾರಿಯಾದದ್ದು.

ಹಳ್ಳಿಗಳಿಂದ ನೀರು, ಎಳನೀರು, ಕಬ್ಬಿನ ಹಾಲು, ಹಾಲು, ಜೇನುಗಳನ್ನು ಒಯ್ದು ವ್ಯತ್ಯಯ ಇಲ್ಲದಂತೆ ಹಳ್ಳಿಗಳಿಗೆ ಸರಬರಾಜು ಮಾಡುವುದು ಎಂ.ಎಲ್.ಲೆಕ್ಕದ ಲಿಕ್ಕರ್. ಹಳ್ಳಿಯ ವಸ್ತುಗಳಿಗೂ ಈ ಲಿಕ್ಕರಿನ ಬೆಲೆಗೂ ಭೂಮಿ-ಆಕಾಶದಷ್ಟು ಅಂತರ. ಜನರ ಆರೋಗ್ಯದ ಬೆಲೆಗೂ ಸುದ್ದಿ ಎಲ್ಲಿಯೂ ಸುಳಿಯುವುದಿಲ್ಲ.

ವಾಣಿಜ್ಯ ಬೆಳೆಗಳು :

ವಾಣಿಜ್ಯ ಬೆಳೆಗಳೆಂದು ಕರೆಯುವ ಸೂರ್ಯಕಾಂತಿ, ಹತ್ತಿ, ಕಬ್ಬು, ಶೇಂಗಾ, ತೆಂಗು, ಅಡಕೆ, ಮುಂತಾದುವು ರೈತರಿಗಂತೂ ವಾಣಿಜ್ಯ ಬೆಳೆಗಳಲ್ಲ. ಹೆಚ್ಚು ಸವಾಲು ಒಡ್ಡಿರುವ ಬೆಳೆಗಳು. ಬಹುಬೆಳೆ ಪದ್ಧತಿಯನ್ನು ಹಾಳುಗೆಡವಿ ಏಕಬೆಳೆಯಾಗಿ ಕಾಡುತ್ತಿರುವ ಸುಳಿಗಳು. ಇವು ನಗರದತ್ತ ಹೋಗುತ್ತವೆ. ಸಿದ್ಧಗೊಂಡು ನೂರಾರು ಪಟ್ಟು ಬೆಲೆಹೊತ್ತು ಬರುತ್ತವೆ. ಎಣ್ಣೆ, ಬಟ್ಟೆ, ಸಕ್ಕರೆ, ಸಾರಾಯಿ, ಪೆಟ್ರೋಲ್, ಡಿಸೇಲ್, ಆಯಿಲ್‌ಗಳು ಇವುಗಳೊಳಕ್ಕೆ ಸೇರಿಕೊಳ್ಳುತ್ತವೆ.

ಮಾವು, ಹಲಸು, ನಿಂಬೆ, ನೆಲ್ಲಿ ಹಣ್ಣುಗಳು ಹೋಗುತ್ತವೆ. ಜೂಸಿ, ಫ್ರೂಟಿ, ಜಾಮ್‌ನ ವಿದೇಶಿ ಬ್ರಾಂಡುಗಳಾಗಿ ಬರುತ್ತವೆ.

ಸೊಪ್ಪು, ತರಕಾರಿ, ಕಾಯಿ, ಕಸುರು, ಬೆಣ್ಣೆ ಹೋಗುತ್ತವೆ. ಮಾತ್ರೆ, ಸಿರಪ್ಪು ಬರುತ್ತವೆ.

ಬಿದಿರು, ಸರ್ವೆ, ಮರಮುಟ್ಟು, ಮಣ್ಣು, ಕಾಡಿಗೆ ಕಾಡೇ, ಗುಡ್ಡಕ್ಕೆ ಗುಡ್ಡಗಳೇ ಸಾಗಿಸಾಗಿ ಹೋಗುತ್ತವೆ.

ಕಬ್ಬಿಣ, ಉಕ್ಕು, ಫೈಬರ್, ಪ್ಲಾಸ್ಟಿಕ್, ಟೈಲ್ಸ್, ಪ್ಲೈವುಡ್ ಬರುತ್ತವೆ.

ಕೊಬ್ಬರಿ, ಲೋಳೆಸರ, ಸೀಗೇಪುಡಿ, ಅಂಟುವಾಳ, ಬೇವು, ಕರಿಬೇವು ಹೋಗುತ್ತವೆ.

ಸೋಪು, ಶಾಂಪು, ಕ್ರೀಮು, ಪಾಲೀಶು ಬರುತ್ತವೆ.

ಕುರಿಕೋಳಿ, ಮೇಕೆ, ದನಕರು, ಮೀನು ಹೋಗುತ್ತವೆ.

ಬಾಟಾ, ಲಿಬರ್ಟಿ ಬ್ರಾಂಡಿನ ಚಪ್ಪಲಿಗಳು ತೂರಲ್ಪಡುತ್ತವೆ.

ಕೊಡು-ಕೊಳ್ಳುವುದು ಬೇಡವೆಂದವರಾರು ಆದರೆ ಈ ಬಗೆಯ ದರೋಡೆ ಸಹಿಸುವುದು ಹೇಗೆ? ಯುದ್ಧ ಗೆಲ್ಲುವವರು ಮಾಡುವುದೆಲ್ಲಾ ಹೀಗೆಯೇ. ಮೊದಲು ವಿರೋಧಿಗಳ ಶಕ್ತಿಯನ್ನು ಯಾವುದೆಂದು ಕಂಡು ಹಿಡಿದುಕೊಂಡು ಅದನ್ನು ಕುಂದಿಸುತ್ತಾರೆ. ಬೀಜಗಳನ್ನು ಒಡೆದು ನಿರ್ವೀರ್ಯಗೊಳಿಸುತ್ತಾರೆ. ನೀರು, ಗಾಳಿ, ಮನಸ್ಸುಗಳಿಗೆ ವಿಷ ಬೆರೆಸಿ ಬಿಡುತ್ತಾರೆ. ಬಂಡವಾಳಶಾಹಿಗಳು ಮಾಡಿದ್ದು ಇದನ್ನೇ. ಗಾಂಧಿ ಮಾತಿಗೆ ಕವಡೆ ಕಿಮ್ಮತ್ತು ಕೊಡದೇ ಹಳ್ಳಿಗಳ ಬೀಜ ಒಡೆದರು. ಹೊಲುಗಳನ್ನು ಬಿಡದೇ ಸುಟ್ಟು ಹಾಕಿದರು. ತಿಗರಿ, ಮಗ್ಗ, ಚರಕ, ಗಾಣ, ಕುಲುಮೆ, ರೋಣುಗಲ್ಲು, ಎತ್ತುಗಳು, ಕತ್ತೆಗಳು, ಬಂಡಿ, ನೇಗಿಲು, ಕುಂಟೆ, ರಂಟೆ, ಹಲುಬೆ, ಕಣ ಹೀಗೆ ಎಲ್ಲವನ್ನೂ ಹೇಳ ಹೆಸರಿಲ್ಲದಂತೆ ಮಾಡಲಾಯ್ತು. ಹಾಡು, ನೃತ್ಯ, ಆಟಗಳು ಮಾಯವಾದವು. ವೇಗ ಮತ್ತು ಯಂತ್ರದ ಕತೆಗಳು ದಂಡಿಯಾಗಿ ಬಳಕೆಯಾದವು. ಕೇವಲ ನೂರು ವರ್ಷಗಳಲ್ಲಿ ಕೆಲಸ ಗೆದಿಯಲಾಯ್ತು. ಈಗ ನೋಡಿದರೆ ಅರ್ಥಶಾಸ್ತ್ರದ ಪಂಡಿತರು ಹೇಳುತ್ತಾರೆ. ಹಳ್ಳಿಗಳಲ್ಲಿ ನಿರುದ್ಯೋಗ, ಅರೆನಿರುದ್ಯೋಗ, ಹಸಿವು, ಸಾವು ತಾಂಡವವಾಡುತ್ತಿದೆ ಎಂದು. ರೈತರನ್ನು ಕೊಲ್ಲುವ ದುಬಾರಿ ಬೆಲೆಯ ರಾಸಾಯನಿಕ ಗೊಬ್ಬರ, ಬೀಜ, ಕ್ರಿಮಿನಾಶಕ ಟ್ರಾಕ್ಟರ್, ಹಿಟಾಚಿ, ಜೆ.ಸಿ.ಬಿ. ಇವರಿಗೆ ಮಾತ್ರ ಕಾಣುತ್ತಿಲ್ಲ.? □



ಕನ್ನಡ ನುಡಿಯ ಸಿರಿಗುಡಿ.
ಕರ್ನಾಟಕ
55ನೇ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು.
- ಶ್ರೀ ಬಿ. ಎಸ್. ಯಡಿಯೂರಪ್ಪ, ರಾಜ್ಯದ ಮುಖ್ಯಮಂತ್ರಿಗಳು.
ಕನ್ನಡ ಮತ್ತು ಸಂಸ್ಕೃತಿ ಅಭಿವೃದ್ಧಿಗೆ ಸರ್ಕಾರದ ಕೈಂಕರ್ಯ
• ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ
55th KARNATAKA RAJYOTSAVA
Hearty Rajyotsava Greetings
to the people of state
ಕರ್ನಾಟಕ ವಾರ್ತೆ

ಹೀಗೊಂದು ಪತ್ರ

ಮುರಳಿ ಮೋಹನ್ ಕಾಟಿ

ಮಹಾನ್ ದೇಶ ಭಾರತಕ್ಕೆ ತಂದೆ ಎನಿಸಿಕೊಂಡ ಗಾಂಧೀಜಿಯೇ ನಿನಗೆ ಬಹಳಷ್ಟು ಹೆಸರು. ನಾನು ಯಾವ ಹೆಸರಿನಿಂದ ನಿಮ್ಮನ್ನು ಕರೆಯಲಿ ಎಂದು ಗೊಂದಲವಾಗಿದೆ. ಆ ಗೊಂದಲದ ನಡುವೆಯೇ ರಾಜಿಯಾಗಿ "ಸತ್ಯವಂತ ಮಹಾತ್ಮಗಾಂಧೀ" ಎಂದು ಸಂಭೋಧಿಸುತ್ತೇನೆ.

ಗೌರವಾನ್ವಿತ ಸತ್ಯವಂತ ಮಹಾತ್ಮ ಗಾಂಧೀಜಿಯೇ ನೀವು ಸತ್ತು ಬಹಳಷ್ಟು ವರ್ಷಗಳಾಯಿತು. ಆದರೂ ನಿಮ್ಮನ್ನು ಸಾಯಿಸಿದ ಬಂದೂಕಿನ ನಳಿಕೆಯಿಂದ ಇನ್ನೂ ಹೊಗೆ ಬರುತ್ತಲೇ ಇದೆ. ನೀವು ಸತ್ಯವೇ ದೇವರು, ತಾಯಿ-ತಂದೆ, ಬಂಧು-ಬಳಗ ಎಂದು ಹೇಳಿ ಧರ್ಮದ ಬಗ್ಗೆ ಮಾತನಾಡುವ ಜನರಿಂದ ಕೊಲೆಯಾದಿರಿ. ನೀವು ಕಂಡುಕೊಂಡ ಸತ್ಯದ ಮಾರ್ಗ, ಬಿಳಿಯ ಖಾದಿ ಮಾರಾಟದ ವಸ್ತುವಾಗಿ ಪೋರ್ಡ್ ಕಾರುಗಳಲ್ಲಿ ಓಡಾಡುವ ಜನರ ಸ್ವತ್ತಾಗಬಹುದೆಂದು ನೀವು ಗ್ರಹಿಸಿರಲಿಲ್ಲವೆಂದೆನಿಸುತ್ತದೆ.

ಇರಲಿ, ನಾನು ನಿಮಗೆ ಈ ಪತ್ರ ಬರೆಯುವ ಹೊತ್ತಿನಲ್ಲಿ ಬೆಂಗಳೂರು ಮಹಾನಗರ ರಸ್ತೆಗಳಲ್ಲಿ ಉದುರಿ ಬಿದ್ದ ಮರದ ಎಲೆಗಳು ಕೊನೆಯ ಬಾರಿಗೆ ಜೋರಾಗಿ ಗಾಳಿ ಬೀಸಿದಾಗ ತಮಗೆ ಇನ್ನು ಇಲ್ಲಿ ಅಸ್ತಿತ್ವ ಇಲ್ಲ ಎಂಬುದು ಖಚಿತವಾಗಿ ಆಕಾಶದೆತ್ತರ ಹಾರಿ ಮೋಡಗಳಲ್ಲಿ ತೂರಿ ಹೋಗುತ್ತಿವೆ. ಸಿಗ್ನಲ್ ಫ್ರೀ ಬೆಂಗಳೂರಿಗೆ ದಾರಿ ಮಾಡುತ್ತಿರುವುದನ್ನು ನೋಡಿ ಬೀದಿ ನಾಯಿಗಳು ಅಳುತ್ತಿವೆ. ಏಕೆಂದರೆ, ಅವಕ್ಕೆ ಅಂಡರ್‌ಪಾಸ್‌ನಲ್ಲಿ ಓಡಾಡಲು ಅನುಮತಿ ಇಲ್ಲವಂತೆ. ಮರಗಳನ್ನು ಕೊಂದಿರುವುದಕ್ಕೆ ಪ್ರತಿಭಟನೆಯಾಗಿ ಕಾಗೆ ಪಾರಿವಾಳಗಳು ಇಂದೆಂದಿಗಿಂತಲೂ ಹೆಚ್ಚು ವಿಧಾನಸೌಧದ ಮೇಲೆ ಕಕ್ಕಸು ಉದುರಿಸಿ ಪ್ರತಿಭಟನೆ ಸೂಚಿಸಿದವು.

ಇದನ್ನು ಗಮನಿಸಿದ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡ ಜೋತಿಷಿಯೊಬ್ಬರು ಮಂತ್ರಿ ಮಹೋದಯರಿಗೆ ತಮ್ಮ ಕಛೇರಿಗಳ ವಾಸ್ತು ಬದಲಾಯಿಸಿಕೊಳ್ಳಲು ಹೇಳಿದಾಗ ಜನಸೇವೆಯೇ ಜನಾರ್ಧನ ಸೇವೆ ಎಂದು ನಂಬಿದ ಮಂತ್ರಿಗಳು ಚಾಚು ತಪ್ಪದೆ ಅದನ್ನು ನೆರವೇರಿಸಿದರು. ಇದನ್ನು ಉತ್ತಮ ಸಮಾಜಕ್ಕಾಗಿ ಕೆಲಸ ಮಾಡುವ ಟಿ.ವಿ ಛಾನೆಲ್‌ಗಳು ಇದನ್ನು ವಿಶೇಷ ಕಾರ್ಯಕ್ರಮವನ್ನಾಗಿ ಪ್ರಸಾರ ಮಾಡಿ ತಮ್ಮ ಸಾಮಾಜಿಕ ಕಾಳಜಿಗಾಗಿ ಪ್ರಶಸ್ತಿಯನ್ನು ಪಡೆದುಕೊಂಡಿದ್ದು ಈಗ ತಾನೇ ಹೊರ ಬಿದ್ದ ಬ್ರೇಕಿಂಗ್ ನ್ಯೂಸ್. ನ್ಯೂಸ್ ಎಂದ ತಕ್ಷಣ ನೆನಪಾಯ್ತು. ನಿಮ್ಮ ಹತ್ತಿರ ಹಂಚಿಕೊಳ್ಳಬೇಕಾದ ಸುದ್ದಿಗಳು ತುಂಬಾ ಇವೆ. ಆದರೆ ತಾವು ಮಹಾತ್ಮರಾಗಿರುವುದರಿಂದ ನಾನು ನೀವಿರುವಲ್ಲಿಗೆ ಬಂದರೂ ನಿಮ್ಮನ್ನು ಮುಖತಃ ಭೇಟಿಯಾಗಿ ಮಾತಾಡುವುದು ಅಸಾಧ್ಯವೆನ್ನಿಸುತ್ತದೆ. ಆ ಲೋಕದಲ್ಲಿ ನಿಮ್ಮನ್ನು ರಕ್ಷಿಸಲು ಅದೆಷ್ಟು ಬಾಗಿಲುಗಳ ಕೋಟೆ ಇದೆಯೊ ನನಗೆ ಗೊತ್ತಿಲ್ಲ.

ನಿಮ್ಮ ಮೈಮೇಲಿದ್ದ, ಶುಭ್ರ ಬಿಳಿ ಖಾದಿಯನ್ನು ನೀವು ತೆಗೆದು ಎಸೆದ ಬಳಿಕ ಅದನ್ನು ಕೇಸರಿ ಸ್ವಾಮೀಜಿಯೊಬ್ಬರು ಯೂನಿಫಾರಂನಂತೆ ಹಾಕಿಕೊಂಡು ವಿಶ್ವ ಶಾಂತಿಗಾಗಿ ಬೆಂಗಳೂರಿನ ಸುತ್ತಲೂ ಜನರಿಂದ, ಸರ್ಕಾರದಿಂದ ನೂರಾರು ಎಕರೆ ಜಮೀನು ಪಡೆದು ಜಪ-ತಪ, ಧ್ಯಾನ-ಯೋಗಗಳ ಬಿಜಿನೆಸ್ ಅನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಯಶಸ್ವಿಯಾಗಿ ನಡೆಸುತ್ತಿರುವುದು ಇತ್ತೀಚೆಗೆ ನಿಮ್ಮ ಕರ್ಮ ಭೂಮಿಯಲ್ಲಿ ಸಂಬಂಧಿಸಿದ ಮಹತ್ವದ ಸಾಧನೆ. ಇದನ್ನು ಇತಿಹಾಸಜ್ಞರು ಇತಿಹಾಸದ ಮೈಲಿಗಲ್ಲೆಂದು ಕಂಪ್ಯೂಟರ್‌ನಲ್ಲಿ ಕೆತ್ತಿ ಪ್ರಪಂಚದ ಮೂಲೆ ಮೂಲೆಗಳಲ್ಲಿ ಪ್ರತಿಷ್ಠಾಪಿಸಿದ್ದಾರೆ.



ನಿಮ್ಮ ಫೋಟೋ ಬಿಟ್ಟರೆ ಈ ಸ್ವಾಮೀಜಿ ಫೋಟೋಗಳೇ ತನ್ನ ಅಂಗಡಿಯಲ್ಲಿ ಹೆಚ್ಚು ಮಾರಾಟವಾಗುವುದು ಎಂದು ಕೊತ್ವಾಲ್ ಮಾರ್ಕೆಟ್ನ ರಪಸಾಹೆಬ್ರು ಪತ್ರಿಕಾ ಹೇಳಿಕೆ ನೀಡಿದ್ದು ಮೊನ್ನೆ ತಾನೆ ಪ್ರಕಟವಾಗಿತ್ತು. ಇದನ್ನು ಗಮನಿಸಿದ ಜಗತ್ತಿನ ದೊಡ್ಡ ಕಂಪನಿಗಳಾದ ವಾಲ್ ಮಾರ್ಟ್, ರಿಲೆಯನ್ಸ್, ಮೈಕ್ರೋಸಾಫ್ಟ್, ಪೆಪ್ಸಿ, ಮುಂತಾದ ಗಣ್ಯ ಕಂಪನಿಗಳು ಈ ಬಿಜಿನೆಸ್ ಅನ್ನು ಮಾಡಲು ಯೋಜಿಸುತ್ತಿರುವುದು ವಾಣಿಜ್ಯ ಪತ್ರಿಕೆಗಳಲ್ಲಿ ವಿಶೇಷ ಸುದ್ದಿಯಾಗಿ ಪ್ರಕಟವಾಗಿತ್ತು.

ನಮ್ಮ ಭಾರತ ಎಷ್ಟು ಮಹಾನ್ ರಾಷ್ಟ ಎಂದು ನನಗೆ ಅರ್ಥವಾಗಿದ್ದು ಇತ್ತೀಚೆಗೆ ಅಷ್ಟೇ. ನನ್ನ ಈ ಮಹಾನ್ ದೇಶದ ಸುತ್ತಲಿನ ದೇಶಗಳಾದ ಪಾಕಿಸ್ತಾನ, ನೇಪಾಳ, ಬಾಂಗ್ಲಾದೇಶ, ಶ್ರೀಲಂಕ ದೇಶಗಳಲ್ಲಿ ಯುದ್ಧಗಳು ನಡೆಯುತ್ತಿವೆ. ಪ್ರತಿದಿನ ಬಾಂಬುಗಳ ದಾಳಿ, ಬಂದೂಕಿನ ಬುಲೆಟ್ಟುಗಳಿಂದ ಸಾವಿರಾರು ಜನ ಕೊಲೆಯಾಗುತ್ತಿದ್ದಾರೆ. ಆದರೆ ಇಲ್ಲಿ ಯುದ್ಧದ ಮಾತೇ ಇಲ್ಲ. ನಮ್ಮದು ಶಾಂತಿಯ ನೆಲವೀಡು. ಸುಭಿಕ್ಷೆಯ ತವರೂರು. ಇಲ್ಲಿ ಕೇವಲ ರೈತರು, ಕಾರ್ಮಿಕರು, ಹಸಿವಿನಿಂದ ಆಂತರಿಕ ಗಲಭೆಗಳಿಂದ ಪ್ರತಿದಿನ ಕೆಲವು ನೂರು ಜನಗಳು ಸಾಯುತ್ತಿದ್ದಾರೆ. ಇಷ್ಟನ್ನು ಬಿಟ್ಟರೆ ದೇಶ ಸಮೃದ್ಧವಾಗಿದೆ.

ನೂರಾರು ಜನ ಕೋಟ್ಯಾಧೀಶರು ಲೋಕ ಸಭೆಯಲ್ಲಿ ಅಧಿಕಾರ ಹಿಡಿದು ಜನ ಸೇವೆಗೆ ಟೊಂಕಕಟ್ಟಿ ನಿಂತಿದ್ದಾರೆ. ಇಲ್ಲಿ ಸತ್ಯದ ಪರಿಪಾಲನೆ ಇತ್ತೀಚೆಗೆ ಹೆಚ್ಚಾಗಿದೆ. ಹಾಗಾಗಿ ಪ್ರಾಯೋಜಿತ ಗಲ್ಲು ಶಿಕ್ಷೆ ,ಜೈಲುವಾಸಗಳು ಹೆಚ್ಚಾಗಿ ಜನ ಶಾಂತಿಯಿಂದ ಬದುಕಲು ಯೋಗ್ಯವಾದ ಸ್ಥಳವಾಗಿ ಬದಲಾಗುತ್ತಿದೆ.

ನಿಮ್ಮ ಬಾಲ್ಯದಲ್ಲಿ ನೀವು ನಿಮ್ಮ ತಂದೆಗೆ ಬರೆದ ಪತ್ರದಂತೆ ನಾನು ನಿಮಗೆ ನನ್ನೊಳಗಿನ ಸತ್ಯಗಳನ್ನು ಬರೆಯಲು ಇಷ್ಟ. ಆದರೆ ಸತ್ಯವನ್ನು ನೇರವಾಗಿ ಹೇಳುವವರಿಗೆ ಅತ್ಯಂತ ವಿಶೇಷವಾದ ಪ್ಯಾಕೇಜ್ ಅನ್ನು ಸರ್ಕಾರದ ರಕ್ಷಣಾ ಇಲಾಖೆ ವ್ಯವಸ್ಥೆ ಮಾಡಿರುವುದರಿಂದ ಸದ್ಯಕ್ಕೆ ನನ್ನ ಸತ್ಯಗಳ ಪತ್ರವನ್ನು ಬರೆಯದೆ ನಾನು ಮತ್ತಷ್ಟು ನಾಗರೀಕನಾಗಿ ವರ್ತಿಸಲು ಪ್ರಾರಂಭಿಸುವ ಸಾಧ್ಯತೆಗಳ ಕಡೆ ಗಮನ ಕೊಡುತ್ತಿದ್ದೇನೆ. ಹಾಗಾಗಿ ಮುಂದೆ ಸಾಧ್ಯವಾದರೆ ಎಂದಾದರು ನಿಮ್ಮಂತೆಯೇ ನನಗೆ ತಿಳಿದ ಹೆಚ್ಚು ಸತ್ಯಗಳ ಪತ್ರಗಳನ್ನು ಬರೆಯಲು ಪ್ರಯತ್ನಿಸುತ್ತೇನೆ. ಹಾಗೆಯೇ ನಿಮ್ಮ ಲೋಕದಲ್ಲಿ ಎಲ್ಲಿಯೋ ಇರುವ ಅಂಬೇಡ್ಕರ್, ಭಗತ್ ಸಿಂಗ್, ಮತ್ತಿತರರಿಗೂ ಪತ್ರ ಬರೆಯುವ ಆಸೆ. ಆದರೆ ನನ್ನ ಹತ್ತಿರ ಅವರ ವಿಳಾಸವಿಲ್ಲ. ಹಾಗೆ ನನ್ನ ಸ್ನೇಹಿತೆ ಹೇಳಿದಂತೆ ಅವರಿಗೆ ಪತ್ರ ತಲುಪುವ ವ್ಯವಸ್ಥೆ, ದಾರಿ ಯಾವುದೂ ಇಲ್ಲವಂತೆ ಹೌದ? ಇರಲಿ ಸಾಧ್ಯವಾದರೆ ಈ ಪತ್ರದ ವಿಚಾರಗಳನ್ನು ಅವರಿಗೂ ತಿಳಿಸಿ. ನಿಮ್ಮ ಉತ್ತರಕ್ಕೆ ನಾನೇನು ಕಾಯುವುದಿಲ್ಲ. ನಾನೇ ಮುಂದಿನ ಪತ್ರವನ್ನು ಬರೆಯುತ್ತೇನೆ. □

ಉದುರಿ ಬಿದ್ದ ಮರದ ಎಲೆಗಳು...

ಜಾನುವಾರು ಹತ್ಯಾ ನಿಷೇಧ ಮಸೂದೆ: ದ್ವೇಷ ರಾಜಕಾರಣದ ಹುನ್ನಾರ

ಸುರೇಶ ಭಟ್ ಬಾಕ್ರಬೈಲು

ಆಹಾರದ ಆಯ್ಕೆ ಮಾನವನ ಮೂಲಭೂತ ಹಕ್ಕುಗಳಲ್ಲೊಂದು. ಇದನ್ನು ಕೂಡ ಇಂದು ಸಾರ್ವಜನಿಕವಾಗಿ ಸಾರಬೇಕಾಗಿ ಬಂದಿದೆ ಅಂದರೆ ನಾವು ಎಂತಹ ಭಯಾನಕ ಸ್ಥಿತಿಗೆ ತಲಪಿದ್ದೇವೆಂದು ಸ್ವಲ್ಪ ಯೋಚಿಸಿ. ನಾನು ಯಾವ ಆಹಾರ ಸೇವಿಸಬೇಕು, ಯಾವುದನ್ನು ಸೇವಿಸಬಾರದೆಂದು ನಿರ್ಧರಿಸಬೇಕಾದವನು ನಾನೇ ಹೊರತು ಇನ್ಯಾರೂ ಅಲ್ಲ. ನನಗೂ ನನ್ನ ಕುಟುಂಬಕ್ಕೂ ಬೇಕಿರುವ ಆಹಾರ ಸಾಮಗ್ರಿಗಳು ಲಭ್ಯವಾಗುವಂತೆ ನೋಡಿಕೊಳ್ಳುವುದು ಸರಕಾರದ ಕರ್ತವ್ಯ. ಆದರೆ ನಮ್ಮ ಕರ್ನಾಟಕದ ಘನ ಸರ್ಕಾರ ಮಾತ್ರ ಕೆಲವು ನಿರ್ದಿಷ್ಟ ಜನವರ್ಗಗಳ ಆಹಾರ ಪದ್ಧತಿಯನ್ನು ಬದಲಾಯಿಸುವ ಗೂಡಾರ್ಥವನ್ನಿಟ್ಟುಕೊಂಡೇ ಜಾನುವಾರು ಹತ್ಯೆ ಕಾಯ್ದೆಯನ್ನು ಜಾರಿಗೊಳಿಸಹೊರಟಿದೆ ಎನ್ನುವುದರ ಬಗ್ಗೆ ಯಾವ ಅನುಮಾನವೂ ಇರಬೇಕಾಗಿಲ್ಲ. ಇಂಥಾದ್ದೊಂದು ನೀಚ ಕಾಯ್ದೆಯನ್ನು ನನಗೆ ತಿಳಿದಿರುವ ಮಟ್ಟಿಗೆ ಜಗತ್ತಿನ ಯಾವ ಸರ್ವಾಧಿಕಾರಿ, ಫ್ಯಾಸಿಸ್ಟ್ ಸರ್ಕಾರಗಳೂ ಇದುವರೆಗೆ ಮಾಡಿಲ್ಲ. ಭಾರತದಂತಹ ಒಂದು ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಂತೂ ಇದಕ್ಕೆ ಅವಕಾಶವೇ ಇಲ್ಲ. ಮತ್ತು ಇರಲೂಕೂಡದು.

ಬ್ರೈನ್‌ವಾಷ್‌ಗೆ ತುತ್ತಾದ ವಿದ್ಯಾವಂತ ಜನ ಹೇಗೆ ತಮ್ಮ ವಿವೇಚನಾ ಶಕ್ತಿಯನ್ನೇ ಕಳೆದುಕೊಳ್ಳುತ್ತಾರೆ ಎನ್ನುವುದಕ್ಕೆ ಒಂದು ಒಳ್ಳೆಯ ಉದಾಹರಣೆ ಇಲ್ಲಿದೆ. ರಾಜ್ಯಪಾಲರು ಜಾನುವಾರು ಹತ್ಯೆ ಮಸೂದೆಯನ್ನು ಅಂಗೀಕರಿಸದಿರುವುದನ್ನು ಪ್ರಶ್ನಿಸಿದ ಬೆಂಗಳೂರಿನ ಲಾಯರ್ ಒಬ್ಬರು ಇತ್ತೀಚೆಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದನ್ನು ದಾಖಲಿಸಿದ್ದರು. ಹೈಕೋರ್ಟ್ ಸೆಪ್ಟಂಬರ್ 27ರಂದು ದೂರನ್ನೆತ್ತಿಕೊಂಡಾಗ ಆತ ಕಾನೂನಿನ ಚೌಕಟ್ಟಿನಲ್ಲಿ ವಾದ ಮಂಡಿಸುವ ಬದಲು ರಾಜಕೀಯ ಭಾಷಣ ಶುರುಮಾಡಿದರು. ಇದಕ್ಕೆ ಆಕ್ಷೇಪಿಸಿದ ನ್ಯಾಯಮೂರ್ತಿಗಳು "ನ್ಯಾಯಾಲಯ ಇಂತಹ ಕ್ಷುಲ್ಲಕ ಅರ್ಜಿಗಳನ್ನು ಇಷ್ಟ ಪಡುವುದಿಲ್ಲ. ನಮಗೆ ರಾಜಕೀಯ ಭಾಷಣ ಬೇಕಾಗಿಲ್ಲ. ಸರಿಯಾಗಿ ತಯಾರಿ ಮಾಡಿಕೊಂಡು ಬನ್ನಿ" ಎನ್ನುತ್ತಾ ದೂರನ್ನು ತಳ್ಳಿ ಹಾಕಿದರು. ಇನ್ನೊಂದು ನಿದರ್ಶನ ಮೊನ್ನೆ ವಿಧಾನಸೌಧದೊಳಗೆ ಧರಣಿ ನಡೆಸಿದ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರು ಮಾಂಸಾಹಾರ ತಿಂದುದಕ್ಕೆ ಆಕ್ಷೇಪ ಎತ್ತಿ ಅವರ ಮೇಲೆ ಹರಿಹಾಯ್ದ ಸನ್ಮಾನ್ಯ ಮುಖ್ಯಮಂತ್ರಿಗಳು.

ಶಾಖಾಹಾರ ಸೇವನೆಯಿಂದ ಸಾತ್ವಿಕ ಗುಣಗಳೂ, ಮಾಂಸಾಹಾರ ಸೇವನೆಯಿಂದ ತಾಮಸಿಕ, ರಾಜಸಿಕ ಗುಣಗಳೂ ಹುಟ್ಟುತ್ತವೆಂಬ ಮಿಥ್ಯೆಯೊಂದನ್ನು ವ್ಯವಸ್ಥಿತವಾಗಿ ತೊಳೆದ ಮಿದುಳುಗಳೊಳಗೆ ತುಂಬಿಸಲಾಗಿದೆ. ಶಾಖಾಹಾರಿಗಳು ಸದ್ಗುಣಿಗಳು, ಮಾಂಸಾಹಾರಿಗಳು ಕ್ರೂರಿಗಳೆಂಬ ವಿತಂಡವಾದಕ್ಕೆ ಯಾವುದೇ ವೈಜ್ಞಾನಿಕ ತಳಹದಿ ಇಲ್ಲ. ಸಕಲ ಗುಣಗಳು ಹುಟ್ಟುವುದು ಮಿದುಳಿಗೆ ಹೋಗುವ ಆಹಾರದಿಂದ ಹೊರತು ಹೊಟ್ಟೆಗೆ ಬೀಳುವ ಆಹಾರದಿಂದಲ್ಲ. ಸಾವಿರಾರು ಯಹೂದಿಗಳ ನರಮೇಧ ನಡೆಸಿದ ಜರ್ಮನ್ ಸರ್ವಾಧಿಕಾರಿ ಹಿಟ್ಲರ್ ಶಾಖಾಹಾರಿಯಾಗಿದ್ದ. ಅಹಿಂಸೆ, ಪ್ರೇಮ. ಕರುಣೆಗಳ ಸಾಕಾರಮೂರ್ತಿಗಳಾಗಿದ್ದ ಗೌತಮ ಬುದ್ಧ, ಯೇಸುಕ್ರಿಸ್ತ ಮಾಂಸಾಹಾರಿಗಳಾಗಿದ್ದರು. ಹರಿಯಾಣಾದ ಜಜ್ಜರ್‌ನಲ್ಲಿ ಸತ್ತ ಆಕಳಿನ ಚರ್ಮ ಸುಲಿದುದಕ್ಕಾಗಿ ಐವರು ದಲಿತರನ್ನು ಭೀಭತ್ಸಕರವಾಗಿ ಕೊಲೆಗೈದವರು ಶಾಖಾಹಾರಿ ಜನ. ಗುಜರಾತ್ ಮಾರಣಹೋಮದ ನೇತೃತ್ವದಲ್ಲಿದ್ದವರು ಶಾಖಾಹಾರಿಗಳಲ್ಲವೇ? ಕರ್ನಾಟಕದ ಪ್ರಸಕ್ತ ಜಾನುವಾರು ಹತ್ಯೆ ಮಸೂದೆಯನ್ನು ಈ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ. ಈ ಮಸೂದೆ ಅತ್ಯಂತ ದುರುದ್ದೇಶ ಪೂರಿತವೆನ್ನುವುದಕ್ಕೆ ಸಾಕ್ಷಿಯೇ ಎಲ್ಲಾ ವಿಧದ ಜಾನುವಾರುಗಳ ಹತ್ಯೆಯನ್ನು ನಿಷೇಧಿಸಿರುವುದು. ಕರ್ನಾಟಕದ ಬಿಜೆಪಿ ಸರ್ಕಾರದ ಪಾಲಿಗೆ ಆದರ್ಶಪ್ರಾಯವಾಗಿರುವ ಗುಜರಾತ್‌ನಲ್ಲಿ ಕೂಡ ಕೇವಲ ಹಸುಗಳ ಹತ್ಯೆಗೆ ನಿಷೇಧವಿದೆ ಹೊರತು ಎಮ್ಮೆ ಕೋಣಗಳ ಹತ್ಯೆಗೆ ನಿಷೇಧ ಇಲ್ಲ.



ಜಾನುವಾರು ಮಾಂಸ ತಿನ್ನುವವರ ಪೈಕಿ ದಲಿತ, ಆದಿವಾಸಿ, ಮುಸ್ಲಿಂ, ಕ್ರೈಸ್ತ, ಬೌದ್ಧ, ನೇಪಾಳಿ, ಪಾರಸಿ ಇತ್ಯಾದಿ ಜನರಿದ್ದಾರೆ. ಇದರಲ್ಲಿ ಮುಸ್ಲಿಮರ ಪಾಲು ಶೇಕಡಾ 1ಕ್ಕಿಂತಲೂ ಕಡಿಮೆ. ಆದರೂ ಕೇವಲ ಮುಸ್ಲಿಮರನ್ನೇ ಏಕೆ ಗುರಿಯಾಗಿಸಲಾಗಿದೆ? ಇದರ ಹಿನ್ನೆಲೆಯಲ್ಲಿ ಒಂದು ವ್ಯವಸ್ಥಿತ ಷಡ್ಯಂತ್ರವಿದೆ. ಹಿಂದೆ ವೈದಿಕಶಾಹಿಯ ದಬ್ಬಾಳಿಕೆಗೊಳಗಾಗಿದ್ದ ದಲಿತರಲ್ಲಿ ಅನೇಕ ಮಂದಿ ಬೌದ್ಧ, ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳಿಗೆ ಮತಾಂತರಗೊಂಡಿದ್ದರು. ಸಮಾಜದಲ್ಲಿ ಮತ್ತೊಮ್ಮೆ ತಲೆಯೆತ್ತಿ ನಡೆಯಲಾರಂಭಿಸಿದ ಇವರನ್ನು ದಮನಿಸುವುದಕ್ಕಾಗಿ ಸಾವರ್ಕರ್‌ನ ಹಿಂದೂತ್ವ ಸಿದ್ಧಾಂತ ಮತ್ತು ಗೋಲ್ವಲ್ಕ

ಜಾನುವಾರು ಮಾಂಸ ತಿನ್ನುವವರ ಪೈಕಿ ದಲಿತ, ಆದಿವಾಸಿ, ಮುಸ್ಲಿಂ, ಕ್ರೈಸ್ತ, ಬೌದ್ಧ, ನೇಪಾಳಿ, ಪಾರಸಿ ಇತ್ಯಾದಿ ಜನರಿದ್ದಾರೆ. ಇದರಲ್ಲಿ ಮುಸ್ಲಿಮರ ಪಾಲು ಶೇಕಡಾ ೧ಕ್ಕಿಂತಲೂ ಕಡಿಮೆ. ಆದರೂ ಕೇವಲ ಮುಸ್ಲಿಮರನ್ನೇ ಏಕೆ ಗುರಿ ಯಾಗಿಸಲಾಗಿದೆ? ಇದರ ಹಿನ್ನೆಲೆಯಲ್ಲಿ ಒಂದು ವ್ಯವಸ್ಥಿತ ಷಡ್ಯಂತ್ರವಿದೆ. ಹಿಂದೆ ವೈದಿಕ ಶಾಹಿಯ ದಬ್ಬಾಳಿಕೆಗೊಳಗಾಗಿದ್ದ ದಲಿತರಲ್ಲಿ ಅನೇಕ ಮಂದಿ ಬೌದ್ಧ, ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳಿಗೆ ಮತಾಂತರಗೊಂಡಿದ್ದರು. ಸಮಾಜದಲ್ಲಿ ಮತ್ತೊಮ್ಮೆ ತಲೆಯೆತ್ತಿ ನಡೆಯಲಾರಂಭಿಸಿದ ಇವರನ್ನು ದಮನಿಸುವುದಕ್ಕಾಗಿ ಸಾವರ್ಕರ್‌ನ ಹಿಂದೂತ್ವ ಸಿದ್ಧಾಂತ ಮತ್ತು ಗೋಲ್ವಲ್ಕರ್‌ನ ದ್ವೇಷ ಸಿದ್ಧಾಂತ ರೂಪುಗೊಂಡವು. ಮುಸಲ್ಮಾನರು ಮತ್ತು ಕ್ರೈಸ್ತರು ಈ ನೆಲದ ಮಕ್ಕಳಲ್ಲ, ದಾಳಿಕೋರರು, ಹೊರಗಿನಿಂದ ಬಂದವರು ಎಂಬ ಸುಳ್ಳನ್ನು ಪ್ರಚಾರಗೊಳಿಸಲಾಯಿತು. ಅವರನ್ನು ನೆಲದ ಮಕ್ಕಳೆಂದು ಕರೆಯಲಾಗುವುದಿಲ್ಲ.

ರ್‌ನ ದ್ವೇಷ ಸಿದ್ಧಾಂತ ರೂಪುಗೊಂಡವು. ಮುಸಲ್ಮಾನರು ಮತ್ತು ಕ್ರೈಸ್ತರು ಈ ನೆಲದ ಮಕ್ಕಳಲ್ಲ, ದಾಳಿಕೋರರು, ಹೊರಗಿನಿಂದ ಬಂದವರು ಎಂಬ ಸುಳ್ಳನ್ನು ಪ್ರಚಾರಗೊಳಿಸಲಾಯಿತು. 'ಅವರನ್ನು ನೆಲದ ಮಕ್ಕಳೆಂದು ಕರೆಯಲಾಗುವುದಿಲ್ಲ. ಅವರಿಗೆ ಹಿಂದೂ ಸಂಸ್ಕೃತಿ ಮತ್ತು ಭಾಷೆಯನ್ನು ಅಳವಡಿಸಿಕೊಳ್ಳಲಾಗದಿದ್ದರೆ ಮತ್ತು ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ತ್ಯಜಿಸಿ ಹಿಂದೂ ಜನಾಂಗದೊಳಕ್ಕೆ ಸೇರಿಕೊಳ್ಳಲಾಗದಿದ್ದರೆ ಅವರು ಯಾವುದೇ ಸವಲತ್ತುಗಳಿಗೂ, ವಿಶೇಷ ಸೌಕರ್ಯಗಳಿಗೂ ಅರ್ಹರಾಗುವುದಿಲ್ಲ. ಈ ದೇಶದೊಳಗೆ ಇರಬೇಕೆಂದಿದ್ದರೆ ನಾಗರಿಕ ಹಕ್ಕುಗಳನ್ನು ಸಹಿತ ಕೇಳದೆ ಹಿಂದೂ ರಾಷ್ಟ್ರಕ್ಕೆ ಪೂರ್ತಿ ಅಧೀನರಾಗಿರಬೇಕು' ಎಂದು ಬರೆದರು ಗೋಲ್ವಲ್ಕರ್.

ದಲಿತರಿಗಾಗಿ, ಮುಸ್ಲಿಮರಿಗಾಗಿ ಮತ್ತು ಕ್ರೈಸ್ತರಿಗಾಗಿ ಪ್ರತ್ಯೇಕ ಪ್ರತ್ಯೇಕ ತಂತ್ರಗಳನ್ನು ಹೆಣೆಯಲಾಗಿದೆ. ದಲಿತರ ಸಾಮಾಜಿಕ ಮೇಲ್ಚಲನೆಗೆ ಅಡ್ಡಗಾಲು ಹಾಕುವುದಕ್ಕಾಗಿ ಅನೇಕ ಎಡರು ತೊಡರುಗಳನ್ನು ಸೃಷ್ಟಿಸಲಾಗುತ್ತಿದೆ. ದಲಿತರನ್ನು ಸಮಾಜದ ಮುಖ್ಯವಾಹಿನಿಯಿಂದ ದೂರವಿಡುವಂತಹ ಕಟ್ಟಳೆಗಳನ್ನು ವೈದಿಕ ಶಾಸನಕಾರ ಮನು ಹಲವು ಶತಮಾನಗಳ ಹಿಂದೆಯೇ ರಚಿಸಿದ್ದಾನೆ. ದಲಿತ ದೌರ್ಜನ್ಯ ಪ್ರಕರಣಗಳಲ್ಲಿ ಹೆಚ್ಚಳ ಮತ್ತು ಮೀಸಲಾತಿ, ಅನುದಾನ ಮುಂತಾದ ಸವಲತ್ತುಗಳ ವಿಷಯದಲ್ಲಿ ಆಗುತ್ತಿರುವ ಮೋಸ – ಇವೆಲ್ಲವೂ ಮನುಸ್ಮೃತಿಯ ಮುಂದುವರಿದ ಭಾಗಗಳೇ ಆಗಿವೆ. ಇದು ದಲಿತರನ್ನು ದಮನಿಸುವುದಕ್ಕಾದರೆ ಇನ್ನು ಮುಸ್ಲಿಮರಿಗಾಗಿ ಗೋವಿನ ವಿಷಯವನ್ನು ಮೀಸಲಿಡಲಾಗಿದೆ. ಕ್ರೈಸ್ತ ಧರ್ಮೀಯರಿಗಾಗಿ ಮತಾಂತರದ ಗುಮ್ಮವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಸಂಸ್ಕೃತ ಭಾಷೆಯನ್ನಾಡುತ್ತಿದ್ದ ಆರ್ಯಭಾಷಿಕರು ಸುಮಾರು 4000 ವರ್ಷಗಳ ಕೆಳಗೆ ಮಧ್ಯ ಏಷ್ಯಾದಿಂದ ಭಾರತಕ್ಕೆ ಬಂದಿರುವುದು ಐತಿಹಾಸಿಕ ಸತ್ಯ. ಆದರೆ ಸಂಘ ಪರಿವಾರ ಇದನ್ನು ಒಪ್ಪಲು ಸಿದ್ಧವಿಲ್ಲ ಏಕೆಂದರೆ ಆಗ ಅವರ ಬ್ರಾಹ್ಮಣವಾದಿ ಸಿದ್ಧಾಂತಗಳೆಲ್ಲವೂ ತಲೆಕೆಳಗಾಗುತ್ತವೆ. ಭಾರತದ ಆದಿವಾಸಿಗಳನ್ನು ವನವಾಸಿಗಳೆಂದು ಕರೆಯುವುದರ ಹಿಂದಿನ ಉದ್ದೇಶವೂ ಇದೇ ಆಗಿದೆ. ಅಂದು ಅಲೆಮಾರಿ ಜೀವನ ನಡೆಸುತ್ತಿದ್ದ ಆರ್ಯಭಾಷಿಕರು ಗೋಪಾಲಕರಾಗಿದ್ದರು. ವಿವಿಧ ಗುಂಪುಗಳನ್ನು ಗೋತ್ರಗಳೆಂದು ಕರೆಯಲಾಗುತ್ತಿತ್ತು.

ದಲಿತರಿಗಾಗಿ, ಮುಸ್ಲಿಮರಿಗಾಗಿ ಮತ್ತು ಕ್ರೈಸ್ತರಿಗಾಗಿ ಪ್ರತ್ಯೇಕ ಪ್ರತ್ಯೇಕ ತಂತ್ರಗಳನ್ನು ಹೆಣೆಯಲಾಗಿದೆ. ದಲಿತರ ಸಾಮಾಜಿಕ ಮೇಲ್ಚಲನೆಗೆ ಅಡ್ಡಗಾಲು ಹಾಕುವುದಕ್ಕಾಗಿ ಅನೇಕ ಎಡರು ತೊಡರುಗಳನ್ನು ಸೃಷ್ಟಿಸಲಾಗುತ್ತಿದೆ. ದಲಿತರನ್ನು ಸಮಾಜದ ಮುಖ್ಯವಾಹಿನಿಯಿಂದ ದೂರವಿಡುವಂತಹ ಕಟ್ಟಳೆಗಳನ್ನು ವೈದಿಕ ಶಾಸನಕಾರ ಮನು ಹಲವು ಶತಮಾನಗಳ ಹಿಂದೆಯೇ ರಚಿಸಿದ್ದಾನೆ. ದಲಿತ ದೌರ್ಜನ್ಯ ಪ್ರಕರಣಗಳಲ್ಲಿ ಹೆಚ್ಚಳ ಮತ್ತು ಮೀಸಲಾತಿ, ಅನುದಾನ ಮುಂತಾದ ಸವಲತ್ತುಗಳ ವಿಷಯದಲ್ಲಿ ಆಗುತ್ತಿರುವ ಮೋಸ – ಇವೆಲ್ಲವೂ ಮನುಸ್ಮೃತಿಯ ಮುಂದುವರಿದ ಭಾಗಗಳೇ ಆಗಿವೆ. ಇದು ದಲಿತರನ್ನು ದಮನಿಸುವುದಕ್ಕಾದರೆ ಇನ್ನು ಮುಸ್ಲಿಮರಿಗಾಗಿ ಗೋವಿನ ವಿಷಯವನ್ನು ಮೀಸಲಿಡಲಾಗಿದೆ. ಕ್ರೈಸ್ತ ಧರ್ಮೀಯರಿಗಾಗಿ ಮತಾಂತರದ ಗುಮ್ಮವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಸಂಸ್ಕೃತ ಭಾಷೆಯನ್ನಾಡುತ್ತಿದ್ದ ಆರ್ಯಭಾಷಿಕರು ಸುಮಾರು 4000 ವರ್ಷಗಳ ಕೆಳಗೆ ಮಧ್ಯ ಏಷ್ಯಾದಿಂದ ಭಾರತಕ್ಕೆ ಬಂದಿರುವುದು ಐತಿಹಾಸಿಕ ಸತ್ಯ. ಆದರೆ ಸಂಘ ಪರಿವಾರ ಇದನ್ನು ಒಪ್ಪಲು ಸಿದ್ಧವಿಲ್ಲ ಏಕೆಂದರೆ ಆಗ ಅವರ ಬ್ರಾಹ್ಮಣವಾದಿ ಸಿದ್ಧಾಂತಗಳೆಲ್ಲವೂ ತಲೆಕೆಳಗಾಗುತ್ತವೆ. ಭಾರತದ ಆದಿವಾಸಿಗಳನ್ನು ವನವಾಸಿಗಳೆಂದು ಕರೆಯುವುದರ ಹಿಂದಿನ ಉದ್ದೇಶವೂ ಇದೇ ಆಗಿದೆ.

ಅವರ ಪ್ರಧಾನ ಸಂಪತ್ತು ಜಾನುವಾರುಗಳೇ ಆಗಿದ್ದವು. ಗೋತ್ರ ಗೋತ್ರಗಳ ನಡುವೆ ಜಾನುವಾರುಗಳಿಗಾಗಿ ಯುದ್ಧಗಳಾಗುತ್ತಿದ್ದವು. ಮಾಂಸ, ಹಾಲು ಇತ್ಯಾದಿ ಜಾನುವಾರು ಉತ್ಪನ್ನಗಳನ್ನು ಸೇವಿಸುತ್ತಿದ್ದ ಅವರ ಜೀವನಕ್ರಮ ಋಗ್ವೇದ ಮುಂತಾದ ಕೃತಿಗಳಲ್ಲಿ ದಾಖಲಿಸಲ್ಪಟ್ಟಿದೆ. ಸಂಕಾಲಿಯಾ, ಕಾಣೆ ಮುಂತಾದ ಇತಿಹಾಸಕಾರರು ವೇದಗ್ರಂಥಗಳ ಅಧ್ಯಯನ ನಡೆಸಿ ಅವುಗಳಲ್ಲಿ ಗೋಮಾಂಸ ಸೇವನೆಯ ಉಲ್ಲೇಖಗಳಿರುವುದನ್ನು ಕಂಡುಹುಡುಕಿದ್ದಾರೆ. ಡಿ.ಎನ್. ಝಾ ಎಂಬ ಸಂಶೋಧಕ ದೀರ್ಘಕಾಲದ ಇತರ ಗ್ರಂಥಗಳನ್ನೂ ಅಭ್ಯಸಿಸಿ ಭಾರತದ ಮೇಲ್ವರ್ಗಗಳಲ್ಲಿ ಮಾಂಸಾಹಾರ ಪದ್ಧತಿ ಮತ್ತು ಗೋಮಾಂಸ ಸೇವನೆಯ ಪರಂಪರೆ ಬಹಳ ಕಾಲದವರೆಗೆ ಪ್ರಚಲಿತವಾಗಿತ್ತೆನ್ನುವ ಸತ್ಯಾಂಶವನ್ನು ಬಯಲಿಗೆಳೆದಿದ್ದಾರೆ. (ಓದಿ: 'ಗೋವು ಪವಿತ್ರ ಎಂಬ ಮಿಥ್ಯೆ').

ಭೇಸಾಯದ ಆವಿಷ್ಕಾರವಾದಾಗ ಅಲೆಮಾರಿ ಜೀವನ ತ್ಯಜಿಸಿದ ಆರ್ಯಭಾಷಿಕರು ಪ್ರಧಾನವಾಗಿ ಸಿಂಧೂ ಮತ್ತು ಗಂಗಾನದಿ ಬಯಲುಗಳಲ್ಲಿ ವಾಸಿಸತೊಡಗಿದರು. ಜಾನುವಾರುಗಳನ್ನು ಕೃಷಿ ಕೆಲಸಗಳಿಗೂ ಉಪಯೋಗಿಸಲಾರಂಭಿಸಿದರು. ಅಂದಿನ ಗ್ರಾಮೀಣ ಆರ್ಥಿಕ ವ್ಯವಸ್ಥೆಯಲ್ಲಿ ಜಾನುವಾರುಗಳೇ ಮುಖ್ಯವಾಗಿದ್ದು ಅವುಗಳ ಉಪಯೋಗ ಯಾಂತ್ರೀಕೃತ ಕೃಷಿ ಆರಂಭವಾಗುವ ತನಕವೂ ಮುಂದುವರಿದಿರುವುದನ್ನು ಕಾಣಬಹುದು. ನೂರಾರು ಪಶುಗಳನ್ನು ಬಲಿ ಕೊಡುವ ಯಜ್ಞಯಾಗಾದಿಗಳನ್ನು ನಿಲ್ಲಿಸದೆ ದಿನಾ ಮಾಂಸಾಹಾರ ಭಕ್ಷಿಸುತ್ತಿದ್ದ ಕಾರಣ ಕೃಷಿ ಕೆಲಸಕ್ಕೆ ಪಶುಗಳ ಅಭಾವ ತಲೆದೋರತೊಡಗಿತು. ಕ್ರಿ.ಪೂ. 5, 6ನೇ ಶತಮಾನಗಳಲ್ಲಿ ಬಂದ ಬೌದ್ಧಮತ ಅನಗತ್ಯ ಪ್ರಾಣಿ ಬಲಿ, ಯಜ್ಞಗಳನ್ನು ವಿರೋಧಿಸಿತು. ಆದರೆ ಅವರೆಂದೂ ಮಾಂಸಾಹಾರವನ್ನು ನಿಷೇಧಿಸಲಿಲ್ಲವೆನ್ನುವುದು ಗಮನಾರ್ಹ. ವೈದಿಕ ಕೌಟಿಲ್ಯನೂ ಗೋಮಾಂಸ ಸೇವನೆಯನ್ನು ನಿಷೇಧಿಸಿರಲಿಲ್ಲ.

ಬೌದ್ಧ ಮತ್ತು ವೈದಿಕ ಧರ್ಮಗಳ ನಡುವೆ ಸಂಘರ್ಷಗಳು ಹೆಚ್ಚಿದವು. ಕ್ರಿ.ಶ. 4–5ರ ನಡುವಿನ ಗುಪ್ತರ ಆಳ್ವಿಕೆಯ ಕಾಲವನ್ನು ವೈದಿಕ ಧರ್ಮದ ಪುನರುತ್ಥಾನ ಯುಗವೆಂದು ಕರೆಯಲಾಗುತ್ತದೆ. ಆ ಕಾಲದಲ್ಲಿ ಬೌದ್ಧ ಭಿಕ್ಷುಗಳಿಗಿಂತ ಮಿಗಿಲೆಂದು ತೋರಿಸಿಕೊಳ್ಳಲು ವೈದಿಕರು ಶಾಖಾಹಾರಿಗಳಾದರು ಎನ್ನಲಾಗಿದೆ. ಆದರೆ ಸೀಮಿತವಾಗಿ ಗೋಮಾಂಸ ತಿನ್ನುವುದು ಸುಮಾರು 12ನೇ ಶತಮಾನದವರೆಗೂ ಮುಂದುವರಿದಿತ್ತು. ಕರ್ನಾಟಕದ ಹವ್ಯಕ ಬ್ರಾಹ್ಮಣರಲ್ಲಿ 'ಕುಡಿ ಸಂತಾನ' ಎಂದು ಕರೆಯಲಾಗಿರುವ ವರ್ಗವೊಂದಿದೆ. ಇವರಲ್ಲಿ ಶಕ್ತಿಪೂಜೆ ಮತ್ತು ಮದ್ಯ ಮಾಂಸಗಳ ನೈವೇದ್ಯದ ಪದ್ಧತಿ ಇಂದು ಕೂಡ ಇದೆ. ಈಶಾನ್ಯ ರಾಜ್ಯಗಳಲ್ಲಿ, ಬಂಗಾಳದಲ್ಲಿ, ಗೋವಾ ಮತ್ತು ಕರ್ನಾಟಕದ ಕರಾವಳಿ ಜಿಲ್ಲೆಗಳಲ್ಲಿರುವ ಕೆಲವು ಬ್ರಾಹ್ಮಣ ಪಂಗಡಗಳು ಮೀನು ತಿನ್ನುವುದನ್ನು ಇಂದಿಗೂ ಕಾಣಬಹುದಾಗಿದೆ.

ಹಿಂದೆ ಹಳ್ಳಿಗಳಲ್ಲಿ ಸಾಕಷ್ಟು ಗೋಮಾಳ, ಹುಲ್ಲು ಲಭ್ಯವಿದ್ದ ಕಾಲದಲ್ಲಿ ಊರ ಹಸುಗಳ ಬಳಕೆ ವ್ಯಾಪಕವಾಗಿತ್ತು. ಅವುಗಳು ನೀಡುವ ಹಾಲಿನ ಪ್ರಮಾಣ ಕಮ್ಮಿಯಿದ್ದರೂ ಸಾಕಣೆಯ ಖರ್ಚೂ ಕಡಿಮೆಯಿತ್ತು. ಅನುಪಯುಕ್ತ ಜಾನುವಾರುಗಳನ್ನು ದಲ್ಲಾಳಿಗಳಿಗೆ ಮಾರಾಟ ಮಾಡಿ ಸಿಗುವ ಹಣದಿಂದ ಹೊಸ ಜಾನುವಾರು ಖರೀದಿಸುವುದು ನೂರಾರು ವರ್ಷಗಳಿಂದಲೂ ಅನೂಚಾನವಾಗಿ ನಡೆದುಕೊಂಡು ಬಂದಿದೆ. ಹೀಗೆ ಮಾರಾಟವಾದ ಜಾನುವಾರುಗಳು ಮಾಂಸ, ಚರ್ಮ ಮತ್ತಿತರ ಉತ್ಪನ್ನಗಳಾಗಿ ಪರಿವರ್ತಿತಗೊಂಡು ಸಮಾಜದ ಇತರ ವರ್ಗಗಳಿಗೆ ಪ್ರಯೋಜನಕಾರಿಯಾಗುತ್ತವೆ. ಇಂತಹ ಒಂದು ಗ್ರಾಮೀಣ ಆರ್ಥಿಕ ವ್ಯವಸ್ಥೆ ಪರಸ್ಪರ ಪೂರಕವಷ್ಟೆ ಅಲ್ಲ, ಅತ್ಯಂತ ತೃಪ್ತಿಕರವೂ ಆಗಿದೆ. ಆದರೆ ಪರಿಸ್ಥಿತಿ ಬದಲಾಗುತ್ತಿದೆ. ಹಳ್ಳಿಗಳಲ್ಲಿಂದು ಗೋಮಾಳಗಳು ಕಣ್ಮರೆಯಾಗಿವೆ.

ಜಾನುವಾರುಗಳಿಗೆ ಬೇಕಾದ ಮೇವನ್ನು ಮಾರುಕಟ್ಟೆಯಿಂದ ಖರೀದಿಸಬೇಕಾಗಿರುವುದರಿಂದ ನಿರ್ವಹಣೆಯ ಖರ್ಚು ಏರಿದೆ. ಹಳ್ಳಿಗಳಲ್ಲಿ ಜಾನುವಾರು ಸಾಕಣೆಗೆ ಮುಖ್ಯವಾಗಿ ಮೂರು ಉದ್ದೇಶಗಳಿದ್ದವು. 1. ಬೇಸಾಯ 2. ಹಾಲು 3. ಹಟ್ಟಿಗೊಬ್ಬರ. ಕಳೆದ ಸುಮಾರು ಒಂದು ದಶಕದಿಂದ ಯಂತ್ರಗಳ ಬಳಕೆ ಹೆಚ್ಚಿದ ನಂತರ ಜಾನುವಾರು ಗಳನ್ನು ಬೇಸಾಯಕ್ಕಾಗಿ ಉಪಯೋಗಿಸುವುದು ತೀರಾ ವಿರಳವಾಗಿದೆ. ಇಂದು ಕೇವಲ ಹಾಲು, ಗೊಬ್ಬರಕ್ಕಾಗಿ ಸಾಕಲಾಗುತ್ತದೆ. ಊರ ದನಗಳ ಬದಲಿಗೆ ಹೊಸ ತಳಿಯ ಜರ್ಸಿ, ಹೋಲ್‌ಸ್ಟೀನ್ ಮುಂತಾದವುಗಳು ಬಂದಿವೆ. ಇವು ಹಾಲು ಧಾರಾಳ ನೀಡುತ್ತವಾದರೂ ಅಷ್ಟೇ ಜಾಸ್ತಿ ಮೇವು ಕೇಳುತ್ತವೆ. ಇವುಗಳು ಹಾಕುವ ಗಂಡು ಕರುಗಳು ಇಂದಿನ ಯಾಂತ್ರೀಕೃತ ಕೃಷಿಗೆ ಬೇಡವಾಗಿವೆ. ಪರಿಣಾಮವಾಗಿ ಅನುಪಯುಕ್ತ ಜಾನುವಾರುಗಳ ಸಂಖ್ಯೆಯಲ್ಲಿ ಹೆಚ್ಚಳ. ಅವುಗಳನ್ನೆಲ್ಲ ಸಾಕುವುದಂತೂ ದುಸ್ಸಾಧ್ಯವಾಗಿದ್ದು ಮಾರುವ ಅನಿವಾರ್ಯತೆ ಹಿಂದಿಗಿಂತಲೂ ಹೆಚ್ಚಾಗಿದೆ.

ಜಾನುವಾರು ಸಾಕಣೆಯಲ್ಲಿ ಒಲವು ನಿಧಾನಕ್ಕೆ ಕಡಿಮೆಯಾಗುತ್ತಿದೆ. ಪ್ರಸಕ್ತವಾಗಿ ಹಳ್ಳಿಗಳಲ್ಲಿರುವ ವಾಸ್ತವ

(32ನೇ ಪುಟಕ್ಕೆ)

ಜಾತಿ ವಿನಾಶಕ್ಕಾಗಿ ಜಾತಿ ಜನಗಣತಿ!?

ಶಿವಸುಂದರ್

ಆತ್ಮೀಯರೇ,

ಮೊದಲಿಗೆ ಹೊನ್ನಾವರದಂಥ ಈ ಸಣ್ಣ ಊರಿನಲ್ಲಿ ಅತ್ಯಂತ ಸಾಮಾಜಿಕ ಕಾಳಜಿಯಿಂದ ಇಂಥಾ ಗಂಭೀರ ವಿಷಯಗಳ ಬಗ್ಗೆ ಚರ್ಚೆಗಳನ್ನು ಏರ್ಪಡಿಸುತ್ತಾ ಜನರ ಪ್ರಜ್ಞೆಯನ್ನು ಹೆಚ್ಚಿಸಲು ಯತ್ನಿಸುತ್ತಿರುವ ಡಾ. ಅನುಪಮಾ ಮತ್ತು ಡಾ. ಕೃಷ್ಣ ದಂಪತಿಗಳಿಗೆ ನನ್ನ ಅಭಿನಂದನೆಗಳು. ಹಾಗೆಯೇ ಇಂಥಾ ಸಹೃದಯ ದಂಪತಿಗಳ ಪರಿಚಯವನ್ನು ಮಾಡಿಕೊಟ್ಟ ಶಿವಮೊಗ್ಗದ ಪ್ರೊ. ಮುನೀರ್‌ರವರಿಗೂ ನನ್ನ ಕೃತಜ್ಞತೆಗಳು.

ನನ್ನ ವಿಷಯದ ಬಗ್ಗೆ ಮಾತನಾಡುವ ಮೊದಲು ಪೀಠಿಕೆಯ ರೂಪದಲ್ಲಿ ಈ ದೇಶದ ಜಾತಿ ವ್ಯವಸ್ಥೆಯ ಬಗ್ಗೆ, ಮೀಸಲಾತಿಯ ಅರ್ಥದ ಬಗ್ಗೆ, ಜಾತಿ ಜನಗಣತಿಯ ಅಗತ್ಯದ ಬಗ್ಗೆ ಮಾತನಾಡಿ ನಂತರ ಜಾತಿ ವಿನಾಶ ಮತ್ತು ಜಾತಿ ಜನಗಣತಿಯ ಸಂಬಂಧ ಮತ್ತು ಸಾಧ್ಯತೆಗಳ ಬಗ್ಗೆ ಮಾತನಾಡಲು ಬಯಸುತ್ತೇನೆ.

ಈ ವಿಚಾರ ಸಂಕಿರಣಕ್ಕೆ ಡಾ. ಅನುಪಮಾರ ಪರವಾಗಿ ಮುನೀರ್ ಅವರು ನನ್ನ ಸಂಪರ್ಕಿಸಿದಾಗ ನಾನು ಜಾತಿ ಜನಗಣತಿ ಬೇಡ ಎಂಬ ನಿಲುವು ಇಟ್ಟುಕೊಂಡಿರಬಹುದು ಎಂದು ಭಾವಿಸಿದ್ದರಂತೆ. ಅದಕ್ಕೆ ಕಾರಣ ನನ್ನ ಎಡಪಂಥೀಯ ಹಿನ್ನೆಲೆ. ಮತ್ತು ಎಡಪಂಥೀಯರಲ್ಲಿ ಇರುವುದು ಒಂದೇ ಪಂಥ ಮತ್ತು ಅವರೆಲ್ಲಾ ಒಂದೇ ಬಗೆಯ ನಿಲುವು ಉಳ್ಳವರಾಗಿರುತ್ತಾರೆ ಎಂಬ ಅವರ ತಪ್ಪು ಗ್ರಹಿಕೆ! ಆದರೆ ಅವರದ್ದು ಸಂಪೂರ್ಣವಾದ ತಪ್ಪು ಗ್ರಹಿಕೆ ಎಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಈ ದೇಶದ ಎಡಪಂಥೀಯರು ಅದರಲ್ಲೂ ಕಮ್ಯುನಿಸ್ಟರು ಈ ದೇಶದ ವಾಸ್ತವವಾದ ಜಾತಿಯನ್ನು ಮತ್ತು ಸಮಾಜ ರಚನೆಯಲ್ಲಿ ಮತ್ತು ಅದರ ಬೆಳವಣಿಗೆಯ ಗತಿಯಲ್ಲಿ ಜಾತಿಯ ಪಾತ್ರವನ್ನು ಅರ್ಥ ಮಾಡಿಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಇದಕ್ಕೆ ಮಾರ್ಕ್ಸ್‌ವಾದಿ ಸಿದ್ಧಾಂತವನ್ನು ಭಾರತದ ಸಂದರ್ಭಕ್ಕೆ ಸೃಜನಶೀಲವಾಗಿ ಅನ್ವಯಿಸದೇ ಬಹಳಷ್ಟು ಕಾಲ ಕುರುಡಾಗಿದ್ದದ್ದೇ ಕಾರಣವೆಂಬುದರಲ್ಲಿ ಎರಡು ಮಾತಿಲ್ಲ.

ಜಾತಿ ಪದ್ಧತಿ, ಜಾತಿ ಮೀಸಲಾತಿ ಮತ್ತು ಕಾಮನ್ ಸೆನ್ಸ್!

ಈ ದೇಶದ ಸಾಮಾಜಿಕ ರಚನೆಯಲ್ಲಿ ಜಾತಿಯದ್ದು ಪ್ರಮುಖ ಪಾತ್ರ, ಈ ದೇಶದಲ್ಲಿ ಜಾತಿಯೇ ವರ್ಗದ ಪಾತ್ರವನ್ನು ವಹಿಸಿತ್ತು ಎಂದು ಅರ್ಥಮಾಡಿಕೊಳ್ಳಲು ವಿಶೇಷ ಪಾಂಡಿತ್ಯವೇನೂ ಬೇಕಾಗಿಲ್ಲ. ಜಾತಿಯೇ ಒಬ್ಬ ಮನುಷ್ಯನ ಸಾಮಾಜಿಕ ಸ್ಥಾನವನ್ನು ನಿರ್ಧರಿಸಿಬಿಡುವ ಈ ವಿಕೃತ ಸಾಮಾಜಿಕ ವ್ಯವಸ್ಥೆ, ವಿಶ್ವದ ಶೋಷಕ ಸಿದ್ಧಾಂತ ಮತ್ತು ಆಚರಣೆಗೆ ಭಾರತದ ಆಳುವ ವರ್ಗಗಳ ಕೊಡುಗೆ! ಹೀಗಾಗಿ ಈ ದೇಶವನ್ನು ಬದಲಾಯಿಸಬೇಕೆಂದರೆ ಮೊದಲು ಈ ದೇಶವನ್ನು ಅರ್ಥಮಾಡಿಕೊಳ್ಳಬೇಕು. ಈ ದೇಶವನ್ನು ಅರ್ಥಮಾಡಿಕೊಳ್ಳಬೇಕಾದರೆ ಈ ದೇಶದ ಜಾತಿ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳಬೇಕು. ಮತ್ತು ಈ ದೇಶದ ಜಾತಿ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳದೆ ಈ ದೇಶದಲ್ಲಿ ಬದಲಾವಣೆ ತರಲು ಸಾಧ್ಯವೇ ಇಲ್ಲ. ಇದು ಕಾಮನ್ ಸೆನ್ಸ್. ಆದರೆ ಇಂದು ಈ ದೇಶದ ಪ್ರಗತಿಪರರಲ್ಲಿ ಅತಿ ದೊಡ್ಡ ಕೊರತೆಯಿರುವುದೇ ಈ ಕಾಮನ್ ಸೆನ್ಸ್‌ದು! ಭಾರತದ ಇತಿಹಾಸವನ್ನು ವೈಜ್ಞಾನಿಕವಾಗಿ ಅರ್ಥಮಾಡಿಕೊಂಡು ಜಾತಿ ವ್ಯವಸ್ಥೆಯ ಹುಟ್ಟಿನ ಮತ್ತು ಬೆಳವಣಿಗೆಯ ಬಗೆಗೂ ಒಂದು ಬಲವಾದ ವೈಜ್ಞಾನಿಕ ವಿವರಣೆ ಕೊಟ್ಟವರಲ್ಲಿ ಡಿ.ಡಿ. ಕೋಸಾಂಬಿ ಎಂಬ ಇತಿಹಾಸಕಾರರು ಅತಿ ಪ್ರಮುಖರು. ಅವರು 1950ರ ದಶಕದಲ್ಲಿ ಅಂದಿನ ಕಮ್ಯುನಿಸ್ಟ್ ನಾಯಕರ ಭಾರತದ ಇತಿಹಾಸದ ಮೊಂಡು ತಿಳುವಳಿಕೆಯ ವಿರುದ್ಧ ಸಾಕಷ್ಟು ಸಂಘರ್ಷ ನಡೆಸಿದ್ದರು. ಕೊನೆಗೆ ಅಂದಿನ ಕಮ್ಯುನಿಸ್ಟ್ ಪಕ್ಷದ ನಾಯಕರಿಗೆ ಪತ್ರವನ್ನು ಬರೆದು "Ideology should not substitute your common sense" ಎಂದು ಚುಚ್ಚಿದ್ದರಂತೆ!

ಅದೇನೇ ಇರಲಿ ಈಗ ಎಲ್ಲಾ ನದಿಗಳಲ್ಲೂ ಸಾಕಷ್ಟು ನೀರು ಹರಿದಿದೆ. ಭಾರತದ ಸಂಸದೀಯ ಕಮ್ಯುನಿಸ್ಟ್ ಪಕ್ಷಗಳೂ ಸಹ ತಾವು ಈಗ ಜಾತಿ ಪ್ರಶ್ನೆಯನ್ನು ಗಂಭೀರವಾಗಿ ಪರಿಗಣಿಸಿ ಕನಿಷ್ಠ ಪಕ್ಷ ತಮ್ಮ ಸಮ್ಮೇಳನಗಳಲ್ಲಿ ಜಾತಿವಿನಾಶಕ್ಕೆ ಸಂಬಂಧಪಟ್ಟಂತೆ ಪ್ರಮುಖ ತೀರ್ಮಾನಗಳನ್ನು ಕೈಗೊಳ್ಳುತ್ತಿದ್ದಾರೆ. ಕೆಲವು ಕಡೆ ಜಾತಿ ತಾರತಮ್ಯದ ವಿರುದ್ಧದ ಹೋರಾಟಗಳನ್ನೂ ಕೈಗೆತ್ತಿಕೊಳ್ಳುತ್ತಿದ್ದಾರೆ. ಇನ್ನು ನಕ್ಸಲೈಟರೆಂದು ಕರೆಸಿಕೊಳ್ಳಲ್ಪಡುವ ಕ್ರಾಂತಿಕಾರಿ ಕಮ್ಯುನಿಸ್ಟರಂತೂ ಆಂಧ್ರ, ತಮಿಳುನಾಡು ಇನ್ನಿತ್ಯಾದಿ ಕಡೆಗಳಲ್ಲಿ ಉದ್ದಕ್ಕೂ ಮೀಸಲಾತಿ ಹೋರಾಟಗಳ ಪರವಾಗಿ ಮತ್ತು ದಲಿತರ ಮೇಲಿನ



ಭಾರತದ ಇತಿಹಾಸವನ್ನು ವೈಜ್ಞಾನಿಕವಾಗಿ ಅರ್ಥಮಾಡಿಕೊಂಡು ಜಾತಿ ವ್ಯವಸ್ಥೆಯ ಹುಟ್ಟಿನ ಮತ್ತು ಬೆಳವಣಿಗೆಯ ಬಗೆಗೂ ಒಂದು ಬಲವಾದ ವೈಜ್ಞಾನಿಕ ವಿವರಣೆ ಕೊಟ್ಟವರಲ್ಲಿ ಡಿ.ಡಿ. ಕೋಸಾಂಬಿ ಎಂಬ ಇತಿಹಾಸಕಾರರು ಅತಿ ಪ್ರಮುಖರು. ಅವರು ೧೯೫೦ರ ದಶಕದಲ್ಲಿ ಅಂದಿನ ಕಮ್ಯುನಿಸ್ಟ್ ನಾಯಕರ ಭಾರತದ ಇತಿಹಾಸದ ಮೊಂಡು ತಿಳುವಳಿಕೆಯ ವಿರುದ್ಧ ಸಾಕಷ್ಟು ಸಂಘರ್ಷ ನಡೆಸಿದ್ದರು. ಕೊನೆಗೆ ಅಂದಿನ ಕಮ್ಯುನಿಸ್ಟ್ ಪಕ್ಷದ ನಾಯಕರಿಗೆ ಪತ್ರವನ್ನು ಬರೆದು "Ideology should not substitute your common sense" ಎಂದು ಚುಚ್ಚಿದ್ದರಂತೆ! ಅದೇನೇ ಇರಲಿ ಈಗ ಎಲ್ಲಾ ನದಿಗಳಲ್ಲೂ ಸಾಕಷ್ಟು ನೀರು ಹರಿದಿದೆ. ಭಾರತದ ಸಂಸದೀಯ ಕಮ್ಯುನಿಸ್ಟ್ ಪಕ್ಷಗಳೂ ಸಹ ತಾವು ಈಗ ಜಾತಿ ಪ್ರಶ್ನೆಯನ್ನು ಗಂಭೀರವಾಗಿ ಪರಿಗಣಿಸಿ ಕನಿಷ್ಟಪಕ್ಷ ತಮ್ಮ ಸಮ್ಮೇಳನಗಳಲ್ಲಿ ಜಾತಿವಿನಾಶಕ್ಕೆ ಸಂಬಂಧಪಟ್ಟಂತೆ ಪ್ರಮುಖ ತೀರ್ಮಾನಗಳನ್ನು ಕೈಗೊಳ್ಳುತ್ತಿದ್ದಾರೆ.

ಅತ್ಯಾಚಾರಗಳ ವಿರುದ್ಧ ಸತತ ಸಂಘರ್ಷ ನಡೆಸುತ್ತಲೇ ಬಂದಿದ್ದಾರೆ. ಅಂಥ ಹೋರಾಟಗಳಲ್ಲಿ ಹಲವರು ತಮ್ಮ ಪ್ರಾಣವನ್ನೂ ತೆತ್ತಿದ್ದಾರೆ.

ಹೀಗಾಗಿ ಇಂದು ಯಾವುದೇ ಬಗೆಯ ಎಡ ಪಂಥೀಯರೂ ಸಹ ಜಾತಿ ಮೀಸಲಾತಿಯ ವಿರುದ್ಧವಾಗಿ ಇರುವ ಸಂದರ್ಭವೇ ಇಲ್ಲ.

ಹೀಗೆ ಹೇಳಿದಾಗ ಎಲ್ಲಾ ಪ್ರಗತಿಪರ ಚಿಂತನೆಗಳ ಅಂತಿಮ ಲಕ್ಷ್ಯ ರಾಜಕೀಯ – ಸಾಮಾಜಿಕ – ಆರ್ಥಿಕ ಸಮಾನತೆಯುಳ್ಳ ಸಮಾಜವೆಂಬುದನ್ನು ಮರೆಯಲಾಗುವುದಿಲ್ಲ. ಹಾಗೂ ಈ ದೇಶದಲ್ಲಿ ಸಾಮಾಜಿಕ ಸಮಾನತೆ ಸಾಧ್ಯವಾಗಬೇಕೆಂದರೆ ಜಾತಿ ವಿನಾಶವಾಗಬೇಕಾದದ್ದು ಕಡ್ಡಾಯವೆಂಬುದರ ಬಗ್ಗೆ ಅಂಬೇಡ್ಕರ್, ಲೋಹಿಯಾ ಹಾಗೂ ಈ ದೇಶದ ಎಲ್ಲಾ ಬಗೆಯ ಕಮ್ಯುನಿಸ್ಟರೆಲ್ಲರ ಅಭಿಪ್ರಾಯವೂ ಒಂದೇ ಆಗಿದೆ. ಹೀಗಾಗಿ ಜಾತಿಯ ಕುರಿತಾದ ಯಾವುದೇ ಆಲೋಚನೆ, ಯೋಜನೆ ಅಥವಾ ಕಾರ್ಯಕ್ರಮಗಳ ಬಗೆಗಿನ ನಮ್ಮ ನಿಲುವುಗಳು ಅಂತಿಮವಾಗಿ ಅವು ಸಮಾಜವನ್ನು ಜಾತಿ ವಿನಾಶದ ಗುರಿಯ ಕಡೆಗೆ ಕರೆದೊಯ್ಯುತ್ತಿದೆಯೇ ಎಂಬ ಮಾನದಂಡವನ್ನೇ ಆಧರಿಸಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ಯೋಚಿಸಿದರೆ ಜಾತಿ ಮೀಸಲಾತಿ ಮತ್ತು ಜಾತಿ ಜನಗಣತಿಯ ಬಗ್ಗೆ ನಮ್ಮ ನಿಲುವು ಭಿನ್ನಭಿನ್ನವಾಗಿರುವ ಅಗತ್ಯವಿಲ್ಲ. ಜಾತಿ ಮೀಸಲಾತಿಯನ್ನು ಇನ್ನಷ್ಟು ಅರ್ಥಪೂರ್ಣವಾಗಿ ಆಚರಣೆಗೆ ತರಲೆಂದೇ ಜಾತಿ ಜನಗಣತಿಯ ಕಾರ್ಯ ನಡೆಯಬೇಕಾಗಿದೆ. ಹೀಗಾಗಿ ಮೊದಲು ಜಾತಿ ಆಧಾರಿತ ಮೀಸಲಾತಿಯ ಅಗತ್ಯದ ಬಗೆಗೆ ನಮ್ಮ ನಿಲುವು ಇನ್ನಷ್ಟು ಸ್ಪಷ್ಟಗೊಳಿಸಬೇಕಿದೆ.

ಸಂವಿಧಾನದ 15 (4), 16 (4), 340, 341, 342 ಕಲಮುಗಳು ಸರ್ಕಾರವು ಕಾನೂನು ಮತ್ತು ನೀತಿಗಳನ್ನು ರೂಪಿಸುವಾಗ ಈ ದೇಶದ ಎಲ್ಲಾ ಜನರನ್ನು ವರ್ಗ, ಜಾತಿ, ಲಿಂಗ ಬೇಧವಿಲ್ಲದೆ ಸಮಾನವಾಗಿ ನೋಡಬೇಕೆಂದು ನಿರ್ದೇಶಿಸುತ್ತಲೇ "ಸಾಮಾಜಿಕವಾಗಿ ಹಿಂದುಳಿದ" ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ರಾಜಕೀಯದಲ್ಲಿ, ಶಿಕ್ಷಣದಲ್ಲಿ ಮತ್ತು ಉದ್ಯೋಗಾವಕಾಶಗಳಲ್ಲಿ ವಿಶೇಷ ಆದ್ಯತೆ ಮತ್ತು ಮೀಸಲಾತಿಯನ್ನು ಕಲ್ಪಿಸಬೇಕೆಂದು ನಿರ್ದೇಶಿಸುತ್ತದೆ. 340ನೇ ಕಲಮು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರದ ಇತರ ಹಿಂದುಳಿದ ವರ್ಗಗಳನ್ನು ಗುರುತಿಸಿ ಅವರಿಗೂ ವಿಶೇಷ ಆದ್ಯತೆಯ ಮೇರೆಗೆ ಅವಕಾಶಗಳನ್ನು ಕಲ್ಪಿಸುವ ಅಂದರೆ ಮೀಸಲಾತಿಯನ್ನು ಕಲ್ಪಿಸುವ ಅವಕಾಶವನ್ನು ಪ್ರಭುತ್ವಕ್ಕೆ ನೀಡುತ್ತದೆ.

ಮೀಸಲಾತಿ–ಜಾತಿಗ್ರಸ್ಥ ಸಮಾಜದ ಅನರ್ಹತೆಗೆ ಸಂವಿಧಾನಿಕ ಚುಚ್ಚುಮದ್ದು

ಸಂವಿಧಾನದಲ್ಲಿ ಹೀಗೆ ಶೋಷಿತ ಸಮುದಾಯಗಳಿಗೆ ದತ್ತವಾಗಿರುವ ಈ ವಿಶೇಷ ಮಾನ್ಯತೆಯನ್ನು ಹೇಗೆ ಅರ್ಥಮಾಡಿಕೊಳ್ಳುವುದು? ಎಲ್ಲರೂ ಸಮಾನವಾಗಿರಬೇಕು ಎಂಬ ತತ್ವವನ್ನು ಒಪ್ಪಿಕೊಳ್ಳುವ ಬಹಳಷ್ಟು ಜನ ಸರ್ಕಾರಿ ಅವಕಾಶಗಳಲ್ಲಿ ಹೀಗೆ ವಿಶೇಷ ಆದ್ಯತೆಯನ್ನು ಈವರೆಗೆ ದಮನಕ್ಕೆ ಒಳಗಾದ ಸಮುದಾಯಗಳಿಗೆ ನೀಡಿದ ತಕ್ಷಣ ತಮಗೆ ಸಿಗಬೇಕಾದ ಅವಕಾಶವನ್ನು ಕಿತ್ತುಕೊಂಡು ತಮಗೆ ಮಾತ್ರವಲ್ಲ, ದೇಶಕ್ಕೇ ಅನ್ಯಾಯ ಮಾಡುತ್ತಿದ್ದಾರೆಂದು ಹುಯಿಲೆಬ್ಬಿಸುತ್ತಾರೆ. ಇದರ ಹಿಂದೆ ಮೀಸಲಾತಿ ಎಂದರೆ ಅರ್ಹತೆಯಿಲ್ಲದಿದ್ದರೂ ಚಾರಿತ್ರಿಕವಾಗಿ ತಾರತಮ್ಯಕ್ಕೆ ಗುರಿ

> **ಎಲ್ಲರೂ ಸಮಾನವಾಗಿರಬೇಕು ಎಂಬ ತತ್ವವನ್ನು ಒಪ್ಪಿಕೊಳ್ಳುವ ಬಹಳಷ್ಟು ಜನ ಸರ್ಕಾರಿ ಅವಕಾಶಗಳಲ್ಲಿ ವಿಶೇಷ ಆದ್ಯತೆಯನ್ನು ದಮನಕ್ಕೆ ಒಳಗಾದ ಸಮುದಾಯಗಳಿಗೆ ನೀಡಿದ ತಕ್ಷಣ ತಮಗೆ ಸಿಗಬೇಕಾದ ಅವಕಾಶವನ್ನು ಕಿತ್ತುಕೊಂಡು ತಮಗೆ ಮಾತ್ರವಲ್ಲ, ದೇಶಕ್ಕೇ ಅನ್ಯಾಯ ಮಾಡುತ್ತಿದ್ದಾರೆಂದು ಹುಯಿಲೆಬ್ಬಿಸುತ್ತಾರೆ. ಇದರ ಹಿಂದೆ ಮೀಸಲಾತಿ ಎಂದರೆ ಅರ್ಹತೆಯಿಲ್ಲದಿದ್ದರೂ ತಾರತಮ್ಯಕ್ಕೆ ಗುರಿಯಾಗಿದ್ದರು ಎಂಬ ಅನುಕಂಪದ ಕಾರಣದಿಂದ ಕೊಡಲಾಗುತ್ತಿರುವ ಅವಕಾಶ ಎಂಬ ತಪ್ಪು ತಿಳವಳಿಕೆ ಇದೆ. ಮೀಸಲಾತಿಯನ್ನು ಬೆಂಬಲಿಸುವ ಬಹಳಷ್ಟು ಪ್ರಗತಿಪರರ ತಿಳವಳಿಕೆಯೂ ಇದಕ್ಕಿಂತ ಭಿನ್ನವಾಗಿಲ್ಲ. ಯಾವಾಗ ಫಲಾನುಭವಿಗಳು ಋಣದ ಮಾತನ್ನು ಬಿಟ್ಟು ಹಕ್ಕಿನ, ಮತ್ತು ನ್ಯಾಯದ ಮಾತನ್ನಾಡಲು ಪ್ರಾರಂಭಿಸುತ್ತಾರೋ ಆಗ ಅನುಕಂಪದ ಸಹನೆಯೂ ತೀರುತ್ತದೆ.**

ಯಾಗಿದ್ದರು ಎಂಬ ಅನುಕಂಪದ ಕಾರಣದಿಂದ ಕೊಡಲಾಗುತ್ತಿರುವ ಅವಕಾಶ ಎಂಬ ತಪ್ಪು ತಿಳುವಳಿಕೆ ಇದೆ. ಮೀಸಲಾತಿಯನ್ನು ಬೆಂಬಲಿಸುವ ಬಹಳಷ್ಟು ಜನ ಪ್ರಗತಿಪರರ ತಿಳವಳಿಕೆಯೂ ಇದಕ್ಕಿಂತ ಭಿನ್ನವಾಗಿಲ್ಲ.

ಆದರೆ ಅನುಕಂಪವು ಔದಾರ್ಯವನ್ನು ಬಯಸುತ್ತದೆ. ಮತ್ತು ಔದಾರ್ಯಕ್ಕೆ ಮಿತಿ ಇರುತ್ತದೆ. ಮತ್ತು ಅದು ಫಲಾನುಭವಿಗಳಿಂದ ಶಾಶ್ವತ ಋಣೀ ಭಾವವನ್ನು ನಿರೀಕ್ಷಿಸುತ್ತದೆ. ಯಾವಾಗ ಫಲಾನುಭವಿಗಳು ಋಣದ ಮಾತನ್ನು ಬಿಟ್ಟು ಹಕ್ಕಿನ, ಮತ್ತು ನ್ಯಾಯದ ಮಾತನ್ನಾಡಲು ಪ್ರಾರಂಭಿಸುತ್ತಾರೋ ಆಗ ಅನುಕಂಪದ ಸಹನೆಯೂ ತೀರುತ್ತದೆ. ಮೀಸಲಾತಿಯನ್ನು ಹೀಗೆ ಅನುಕಂಪ, ಅನರ್ಹರಿಗೆ "ಬಿಟ್ಟುಕೊಡುತ್ತಿರುವ" ಅವಕಾಶ ಎಂಬ ನೆಲೆಯಲ್ಲಿ ನಿರ್ವಚನ ಮಾಡಿದಷ್ಟೂ ಅದು ಮೀಸಲಾತಿಯ ಫಲಾನುಭವಿಗಳನ್ನು ಇನ್ನಷ್ಟು ಕೀಳರಿಮೆಗೇ ದೂಡುತ್ತಿರುತ್ತದೆ.

ಆದರೆ ಮೀಸಲಾತಿಯ ಸಾಂವಿಧಾನಿಕ ಅರ್ಥ ಇದಲ್ಲವೇ ಅಲ್ಲ. ಮೀಸಲಾತಿ ವಾಸ್ತವದಲ್ಲಿ ಅನರ್ಹರಿಗೆ ಅವಕಾಶ ಕೊಡುವುದಲ್ಲ. ಬದಲಿಗೆ ಅರ್ಹರನ್ನು, ನಿಜಕ್ಕೂ ಪ್ರತಿಭೆ ಇರುವವರನ್ನು ಗುರುತಿಸಲು ಈ ಜಾತಿಗ್ರಸ್ಥ ಸಮಾಜ ಅನರ್ಹವಾಗಿದೆ ಮತ್ತು ಈ ಅನರ್ಹತೆಯನ್ನು ತಿದ್ದಲು ಮೀಸಲಾತಿಯನ್ನು ಶಾಸನಬದ್ಧ ಮಾಡಲಾಗಿದೆ. ಇದು ಸಂವಿಧಾನದ ನಿಜವಾದ ಆಶಯ.

ಮನುಸ್ಮೃತಿಯ ಆಧಾರದ ಮೇಲೆ ಸಾಮಾಜಿಕ ತಾರತಮ್ಯವನ್ನೇ ಉಸಿರಾಡಿಕೊಂಡು ಬಂದಿರುವ ಈ ಜಾತಿಗ್ರಸ್ಥ ಸಮಾಜ ತನ್ನ ಪೂರ್ವಗ್ರಹ ಮತ್ತು ಪರಂಪರಾನುಗತ ನಂಬಿಕೆಯಿಂದಾಗಿಯೇ ಸಮಾಜದಲ್ಲಿ ಪರಂಪರಾನುಗತವಾಗಿ ದಮನಕ್ಕೆ ಒಳಗಾದವರನ್ನು ಸಮಾನತೆಯ ನೆಲೆಯಲ್ಲಿ ಕಾಣುವುದಿಲ್ಲ. ಅವಕಾಶಗಳನ್ನು ಒದಗಿಸುವುದಿಲ್ಲ. ಸಮಾನತೆಯನ್ನು ಸಹಜ ಮೌಲ್ಯವಾಗಿ ಒಪ್ಪಿಕೊಳ್ಳಲು ಅಸಮರ್ಥವಾಗಿರುವ ಈ ಸಮಾಜ ನ್ಯೂನತೆಯನ್ನು ಸರಿಪಡಿಸಲೆಂದೇ ಅವರಿಗೆ ಅವಕಾಶ ಕಲ್ಪಿಸಿಕೊಡುವುದನ್ನು ಶಾಸನಬದ್ಧಗೊಳಿಸಲಾಗಿದೆ.

ಇದನ್ನು ವಿವರಿಸಲು ಒಂದು ಉದಾಹರಣೆಯನ್ನು ಕೊಡುತ್ತೇನೆ. ಸಾಮಾನ್ಯವಾಗಿ ನಮ್ಮ ದೇಶದ ಮೇಲ್ಜಾತಿಯಲ್ಲಿ ಹುಟ್ಟಿ ಸಮಾಜದ ಕಂಫರ್ಟ್ ಜೋನಿನಲ್ಲಿರುವ ವರ್ಗಗಳು ತಾವು ದಮನಿತ ವರ್ಗಗಳ ವಿರೋಧಿಗಳಲ್ಲವೆಂದೂ, ಅವರಿಗೆ ಬೇಕಾದರೆ ಉಚಿತ ಶಿಕ್ಷಣ ಕೊಟ್ಟು ಬೇಕಾದ ಜ್ಞಾನ – ಕೌಶಲ್ಯಗಳನ್ನು ಕಲಿಸಿಕೊಟ್ಟು ಸರ್ಕಾರ ಉದ್ಧಾರ ಮಾಡುವುದಾದರೆ ತಮ್ಮ ಅಭ್ಯಂತರ ಏನೂ ಇಲ್ಲವೆಂದು ವಾದಿಸುತ್ತಾರೆ. ಹಾಗೂ ಈ ದೇಶದ ಖಾಸಗಿ ಕ್ಷೇತ್ರದ ಉದ್ಯಮಪತಿಗಳು ತಮ್ಮ ಉದ್ದಿಮೆಗಳಲ್ಲಿ ಅವಕಾಶವನ್ನು ಕೊಡುವಾಗ ತಾವೆಂದೂ ಜಾತಿ ತಾರತಮ್ಯ ಮಾಡುವುದಿಲ್ಲವೆಂದೂ, ತಮಗೆ ಬೇಕಿರುವುದು ಪ್ರತಿಭೆಯುಳ್ಳವರು ಮಾತ್ರವೆಂದೂ.

ಅದು ಯಾವ ಜಾತಿಗೆ ಸೇರಿದ ಅಭ್ಯರ್ಥಿಯಲ್ಲಿದ್ದರೂ ತಾವು ತಾರತಮ್ಯ ಮಾಡದೆ ಉದ್ಯೋಗ ಕೊಡುವುದಾಗಿಯೂ ಹೇಳಿಕೊಳ್ಳುತ್ತಾರೆ. ಹೀಗಾಗಿಯೇ ಅವರು ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಬಿಲ್‌ಕುಲ್ ಬೇಡವೆಂದೂ ವಿರೋಧಿಸಿದ್ದರು. ಈ ನಮ್ಮ ಖಾಸಗಿ ಕ್ಷೇತ್ರದ ಉದ್ದಿಮೆಪತಿಗಳು – ಅಲ್ಲಿನ ಆಡಳಿತಾತ್ಮಕ ಸ್ಥಾನದಲ್ಲಿರುವ ಸಿಬ್ಬಂದಿ ನಮ್ಮ ದೇಶದ ಮೇಲ್ವರ್ಗದ ಚಿಂತನಾ ಕ್ರಮವನ್ನು ಪ್ರತಿನಿಧಿಸುವುದರಿಂದ ಇವರೂ ನಿಜಕ್ಕೂ ಕೇವಲ ಪ್ರತಿಭೆಗೆ ಮನ್ನಣೆ ನೀಡುತ್ತಾರೋ ಅಥವಾ ಜಾತಿಯನ್ನು ಪರಿಗಣಿಸುತ್ತಾರೋ ಎಂಬುದನ್ನು ಬಯಲಿಗೆಳೆಯಲು ಯುಜಿಸಿ (ವಿಶ್ವವಿದ್ಯಾಲಯ ಧನ ಆಯೋಗ)ಯ ಅಧ್ಯಕ್ಷರಾಗಿದ್ದ ಸುಖದೇವ್ ಥೋರಟ್‌ರವರು ಕೆಲ ವರ್ಷಗಳ ಹಿಂದೆ ಒಂದು ಅಕೆಡೆಮಿಕ್ ಸ್ಟಿಂಗ್ ಆಪರೇಷನ್ ನಡೆಸಿದ್ದರು.

ಅದರ ಸ್ಥೂಲ ತಂತ್ರ ಹೀಗಿತ್ತು. ಹೆಸರಿನಲ್ಲೇ ಬ್ರಾಹ್ಮಣರೆಂದು (ಭಟ್, ಶರ್ಮ, ಪುರೋಹಿತ್, ಕಾಮತ್, ದ್ವಿವೇದಿ, ಚಟರ್ಜಿ ಇತ್ಯಾದಿ), ಹಿಂದುಳಿದ ವರ್ಗದವರೆಂದೂ (ಯಾದವ್, ನಾಯ್ಡು, ಶೆಟ್ಟಿ, ಗೌಡ ಇತ್ಯಾದಿ), ದಲಿತರೆಂದೂ (ಚಮಾರ್, ಹೊಲೆಯರ್, ಇತ್ಯಾದಿ), ಮುಸ್ಲಿಮರೆಂದೂ ಸ್ಪಷ್ಟವಾಗುವ 500 ಸೆಟ್ ಅರ್ಜಿಗಳನ್ನು ಅವರು ತಯಾರಿಸಿದರು. ಅವರೆಲ್ಲರದ್ದೂ ಒಂದೇ ಶಿಕ್ಷಣಾರ್ಹತೆ ಇರುವಂತೆ ಸರ್ಟಿಫಿಕೇಟ್‌ಗಳನ್ನು (ಎಂ.ಟೆಕ್–ಫಸ್ಟ್ ಕ್ಲಾಸ್) ತಯಾರಿಸಲಾಯಿತು. ಇವನ್ನು ಈ ದೇಶದ 500 ಪ್ರಮುಖ ಖಾಸಗಿ ಉದ್ದಿಮೆಪತಿಗಳಿಗೆ ಕಳಿಸುವುದು. ಈ ಉದ್ದಿಮೆಪತಿಗಳು ನಿಜಕ್ಕೂ ಪ್ರತಿಭೆಗೆ ಮಣೆ ಹಾಕುವವರಾಗಿದ್ದರೆ ಅರ್ಜಿ ತೆಗೆದ ತಕ್ಷಣ ಅವರ ಕಣ್ಣಿಗೆ ವಿದ್ಯಾರ್ಹತೆ ಕಾಣಬೇಕು ಮತ್ತು ಎಲ್ಲರಿಗೂ ಸಂದರ್ಶನದ ಕರೆಯೋಲೆ ಕಳಿಸಬೇಕು.

ಹಾಗಿಲ್ಲದೆ ಎಲ್ಲರಿಗೂ ಒಂದೇ ವಿದ್ಯಾರ್ಹತೆ ಇದ್ದರೂ ಎಲ್ಲರಿಗೂ ಅವರು ಸಂದರ್ಶನದ ಕರೆಯೋಲೆ ಕಳಿಸಿಲ್ಲವೆಂದರೆ ಅವರು ಪರಿಗಣಿಸಿರುವುದು ಪ್ರತಿಭೆಯನ್ನಲ್ಲ, ಬದಲಿಗೆ ಜಾತಿಯನ್ನು ಎಂಬುದು ಸ್ಪಷ್ಟಗೊಳ್ಳುತ್ತದೆ. ಹಾಗಿದ್ದಲ್ಲಿ ಎಲ್ಲರಿಗೂ ಸಂದರ್ಶನಕ್ಕೆ ಕರೆ ಬಂತೇ? ಇಲ್ಲ. ಬ್ರಾಹ್ಮಣ ಸೂಚಕ ಹೆಸರಿದ್ದ ಎಲ್ಲರಿಗೂ ಹೆಚ್ಚೂ ಕಡಿಮೆ ಕರೆಯೋಲೆ ಬಂದಿತ್ತು. ಹಿಂದುಳಿದ ವರ್ಗ ಸೂಚಕ ಹೆಸ

ರಿದ್ದ ಶೇ.70 ಜನರಿಗೂ, ದಲಿತ ಸೂಚಕ ಹೆಸರಿದ್ದ ಶೇ.30 ಜನರಿಗೂ, ಮುಸ್ಲಿಂ ಸೂಚಕ ಹೆಸರಿದ್ದ ಶೇ.10 ಜನರಿಗೆ ಮಾತ್ರ ಸಂದರ್ಶನಕ್ಕೆ ಕರೆ ಬಂದಿತ್ತು. ಇದು ಏನನ್ನು ಸೂಚಿಸುತ್ತದೆ? ಯಾರ ಅನರ್ಹತೆಯನ್ನು ಸೂಚಿಸುತ್ತದೆ? ಪ್ರತಿಭೆ ಇದ್ದರೂ ಈ ಸಮಾಜದಲ್ಲಿ ಜಾತಿ ಪೂರ್ವಾಗ್ರಹವೇ ಅವರಿಗೆ ಅವಕಾಶ ನಿರಾಕರಿಸುತ್ತದೆ ಎಂದು ಇದರಿಂದ ಸಾಬೀತಾಗಲಿಲ್ಲವೇ? ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿಯನ್ನು ಶಾಸನಾತ್ಮಕವಾಗಿ ಕಡ್ಡಾಯ ಮಾಡದಿದ್ದರೆ ಪ್ರತಿಭೆ ಇದ್ದರೂ ಈ ದೇಶದ ದಮನಿತ ಸಮುದಾಯಕ್ಕೆ ಸಮಾನಾದ ಅವಕಾಶ ಸಿಗಲು ಸಾಧ್ಯವಿಲ್ಲ ಎಂಬುದು ಈ ಅಕೆಡೆಮಿಕ್ ಸ್ಟಿಂಗ್ ಆಪರೇಷನ್ ಇಂದ ಸಾಬೀತಾಗಿಲ್ಲವೇ? ಮೀಸಲಾತಿ ಬೇಕಿರುವುದು ಇದಕ್ಕೆ!

ಸಮಾನತೆಯಿಲ್ಲದ ಸ್ವಾತಂತ್ರ್ಯ ಮತ್ತು ಸಕಾರಾತ್ಮಕ ತಾರತಮ್ಯ

ಅಲ್ಲದೆ ಅಸಮಾನತೆಯಿರುವ ಸಮಾಜದಲ್ಲಿ ಎಲ್ಲರೂ ಸಮಾನರು ಎಂದು ಬೊಳೆಬೊಳೆಯಾಗಿ ಭಾವಿಸುವುದೇ ಇರುವ ಸಾಮಾಜಿಕ ಅಸಮಾನತೆಯನ್ನು ಮುಂದುವರೆಸುವ ಕ್ರಮವಾಗಿದೆ. ಇದನ್ನು ಅಂಬೇಡ್ಕರ್ ಅತ್ಯಂತ ಸ್ಪಷ್ಟವಾಗಿ ಹೇಳುತ್ತಾರೆ. "ಸಮಾನತೆ ಇಲ್ಲದ ಸಮಾಜದಲ್ಲಿ ಸ್ವಾತಂತ್ರ್ಯ ಉಳ್ಳವರ ಸ್ವಾತಂತ್ರ್ಯವನ್ನು ಮಾತ್ರ ಮುಂದುವರೆಸುತ್ತದೆ" ಎಂಬುದು ಅವರ ಖಚಿತವಾದ ನಿಲುವಾಗಿತ್ತು. ಹೀಗಾಗಿ ಈವರೆಗೆ ಹಿಂದುಳಿಸಲ್ಪಟ್ಟವರನ್ನು ಸಮಾಜದ ಮುಖ್ಯಧಾರೆಗೆ ತರುವ ಸಲುವಾಗಿ ವಿಶೇಷ ಆದ್ಯತಾ ಕ್ರಮಗಳನ್ನು ಸಂವಿಧಾನ "ಸಕಾರಾತ್ಮಕ ತಾರತಮ್ಯ" ಎಂದು ಕರೆಯುತ್ತದೆ. ಇದಿಲ್ಲದೆ ಒಂದು ಸಾಮಾಜಿಕ ಅಸಮಾನತೆಯಿರುವ ದೇಶದಲ್ಲಿ ಸಾಮಾಜಿಕ ನ್ಯಾಯ ಸಾಧ್ಯವೇ ಇಲ್ಲ. ಆದ್ದರಿಂದಲೇ ಅದು ಸಾರಾಂಶದಲ್ಲಿ ತಾರತಮ್ಯವೇ ಅಲ್ಲ. ಇದಿಷ್ಟೂ ಮೀಸಲಾತಿಯ ಹಿಂದಿರುವ ಸಾಮಾಜಿಕ ನ್ಯಾಯದ ತಾತ್ವಿಕ ತಿಳವಳಿಕೆ.

ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವೆಂಬ ಪ್ರಜಾತಾಂತ್ರಿಕ ಮೌಲ್ಯಗಳು ಈ ಇಪ್ಪತ್ತನೇ ಶತಮಾನದಲ್ಲಿ ಸಮಾಜದ ಮೌಲ್ಯಗಳಾಗುವ ಮೊದಲು ಎಲ್ಲಾ ದೇಶಗಳಲ್ಲೂ ಬಹುಸಂಖ್ಯಾತ ಸಮುದಾಯವನ್ನು ಅಲ್ಪಸಂಖ್ಯಾತ ಸಮುದಾಯವು ಜಾತಿ, ವರ್ಣ ಅಥವಾ ಜನಾಂಗೀಯ ಶ್ರೇಷ್ಠತೆಯ ಹೆಸರಲ್ಲಿ ಶೋಷಿಸುತ್ತಲೇ ಬಂದಿದ್ದವು. ಅದು ಈಗಲೂ ಹಲವು ದೇಶಗಳಲಿ ಪ್ರತ್ಯಕ್ಷ ಮತ್ತು ಪರೋಕ್ಷ ರೂಪಗಳಲ್ಲಿ ಮುಂದುವರೆದುಕೊಂಡೇ ಬಂದಿದೆ. ಎಲ್ಲೆಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳಲ್ಲಿ ನಂಬಿಕೆ ಇರುವ ವ್ಯವಸ್ಥೆಗಳು ಅಸ್ಥಿತ್ವಕ್ಕೆ ಬಂದವೋ ಅಲ್ಲೆಲ್ಲಾ ಈ ಚಾರಿತ್ರಿಕವಾಗಿ ಅವಕಾಶವಂಚಿತ ಸಮುದಾಯವನ್ನು ಮುಖ್ಯಧಾರೆಗೆ ತರುವ ಪ್ರಯತ್ನದಲ್ಲಿ ಈ ಬಗೆಯ ವಿಶೇಷ ಆದ್ಯತಾ ನೀತಿಗಳನ್ನು ಜಾರಿಗೆ ತರಲಾಯಿತು.

ಅದನ್ನು ಭಾರತದಲ್ಲಿ ಮೀಸಲಾತಿ ಪದ್ಧತಿ ಎಂದರೆ, ಅಮೆರಿಕದಲ್ಲಿ Affirmative action ಅಂದರೆ ಸಕಾರಾತ್ಮಕ ಕ್ರಿಯಾಶೀಲ ಕ್ರಮಗಳೆಂದು ಕರೆಯುತ್ತಾರೆ. ಯುರೋಪ್ ದೇಶಗಳಲ್ಲಿ ಅದನ್ನೇ Equal opportunity policy ಅಂದರೆ ಸಮಾನ ಅವಕಾಶ ನೀತಿ ಎಂದು ಕರೆಯುತ್ತಾರೆ. ಇನ್ನು ಕೆಲವು ದೇಶಗಳಲ್ಲಿ ಅದನ್ನೇ Positive discrimination –ಸಕಾರಾತ್ಮಕ ತಾರತಮ್ಯ ನೀತಿ ಎಂದೂ ಕರೆಯುತ್ತಾರೆ.

ಈ ಬಗೆಯ ನೀತಿಗಳು ಭಾರತವನ್ನೂ ಒಳಗೊಂಡಂತೆ ಏಷಿಯಾದ ಮಲೇಷಿಯ, ಪಾಕಿಸ್ತಾನ, ಚೀನಾ, ಜಪಾನ್ ಮತ್ತು ಇಂಡೋನೇಷಿಯಾ ದೇಶಗಳಲ್ಲೂ, ಆಫ್ರಿಕಾದ ನೈಜೀರಿಯಾ, ಸೂಡಾನ್, ಹಾಗೂ ದ.ಆಫ್ರಿಕಾದಲ್ಲೂ, ದ.ಅಮೆರಿಕದ ಬ್ರೆಜಿಲ್, ಬೊಲಿವಿಯ, ಮತ್ತು ಪೆರು ದೇಶಗಳಲ್ಲೂ, ಹಾಗೂ ಶ್ರೀಮಂತ ದೇಶಗಳಲ್ಲಿ ಅಮೆರಿಕ,ಇಂಗ್ಲೆಂಡ್, ಐರ್ಲೆಂಡ್, ಮತ್ತು ಯುಗೋಸ್ಲವಿಯ ದೇಶಗಳಲ್ಲು ಜಾರಿಯಲ್ಲಿವೆ. ಇನ್ನೂ ವಿಶೇಷವೆಂದರೆ ಬಹುಪಾಲು ದೇಶಗಳು ಸರ್ಕಾರಿ ಹಾಗೂ ಖಾಸಗಿ ಕ್ಷೇತ್ರಗಳೆರಡರಲ್ಲೂ ಈ ಸಕಾರಾತ್ಮಕ ತಾರತಮ್ಯ ನೀತಿಯನ್ನು ಅನುಸರಿಸುತ್ತವೆ. ಆದರೆ ಭಾರತದಲ್ಲಿ ಮಾತ್ರ ಮೀಸಲು ನೀತಿಯನ್ನು ಖಾಸಗಿ ಕ್ಷೇತ್ರಕ್ಕೆ ಅಳವಡಿಸಬೇಕೋ ಬೇಡವೋ ಎಂಬ ಬಗ್ಗೆ ರಾಷ್ಟ್ರೀಯ ಚರ್ಚೆ ಸಹ ನಡೆಯಲು ಸಾಧ್ಯವಿಲ್ಲವೆಂಬ ಪರಿಸ್ಥಿತಿ ಇದೆ!

ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಡಾ. ಅನುಪಮಾರವರು ಪ್ರಸ್ತಾಪಿಸಿದಂತೆ ನಮ್ಮ ದೇಶದಲ್ಲಿ ಚಾರಿತ್ರಿಕವಾಗಿ ಅವಕಾಶಗಳ ವಂಚನೆಯು ವ್ಯಕ್ತಿ ನೆಲೆಯಲ್ಲಿ ಮಾತ್ರವಲ್ಲದೆ ಒಂದು ಸಮುದಾಯದ, ಅಂದರೆ ಜಾತಿಗಳ ನೆಲೆಯ ಮೇಲೂ ನಡೆದಿದೆ ಎಂಬುದನ್ನು ನಮ್ಮ ಸಂವಿಧಾನ ಒಪ್ಪಿಕೊಳ್ಳುತ್ತದೆ. ಅಂದರೆ ಒಂದು ಜಾತಿಗೆ ಸೇರಿದ್ದ ಕಾರಣಕ್ಕಾಗಿಯೇ ಒಬ್ಬ ವ್ಯಕ್ತಿಗೆ ಈ ದೇಶದಲ್ಲಿ ಅವಕಾಶಗಳ ನಿರಾಕರಣೆಯಾಗಿದೆ ಎಂಬುದು ಇದರರ್ಥ. – ಈ ಸಾಮಾಜಿಕ ತಾರತಮ್ಯ ಜಾತಿ ಆಧಾರದಲ್ಲೇ ನಡೆದಿರುವುದರಿಂದ ಸಾಮಾಜಿಕ ಹಿಂದುಳಿದಿರುವಿಕೆಗೆ ಭಾರತೀಯ ಸಮಾಜದಲ್ಲಿ ಆರ್ಥಿಕ ಪರಿಸ್ಥಿತಿಗಳು ಮಾತ್ರವಲ್ಲದೆ ಆ ವ್ಯಕ್ತಿ ಸೇರುವ ಜಾತಿಯೂ ಕಾರಣವಾಗುತ್ತದೆ.

ಆದ್ದರಿಂದಲೇ ಜಾತಿ ಆಧಾರಿತ ಮೀಸಲಾತಿಯೂ ನ್ಯಾಯ ಸಮ್ಮತ ವೆಂಬುದು ನಮ್ಮ ಸಂವಿಧಾನದ ಆಶಯಗಳ ತಾತ್ಪರ್ಯ. ಅದೇ ರೀತಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳನ್ನು ಹೊರತುಪಡಿಸಿ ಇತರ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಯಾವ ರೀತಿಯ ಕ್ರಮ ತೆಗೆದುಕೊಳ್ಳಬೇಕೆಂಬ ಬಗ್ಗೆಯೂ ಸಂವಿಧಾನದ 340ನೇ ಕಲಮಿನಲ್ಲಿ ಸ್ಪಷ್ಟ ಮಾರ್ಗದರ್ಶನವಿದೆ. ಅದರ ಪ್ರಕಾರ "ಇತರ ಹಿಂದುಳಿದ ವರ್ಗಗಳನ್ನು ಪತ್ತೆ ಹಚ್ಚಿ ಅವರ ಅಭಿವೃದ್ಧಿಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲು ಕೇಂದ್ರ – ರಾಜ್ಯ ಸರ್ಕಾರಗಳು ಕಾಲಕಾಲಕ್ಕೆ ಹಿಂದುಳಿದವರ್ಗಗಳ ಆಯೋಗವನ್ನು ನೇಮಿಸಬಹುದೆಂಬ" ನಿರ್ದೇಶನ ಸಂವಿಧಾನದಲ್ಲಿದೆ.

ಹಿಂದುಳಿದ ಜಾತಿಗಳೇ ಹಿಂದುಳಿದ ವರ್ಗಗಳೇ?

ಆದರೆ ಇತರ ಹಿಂದುಳಿದ ವರ್ಗಗಳು ಯಾವುವು? ಇದನ್ನು ಗುರುತಿಸಲು ಯಾವ ಮಾನದಂಡಗಳನ್ನು ಅನುಸರಿಸಬೇಕು? ಇದರ ಬಗ್ಗೆ ಈಗಾಗಲೇ ನನಗೂ ಮುಂಚೆ ಮಾತಾಡಿದ ರವೀಂದ್ರ ರೇಷ್ಮೆಯವರು ಕೆಲವು ವಿಷಯಗಳನ್ನು ಮಾತನಾಡಿದ್ದಾರೆ. ಈ ದೇಶದಲ್ಲಿ ಜಾತಿ ಹೇಗೆ ಸಾಮಾಜಿಕ ಹಿಂದುಳಿದಿರುವಿಕೆಯನ್ನೂ ಸಹ ನಿರ್ಧರಿಸುತ್ತದೆ ಎಂಬುದನ್ನು ವಿವರಿಸಲು ಅವರು ಹೇಳಿದ ಮಾತುಗಳಿಗೆ ಇನ್ನಷ್ಟು ವಿವರಗಳನ್ನು ಸೇರಿಸುವ ಅಗತ್ಯವಿದೆ.

ಮೊದಲ ಕೇಂದ್ರೀಯ ಹಿಂದುಳಿದ ವರ್ಗಗಳ ಅಯೋಗವನ್ನು ಕಾಕಾ ಕಾಲೇಲ್ಕರ್‌ರವರ ನೇತೃತ್ವದಲ್ಲಿ 1953ರಲ್ಲಿ ನೇಮಿಸಲಾಗಿತ್ತು. ಅದು ಹಿಂದುಳಿದವರು ಯಾರೆಂದು ಪತ್ತೆ ಹಚ್ಚಲು 4 ಮಾನದಂಡಗಳನ್ನು ಹಾಕಿಕೊಂಡಿತ್ತು. 1) ಸಮಾಜದಲ್ಲಿ ಕೀಳಾಗಿ ಕಾಣಲ್ಪಡುವುದು. 2) ಶಿಕ್ಷಣವಿಲ್ಲದಿರುವುದು. 3) ಸಾರ್ವಜನಿಕ ಸೇವೆಗಳಲ್ಲಿ ಸರಿಯಾದ ಪ್ರಾತಿನಿಧ್ಯವಿಲ್ಲದಿರುವುದು 4) ಕೈಗಾರಿಕೆ ಮತ್ತು ಸೇವಾಕ್ಷೇತ್ರಗಳಲ್ಲಿ ಸರಿಯಾದ ಪ್ರಾತಿನಿಧ್ಯವಿಲ್ಲದಿರುವುದು.

ಈ ಎಲ್ಲಾ ಮಾನದಂಡಗಳು ಸಾರಾಂಶದಲ್ಲಿ ಜಾತಿ ಶ್ರೇಣೀಕರಣವನ್ನೆ ಸೂಚಿಸುತ್ತಿದ್ದರಿಂದ ಜಾತಿಯು ಹಿಂದುಳಿದಿರುವಿಕೆಗೆ ಒಂದು ಪ್ರಮುಖ ಮಾನದಂಡವೆಂದು ಕಾಕಾ ಕಾಲೇಲ್ಕರ್ ಸಮಿತಿ ಅಭಿಪ್ರಾಯ ಪಟ್ಟಿತು. ಅದೇ ಆಧಾರದಲ್ಲಿ 2399 ಜಾತಿಗಳನ್ನು ಅಂದರೆ ಭಾರತ ಸಮಾಜದ ಶೇ.32ರಷ್ಟನ್ನು ಹಿಂದುಳಿದ ವರ್ಗಗಳೆಂದು ಗುರುತಿಸಿ ಅವರಿಗೆ ಸರ್ಕಾರಿ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ನೀಡಬೇಕೆಂದು ಸಲಹೆ ಮಾಡಿತು. ಆದರೆ ಆಗಿನ ಬಲಪಂಥೀಯ ಗೃಹಮಂತ್ರಿ ಪಂತ್‌ರವರು ಇದು ಭಾರತೀಯ ಸಮಾಜವನ್ನು ಮತ್ತಷ್ಟು ಛಿದ್ರಗೊಳಿಸುತ್ತದೆಂದು ನೆಪವೊಡ್ಡಿ ವರದಿಯನ್ನು ತಿರಸ್ಕರಿಸಿದರು. ನಂತರ ಕೇಂದ್ರದಲ್ಲಿ ಬಂದ ಮೊದಲ ಕಾಂಗ್ರೆಸ್ಸೇತರ ಸರ್ಕಾರವಾದ ಜನತಾ ಪಕ್ಷದ ಸರ್ಕಾರ ಇತರ ಹಿಂದುಳಿದ ವರ್ಗಗಳನ್ನು ಗುರಿತಿಸಿ ಅವರ ಅಭಿವೃದ್ಧಿಗೆ ಕ್ರಮಗಳನ್ನು ಸೂಚಿಸಲು ಬಿ.ಪಿ.ಮಂಡಲ್‌ರವರ ಅಧ್ಯಕ್ಷತೆಯಲ್ಲಿ 1978ರಲ್ಲಿ ಎರಡನೇ ಹಿಂದುಳಿದ ವರ್ಗಗಳ ಅಯೋಗವನ್ನು ನೇಮಕಮಾಡಿತು.

ಮಂಡಲ್ ಅಯೋಗವು ಸಾಮಾಜಿಕವಾಗಿ ಹಿಂದುಳಿದವರನ್ನು ಗುರುತಿಸಲು ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕವಾದ 11 ಮಾನದಂಡಗಳನ್ನು ನಿಗದಿಪಡಿಸಿತು. ಸಾಮಾಜಿಕವಾಗಿ ಯಾವುದೇ ಜಾತಿ ಅಥವಾ ವರ್ಗಗಳು ಇತರರಿಂದ ಕೀಳಾಗಿ ಕಾಣಿಸಿಕೊಳ್ಳಲ್ಪಡುವುದು, ರಾಜ್ಯದ ಸರಾಸರಿಗಿಂತ ಶೇ.25ರಷ್ಟು ಜನ ಪ್ರಧಾನವಾಗಿ ದೈಹಿಕ ಶ್ರಮದಲ್ಲೇ ತೊಡಗಿರುವುದು, 17ನೇ ವಯಸ್ಸಿನೊಳಗೆ ಮದುವೆಯಾದ ಹೆಣ್ಣು ಮಕ್ಕಳ ಸಂಖ್ಯೆ ರಾಜ್ಯದ ಸರಾಸರಿಗಿಂತ ಶೇ.25ರಷ್ಟು ಹೆಚ್ಚಿರುವುದು, ರಾಜ್ಯದ ಸರಾಸರಿಗಿಂತ ಶೇ.25ರಷ್ಟು ಹೆಚ್ಚು ಹೆಣ್ಣು ಮಕ್ಕಳು ದೈಹಿಕ ಶ್ರಮದಲ್ಲಿ ತೊಡಗಿರುವುದು. ಇವುಗಳನ್ನು ಸಾಮಾಜಿಕ ಹಿಂದುಳಿದಿರುವಿಕೆಗೆ ಮಾನದಂಡಗಳಾಗಿ ಪರಿಗಣಿಸಲಾಯಿತು.

ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವೆಂಬ ಪ್ರಜಾತಾಂತ್ರಿಕ ಮೌಲ್ಯಗಳು ಈ ಇಪ್ಪತ್ತನೇ ಶತಮಾನದಲ್ಲಿ ಸಮಾಜದ ಮೌಲ್ಯಗಳಾಗುವ ಮೊದಲು ಎಲ್ಲಾ ದೇಶಗಳಲ್ಲೂ ಬಹುಸಂಖ್ಯಾತ ಸಮುದಾಯವನ್ನು ಅಲ್ಪಸಂಖ್ಯಾತ ಸಮುದಾಯವು ಜಾತಿ, ವರ್ಣ ಅಥವಾ ಜನಾಂಗೀಯ ಶ್ರೇಷ್ಠತೆಯ ಹೆಸರಲ್ಲಿ ಶೋಷಿಸುತ್ತಲೇ ಬಂದಿದ್ದವು. ಅದು ಈಗಲೂ ಹಲವು ದೇಶಗಳಲಿ ಪ್ರತ್ಯಕ್ಷ ಮತ್ತು ಪರೋಕ್ಷ ರೂಪಗಳಲ್ಲಿ ಮುಂದುವರೆದುಕೊಂಡೇ ಬಂದಿದೆ. ಎಲ್ಲೆಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳಲ್ಲಿ ನಂಬಿಕೆ ಇರುವ ವ್ಯವಸ್ಥೆಗಳು ಅಸ್ಥಿತ್ವಕ್ಕೆ ಬಂದವೋ ಅಲ್ಲೆಲ್ಲಾ ಈ ಚಾರಿತ್ರಿಕವಾಗಿ ಅವಕಾಶವಂಚಿತ ಸಮುದಾಯವನ್ನು ಮುಖ್ಯಧಾರೆಗೆ ತರುವ ಪ್ರಯತ್ನದಲ್ಲಿ ಈ ಬಗೆಯ ವಿಶೇಷ ಆದ್ಯತಾ ನೀತಿಗಳನ್ನು ಜಾರಿಗೆ ತರಲಾಯಿತು.

ಅದೇ ರೀತಿ ಶೈಕ್ಷಣಿಕವಾಗಿ ಯಾವುದೇ ಜಾತಿ ಅಥವಾ ವರ್ಗಗಳ ಮಕ್ಕಳಲ್ಲಿ ರಾಜ್ಯದ ಸರಾಸರಿಗಿಂತ ಶೇ.25ರಷ್ಟು ಹೆಚ್ಚಿನ ಮಕ್ಕಳು ಶಾಲೆಗೆ ಸೇರಿರದಿದ್ದರೆ, ಸರಾಸರಿಗಿಂತ ಶೇ.25ರಷ್ಟು ಹೆಚ್ಚು ಮಕ್ಕಳು ವಿದ್ಯಾಭ್ಯಾಸ ಮಾಡದೆ ಶಾಲೆಯಿಂದ ಹೊರಬೀಳುತ್ತಿದ್ದರೆ, 10ನೇ ತರಗತಿ ಪಾಸು ಮಾಡಿದವರ ಸಂಖ್ಯೆ ರಾಜ್ಯದ ಸರಾಸರಿಗಿಂತ ಶೇ.25ರಷ್ಟು ಕಡಿಮೆ ಇರುವುದನು ಶೈಕ್ಷಣಿಕ ಮಾನದಂಡವನ್ನಾಗಿಯೂ ಪರಿಗಣಿಸಲಾಯಿತು. ಆರ್ಥಿಕವಾಗಿ ಜಾತಿ ಅಥವಾ ವರ್ಗಗಳ ಕುಟುಂಬಗಳ ಆಸ್ತಿ ಪಾಸ್ತಿಗಳು ರಾಜ್ಯದ ಸರಾಸರಿಗಿಂತ ಶೆ.25ರಷ್ಟು ಕಡಿಮೆ ಇರುವುದನ್ನೂ, ರಾಜ್ಯದ ಸರಾಸರಿಗಿಂತ ಶೆ.25ರಷ್ಟು ಹೆಚ್ಚು ಜನ ಕಚ್ಚಾ ಮನೆಗಳಲ್ಲಿ ವಾಸಮಾಡುವುದನ್ನೂ, ಕುಡಿಯುವ ನೀರಿಗಾಗಿ ಶೇ.50ರಷ್ಟು ಕುಟುಂಬಗಳು ಅರ್ಧಕಿ.ಮಿ.ಗಿಂತ ಜಾಸ್ತಿ ದೂರ ಹೋಗಬೇಕಾಗಿರುವುದನ್ನೂ ಮತ್ತು ರಾಜ್ಯದ ಸರಾಸರಿಗಿಂತ ಶೇ.25ರಷ್ಟು ಜನ ಸಾಲಗಾರರಾಗಿರುವುದನ್ನು ಆರ್ಥಿಕ ಮಾನದಂಡವನ್ನಾಗಿ ಸ್ವೀಕರಿಸಿತು. ಮತ್ತು ಭಾರತದ ಸಮಾಜಿಕ ಪರಿಸ್ಥಿತಿಯಲ್ಲಿ ಈ ಎಲ್ಲಾ ಮಾನದಂಡಗಳೂ ಜಾತಿ ಹಿಂದುಳಿದಿರುವಿಕೆಯ ಭಾಗವಾಗಿಯೇ ಇರುವುದನ್ನು ಮನಗಂಡಿತು.

ಇದರ ಆಧಾರದಲ್ಲಿ ಮಂಡಲ್ ಕಮೀಷನ್ನು 3743 ಜಾತಿಗಳನ್ನು ಅಂದರೆ ಭಾರತದ ಶೆ.52ರಷ್ಟು ಜನತೆಯನ್ನು ಹಿಂದುಳಿದ ವರ್ಗಗಳೆಂದೂ ಪರಿಗಣಿಸಿತು. ಅಷ್ಟರಲ್ಲಿ ಭಾರತದ ಸುಪ್ರೀಂ ಕೋರ್ಟು ಒಟ್ಟಾರೆ ಜಾತಿ ಆಧಾರಿತ ಮೀಸಲಾತಿಯ ಪ್ರಮಾಣ ಶೇ. 50ನ್ನು ದಾಟಬಾರದೆಂದು ಆದೇಶ ನೀಡಿದ್ದರಿಂದ ಹಾಗೂ ಪರಿಶಿಷ್ಟಜಾತಿ ಮತ್ತು ಪಂಗಡಗಳಿಗೆ ಸಾಂವಿಧಾನಿಕವಾದ ಶೇ.23ರಷ್ಟು ಮೀಸಲಾತಿ ಈಗಾಗಲೇ ನಿಗದಿಯಾಗಿದ್ದರಿಂದ ಹಿಂದುಳಿದ ವರ್ಗಗಳಿಗೆ, ಸರ್ಕಾರದ ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ಉದ್ಯೋಗಗಳಲ್ಲಿ 50–23=27% ರಷ್ಟು ಮೀಸಲಾತಿಯನ್ನು ಮೀಸಲಿಡಬೇಕೆಂದು ಶಿಫಾರಸ್ಸು ಮಾಡಿತು.

ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳನ್ನು ಗುರುತಿಸಲು 1961ರಲ್ಲಿ ನೇಮಕವಾದ ನಾಗನಗೌಡ ಸಮಿತಿ, 1975ರಲ್ಲಿ ನೇಮಕವಾದ ಹಾವನೂರು ಆಯೋಗ, 1987ರ ವೆಂಕಟಸ್ವಾಮಿ ಆಯೋಗ, 1990ರಲ್ಲಿ ನೇಮಕವಾದ ಚಿನ್ನಪ್ಪರೆಡ್ಡಿ ಆಯೋಗಗಳೆಲ್ಲವೂ ಈ ದೇಶದಲ್ಲಿ "ಸಾಮಾಜಿಕ ಹಿಂದುಳಿದಿರುವಿಕೆ"ಯನ್ನು ಗುರುತಿಸಲು ಜಾತಿಯನ್ನು ಒಂದು ಪ್ರಮುಖ ಮಾನದಂಡವೆಂದು ಪರಿಗಣಿಸಿವೆ. ಹಾಗೆಯೇ 1980ರಲ್ಲಿ ಗುಜರಾತ್‌ನಲ್ಲಿ ನೇಮಕವಾದ ಹಿಂದುಳಿದ ವರ್ಗಗಳ ಸಮಿತಿಯ ವರದಿ, ಆಂಧ್ರದ ಮುರಳಿಧರರಾವ್ ಸಮಿತಿ, ಕೇರಳ ಹಾಗೂ ತಮಿಳುನಾಡುಗಳಲ್ಲಿ ಇದೇ ಸಮಯದಲ್ಲಿ ನೇಮಕವಾದ ಎಲ್ಲಾ ಸಮಿತಿಗಳು "ಸಾಮಾಜಿಕ ಹಿಂದುಳಿದಿರುವಿಕೆಗೆ" ಜಾತಿಯನ್ನು ಒಂದು ಪ್ರಮುಖ ಮಾನದಂಡವೆಂದೇ ಪರಿಗಣಿಸಿವೆ.

ಅದೇ ರೀತಿ ಈ ದೇಶದ ನ್ಯಾಯಾಲಯಗಳು ಸಹ ಜಾತಿಯನ್ನು ಹಿಂದುಳಿದಿರುವಿಕೆಗೆ ಮಾನದಂಡವೆಂದು ಪರಿಗಣಿಸುತ್ತಿವೆ. 1963ರಲ್ಲಿ ಮೈಸೂರು ಸರ್ಕಾರದ ವಿರುದ್ಧ ಬಾಲಾಜಿ ಎಂಬುವರು ಸರ್ಕಾರ ಜಾತಿ ಆಧಾರಿತ ಮೀಸಲಾತಿ ನೀಡಿರುವುದರಿಂದ ತನಗೆ ಅನ್ಯಾಯವಾಗಿದೆಯೆಂದು ಕೋರ್ಟಿನ ಮೆಟ್ಟಿಲನ್ನು ಹತ್ತಿದರು. ಈ ಪ್ರಕರಣದಲ್ಲಿ ಸುಪ್ರೀಮ್ ಕೋರ್ಟು 1963ರಲ್ಲಿ ಒಂದು ಆದೇಶ ನೀಡಿ ಹಿಂದುಳಿದಿರುವಿಕೆಗೆ ಜಾತಿಯನ್ನು ಮಾನದಂಡವಾಗಿ

> **ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳನ್ನು ಗುರುತಿಸಲು 1961ರಲ್ಲಿ ನೇಮಕವಾದ ನಾಗನಗೌಡ ಸಮಿತಿ, 1975ರಲ್ಲಿ ನೇಮಕವಾದ ಹಾವನೂರು ಆಯೋಗ, 1987ರ ವೆಂಕಟಸ್ವಾಮಿ ಆಯೋಗ, 1990ರಲ್ಲಿ ನೇಮಕವಾದ ಚಿನ್ನಪ್ಪರೆಡ್ಡಿ ಆಯೋಗಗಳೆಲ್ಲವೂ ಈ ದೇಶದಲ್ಲಿ "ಸಾಮಾಜಿಕ ಹಿಂದುಳಿದಿರುವಿಕೆ"ಯನ್ನು ಗುರುತಿಸಲು ಜಾತಿಯನ್ನು ಒಂದು ಪ್ರಮುಖ ಮಾನದಂಡವೆಂದು ಪರಿಗಣಿಸಿವೆ. ಹಾಗೆಯೇ 1980ರಲ್ಲಿ ಗುಜರಾತ್‌ನಲ್ಲಿ ನೇಮಕವಾದ ಹಿಂದುಳಿದ ವರ್ಗಗಳ ಸಮಿತಿಯ ವರದಿ, ಆಂಧ್ರದ ಮುರಳಿಧರರಾವ್ ಸಮಿತಿ, ಕೇರಳ ಹಾಗೂ ತಮಿಳುನಾಡುಗಳಲ್ಲಿ ಇದೇ ಸಮಯದಲ್ಲಿ ನೇಮಕವಾದ ಎಲ್ಲಾ ಸಮಿತಿಗಳು "ಸಾಮಾಜಿಕ ಹಿಂದುಳಿದಿರುವಿಕೆಗೆ" ಜಾತಿಯನ್ನು ಒಂದು ಪ್ರಮುಖ ಮಾನದಂಡವೆಂದೇ ಪರಿಗಣಿಸಿವೆ.**

ಬಳಸುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿತು. ಆದರೆ ಕ್ರಮೇಣವಾಗಿ ಭಾರತದಲ್ಲಿ ಬದಲಾಗುತಾ ಬಂದ ಸಾಮಾಜಿಕ ತಿಳುವಳಿಕೆಯ ಭಾಗವಾಗಿ 1992ರಲ್ಲಿ ಸುಪ್ರೀಂ ಕೋರ್ಟಿನ ಸಾಂವಿಧಾನಿಕ ಬೆಂಚೊಂದು "ಭಾರತದಲ್ಲಿ ಜಾತಿಯೆಂಬುದು ಒಂದು ಸಾಮಾಜಿಕ ವರ್ಗವಾಗಿದೆ" ಎಂದು ನಿಶ್ಚಿತ ತೀರ್ಮಾನ ನೀಡಿದೆ.

ಹೀಗೆ ಭಾರತ ಸಮಾಜದಲ್ಲಿ ಸಾಮಾಜಿಕ ಹಿಂದುಳಿದಿರುವಿಕೆಯನ್ನು ನಿಗದಿಪಡಿಸಲು ಜಾತಿ ಎಂಬುದು ಒಂದು ಪ್ರಮುಖ ಮಾನದಂಡವಾಗಿರುವುದು ಸಂವಿಧಾನ ಬದ್ಧವೂ, ನ್ಯಾಯಬದ್ಧವೂ ಆಗಿದೆ.

ಆದ್ದರಿಂದ ಇಲ್ಲಿಯ ತನಕ ನಡೆದ ಚರ್ಚೆಗಳಲ್ಲಿ ಎರಡು ವಿಷಯಗಳು ಸ್ಪಷ್ಟ. ಈ ದೇಶದಲ್ಲಿ ಆರ್ಥಿಕ ಶೋಷಣೆಯ ಜೊತೆಜೊತೆಗೆ ಸಾಮಾಜಿಕ ದಮನವೂ ನಡೆದಿದೆ. ಈ ಸಾಮಾಜಿಕ ದಮನವು ಜಾತಿ ಸ್ವರೂಪದಲ್ಲಿದ್ದು ಬಡತನವೆಂಬ ವ್ಯಕ್ತಿ ನೆಲೆಯ ಶೋಷಣೆಯ ಜೊತೆಜೊತೆಗೆ ಜಾತಿ ನೆಲೆಯಲ್ಲಿ ಸಾಮಾಜಿಕ ದಮನಕ್ಕೂ ಕಾರಣವಾಗಿದೆ. ಹೀಗಾಗಿಯೇ ಬಡತನ ನಿರ್ಮೂಲನೆಗಾಗಿ ತೆಗೆದುಕೊಳ್ಳುವ ಸಾರ್ವತ್ರಿಕ ಕ್ರಮಗಳಷ್ಟೇ ಈ ಸಾಮಾಜಿಕ ಪದರುಗಳನ್ನು ಮುರಿಯಲು ಸಾಧ್ಯವಿಲ್ಲ. ಮತ್ತು ಕೇವಲ ಇಂಥಾ ಸಾರ್ವತ್ರಿಕ ಕ್ರಮಗಳಿಂದಲೇ ಜಾತಿ ಪದರುಗಳನ್ನು ದಾಟಿ ಅಗತ್ಯವಿರುವ ಎಲ್ಲಾ ಶೋಷಿತ–ದಮನಿತರಿಗೆ ಅವಕಾಶಗಳನ್ನು ಮತ್ತು ಸವಲತ್ತುಗಳನ್ನು ದಾಟಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದಲೇ ಸಂವಿಧಾನದಲ್ಲಿ ಕೇವಲ ಬಡತನ ನಿರ್ಮೂಲನೆಯ ಬಗ್ಗೆ ಮಾತ್ರವಲ್ಲದೆ "ಸಾಮಾಜಿಕ ಹಿಂದುಳಿದಿರುವಿಕೆ"ಯನ್ನು ನಿರ್ಮೂಲನೆ ಮಾಡಲು ವಿಶೇಷ ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬ ನಿರ್ದೇಶನವಿದೆ. ಹಿಂದುಳಿದಿರುವಿಕೆಗೆ ಜಾತಿ ಪ್ರಮುಖ ಮಾನದಂಡವಾಗಿದೆ.

ಜಾತಿ ಹಿಂದುಳಿದಿರುವಿಕೆಯ ಮೌಲ್ಯಮಾಪನಕ್ಕೆ ಜಾತಿ ಜನಗಣತಿ

ಹೀಗಾಗಿ ಜಾತಿ ಆಧಾರಿತ ಮೀಸಲಾತಿ ಅಗತ್ಯವೂ ಅನಿವಾರ್ಯವೂ ಆಗಿದೆ. ಆದರೆ ಸಮಾಜ ಚಲನೆಯಲ್ಲೂ ಇದೆ. ಜಾತಿಯನ್ನು ಭಾರತೀಯ ಸಮಾಜದ ವಾಸ್ತವವೆಂದು ಪರಿಗಣಿಸಲು ಈ ದೇಶದ ಕಮ್ಯುನಿಸ್ಟರು ನಿರಾಕರಿಸಿದಂತೆ ಈ ದೇಶದಲ್ಲಿ ಜಾತಿಗಳ ನಡುವೆ ಚಲನೆ ವಿರಳವಾಗಿದ್ದರೂ ಜಾತಿಯ ಒಳಗೆ ಚಲನೆ ಇದೆಯೆಂಬುದನ್ನು ಅರ್ಥಮಾಡಿಕೊಳ್ಳಲು ಇತರ ಪ್ರಗತಿಪರರು ನಿರಾಕರಿಸುತ್ತಾ ದೊಡ್ಡ ತಪ್ಪು ಮಾಡುತ್ತಿದ್ದಾರೆ. ಈಗ ಹೊಸದಾಗಿ ವರ್ಗಗಳು ಹುಟ್ಟಿಕೊಳ್ಳದಿದ್ದರೂ ಕಳೆದ 63 ವರ್ಷಗಳಲ್ಲಿ ಭಾರತದ ಪ್ರಭುತ್ವ ಅನುಸರಿಸಿರುವ ಆರ್ಥಿಕ ನೀತಿಗಳು ಭಾರತ ಸಮಾಜದ ರಚನೆಯ ಮೇಲೆ ಮತ್ತು ಜಾತಿಜಾತಿಗಳ ಸಮೀಕರಣ – ಚಲನೆಯ ಮೇಲೆ ವಿಶೇಷ ಪ್ರಭಾವವನ್ನು ಬೀರಿವೆ ಎಂಬುದನ್ನು ಸಹ ಅವರು ನಿರಾಕರಿಸುತ್ತಾರೆ.

ಆ ಮೂಲಕ ಕೆಲವು ಜಾತಿಗಳು ಒಂದು ಘಟಕವಾಗಿ ಸಾಮಾಜಿಕವಾಗಿ ಮೇಲೂ–ಕೆಳಗೂ ಚಲಿಸುತ್ತಿರುವುದನ್ನು ನಿರಕರಿಸಿ ಇಂದಿನ ಜಾತಿ ವಿನಾಶಕ್ಕೆ ಸೂಕ್ತವಾದ ಕಾರ್ಯಯೋಜನೆಯನ್ನು ರೂಪಿಸುವಲ್ಲಿ ವಿಫಲರಾಗುತ್ತಿದ್ದಾರೆ. ಇಂದು ಹೆಚ್ಚೂಕಡಿಮೆ ಎಲ್ಲಾ ಜಾತಿಗಳಲ್ಲೂ ವರ್ಗಗಳು ಹುಟ್ಟಿಕೊಂಡಿವೆ. ಹೀಗಾಗಿ ಜಾತಿಗಳ "ಸಾಮಾಜಿಕ ಹಿಂದುಳಿದಿರುವಿಕೆ"ಯು ಶಾಶ್ವತ ಸ್ವರೂಪಿಯಾದದ್ದೇನೂ ಆಗಿಲ್ಲ. ಅದಕ್ಕೆ ಹೊಸಹೊಸ ಸೇರ್ಪಡೆಗಳೂ, ವ್ಯವಕಲನಗಳೂ, ಹೊಸ ಪ್ರಭೇಧಗಳ ಸೃಷ್ಟಿಗಳೂ ಆಗಬೇಕಾಗುತ್ತದೆ. ಹೀಗಾಗಿಯೇ ಕಾಲಕಾಲಕ್ಕೆ ಹಿಂದುಳಿದ ಜಾತಿಗಳ ಹಿಂದುಳಿದಿರುವಿಕೆಯನ್ನು ಸಮೀಕ್ಷಿಸಿ ಹೊಸ ಪಟ್ಟಿಯನ್ನು ತಯಾರಿಸುವುದು ಅತ್ಯಗತ್ಯ. ಆದ್ದರಿಂದಲೇ ಜಾತಿ ಜನಗಣತಿಯೂ ಅತ್ಯಗತ್ಯ.

ಇಷ್ಟಾಗಿ ಜಾತಿ ಜನಗಣತಿಯಿಂದ ಆಗುವ ನಷ್ಟವಾದರೂ ಏನು? ಜನಗಣತಿನಡೆಯುವ ಫಾರಂನಲ್ಲಿ ಜಾತಿಯೆಂಬ ಇನ್ನೊಂದು ಕಾಲಂ ಸೇರಿಸುತ್ತಾರಷ್ಟೆ. ಇದರಿಂದ ಆಕಾಶವೇ ಕಳಚಿ ಬೀಳುತ್ತದೆ ಎಂಬಂತೆ ಕೆಲವರು ವಾದಿಸುತ್ತಿದ್ದಾರೆ. ಜಾತಿ ಜನಗಣತಿಯ ಅಗತ್ಯದ ತರ್ಕ ಇಷ್ಟು ಸರಳವಾಗಿದ್ದರೂ ಜಾತಿ ಜನಗಣತಿಯನ್ನು ವಿರೋಧಿಸಲು ಚಿತ್ರವಿಚಿತ್ರವಾದ ತರ್ಕಗಳನ್ನು ಮುಂದಿಡುತ್ತಿದ್ದಾರೆ.

ಜಾತಿ ಜನಗಣತಿಯನ್ನು ವಿರೋಧಿಸುವ ಪಿಳ್ಳೆನೆಪಗಳು:

ಅದರಲ್ಲಿ ಮೊದಲನೆಯದು ಜಾತಿ ಜನಗಣತಿಯಿಂದ ಸಮಾಜದಲ್ಲಿ ಜಾತಿಯತೆ ಹೆಚ್ಚುತ್ತದೆ. ಇದಕ್ಕೆ ಈಗಾಗಲೇ ದ್ವಾರಕಾನಾಥ್‌ರವರು ಉತ್ತರ ಕೊಟ್ಟಿದ್ದಾರೆ. ಸ್ವಾತಂತ್ರ್ಯ ಬಂದಾಗಿನಿಂದಲೂ ಈ ದೇಶದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜಾತಿ ಜನಗಣತಿ ನಡೆಯುತ್ತಿದೆ. ಈ ಜನ ಗಣತಿ ಮಾಡಿದ ಮಾತ್ರಕ್ಕೆ ಸಮಾಜದಲ್ಲಿ ಅವರ ಬಗ್ಗೆ ವಿಶೇಷ ಪ್ರೀತಿಯಾಗಲೀ, ದ್ವೇಷವಾಗಲೀ ಹೆಚ್ಚಾಗಿಲ್ಲ. ಅಲ್ಲದೇ 1871ರಿಂದ 1931ರವರೆಗೆ ಈ ದೇಶದಲ್ಲಿ ಜಾತಿ ಜನಗಣತಿ ಮಾಡಲಾಗುತ್ತಿತ್ತು. ಇದರಿಂದಲೂ ಈ ದೇಶದಲ್ಲಿ ಜಾತೀಯತೆ ಹೆಚ್ಚಾದ ಯಾವ ಪುರಾವೆಯೂ ಇಲ್ಲ. ಅದೇ ರೀತಿ ಈ ದೇಶದಲ್ಲಿ ಧರ್ಮಾಧಾರಿತ ಜನಗಣತಿಯಂತೂ ನಡೆಯುತ್ತಲೇ ಇದೆ. ಈ ದೇಶದಲ್ಲಿ ಧಾರ್ಮಿಕ ಭಾವನೆಗಳು, ಪೂರ್ವಗ್ರಹಗಳು –

ಜಾತಿ ಜನಗಣತಿ ಮಾಡಲು ಜನಗಣತಿ ಮಾಡುವವರ ಸಾಮರ್ಥ್ಯ ಸಾಲದು ಎಂಬ ವಾದ. ಕಳ್ಳನಿಗೊಂದು ಪಿಳ್ಳೆ ನೆವ ಎಂಬಂತಿದೆ ಈ ವಾದ. ಸಾರ್ವತ್ರಿಕ ಜನಗಣತಿಯಲ್ಲಿ ಅಂದಾಜು 25ಲಕ್ಷ ಪ್ರಾಥಮಿಕ ಶಾಲಾ ಶಿಕ್ಷಕರು ಮತ್ತು ಇತರರು ಭಾಗವಹಿಸುತ್ತಾರೆ. ಯಾವಜಾತಿ ಹಿಂದುಳಿದಿದದ್ದು - ಯಾವುದು ಅಲ್ಲ ಎಂಬ ನಿರ್ಧಾರಕ್ಕೆ ಬರಲು ಇವರಿಗೆ ಕಷ್ಟವೇ.

ಮೌಢ್ಯಗಳು ಹೆಚ್ಚಾಗಲೂ ಅಥವಾ ಕಡಿಮೆಯಾಗಲೂ ಜನಗಣತಿಯಲ್ಲಿ ಧರ್ಮದ ಕಾಲಂ ಸೇರಿಸಿದ್ದು ಕಾರಣವಲ್ಲವೇ ಅಲ್ಲ. ಬದಲಿಗೆ ಆಯಾ ಧರ್ಮದವರ ಸಂಖ್ಯೆ – ಜೀವನ ಪರಿಸ್ಥಿತಿಯನ್ನು ದಾಖಲು ಮಾಡಿದ್ದರಿಂದ ವಾಸ್ತವದಲ್ಲಿ ಯಾವ ಧರ್ಮೀಯರೂ ತುಷ್ಟೀಕರಣಗೊಂಡಿಲ್ಲವೆಂಬುದನ್ನು ಸಾಬೀತು ಮಾಡಲು ಸಾಧ್ಯವಾಗಿದೆ. ಸಾಚಾರ್ ಸಮಿತಿ ವರದಿಯೇ ಅದಕ್ಕೊಂದು ಸಾಕ್ಷಿ.

ಎರಡನೆಯದಾಗಿ ಜಾತಿ ಜನಗಣತಿ ಮಾಡಲು ಜನಗಣತಿ ಮಾಡುವವರ ಸಾಮರ್ಥ್ಯ ಸಾಲದು ಎಂಬ ವಾದ. ಕಳ್ಳನಿಗೊಂದು ಪಿಳ್ಳೆ ನೆವ ಎಂಬಂತಿದೆ ಈ ವಾದ. ಸಾರ್ವತ್ರಿಕ ಜನಗಣತಿಯಲ್ಲಿ ಅಂದಾಜು 25 ಲಕ್ಷ ಪ್ರಾಥಮಿಕ ಶಾಲಾ ಶಿಕ್ಷಕರು ಮತ್ತು ಇತರರು ಭಾಗವಹಿಸುತ್ತಾರೆ. ಯಾವ ಜಾತಿ ಹಿಂದುಳಿದಿದದ್ದು – ಯಾವುದು ಅಲ್ಲ ಎಂಬ ನಿರ್ಧಾರಕ್ಕೆ ಬರಲು ಇವರಿಗೆ ಕಷ್ಟವೇ. ಆದರೆ ಜನಗಣತಿ ನಡೆಸುವಾಗಲೇ ಹಿಂದುಳಿದ ಜಾತಿಗಳ ವರ್ಗೀಕರಣದ ಜವಾಬ್ದಾರಿಯನ್ನು ಅವರಿಗೆ ಕೊಡುವ ಅಗತ್ಯವೇ ಇಲ್ಲ. ಜನರು ಹೇಳಿದ ಜಾತಿಯನ್ನು ಗಣತಿ ಮಾಡುವವರು ಬರೆದುಕೊಂಡು ಬರಲಿ. ನಂತರ ವೈಜ್ಞಾನಿಕ ಮಾನದಂಡಗಳನ್ನು ಬಳಸಿ ಸರ್ಕಾರ ಹಿಂದುಳಿದ ಜಾತಿಗಳ ಯಾದಿಯನ್ನು ತಯಾರಿಸಿದರಾಯಿತು. ಅಂದರೆ ಹಿಂದುಳಿದ ಮಾತ್ರವಲ್ಲ, ಸರ್ವ ಜಾತಿಗಳ ಜನಗಣತಿ ನಡೆಯಲಿ. ಆ ಮೂಲಕ ಬಹಳ ಸುಲಭವಾಗಿ ಈ ಸಮಸ್ಯೆಯನ್ನು ತೀರಿಸಿಕೊಳ್ಳಬಹುದು. – ಎಲ್ಲಾ ಜಾತಿಗಳ ಗಣತಿನಡೆಸುವ ಮೂಲಕ ಈ ದೇಶದ ವಾಸ್ತವ ಚಿತ್ರಣವೂ ದೊರೆತೀತು.

ಮೂರನೆಯ ಹುನ್ನಾರ. ಜಾತಿ ಜನಗಣತಿ ಮಾಡುತ್ತೇವೆ. ಆದರೆ 2011ರ ಫೆಬ್ರವರಿಯಲ್ಲಿ ನಡೆಯುವ ಸಾರ್ವತ್ರಿಕ ಜನಗಣತಿಯ ಜೊತೆಗಲ್ಲ. 2011ರ ಜೂನ್‌ನಲ್ಲಿ ನಡೆಯುವ ಯೂನಿಕ್ ಐಡೆಂಟಿಟಿ ಕಾರ್ಡ್‌ಗಾಗಿ ನಡೆಯುವ ಸಮೀಕ್ಷೆಯ ಜೊತೆಜೊತೆಗೆ ಮಾಡುತ್ತೇವೆ ಎಂಬುದು. ಇದೊಂದು ಹುನ್ನಾರವೇ. ಏಕೆಂದರೆ ಜೂನ್‌ನಲ್ಲಿ ಕಾರ್ಡ್‌ಗಾಗಿ ನಡೆಯುವುದು ತಲೆಲೆಕ್ಕ. ಆದರೆ ಸಾರ್ವತ್ರಿಕ ಜನಗಣತಿಯಲ್ಲಿ ಪ್ರತಿಕುಟುಂಬದ ಆರ್ಥಿಕ-ಸಾಮಾಜಿಕ ಸ್ಥಿತಿಗತಿಯ ಇಂಡೀಕೇಟರ್‌ಗಳೂ ಸಿಗುತ್ತವೆ. ಅದರ ಮೂಲಕ ಮಾತ್ರ ನಿಜಕ್ಕೂ ಹಿಂದುಳಿದವರ ಯಾದಿ ತಯಾರಿಸಲು ಸಾಧ್ಯವಾಗುತ್ತದೆ. ಈಗ ಸಾರ್ವತ್ರಿಕ ಜನಗಣತಿಗಾಗಿ ಫಾರ್ಮ್‌ಗಳೆಲ್ಲಾ ಅಚ್ಚಾಗಿಬಿಟ್ಟಿವೆ. ಈಗ ಜಾತಿ ಕಾಲಂ ಸೇರಿಸಿ ಹೊಸದಾಗಿ ಅಚ್ಚು ಮಾಡಲು ಕಷ್ಟ ಎಂಬುದು ಇನ್ನೊಂದು ಅತಿ ಸಣ್ಣ ಕುತರ್ಕ.

ಎಲ್ಲಕ್ಕಿಂತ ಹೆಚ್ಚಾಗಿ ಭಾರತ ಸರ್ವೋಚ್ಛ ನ್ಯಾಯಾಲಯವು ಉನ್ನತ ಶಿಕ್ಷಣದಲ್ಲಿ. ಹಿಂದುಳಿದವರಿಗೆ ನಿಗದಿ ಮಾಡಲಾದ ಕೋಟಾದ ಹಿಂದಿನ ಮಾನದಂಡವನ್ನು ಪ್ರಶ್ನಿಸಿದೆ. ಹಿಂದುಳಿದವರ ಪ್ರಮಾಣವನ್ನು ನಿಗದಿ ಮಾಡಲು 1931ರ ಜಾತಿ ಜನಗಣತಿಯ ಅಂಕಿಅಂಶಗಳನ್ನು ಬಳಸಿಕೊಂಡು ಅದನ್ನು ಈ ಕಾಲಕ್ಕೆ ಪ್ರೊಜೆಕ್ಟ್ ಮಾಡಿ ತೀರ್ಮಾನಕ್ಕೆ ಬರುವುದು ಅಸಮಂಜಸವೆಂದು ಹೇಳಿದೆ. ಹಿಂದುಳಿದವರ ಜನಗಣತಿಯನ್ನೇ ನಡೆಸದೆ ಹೇಗೆ ಕೋಟಾ ನಿಗದಿ ಮಾಡುತ್ತೀರಿ ಎಂದು ಪ್ರಶ್ನಿಸಿದೆ. ಈ ಆಧಾರದಲ್ಲಿ ಸರಿಯಾದ ಕೋಟಾವನ್ನು ನಿಗದಿ ಮಾಡದೆ ಉನ್ನತ ಶಿಕ್ಷಣದಲ್ಲಿ ಹಿಂದುಳಿದವರಿಗೆ ಮೀಸಲಾತಿ ನೀಡಲು ಬರುವುದಿಲ್ಲವೆಂದೂ ಹೇಳಿದೆ. ಹೀಗಾಗಿ ಈ ನ್ಯಾಯಾಂಗದ ಅಗತ್ಯವೂ ಸಹ ಜಾತಿ ಜನಗಣತಿಯ ತುರ್ತನ್ನು ನಿರ್ಮಿಸಿದೆ. ವೈಜ್ಞಾನಿಕ ಜನಗಣತಿಯ ಆಧಾರದಿಂದ ಪಡೆಯುವ ಪುರಾವೆಗಳ ಮೂಲಕ ಸರ್ಕಾರಗಳು ಸರಿಯಾದ ಸಾಕ್ಷಿ-ಪುರಾವೆಯಾಧಾರಿತ ನೀತಿಗಳನ್ನು ರೂಪಿಸಲು ಸಾಧ್ಯವಾಗುತ್ತದೆ.

ಹೀಗೆ ಜಾತಿ ಜನಗಣತಿ ಸಾಮಾಜಿಕ ನ್ಯಾಯದ ಪರಿಣಾಮಕಾರಿ ಅನುಷ್ಠಾನಕ್ಕೆ ಅತ್ಯಗತ್ಯ. ಇದನ್ನು ವಿರೋಧಿಸುವವರು ಸಾರಾಂಶದಲ್ಲಿ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನೇ ವಿರೋಧಿಸುತ್ತಿರುತ್ತಾರೆ.

ಜಾಗತಿಕರಣದ ಕಾಲಘಟ್ಟದಲ್ಲಿ ಮೀಸಲಾತಿ ಒಂದು "ವಿಮೋಚನೆಯ ಅಸ್ತ್ರವೇ"?

ಈಗ ನನ್ನ ಭಾಷಣದ ಮತ್ತೊಂದು ಪ್ರಮುಖ ಅಂಶಕ್ಕೆ ಬರಬೇಕಾಗಿದೆ. ಹೇಗೋ ಜಾತಿ ಜನಗಣತಿ ಯಾಗುತ್ತದೆ. ಹಿಂದುಳಿದ ವರ್ಗಗಳ ವೈಜ್ಞಾನಿಕಯಾದಿಯೂ ತಯಾರಾಗುತ್ತದೆ ಎಂದೇ ಇಟ್ಟುಕೊಳ್ಳೋಣ. ದ್ವಾರಕಾನಾಥ್‌ರವರು ತಮ್ಮ ಅವಧಿಯಲ್ಲಿ ಪಟ್ಟ ಪರಿಶ್ರಮದಿಂದಾಗಿ ಈವರೆಗೆ ಗುರುತೇ ಕಳೆದುಕೊಂಡಿದ್ದ ಜಾತಿಗಳು, ಸಮುದಾಯಗಳೂ ಪಟ್ಟಿಯಲ್ಲಿ ಸ್ಥಾನ ಪಡೆದುಕೊಳ್ಳುತ್ತವೆಂದೇ ಆಶಿಸೋಣ..ಆದರೆ..ಆದರೆ..ಈ ಪಟ್ಟಿಯಲ್ಲಿ ಲಿಸ್ಟಾಗುವುದರಿಂದ ಅವರ ಬದುಕಿನಲ್ಲಿ ಘೋಷಿಸಲಾಗಿರುವಷ್ಟು ಬದಲಾವಣೆ ತರಲು ಮೀಸಲಾತಿ ಎಂಬ ನೀತಿಗೆ, ಹಿಂದುಳಿದ ವರ್ಗಗಳ ಅಯೋಗಕ್ಕೆ ಸಾಧ್ಯವಾಗುತ್ತದೆಯೇ? ಜಾತಿ ಜನಗಣತಿಯಾಧಾರದಲ್ಲಿ ನೀಡಲಾಗುವ ವೈಜ್ಞಾನಿಕ ಮೀಸಲಾತಿಗೆ ಇಂದಿನ ಜಾಗತೀಕರಣದ ಕಾಲಘಟ್ಟದಲ್ಲಿ ನಿಜಕ್ಕೂ ಹಿಂದುಳಿದವರಿಗೆ ಅವಕಾಶ, ಅಧಿಕಾರ, ಶಿಕ್ಷಣ ಮತ್ತು ಉದ್ಯೋಗಗಳನ್ನು ನೀಡುವ ಸಾಮರ್ಥ್ಯವಿದೆಯೇ? ಜಾತಿಯಾಧಾರಿತ ಮೀಸಲಾತಿ ಜಾತಿ ವಿನಾಶವನ್ನಿರಲಿ ಜಾತಿಗಳ ನಡುವೆ ಸಮಾನತೆಯನ್ನಾದರೂ ತರುವ ಸಾಮರ್ಥ್ಯ ಹೊಂದಿದೆಯೇ? ಹಾಗೂ ಇವೆಲ್ಲಾ ಇಂದು ನಮ್ಮನ್ನು ಜಾತಿ ವಿನಾಶದ ಕಡೆಗೆ ನಮ್ಮನ್ನು ಕೊಂಡೊಯ್ಯಬಲ್ಲವೇ?

ಜಾತಿ ಜನಗಣತಿಯನ್ನು ಮತ್ತು ಅದರಿಂದಾಗಿ ರೂಪಿಸಬಹುದಾದ ವೈಜ್ಞಾನಿಕ ಮೀಸಲಾತಿ ನೀತಿಯನ್ನು ಸಮರ್ಥಿಸುತ್ತಲೇ ಈ ಎಲ್ಲಾ ಪ್ರಶ್ನೆಗಳನ್ನು ಎತ್ತುವ ಸಂದರ್ಭ ಇಂದು ಎದುರಾಗಿದೆ. ಜಾಗತೀಕರಣ ಸಾಮಾಜಿಕ ನ್ಯಾಯದ ನೀತಿಗೆ ಎಂಥಾ ಸಂದರ್ಭವನ್ನು ತಂದೊಡ್ಡಿಯಿದೆಯೆಂದರೆ ಈಗಲೂ ಮೀಸಲಾತಿಯನ್ನು ಪಡೆದುಕೊಳ್ಳುವುದಕ್ಕೆ ಮಾತ್ರ ಸೀಮಿತಗೊಂಡು ಮೇಲಿನ ಪ್ರಶ್ನೆಗಳನ್ನು ಕೇಳದಿರುವುದೂ ಸಹ ಸಾಮಾಜಿಕ ನ್ಯಾಯಕ್ಕೆ ಮತ್ತು ಹಿಂದುಳಿದ ಜನಾಂಗಕ್ಕೆ ಕೆಡುಕನ್ನೇ ಉಂಟುಮಾಡುತ್ತದೆ. ಹೀಗಾಗಿ ಹಿಂದುಳಿದವರ ಸಂಕ್ಷೇಮಕ್ಕೆ ಬದ್ಧರಾಗಿರುವವರು, ಸಾಮಾಜಿಕ ನ್ಯಾಯದಲ್ಲಿ ನಂಬಿಕೆಯಿಟ್ಟಿರುವವರು ಈಗಲಾದರೂ ಈ ಪ್ರಶ್ನೆಗಳನ್ನು ಕೇಳಿಕೊಳ್ಳಲೇಬೇಕಾಗಿದೆ.

ಸಂಪತ್ತಿನ ಹಂಚಿಕೆಯಲ್ಲಿ ಮೀಸಲಾತಿಯಿಲ್ಲ

ಮೀಸಲಾತಿಯ ಮೂಲ ಆಶಯದಲ್ಲಿ ಈ ದೇಶದಲ್ಲಿ ಜಾತಿಕಾರಣಕ್ಕೆ ವಂಚಿಸಲ್ಪಟ್ಟ ಸಮುದಾಯಕ್ಕೆ ಸಾಮಾಜಿಕ ನ್ಯಾಯ ಒದಗಿಸುವ ಆಶಯವನ್ನು ಹೊಂದಿತ್ತು. ಮತ್ತು ಈ ದೇಶದ ಅಧಿಕಾರ ವಲಯದಲಿ ಅದರಲ್ಲೂ ವಿಶೇಷವಾಗಿ ಕಾರ್ಯಾಂಗ ಮತ್ತು ನ್ಯಾಯಾಂಗದ ಕೆಳಹಂತದಲ್ಲಾದರೂ ಈ ಸಮಾಜದ ಎಲ್ಲಾ ಸಮುದಾಯಗಳ ಪ್ರಾತಿನಿಧ್ಯವನ್ನು ಖಾತರಿ ಮಾಡಿಕೊಂಡು ಈ ದೇಶದ ಆಡಳಿತಾಂಗವನ್ನು ಪ್ರಜಾತಂತ್ರೀಕರಿಸುವುದೂ ಸಹ ಮೀಸಲಾತಿಯ ಹಿಂದಿನ ಸಾಮಾಜಿಕ ಕಲ್ಪನೆಯ ಭಾಗವಾಗಿತ್ತು.

ಇದು ಅತ್ಯಂತ ಪ್ರಗತಿಪರ ನೀತಿಯೇ ಆಗಿದ್ದರೂ ಇದರಲ್ಲಿ ಅಂತರ್ಗತ ಮಿತಿಯಿತ್ತು. ಸಾಮಾಜಿಕ ನ್ಯಾಯದ ಸೂತ್ರದಲ್ಲಿ ಈ ದೇಶದ ಸಂಪತ್ತನ್ನೂ ಸಹಾ ಸಮಾನವಾಗಿ ಹಂಚಿಕೆಮಾಡುವ ಸೂತ್ರಗಳನ್ನು ಅದು ಕಲ್ಪಿಸಿಕೊಳ್ಳಲೇ ಇಲ್ಲ. ವಾಸ್ತವವಾಗಿ ಈ ದೇಶದಲ್ಲಿ ಜಾತಿ ಅಸಮಾನತೆ ಮತ್ತು ಜಾತಿ ಶೋಷಣೆ ಈಗಲೂ ಮುಂದುವರೆಯುತ್ತಿರುವುದಕ್ಕೆ, ಇಂದಿಗೂ ಈ ದೇಶದ ದಮನಿತ ಜಾತಿಗಳಲ್ಲಿನ ಬಹುಸಂಖ್ಯಾತ ಜನತೆ ತಮ್ಮ ದೈನಂದಿನ ಬದುಕು ಮತ್ತು ಭವಿಷ್ಯತ್ತಿಗಾಗಿ ಮೇಲ್ಜಾತಿ ಮತ್ತು ಮೇಲ್ವರ್ಗಗಳ ಮೇಲೆ ಅವಲಂಬಿತವಾಗಿರುವುದೇ ಕಾರಣ. ಅದೇ ರೀತಿ ನಗರ ಪಟ್ಟಣಕ್ಕೆ ವಲಸೆ ಹೋದವರೂ ಸಹ ಸ್ವಾವಲಂಬಿಯಾಗಿ ಬದುಕುವಂಥಾ ಯಾವುದೇ ಸಂಪತ್ತಿನ ಬೆಂಬಲವಿಲ್ಲದಿರುವುದರಿಂದಲೇ ಈಗಲೂ ಒಂದು ಜನಾಂಗವೇ ಮಲ ಎತ್ತುವ ಕೆಲಸದಲ್ಲಿ ತೊಡಗಿಕೊಂಡಿದೆ. ಮತ್ತು ಅಂತಃಸಾಕ್ಷಿ ಇರುವ ನಾಗರಿಕ ಸಮಾಜವಾದರೆ ಆತ್ಮಹತ್ಯೆ ಮಾಡಿಕೊಳ್ಳುವ ರೀತಿಯಲ್ಲಿ ಆ "ಉದ್ಯೋಗವನ್ನೂ" ನಿರಾಕರಿಸಿದರೆ, ತಮ್ಮ ಮೇಲೆ ಮಲವನ್ನು ಸುರಿದುಕೊಂಡು ಪ್ರತಿಭಟಿಸುವಂಥಾ ಅತ್ಯಂತ ಆಘಾತಕಾರಿ ಕ್ರಮಗಳಿಗೆ ಇಳಿಯುತ್ತಿದ್ದಾರೆ.

(ಮುಂದುವರೆಯುವುದು) □

ಅವ್ವನ ಅಂಗನವಾಡಿ

ಲೇ: ಅರುಣ್ ಜೋಳದ ಕೂಡ್ಲಿಗಿ

ಬೆಲೆ: ರೂ. ೬೦/-

ಭ್ರಷ್ಟಾಚಾರ, ಮೂಲಭೂತವಾದ, ದರ್ಪ, ಉಳ್ಳವರ ದರಬಾರಿನ ವಿರುದ್ಧ ಪ್ರಗತಿಪರರು, ಸಾಹಿತಿಗಳು, ವಿದ್ವಾಂಸರು, ಮಹಿಳೆಯರು, ರೈತರಾದಿಯಾಗಿ ಎಲ್ಲರಲ್ಲೂ ಹೋರಾಟದ ಕಿಚ್ಚನ್ನು ಹಚ್ಚಬೇಕೆಂಬ ಹೆಬ್ಬಯಕೆ ಇಲ್ಲಿನ ಕವನಗಳದು. ಬಳ್ಳಾರಿಯಂಥ ಸುಡುಗಾಡಿನ ಪಡಿಪಾಟಲುಗಳನ್ನು ಕಂಡ ಎಲ್ಲಾ ಯುವಕರಿಗಿರುವಂತ ಸಿಟ್ಟು, ನೋವು, ತಳಮಳ, ಹತಾಶೆ, ಕನಸು, ಬಯಕೆಗಳೆಲ್ಲವೂ ಸಹಜವಾಗಿಯೇ ಈ ಯುವ ಕವಿಯನ್ನೂ ಕಾಡಿವೆ. ಅವೆಲ್ಲವನ್ನೂ ತಮ್ಮ ಕವಿತೆಗಳ ಮೂಲಕ ಹೊರಹಾಕಿದ್ದಾರೆ.

ಪ್ರಕಾಶಕರು: ಅಹರ್ನಿಶಿ ಪ್ರಕಾಶನ ವಿದ್ಯಾನಗರ, ಶಿವಮೊಗ್ಗ



ಹೊಸ ಪುಸ್ತಕ

ವ್ಯವಹಾರಿಕ ಕನ್ನಡ

ಲೇ: ಡಾ. ಬಸವರಾಜ ಸಬರದ

ಬೆಲೆ: ರೂ. ೬೦/-

ಅರ್ಥಪೂರ್ಣ ಹಾಗೂ ಆಕರ್ಷಕ ರೀತಿಯ ಪತ್ರ ಬರೆಯುವುದೂ ಒಂದು ಕಲೆ. ದಿನನಿತ್ಯದ ವ್ಯವಹಾರದಲ್ಲಿ ಪತ್ರ ವ್ಯವಹಾರವನ್ನು ಹೇಗೆ ಮಾಡಬೇಕು ಎಂಬುದಕ್ಕೆ ಈ ಕೃತಿ ಮಾರ್ಗದರ್ಶಿಯಾಗಿದೆ. ಖಾಸಗಿ, ವಾಣಿಜ್ಯ ಹಾಗೂ ಸರಕಾರಿ ಪತ್ರಗಳ ಮಾದರಿ ಬೇರೆಬೇರೆಯಾಗಿದ್ದು ತಮ್ಮೊಳಗಿನ ಭಾವನೆಗಳನ್ನು ಅಕ್ಷರ ರೂಪಕ್ಕಿಳಿಸುವಾಗ ವಹಿಸಬೇಕಾದ ಜಾಗ್ರತೆ, ಸೂಕ್ಷ್ಮತೆ, ವಿಷಯ ಗ್ರಹಿಕೆ, ಭಾಷೆ-ಶೈಲಿ-ವ್ಯಾಕರಣಗಳ ಮಹತ್ವವನ್ನು ಪ್ರಸ್ತಾಪಿಸುತ್ತಾ, ಅಂತಹ ಪತ್ರಗಳನ್ನು ಬರೆಯುವ ವಿಧಾನ; ಅದಕ್ಕೆ ಬೇಕಾಗಿರುವ ಸಿದ್ದತೆಗಳ ಬಗ್ಗೆ ಸವಿಸ್ತಾರವಾಗಿ ಚರ್ಚಿಸಲಾಗಿದೆ.

ಪ್ರಕಾಶಕರು: ಪಲ್ಲವಿ ಪ್ರಕಾಶನ ಗುಲಬರ್ಗಾ- ೫೮೫ ೧೦೬

ಯೋಗ ದರ್ಶನ

ಲೇ:ಎಸ್.ಎಸ್. ಹಿರೇಮಠ

ಬೆಲೆ: ರೂ. ೨೫೦/-

'ಯೋಗ'ದ ಬಗ್ಗೆ ವೈಜ್ಞಾನಿಕ ಒಳನೋಟ ಹಾಗೂ ವಿಸ್ತಾರವಾದ ಅಧ್ಯಯನ ಹೊಂದಿರುವ ಈ ಕೃತಿಯಲ್ಲಿ, ಅದೊಂದು ಪ್ಯೂಡಲ್ ಯಜಮಾನಿಕೆಯ ಮೂಲ ನೆಲೆಯಾಗಿಯೂ ಬಂದಿದೆ ಎಂಬುದನ್ನು ಶಾಸನಗಳ ಆಧಾರ ಸಮೇತ ವಿವರಿಸಲಾಗಿದೆ. ಹಲವು ಜನಾಂಗಗಳ ಹಬ್ಬಗಳ ಆಚರಣೆಗಳಲ್ಲಿನ ಜನಪದೀಯ ಯೋಗವನ್ನು ದಾಖಲಿಸುವ ಹೊಸ ಮಾದರಿ ಇಲ್ಲಿನ ವೈಶಿಷ್ಟ್ಯ. ಜೊತೆಗೆ ವೈದಿಕ-ಅವೈದಿಕ ಧಾರೆಯಾದ ಯೋಗ ಕರ್ನಾಟಕ ಸಂಸ್ಕೃತಿಯ ಸಂದರ್ಭದಲ್ಲಷ್ಟೆ ಅಲ್ಲ ಜಾಗತಿಕ ಧರ್ಮಗಳ ಸಮನ್ವಯ-ವೈರುಧ್ಯತೆಗಳಲ್ಲಿ ಕಾಣಿಸಿಕೊಂಡ ಬಗೆಯನ್ನು ವಿದ್ವತ್‌ಪೂರ್ಣ ಚಿಂತನೆಗಳಿಂದ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಪ್ರಕಾಶಕರು: ಸಮತಾ ಪ್ರಕಾಶನ ಸಾಣಿಕೊಪ್ಪ, ಬೆಳಗಾವಿ ಜಿಲ್ಲೆ.

ಬಾಡಿಗೆ ದೇವರು

ಲೇ: ಡಾ. ಹೆಬ್ಬಾಲೆ ಕೆ. ನಾಗೇಶ್

ಬೆಲೆ: ರೂ. ೯೫/-

ಈ ಕಥಾ ಸಂಕಲನದಲ್ಲಿ ಲೇಖಕರು ತಾವು ಕಂಡುಂಡ ತಳಸ್ತರದ ಜನರ ಜೀವನ ಮತ್ತು ಅಸಹಕರ ಬದುಕಿನ ಬವಣೆಯನ್ನು ಮನ ಮಿಡಿಯುವಂತೆ ಕಟ್ಟಿಕೊಟ್ಟಿದ್ದಾರೆ. ಪ್ರೀತಿ, ಪ್ರೇಮ, ವಾತ್ಸಲ್ಯ, ಅನುಕಂಪಗಳಿಗೆ ವರಮಾನ, ಅಂತಸ್ತು ಮುಖ್ಯವಲ್ಲ ಎಂಬುದನ್ನು ನಿರೂಪಿಸುವ ಇಲ್ಲಿನ ಕಥೆಗಳಲ್ಲಿ ಮಾನವೀಯ ಸಂಬಂಧಗಳ ಚಿತ್ರಣ, ಸಾಮಾಜಿಕ ವಿಷಮತೆಯ ವಿಚಾರಗಳು, ಸಾಮಾಜಿಕ-ಆರ್ಥಿಕ ಸಂಬಂಧಗಳು ಹೇಗೆ ಹಳ್ಳಿಗರ ಬದುಕಿನ ಜಂಜಾಟಕ್ಕೆ ಕಾರಣ ಎಂಬ ಅಂಶವನ್ನು ಪರಿಣಾಮಕಾರಿಯಾಗಿ ಬಿಂಬಿತವಾಗಿದೆ.

ಪ್ರಕಾಶಕರು: ರುಚಿರ ಪ್ರಕಾಶನ ಹೊಸಪೇಟೆ-೫೮೩ ೨೦೧

ನೆನಪಾಗುತ್ತಿಲ್ಲ

ಲೇ: ಈಶ್ವರ ಕಟ್ಟಿಮನಿ

ಬೆಲೆ: ರೂ. ೧೦೦/-

೪೨ ಕವಿತೆಗಳ ಚೊಚ್ಚಲ ಕೃತಿ ಇದು. ಸಮಾಜದ ಅನ್ಯಾಯ, ಅಸಮಾನತೆ, ಬಡತನ, ಹಸಿವು, ಶೋಷಣೆ, ಜಾಗತಿಕ ವಿದ್ಯಾಮಾನಗಳು, ದಲಿತರ ಬದುಕಿನ ದಟ್ಟ ಸಂವೇದನೆ, ದೌರ್ಜನ್ಯಗಳನ್ನು ಕುರಿತು ಇಲ್ಲಿನ ಕವನಗಳು ಬೆಳಕು ಚೆಲ್ಲಿವೆ. ಎಡವಾದಿ ವೈಚಾರಿಕತೆಯ ಹಿನ್ನಲೆಯಲ್ಲಿ ಪ್ರತಿಯೊಂದನ್ನು ಗ್ರಹಿಸುವ ಗುಣ ಹೊಂದಿವೆ. ಸಿದ್ಧಾಂತಗಳಂತೆ, ಉಪದೇಶಗಳಂತೆ, ವಾದಗಳಂತೆ ಗೋಚರಿಸುವ ಚಿಂತನೆಗಳು ಇಲ್ಲಿ ಅಭಿವ್ಯಕ್ತಿಗೊಂಡಿವೆ. ಮೊದಲ ಪ್ರಯತ್ನದಲ್ಲಿಯೇ ಕವಿಯಾಗಿ ಬೆಳೆಯುವ ಭರವಸೆಯನ್ನು ಲೇಖಕರು ಮೂಡಿಸಿದ್ದಾರೆ.

ಪ್ರಕಾಶಕರು: ಸಾಧು ಪ್ರಕಾಶನ ದೇವರ ಗೋನಾಲ-೫೮೫೨೨೦





ಎಂಜಲು, ಬೆಲೆ: ರೂ. ೧೫೦/-

ಲೇ: ಓಂ ಪ್ರಕಾಶ್ ವಾಲ್ಮೀಕಿ

ಅನು: ಡಾ. ತೇಜಸ್ವಿ ಕಟ್ಟೀಮನಿ

ಸಮಕಾಲೀನ ಹಿಂದಿ ಸಾಹಿತ್ಯದ ಪ್ರಮುಖ ಲೇಖಕರಾದ ಓಂ ಪ್ರಕಾಶ್ ವಾಲ್ಮೀಕಿಯವರ ಆತ್ಮಕಥೆ 'ಜೂಠನ್'ನ ಕನ್ನಡಾನುವಾದದ ಈ ಕೃತಿಯಲ್ಲಿ, ಲೇಖಕ ತನ್ನ ಹುಟ್ಟಿನ ಹಿನ್ನಲೆಯಿಂದ ಅನುಭವಿಸಿದ ಕ್ರೂರ ಮತ್ತು ಅಮಾನವೀಯ ಬಗೆಗಳನ್ನು ಎಳೆಎಳೆಯಾಗಿ ಬಿಡಿಸಿಟ್ಟಿದ್ದಾರೆ. ಭಾರತೀಯ ಸಮಾಜದಲ್ಲಿ ಶತಮಾನಗಳಿಂದ ಆಚರಿಸುತ್ತಿರುವ ಅಸ್ಪೃಶ್ಯತೆಯ ಕರಾಳ ರೂಪ ದಲಿತರನ್ನು ದಾರುಣ ಜೀವನಕ್ಕೆ ದೂಡುವ ಬಗ್ಗೆ ವಿಷಾಧಿಸುತ್ತಾರೆ. ಜಾತಿ ಏಕೆ ಮಾನದಂಡವಾಗಬೇಕು ಎನ್ನುವ ಅವರ ಪ್ರಶ್ನೆ ನಮ್ಮನ್ನು ಕಾಡುತ್ತದೆ.

ಪ್ರಕಾಶಕರು: ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು

ನೀನ್ಯಾರಿಗಾದೆಯೋ ಎಲೆ ಮಾನವ?

ಡಾ. ಹಿ.ಶಿ. ರಾಮಚಂದ್ರೇಗೌಡ
(ಮುಂದುವರೆದ ಭಾಗ)

ರಾಜಕಾರಣಕ್ಕೆ ಯಾವುದು ವಸ್ತುವಾಗುತ್ತದೆ ಮತ್ತು ಯಾವುದು ಬಲಿಯಾಗುತ್ತದೆ ಎಂದು ಹೇಳುವಂತಿಲ್ಲ. ರಾಜಕಾರಣಕ್ಕೆ ಕತ್ತೆ ಮತ್ತು ಮನುಷ್ಯನಲ್ಲಿ ವ್ಯತ್ಯಾಸವಿಲ್ಲ. ಯಾವುದು ಅದರ ಆತುರಕ್ಕೆ ಅಪೇಕ್ಷೆಯೋ ಅದನ್ನು ಎತ್ತಿಕೊಂಡು ಕೊಂಡಾಡಲಾಗುತ್ತದೆ. ಯಾವುದು ಸದ್ಯಕ್ಕೆ ರಾಜಕಾರಣದ ಮಾರುಕಟ್ಟೆಯಲ್ಲಿ ಅನುಪಯುಕ್ತವೂ ಅದನ್ನು ದೂರದಲ್ಲಿಡುತ್ತದೆ. ಹೀಗೆ ಮನುಷ್ಯನನ್ನೇ ಮಾರುಕಟ್ಟೆ ಮಾಡಿಕೊಳ್ಳುವ ರಾಜಕಾರಣಕ್ಕೆ ಆಹಾರ ಪದ್ಧತಿ ಎನ್ನುವುದು ಹೊರಗುಳಿಯಲು ಆಗುವುದೆ?

ಅಂಥ ಆಹಾರ ನಿರಾಕರಣೆಯ ರಾಜಕೀಯವೆ ಈ ಗೋಮಾಂಸ ನಿಷೇಧದಲ್ಲಿಯೂ ಕೆಲಸಮಾಡಿದೆ. ಇದನ್ನು ಆಹಾರ ರಾಜಕೀಯ ಎನ್ನುತ್ತೇವೆ. ಆಹಾರ ನಮ್ಮ ಸಾಂಸ್ಕೃತಿಕ ಸಂಸ್ಕಾರದ ಒಂದು ಅಂಗ ಆಗಿರುವುದರಿಂದ ಇಂಥ ವ್ಯವಹಾರವನ್ನು ಸಾಂಸ್ಕೃತಿಕ ರಾಜಕೀಯ ಎಂದು ಕರೆಯುತ್ತೇವೆ. ತಮಗೆ ಬೇಡವಾದವರನ್ನು ನೇರ ಯುದ್ಧದಿಂದ ನಿಗ್ರಹಿಸಲು ಸಾಧ್ಯವಾಗದಿದ್ದಾಗ ಅನ್ಯ ಮಾರ್ಗವನ್ನು ಹುಡುಕುವುದು ಕುತಂತ್ರ ರಾಜಕೀಯದ ಹುನ್ನಾರ. ಅಂಥ ಕುತಂತ್ರದಲ್ಲಿ ಆಹಾರದಲ್ಲಿ ವಿಷ ಬೇರೆಸುವುದು ಒಂದು ಕ್ರಮವಾದರೆ ಆಹಾರವನ್ನೇ ನಿರಾಕರಿಸುವುದು ಸಾಮೂಹಿಕ ಹತ್ಯೆಯ ಒಂದು ಯೋಜನೆ. ಒಂದು ಸಮುದಾಯದ ಮೂಲ ಆಹಾರ ಅಥವ ಪೌಷ್ಠಿಕ ಆಹಾರವನ್ನು ಅವರಿಗೆ ನಿರಾಕರಿಸಿದರೆ ಅವರು ನಿಧಾನವಾಗಿ ಈ ಲೋಕ ಬಿಡುತ್ತಾರೆ. ಇದು ತಮಗೆ ಬೇಡವಾದವರನ್ನು ಎತ್ತಂಗಡಿ (Eliminate) ಮಾಡುವ ಜನಾಂಗವಾದಿ ಸಿದ್ಧಾಂತ. ಈ ಹೊತ್ತು ಇದನ್ನು ಹಸಿ ರಾಜಕೀಯ ಎಂದು (Raw Politics) ಕರೆಯಲಾಗುತ್ತದೆ. ಹಿಂದೆ ತಮ್ಮ ಜಾತಿ, ಜನಾಂಗ ಮತ್ತು ಧರ್ಮದ ರಕ್ಷಣೆಗೆ ಎಂದು ತಮಗೆ ಆಗದವರನ್ನು ನಿಶ್ಯಕ್ತಗೊಳಿಸಲು ಈ ತತ್ವವನ್ನು ಬಳಸಲಾಗುತ್ತಿತ್ತು.

ಹಿಟ್ಲರ್ – ಯಹೂದಿಗಳನ್ನು
ಬ್ರಿಟಿಷರು – ವಸಾಹತು, ಬುಡಕಟ್ಟಿನವರನ್ನು
ಜಾತಿಗರು – ಕೆಳಜಾತಿಗಳನ್ನು
ನಾಗರಿಕರು – ಬಡವರನ್ನು
ಉದ್ಯಮಿಗಳು – ಬಳಕೆದಾರರನ್ನು

ನಿಧಾನವಾಗಿ ಸಾಗಿಸಿ, ತಮಗೆ ಬೇಕಾದವರನ್ನು ಮಾತ್ರ ಉಳಿಸಿಕೊಳ್ಳುವ ತತ್ವವಿದೆ.

ಗೋಹತ್ಯೆ ನಿಷೇಧ ಕಾನೂನಿನ ಜಾರಿಯ ಹಿಂದೆ ಇರುವ ಮತೀಯ ರಾಜಕೀಯವನ್ನು ಅರ್ಥ ಮಾಡಿಕೊಳ್ಳಲು ನಮ್ಮ ಮಹತ್ವದ ಚಿಂತಕರಲ್ಲಿ ಒಬ್ಬರಾದ ಅಂಬೇಡ್ಕರ್ ಅವರ ಬಳಿಯೆ ಹೋಗಬೇಕು. ಭಾರತದಲ್ಲಿ. ಅನೇಕ ಶತಮಾನಗಳಲ್ಲಿ ನಡೆದ – ನಡೆಯುತ್ತಿರುವ ಮಹಾಧರ್ಮಯುದ್ಧದ ಕುರೂಪದ ಪರಿಣಾಮವೆ ಗೋಹತ್ಯೆ ನಿಷೇಧಕ್ಕೆ ಕಾರಣ ಎಂಬುದನ್ನು ಅವರು ತುಂಬ ಸಮರ್ಥವಾಗಿ ಅವರ ಶೂದ್ರರು ಯಾರು? ಎಂಬ ಕೃತಿಯಲ್ಲಿ ವಿವರಿಸಿದ್ದಾರೆ. ಬೌದ್ಧ ಧರ್ಮ ಅಸ್ತಿತ್ವಕ್ಕೆ ಬಂದು ವೈದಿಕ ಧರ್ಮ ಮೂಢ ನಂಬಿಕೆಗಳ ಒಂದು ಕಂತೆ ಎಂದು ಅರಿವಿಗೆ ಬಂದ ತಕ್ಷಣದಿಂದ ಜನಸಾಮಾನ್ಯರು ವೈದಿಕ – ಧರ್ಮಕ್ಕೆ ಕೈಕೊಟ್ಟು ಬೌದ್ಧ ಧರ್ಮದ ಕಡೆಗೆ ಹೊರಟರು. ವೈಚಾರಿಕ ತಳಹದಿಯಿಂದ ಮಾನವನ ಉನ್ನತಿಯನ್ನು; ಸಮಾನತೆ ಮತ್ತು ಸೋದರತೆಗಳ ಮೇಲೆ ಪ್ರತಿಪಾದಿಸಿದ ಬೌದ್ಧ ಧರ್ಮ ಬಹುಜನರ ಮಾನಸಿಕ ಮುಕ್ತಿ ಮಾರ್ಗವಾಯಿತು. ಅಂಬೇಡ್ಕರ್ ಅವರು ಹೇಳುವಂತೆ "ಪ್ರಥಮ ಸ್ಥಾನಕ್ಕಾಗಿ ಬ್ರಾಹ್ಮಣ ಹಾಗೂ ಬೌದ್ಧ ಮತಗಳ ನಡುವೆ ನಾನೂರು ವರ್ಷಗಳ ಕಾಲ ಹೋರಾಟ ನಡೆದಿದೆ. ಇದು ಭಾರತದ ಮತಧರ್ಮ ಮತ್ತು ರಾಜಕಾರಣದ ಮೇಲೆ ಅಳಿಸಲಾಗದ ಪ್ರಭಾವ ಬೀರಿದೆ.. ಬ್ರಾಹ್ಮಣ ಮತ್ತು ಬೌದ್ಧ ಮತ ನಡುವಣ ಹೋರಾಟದಲ್ಲಿ ಗೋಪೂಜೆಯು ಬಳಕೆಗೆ ಬಂತು. ಅದು ಬ್ರಾಹ್ಮಣರು ತಾವು ಕಳೆದುಕೊಂಡ ಸ್ಥಾನವನ್ನು ಮರಳಿ ಪಡೆಯಲು ಒಂದು ಸಾಧಾನವಾಗಿತ್ತು." (ಪುಟ೬೨.ಶೂದ್ರರು ಯಾರು? ಪ್ರ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ೨)

ಭರ್ಜರಿ ದನದ ಮಾಂಸವನ್ನು ಹೊಡೆಯುತ್ತಿದ್ದ ಬ್ರಾಹ್ಮಣರು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಚಾರಿತ್ರಿಕ ತೀರ್ಮಾನವೊಂದನ್ನು ತೆಗೆದುಕೊಂಡರು. ಅದು ಗೋವು ಪೂಜ್ಯವೆಂಪೂ, ಅದನ್ನು ಕೊಲ್ಲಬಾರದೆಂದೂ ಸಂದೇಶ ಹೊರಡಿಸಿದರು. ಈ ಸಂದೇಶ ಎಷ್ಟು ವೈಯಕ್ತಿಕವಾಗಿತ್ತೆಂದರೆ, ಗೋಹತ್ಯೆ ಬ್ರಾಹ್ಮಣ ಹತ್ಯೆಗೆ ಸಮ ಎಂದು ಅವರು ಸಾರಿದರು. ಮಹಾಪಾಪಗಳಲ್ಲಿ ಎರಡುಂಟು: (೧) ಗೋಹತ್ಯೆ (೨) ಬ್ರಾಹ್ಮಣಹತ್ಯೆ ಎಂದು ಹೇಳಿದ ವೈದಿಕರು ಬ್ರಾಹ್ಮಣ ಹತ್ಯೆ ಗೋಹತ್ಯೆಗಿಂತಲೂ ಘೋರವಾದುದು ಎಂದು ಸಾರಿದರು. ಇದರ ಫಲಶ್ರುತಿ ಎಂಬಂತೆ ಆ ಮೇಲಿನ ಬ್ರಾಹ್ಮಣಗಳಲ್ಲಿ ಗೋಹತ್ಯೆ ಮತ್ತು ಬ್ರಾಹ್ಮಣ ಹತ್ಯೆಯೂ ಮಹಾ ಅಪರಾಧವೆಂದು ಒತ್ತಿ ಒತ್ತಿ ಹೇಳಲಾಯಿತು. ಮನುಧರ್ಮ ಎಂಬ ಕ್ರೂರ ಶಾಸನ ಸಂಪುಟ ಹುಟ್ಟಿಕೊಂಡದ್ದು ಈ ಬಗೆಯ ಸ್ವಾರ್ಥ ನೀತಿ ನಿಯಮಗಳಿಂದ.

ಬ್ರಿಟಿಷರು ಭಾರತವನ್ನು ವಶಪಡಿಸಿಕೊಳ್ಳುವ ವರೆಗೆ ಇದೇ ಭಾರತದ ಧರ್ಮಶಾಸನವಾಗಿತ್ತು. ಈ ಕಾರಣಕ್ಕೆ ಭಾರತಕ್ಕೆ ಬ್ರಿಟಿಷರ

ಗೋಹತ್ಯೆ ನಿಷೇಧ ಕಾನೂನಿನ ಜಾರಿಯ ಹಿಂದೆ ಇರುವ ಮತೀಯ ರಾಜಕೀಯವನ್ನು ಅರ್ಥಮಾಡಿಕೊಳ್ಳಲು ನಮ್ಮ ಮಹತ್ವದ ಚಿಂತಕರಲ್ಲಿ ಒಬ್ಬರಾದ ಅಂಬೇಡ್ಕರ್ ಅವರ ಬಳಿಯೆ ಹೋಗಬೇಕು. ಭಾರತದಲ್ಲಿ. ಅನೇಕ ಶತಮಾನಗಳಲ್ಲಿ ನಡೆದ - ನಡೆಯುತ್ತಿರುವ ಮಹಾಧರ್ಮಯುದ್ಧದ ಕುರೂಪದ ಪರಿಣಾಮವೆ ಗೋಹತ್ಯೆ ನಿಷೇಧಕ್ಕೆ ಕಾರಣ ಎಂಬುದನ್ನು ಅವರು ತುಂಬ ಸಮರ್ಥವಾಗಿ ಅವರ ಶೂದ್ರರು ಯಾರು? ಎಂಬ ಕೃತಿಯಲ್ಲಿ ವಿವರಿಸಿದ್ದಾರೆ. ಬೌದ್ಧ ಧರ್ಮ ಅಸ್ತಿತ್ವಕ್ಕೆ ಬಂದು ವೈದಿಕ ಧರ್ಮ ಮೂಢ ನಂಬಿಕೆಗಳ ಒಂದು ಕಂತೆ ಎಂದು ಅರಿವಿಗೆ ಬಂದ ತಕ್ಷಣದಿಂದ ಜನಸಾಮಾನ್ಯರು ವೈದಿಕ - ಧರ್ಮಕ್ಕೆ ಕೈಕೊಟ್ಟು ಬೌದ್ಧ ಧರ್ಮದ ಕಡೆಗೆ ಹೊರಟರು. ವೈಚಾರಿಕ ತಳಹದಿಯಿಂದ ಮಾನವನ ಉನ್ನತಿಯನ್ನು; ಸಮಾನತೆ ಮತ್ತು ಸೋದರತೆಗಳ ಮೇಲೆ ಪ್ರತಿಪಾದಿಸಿದ ಬೌದ್ಧ ಧರ್ಮ ಬಹುಜನರ ಮಾನಸಿಕ ಮುಕ್ತಿ ಮಾರ್ಗವಾಯಿತು.

ಆಗಮನ ತುಳಿತಕ್ಕೊಳಗಾದ ಇವರ ಮಹಾ ಬಿಡುಗಡೆ ಎನ್ನುತ್ತಾರೆ. ಇನ್ನೂ ಮುಂದೆ ಹೋಗಿ ಕೆಲವರು ಬ್ರಿಟಿಷರು ತುಳಿತಕ್ಕೆ ಒಳಗಾದವರಿಗೆ ಸಮಾನ ಸೌಲತ್ತುಗಳನ್ನು ಕೊಡಲು ಹೊರಟಿದ್ದೇ ಬ್ರಾಹ್ಮಣರು ಒಂದುಗೂಡಿ ಅವರನ್ನು ಭಾರತದಿಂದ ಓಡಿಸಲು ಕಾರಣವಾಯಿತು ಎನ್ನುತ್ತಾರೆ. ತಮಗೆ ಅನುಕೂಲಗಳು ಕಡಿಮೆಯಾದ ಕೂಡಲೇ ಹೇಗಾದರೂಮಾಡಿ ತಾವು – ತಮ್ಮ ಧರ್ಮವನ್ನು ಜನಗಳ ಮೇಲೆ ಸ್ಥಾಪಿಸಲು ಎಲ್ಲಾ ಹುನ್ನಾರಗಳನ್ನು ಹೂಡುತ್ತಾರೆ. ಭಾರತ ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಬಂದಾಗ ಮಾಡಿದ ಸಾಹಸ ಹಾಗೂ ಈ ಹೊತ್ತು ಕರ್ನಾಟಕದಲ್ಲಿ ಸಂಸ್ಕೃತ ವಿಶ್ವವಿದ್ಯಾಲಯ – ಗೋಹತ್ಯೆ ನಿಷೇಧ ಕಾನೂನು ಜಾರಿ ಕ್ರಮಗಳು ಅವರ ಮರು ಪ್ರವೇಶದ ಮುನ್ಸೂಚನೆಗಳಷ್ಟೆ ಎಂದು ಪ್ರಾಜ್ಞರು ಲೆಕ್ಕ ಹಾಕುತ್ತಿದ್ದಾರೆ.

ಈಗಲೂ ವೈದಿಕ ಪುರೋಹಿತರು ತಮ್ಮ ಪ್ರಾಣ ಇರುವುದು ಗೋವಿನಲ್ಲಿ ಎಂದು ನಂಬಿದ್ದಾರೆ. ನಮ್ಮ ಜನಪದ ಕಥೆಗಳಲ್ಲಿ ಬಲಶಾಲಿಯಾದ ರಾಕ್ಷಸನ ಪ್ರಾಣ ಏಳು ಸಮುದ್ರದಾಚೆ ಕೀಳು ಸಮುದ್ರ, ಅದರೊಳಗೊಂದು ಬಟ್ಟಲು, ಅದರೊಳಗೊಂದು ಗಿಳಿ, ಆ ಗಿಳಿಯ ಒಳಗೆ ರಾಕ್ಷಸನ ಜೀವ ಇರುತ್ತದೆ ಎಂಬ ನಂಬಿಕೆ. ಅದೇ ಸ್ಥಿತಿಯಲ್ಲಿ ಈ ಮನುಷ್ಯರು ಇರುವಂತಿದೆ. ಆದರೆ ಈಗಿನ ಪರಿಸ್ಥಿತಿಯೆ ಬೇರೆಯಾಗಿದೆ. ಗೋಮಾಂಸವನ್ನು ಮುಸ್ಲಿಮರು, ಕ್ರಿಶ್ಚಿಯನ್ನರು ಮತ್ತು ದಲಿತರು ಮಾತ್ರ ತಿನ್ನುತ್ತಿಲ್ಲ. ಬ್ರಾಹ್ಮಣ ಜಾತಿಯಿಂದ ಬಂದವರೂ ಸೇರಿಕೊಂಡಂತೆ ಅನೇಕರು ಆ ಮಾಂಸದ ಶಕ್ತಿಗೆ ವಶವಾಗಿದ್ದಾರೆ. ಕ್ರೀಡಾಪಟುಗಳಲ್ಲಿ ಮತ್ತು ಉತ್ತಮ ಆರೋಗ್ಯ ಆಕಾಂಕ್ಷಿಗಳಲ್ಲಿ ದನದ ಮಾಂಸ ಬೇಡಿಕೆಯಲ್ಲಿದೆ. ಮತ್ತೊಂದು ಮುಖ್ಯ ಸಂಗತಿ ಎಂದರೆ ಬ್ರಾಹ್ಮಣರೆಲ್ಲ ಕರ್ಮಠರು, ಸುಸಂಸ್ಕೃತ ಖದೀಮರು, ನೋಟಕ್ಕೆ ಶುಭ್ರರು ಆಟಕ್ಕೆ ಅಧಮರು ಎಂಬೆಲ್ಲ ಅನುಮಾನಗಳ ಹೊರಗೆ ಬಹುತೇಕರು ಬ್ರಾಹ್ಮಣದ ಕೆಲವು ನಂಬಿಕೆಗಳನ್ನು ಸಾಂಪ್ರದಾಯಿಕವಾಗಿ ಆಚರಿಸುವವರಾಗಿದ್ದಾರೆಯೆ ಹೊರತು ಜನ ವಿರೋಧಿಗಳಲ್ಲ.

ಬಿಜೆಪಿ ಉತ್ಕರ್ಷದ ಜೊತೆಗೆ ಬ್ರಾಹ್ಮಣರ ಈ ಬಗೆಯ ಗುಮಾನಿ ಹೆಚ್ಚಾಗುತ್ತದೆ. ಭಾರತದ ಆಡಳಿತ ವರ್ಗವು ಯಾಹೊತ್ತೂ ನಡೆಸಿಕೊಂಡು ಬಂದ ಸಾಮಾಜಿಕ ದೌರ್ಜನ್ಯಗಳ ಪರಿಣಾಮವೇ ಇಲ್ಲೂ ಪ್ರತಿಫಲಿಸಿದೆ. ವಾಸ್ತವದಲ್ಲಿ ಈಗ ಮತೀಯ ವಾದಿಗಳು ಬ್ರಾಹ್ಮಣರಷ್ಟೆ ಅಲ್ಲ, ಅವರನ್ನು ಅವಲಂಬಿಸಿ ಬೆಂಬಲಿಸುತ್ತಿರುವ ಮೇಲು ಮಧ್ಯಮ ಜಾತಿಯ ಮನುಷ್ಯರೂ ಅದೇ ಅಪರಾಧಿ ಸ್ಥಾನದಲ್ಲಿ ಇದ್ದಾರೆ. ತಾವು ರೈತರು ತಮಗೆ ಗೋವುಗಳು ಪೂಜನೀಯ ಎಂಬ ಕಾರಣಕ್ಕೆ ಈ ವರ್ಗದ ಜನ ಪರೋಕ್ಷವಾಗಿ ಮೇಲು ಜಾತಿಯವರ ಜೊತೆಗೆ ಕೈಜೋಡಿಸಿದ್ದಾರೆ. ಜೀವನ ವಿರೋಧಿ ಕಾನೂನುಗಳ ಜಾರಿಯಲ್ಲಿ ಇವರದೂ ಸಮಪಾಲು ಇದೆ. ವೈದಿಕರ ಮೆದುಳು ಮತ್ತು ಶೂದ್ರ ಮೇಲ್ಜಾತಿಯವರ ದೇಹಗಳು ಸೇರಿಕೊಂಡೇ ಇಂಥ ಕಾನೂನುಗಳು ಅಸ್ತಿತ್ವಕ್ಕೆ ಬರುತ್ತವೆ.

೪ ಗೋಹತ್ಯೆ ನಿಷೇಧ: ಪರಿಣಾಮ

(೧) ಕಾನೂನು ಮಕ್ಕಳಾಟವಲ್ಲ. ಅರಾಜಕತೆಯನ್ನು ಹೋಗಲಾಡಿಸಿ ರಾಜಕತೆ (ರಾಜ್ಯವ್ಯವಸ್ಥೆ)ಯನ್ನು ತರುವುದೇ ಅದರ ಉದ್ದೇಶ. ಗೋಹತ್ಯೆ ನಿಷೇಧ ಕಾನೂನಿನಲ್ಲಿ ರಾಜ್ಯ ವ್ಯವಸ್ಥೆಯನ್ನು ಸುಸ್ಥಿತಿಯಲ್ಲಿ ಇಡುವ ಆಶಯ ಇಲ್ಲ. ಒಂದು ಧರ್ಮಕೇಂದ್ರದ ಹಿತಾಸಕ್ತಿ ಇರುವುದರಿಂದ ಪ್ರಜಾಪ್ರಭುತ್ವದ ಎಲ್ಲ ಧರ್ಮಗಳ ಆಸಕ್ತಿ ಮತ್ತು ಆಶೋತ್ತ

ಗೋವುಗಳನ್ನು ಆಹಾರಕ್ಕಾಗಿ ಬಳಸುವುದು ಹತ್ಯೆ ಎನ್ನುವುದಾದರೆ ನಾವೆಲ್ಲ ಕೊಯ್ದು ತಿನ್ನುತ್ತಿರುವ ಪ್ರಾಣಿಗಳದೂ ಹತ್ಯೆಯೆ. ಹಾಗಿದ್ದಲ್ಲಿ ಈ ಮನುಷ್ಯ ಕೂಡಲೆ ತಾನು ಆಹಾರಕ್ಕಾಗಿ ಬಳಸುತ್ತಿರುವ ಪ್ರಾಣಿಗಳದೂ ಹತ್ಯೆಯನ್ನು ನಿಲ್ಲಿಸಲೇಬೇಕಾಗುತ್ತದೆ. ಇದಕ್ಕಾಗಿ ಅಂತರಾಷ್ಟ್ರೀಯ ಕಾನೂನೊಂದನ್ನು ತಂದು ಬಂದೂಬಸ್ತ್ ಮಾಡಬೇಕಾಗುತ್ತದೆ. ಅಂತರಾಷ್ಟ್ರೀಯ ಸರ್ಕಾರ ಇಲ್ಲ ನಿಜ. ಈಗ ಅಮೆರಿಕವೆ ಅಂತರಾಷ್ಟ್ರೀಯ ಸರ್ಕಾರ. ಅದು ಈ ಜವಾಬ್ದಾರಿಯನ್ನು ಹೊರುತ್ತದೆಯೇ? ಕೇಳಬೇಕು.

ರಗಳು ನಿರಾಕರಣೆಯಾಗಿವೆ. ಈ ಕಾನೂನು ಜಾರಿಗೆ ಬಂದರೂ ಅದನ್ನು ಅನುಸರಿಸುವವರಿಲ್ಲದೆ ಅದೊಂದು ಕಾಡು ತತ್ವವಾಗುತ್ತದೆ. ಪಾನನಿರೋಧ ಮಸೂದೆಯ ಸ್ಥಿತಿಯೆ ಇದಕ್ಕೂ ಬರುತ್ತದೆ. ಕಾನೂನು ದೆವ್ವದಂತೆ ಆ ಕಡೆ ಬಿದ್ದಿದ್ದು ಜನ ತಮ್ಮ ಪಾಡಿಗೆ ಮತ್ತು ಆಸಕ್ತಿಗೆ ಅನುಗುಣವಾಗಿ ಓಡಾಡಿಕೊಂಡಿರುತ್ತಾರೆ. ಒಬ್ಬ ಮಹಾ ಮೋಹಿ ಯಂತ್ರವಾದಿ ಉತ್ಪಾದನೆ ಮತ್ತು ಸುಖದ ದೃಷ್ಟಿಯಿಂದ ಐವತ್ತು ವರ್ಷಕ್ಕೆ ಮೇಲ್ಪಟ್ಟವರು ಆತ್ಮಹತ್ಯೆ ಮಾಡಿಕೊಳ್ಳಬೇಕು ಎಂದು ಕಾನೂನು ತಂದರೆ, ಮತ್ತೊಬ್ಬ ಧರ್ಮಾಂಧ ಬೇರೊಂದು ಜನವರ್ಗ ತನ್ನವರ ಹಿತಾಸಕ್ತಿಗಾಗಿ ದೇಶವನ್ನು ಖಾಲಿ ಮಾಡಿ ಹೋಗಬೇಕು ಎಂದು ಕಾನೂನು ತಂದರೆ ಏನಾಗಬಹುದು. ಸಂಸ್ಕೃತಿ ಸತ್ತು ರಾಕ್ಷಸರು ಮಾತ್ರ ಉಳಿಯುತ್ತಾರೆ ಮತ್ತು ಒಂದು ದೇಶ ಎರಡು ಹೋಳಾಗುತ್ತದೆ. ಇವರೆಲ್ಲರಿಗಿಂತ ಮತ್ತೊಬ್ಬ ತಲೆತಿರುಕ ಮೂಲಭೂತವಾದಿಗಳಾದ ಸನಾತನಿಗಳನ್ನು ಸಾಮೂಹಿಕವಾಗಿ ಹತ್ಯೆ ಮಾಡಿ ಎಂದು ಕರೆ ಕೊಟ್ಟರೆ ಏನಾಗುತ್ತದೆ? ಆ ಕರೆಗೆ ಮೊದಲು ಅವನೇ ಹತ್ಯೆಯಾಗುತ್ತಾನೆ. ಸನಾತನಿಗಳು ಸ್ವಾರ್ಥದಿಂದ ಇರುತ್ತಾರೆ.

(೨) ಸನಾತನತೆ ಎನ್ನುವುದು ಈಗ ಧಾರ್ಮಿಕ ಸತ್ವ ಅಲ್ಲ, ರಾಜಕೀಯದ ಆಟ. ಒಬ್ಬ ಕರ್ಮಠ ಜಾತಿವಾದಿ ಎನ್ನುವವನ ಮಕ್ಕಳು ಅಮೆರಿಕೆಯಲ್ಲಿ ಅತ್ಯಾಧುನಿಕ ಜೀವನ ನಡೆಸುತ್ತಿರುತ್ತಾರೆ. ಒಬ್ಬ ಧರ್ಮಾಂಧ ಎನ್ನುವವನ ಸಹಾಯದಲ್ಲಿ ಒಬ್ಬ ಕುರುಡ – ಕುಂಟ– ಅನಾಥರು ಆಶ್ರಯ ಪಡೆದಿರುತ್ತಾರೆ. ಈ ಹೊತ್ತು ಮೂಲಭೂತವಾದ ಎಂಬುದು ಅಸ್ತಿತ್ವದಲ್ಲೆ ಇಲ್ಲ; ಮೂಲಭೂತವಾದಿ ಎಂಬುವನೊಬ್ಬನು ಇರುತ್ತಾನೆ. ಅವನು ನಮ್ಮ ಈಗಿನ ಕೆಟ್ಟ ಕನ್ನಡ ಚಳವಳಿಗಾರ ಇದ್ದಂತೆ! ಸಮಕಾಲೀನವಾಗಿ ಸುಸ್ಥಿತಿಯಲ್ಲಿ ಬದುಕಲು ಹೂಡಿದ ಆಟ ಇದು. ಅದಕ್ಕೆ ಒಂದು ಭಾಷೆಯೊ, ಧರ್ಮವೊ, "ಜನವರ್ಗವೊ ಬಲಿಯಾಗುತ್ತದೆ. ನಿಜದ ಅರ್ಥದಲ್ಲಿ ಮೂಲಭೂತವಾದಿ ಒಬ್ಬ ಸ್ಟೇಜ್ ಆಟಗಾರ.

(೩)ಗೋಮಾಂಸ ಮಾರಾಟ ಕಳ್ಳಬಟ್ಟಿ ದಂದೆಯಂತೆ ಆಗುತ್ತದೆ. ಇನ್ನೊಂದು ದಿಕ್ಕಿನಲ್ಲಿ ಒಳಗಿನ ಅಥವ ಹೊರಗಿನ ಉದ್ಯಮಿಗೆ ದನದ ಮಾಂಸ ಸರಬರಾಜು ಮಾಡುವ ಬೃಹತ್ ವ್ಯಾಪಾರವಾಗುತ್ತದೆ.

(೪) ದಲಿತರ ರಕ್ಷಣೆಗಾಗಿ ಅಟ್ರಾಸಿಟಿ ಕಾನೂನು ತಂದು ಅದು ಚಿಲ್ಲರೆ ದಲಿತರ ಕೈಯಲ್ಲಿ ಬೇರೆಯವರನ್ನು ಹೆದರಿಸುವ ಆಯುಧವಾಗಿರುವಂತೆ ಮತ್ತು ಇತರರು ದಲಿತರನ್ನು ಹೊಸದಾಗಿ ದೂರ ಇಡಲು ತೊಡಗಿರುವಂತೆ ಗೊಹತ್ಯೆ ನಿಷೇಧ ಕಾನೂನು ಬಿಜೆಪಿ ವೈದಿಕರಿಂದ ಬೇರೆಯವರು ಮತ್ತೂ ದೂರ ನಿಲ್ಲುವಂತಾಗುತ್ತದೆ.

(೫) ವೈದಿಕರು, ವೈಚಾರಿಕ ಹಿನ್ನಲೆಯಿಂದ ಬಂದ ವೀರಶೈವರನ್ನು ಬಹಳ ಕಾಲ ಬಳಸಿಕೊಳ್ಳಲು ಆಗುವುದಿಲ್ಲ. ಅವರು ಯಡಿಯೂರಪ್ಪ ಇರುವ ಕಡೆ ಇರುತ್ತಾರೆ, ಬಿಜೆಪಿಯಲ್ಲಿ ಅಲ್ಲ.

(೬) ಒಕ್ಕಲಿಗರಿಗೆ ಜೀವನ ಧರ್ಮ ಇದೆಯೆ ಹೊರತು ಸಾಂಸ್ಥಿಕ ಧರ್ಮ ಬದ್ಧತೆ ಇಲ್ಲ. ಆದ್ದರಿಂದ ಬಿಜೆಪಿ ಕಡೆಗಿನ ಅವರ ಬೆಂಬಲ ತೀರಾ ತಾತ್ಕಾಲಿಕ.

(೭) ಈ ಗೋಹತ್ಯೆ ನಿಷೇಧ ಕಾನೂನಿನಿಂದ ಪ್ರಜಾಪ್ರಭುತ್ವ ನಾಚಿಕೊಳ್ಳುತ್ತದೆ. 'ಇಚ್ಛೆಯಂತೆ ಇರು ಎಂದು ನಾನು ಹೇಳಿದರೆ ಇಲ್ಲ, ಉಚ್ಚೆ ಕುಡಕೊಂಡೇ ಇರುತ್ತೇನೆ ಅಂದನಂತೆ' ಎಂಬ ಗಾದೆಯಂತೆ ಮೂಲಭೂತವಾದ ಪ್ರಜಾಪ್ರಭುತ್ವವನ್ನು ಸೋಲಿಸುತ್ತದೆ.

೫ ಗೋಹತ್ಯೆ ಮತ್ತು ಪ್ರಾಣಿಹತ್ಯೆ

ಈಗ ಗೋವುಗಳ ಹತ್ಯೆಯಾಗುತ್ತಿದೆ. ಮಾನವನ ಪಾಪ ಹೆಚ್ಚಾಗುತ್ತಿದೆ. ಅವನ ಅಳಿಗಾಲ ಸಮೀಪಿಸುತ್ತಿದೆ ಎನ್ನುವುದಾದಲ್ಲಿ ಭಾರತಕ್ಕೆ ಮಹಾ, ಮಹಾ ಮತ್ತು ಬಹು ದೊಡ್ಡ ಭವಿಷ್ಯವಿದೆ ಎಂದು ನಂಬಬಹುದಾಗಿದೆ. ಯಾಕೆಂದರೆ ಭಾರತದಲ್ಲಿನ ಬಹುಸಂಖ್ಯಾತರು ಮತ್ತು ಜಗತ್ತಿನ ಬಹು ಸಂಖ್ಯಾತರು ಗೋವುಗಳನ್ನು ಹತ್ಯೆಮಾಡಿ (ಹಾಗೆ ಹೇಳುವುದಾದರೆ) ಅಳಿಗಾಲದ ಕಡೆಗೆ ದಾಪುಗಾಲು ಹಾಕುತ್ತಿದ್ದಾರೆ ಎಂದು ತಿಳಿಯಬೇಕಾಗುತ್ತದೆ. ಇವರೆಲ್ಲ ನಾಶವಾದ ಮೇಲೆ ನಾವೇ ತಾನೆ ಉಳಿದಿರುವುದು: ಗೋಮಾಂಸ ತಿನ್ನದಿರುವವರು! ಆದ್ದರಿಂದ ಈಗ ಜಗತ್ತು ಅಭಿವೃದ್ಧಿ ಪಡಿಸಿರುವ ಸಂಪತ್ತೆಲ್ಲ ಏನೂ ಕಷ್ಟವಿಲ್ಲದೆ ನಮ್ಮ ಪಾಲಾ ಗುವುದರಲ್ಲಿ ಅನುಮಾನವಿಲ್ಲ. ಆಗ ನಾವು ಕಷ್ಟಪಟ್ಟು ದುಡಿಯದೆ ಸುಮ್ಮನೆ ತಿಂದು ಬಿದ್ದುಕೊಂಡಿರಬಹುದು. ಇಲ್ಲವೆ ಪಾಪದವರಿಗೆ ಮಂತ್ರೋಪದೇಶ ಮಾಡುತ್ತಾ...

ಗೋವುಗಳನ್ನು ಆಹಾರಕ್ಕಾಗಿ ಬಳಸುವುದು ಹತ್ಯೆ ಎನ್ನುವುದಾದರೆ ನಾವೆಲ್ಲ ಕೊಯ್ದು ತಿನ್ನುತ್ತಿರುವ ಪ್ರಾಣಿಗಳದೂ ಹತ್ಯೆಯೆ. ಹಾಗಿದ್ದಲ್ಲಿ ಈ ಮನುಷ್ಯ ಕೂಡಲೆ ತಾನು ಆಹಾರಕ್ಕಾಗಿ ಬಳಸುತ್ತಿರುವ ಪ್ರಾಣಿಗಳದೂ ಹತ್ಯೆಯನ್ನು ನಿಲ್ಲಿಸಲೇಬೇಕಾಗುತ್ತದೆ. ಇದಕ್ಕಾಗಿ ಅಂತರಾಷ್ಟ್ರೀಯ ಕಾನೂನೊಂದನ್ನು ತಂದು ಬಂದೂಬಸ್ತ್ ಮಾಡಬೇಕಾಗುತ್ತದೆ. ಅಂತರಾಷ್ಟ್ರೀಯ ಸರ್ಕಾರ ಇಲ್ಲ ನಿಜ. ಈಗ ಅಮೆರಿಕವೆ ಅಂತರಾಷ್ಟ್ರೀಯ ಸರ್ಕಾರ. ಅದು ಈ ಜವಾಬ್ದಾರಿಯನ್ನು ಹೊರುತ್ತದೆಯೇ? ಕೇಳಬೇಕು. ಇದು ತೋಳವನ್ನು ಕುರಿಗಳನ್ನು ರಕ್ಷಿಸು ಎಂದು ಕೇಳಿಕೊಂಡಂತಾಗಬಹುದು. ಅಮೆರಿಕಕ್ಕೆ ಶಕ್ತಿ ಇದೆ. ನಿಜ. ಅದು ತನ್ನನ್ನು ಹೊರತು ಪಡಿಸಿ ಜಗತ್ತಿನ ಇತರೆಲ್ಲ ದೇಶಗಳಲ್ಲಿ ಈ ಕಾನೂನನ್ನು ಜಾರಿಗೆ ತರಲೂಬಹುದು!

"ಹಿಂದುಗಳು ಎಂಬುವವರಿಗೆ ಅತಃಸಾಕ್ಷಿ ಇದ್ದರೆ!" ಈ ಮಾತನ್ನು ಅಂಬೇಡ್ಕರ್ ಹೇಳುತ್ತಾರೆ. ಅವರ ಹೃದಯಕ್ಕೆ ಕಿವಿಕೊಟ್ಟು ನಾವು ಕೇಳಬೇಕು. ಅವರೂ ಕೂಡ ಭಾರತ ದೇಶದ ಚಿಂತನ ಧಾರೆಯ ಗಂಗಾನದಿಯೆ ಆಗಿ

ದ್ದಾರೆ. ಅಂಥ ಅಂತಃಸಾಕ್ಷಿ ಇದ್ದರೆ ಭಾರತಕ್ಕೆ ಏಕೆ, ಜಗತ್ತಿಗೇ ಒಂದು ಕರೆ ಕೊಡಬಹುದು; ಪ್ರಾಣಿ ಹತ್ಯೆ ಅತಿಯಾಗುತ್ತಿದೆ ನಿಲ್ಲಿಸಿ, ಆಗದಿದ್ದರೆ ತಡೆಯಿರಿ. ಜೀವಸಂಕುಲವನ್ನು ಉಳಿಸಿ' – ಎಂದು. ಇಂಥದೊಂದು ಶಕ್ತಿ ಮತ್ತು ಧೀಮಂತಿಕೆಯನ್ನು ಗಾಂಧೀಜಿ ಅವರು ನಮಗೆ ತಂದು ಕೊಟ್ಟು ಹೋಗಿದ್ದಾರೆ. ಅವರ 'ಅಹಿಂಸಾ' ತತ್ವ ಭಾರತದ ಧೀಶಕ್ತಿಯಾಗಬೇಕು. ಅದು ಯಾವುದೇ ರಾಕ್ಷಸ ಶಕ್ತಿಗಿಂತ ದೊಡ್ಡದು ಮತ್ತು ಪ್ರಳಯಕಾರಿ. ಆಗುವುದಾದರೆ ಆಗಲಿ ಅಹಿಂಸಾ ಪ್ರಳಯ!

ಜಗತ್ತಿನಲ್ಲಿ ಪ್ರತಿನಿತ್ಯ ಲಕ್ಷಾಂತರ ಪ್ರಾಣಿಗಳು ವಧೆಯಾಗುತ್ತಿವೆ. ಅವು ಮಾತನಾಡುವುದಿಲ್ಲ ಎಂಬ ಒಂದೇ ಕಾರಣಕ್ಕೆ ಅವುಗಳ ಉಳಿವು ಕಷ್ಟವಾಗಿದೆ. ಮನುಷ್ಯ ಅವುಗಳನ್ನು ತಾನು ತಿನ್ನುವುದಕ್ಕಾಗಿ ಮಾತ್ರ ಉಳಿಸಿದ್ದಾನೆ. ಆ ಪ್ರಾಣಿಗಳೇ ತಮ್ಮ ಜೀವಿತಕ್ಕಾಗಿ ಉಳಿದಿಲ್ಲ ಮತ್ತು ಉಳಿಯುವ ಪರಿಸ್ಥಿತಿ ಇಲ್ಲ. ಸಾಕು ಪ್ರಾಣಿಗಳನ್ನು ಮನುಷ್ಯ ತನ್ನ ಆಹಾರಕ್ಕಾಗಿಯೆ ಉಳಿಸಿಕೊಂಡಿದ್ದಾನೆ. ಅವು ಅವನ ಅನುಭೋಗದ ಸಂಪತ್ತಿನ ಮೊತ್ತದಲ್ಲಿ ಸೇರಿ ಹೋಗಿವೆ. ಈಗ ಅವು ನಿರಂತರ ಬಂಧಿಗಳು. ಅವು ಮಾನವನ ಜೈಲಿನಲ್ಲಿವೆ. ಅವನು ನಿರ್ಧರಿಸಿದ ಸಮಯದವರೆಗೆ ಜೀವಿತದಲ್ಲಿರುತ್ತವೆ. ಅವಕ್ಕೆ ಆತ್ಮ-ಪರಮಾತ್ಮ ಯಾರೂ ಇಲ್ಲ. ಮನುಷ್ಯ ಬರೆದ ಡೆತ್ ಸೆಂಟೆನ್ಸ್ ಮಾತ್ರವೆ ಅವುಗಳ ಹಣೆ ಬರಹ, ಅವು ಯೊಹೊತ್ತೂ ಸಾವಿನ ಭಯದಲ್ಲಿವೆ. ಅವುಗಳದೇ ಆದ ಒಂದು ಸಮೂಹ ಸಂಸ್ಕೃತಿ ಇದೆ ಎಂಬುದು ಕೂಡ ಮನುಷ್ಯನ ತಲೆಯಲ್ಲಿ ಇಲ್ಲ. ಮನುಷ್ಯನೆಂಬ ಯಜಮಾನ ಹೇಳುತ್ತಲೇ ಬಂದಿದ್ದಾನೆ: ಕೋಳಿ ಕೇಳಿ ಸಾಂಬಾರು ಅರೆಯುತ್ತಾರೆಯೆ? ಎಂದು. ಇದು ಎಂದೆಂದೂ.

ಸಾಕು ಪ್ರಾಣಿಗಳ ಸಾಂಸ್ಕೃತಿಕ ಬದುಕು ಕಳೆದು ಹೋಗಿದೆ. ಮನುಷ್ಯ ಸಂಸ್ಕೃತಿಯೆ, ಅಂದರೆ ಅವುಗಳ ದೃಷ್ಟಿಯಿಂದ ಕೊಲೆ ಗಡುಕ ಸಂಸ್ಕೃತಿಯೆ ಅವುಗಳದೂ ಆಗಿರುವುದು ದುರಂತ. ಸಾಕು ಪ್ರಾಣಿಗಳ ಸ್ಥಿತಿ ಉತ್ತಮವಾಗಿದೆಯೆ? ಖಂಡಿತ ಇಲ್ಲ. ಸಾಕು ಪ್ರಾಣಿಗಳನ್ನು ಮನುಷ್ಯ ತನ್ನ ಸ್ವಾರ್ಥಕ್ಕಾಗಿಯಾದರೂ ಮರು ಉತ್ಪಾದನೆಯನ್ನೂ ಮಾಡುತ್ತಾನೆ, ಅತಿ ಉತ್ಪಾದನೆಯನ್ನೂ ಮಾಡುತ್ತಿದ್ದಾನೆ; ಬ್ರಾಯಿಲರ್ ಕೋಳಿಗಳ ಥರ. ಆದರೆ ಕಾಡು ಪ್ರಾಣಿಗಳು ಆ ಬಗೆಯಲ್ಲಿ ಉತ್ಪಾದನೆಯಾಗುವುದಿಲ್ಲ. ಪ್ರಾಕೃತಿಕ ಎಲ್ಲ ಅವಗಡಗಳ ನನ್ನು ಎದುರಿಸಿ ಅವುಗಳ ಸಂತತಿ ಯನ್ನು ಉಳಿಸಿಕೊಂಡು ಬಂದಿವೆ. ಇತ್ತೀಚಿನ ಮಾನವ ನಿರ್ಮಿತ ಕಲುಷಿತ ವಾತಾವರಣದಿಂದಾಗಿ ಅವುಗಳ ಸಂತಾನೋತ್ಪತ್ತಿ ಮತ್ತು ಅಸ್ತಿತ್ವ ಆತಂಕದಲ್ಲಿದೆ. ಆದರೆ ಈ ಬಕಾಸುರನೆಂಬ ಮನುಷ್ಯ ಅವುಗಳನ್ನು ನಿರಂತರ ಬೇಟೆಯಾಡುತ್ತಿದ್ದಾನೆ. ಅವುಗಳ ಮಾಂಸವನ್ನು ಹೊಸ ರುಚಿಯ ಮೆನು ಪಟ್ಟಿಯಲ್ಲಿ ಸೇರಿಸುತ್ತಿದ್ದಾನೆ. ಹಲವು ನೆಲ ಜೀವಿಗಳೂ ಇದೇ ಪರಿಸ್ಥಿತಿಯನ್ನು ಎದುರಿಸುತ್ತಿವೆ. ಮನುಷ್ಯನ ಅಧಿಕಾರದ ಹೊರಗೆ ಈ ಯಾವ ಜೀವಿಯೂ ಉಳಿಯಲು ಸಾಧ್ಯ ವಿಲ್ಲ ಎಂಬ ಸ್ಥಿತಿ ನಿರ್ಮಾಣವಾಗಿದೆ. ಹೀಗೆ, ಈ ಮನು ಷ್ಯನಿಂದ ಮತ್ತಾವ ಜೀವಿಯೂ ಸ್ವತಂತ್ರವಾಗಿ ಬದುಕಲು ಆಗುತ್ತಲೇ ಇಲ್ಲವಲ್ಲ! ಇನ್ನು ಇವನು ಸ್ವಾತಂತ್ರ್ಯ, ಸಮಾ ನತೆಯ ಬಗ್ಗೆ ಏನು ಹೇಳುತ್ತಿದ್ದಾನೆ?

ನನಗೆ ಮನುಷ್ಯ ಸಾಕು ಅನ್ನಿಸಿದ್ದಾನೆ. ಅವನ ದೃಷ್ಟಿಯಿಂದ ಅವನು ಮುಖ್ಯನಾಗಿದ್ದಾನೆ. ಜಗತ್ತಿನ ಇತರ ಜೀವ ಸಂಕುಲಗಳ ದೃಷ್ಟಿಯಿಂದ ಅವನು ಅಮುಖ್ಯ ಮತ್ತು ಅನಿಷ್ಟ. ಭೂಮಿಯ ಮೇಲೆ ಅವನು ಮಾಡುತ್ತಿರುವ ಅತ್ಯಾಚಾರವನ್ನು ನೋಡಿದರೆ ಅವನು ಸಾಯುವವರೆಗೆ ಜೈಲಿನಲ್ಲಿರಬೇಕಾಗುತ್ತದೆ. ನಿಜದ ಅರ್ಥದಲ್ಲಿ ಈತ ಭೂ ಹಂತಕ. ಆದರೆ ಇವನನ್ನು ಶಿಕ್ಷಿಸುವ ನ್ಯಾಯಾಧೀಶನೆ ಇಲ್ಲವಲ್ಲ!!

'ಈ ಮನುಷ್ಯನಲ್ಲದ ಮನುಷ್ಯನನ್ನು' ಸರಿದಾರಿಗೆ ತರುವುದಾದರೂ ಹೇಗೆ? ಪ್ರಕೃತಿಯ ಜೊತೆಗೆ ಹೋರಾಡಿ ತನ್ನ ಜೀವನವನ್ನು ನಿರ್ಮಿಸಿಕೊಳ್ಳುವ ಕಾರಣಕ್ಕಾಗಿ ಮನುಷ್ಯನ ಅಸ್ತಿತ್ವಕ್ಕೆ ಕಂಟಕ ಪ್ರಾಯವಾಗಿದ್ದ ಪ್ರಾಣಿಗಳನ್ನು ನಿಯಂತ್ರಿಸುವುದು ಅನಿವಾರ್ಯವಾಗಿತ್ತು, ನಿವಾರಿಸುವುದಲ್ಲ. ಪ್ರಕೃತಿಯ ಉಳಿವಿಗೆ ಅದರೊಳಗೆ ಸೃಷ್ಟಿಯಾಗಿರುವ ಎಲ್ಲ ಜೀವಿಗಳೂ ಅಗತ್ಯ. ಅದು ಭೂಮಿಯ ಅನಾಟಮಿ. ಅಂತ ಅನಿವಾರ್ಯತೆಯ ಕಾರಣವಾಗಿಯೆ ಈ ಭೂಮಿಯ ಮೇಲೆ ಇರಬೇಕಾದ ಪ್ರಾಣಿಗಳು ಇವೆ. ಬೇಡವಾದುವು ಎಂದಿದ್ದರೆ ಪ್ರಕೃತಿಯೆ ತನ್ನ ತೀರ್ಮಾನವನ್ನು ತೆಗೆದು ಕೊಳ್ಳುತ್ತಿತ್ತು. ಅಥವ ಈಗಿರುವ 'ಆಹಾರ ಸರಪಳಿ ನಿಯ ಮ'ದಂತೆ ಯಾವ ಯಾವ ಪ್ರಾಣಿ ಮತ್ತೆ ಯಾವ ಯಾವ ಪ್ರಾಣಿಯನ್ನು ತಿಂದು ಬದುಕಬೇಕೆಂಬ ತನ್ನ ಪ್ರಾಕೃತಿಕ ನಿಯಮವನ್ನು ಜಾರಿಯಲ್ಲಿಟ್ಟಿರುತ್ತಿತ್ತು. ಈ ಹೊಣೆಗಾರಿಕೆಯನ್ನು ಅದು ಯಾವುದಾದರೊಂದು ಪ್ರಾಣಿಗೂ ಅಥವಾ ಮನುಷ್ಯನಿಗೂ ಬಿಡುತ್ತಿರಲಿಲ್ಲ. ಈಗ ಕೂಡ ಪ್ರಕೃತಿ ಜೀವ ಸಂಕುಲಗಳ ಅಸ್ತಿತ್ವದ ಹಕ್ಕನ್ನು ಮನುಷ್ಯನಿಗೆ ಬಿಟ್ಟುಕೊಟ್ಟಿಲ್ಲ. ಹಾಗೆ ಮನುಷ್ಯ ತಿಳಿದು ಕೊಂಡಿದ್ದರೆ ಅವನಿಗೂ ಸಾವಿನ ಸರದಿ ತಪ್ಪಿದ್ದಲ್ಲ. ದುರ್ಯೋಧನ ಭೀಷ್ಮರಿಗೆ ಮೊದಲ ಸೇನಾಧಿಪಟ್ಟ ಕಟ್ಟಿದಾಗ ಕರ್ಣ ನನಗೆ ಮೊದಲು ಕೊಡಬೇಕಾಗಿತ್ತು ಎಂದು ಎಗರಾಡಿದನಂತೆ. ಆಗ ಭೀಷ್ಮರು ಗಂಭೀರವಾಗಿ ಹೇಳಿದರಂತೆ ಯಾಕಪ್ಪ ಗಲಾಟೆ? ನನಗೆ ಬಂದಂತೆ ನಿನಗೂ ಸರದಿ ಬರುತ್ತದೆ ಕಾಯುತ್ತಿರು ಅಂದರಂತೆ. ಈ ಮಾತನ್ನು ಮಹಾಕವಿ ಪಂಪ ತನ್ನ ಪಂಪ ಭಾರತದಲ್ಲಿ ಉಲ್ಲೇಖಿಸಿದ್ದಾನೆ.

ಈಗ ನಾನು ಮಾನವ ಅಭಿವೃದ್ಧಿಯನ್ನು ಪ್ರಧಾನವಾಗಿಟ್ಟುಕೊಂಡು ಚಿಂತಿಸುತ್ತಿಲ್ಲ. ಇದು ಏಕವಾದಿ ಮತ್ತು ಏಕಮೇವಾದಿ ಸಿದ್ಧಾಂತ. ನನಗೆ ಈ ಭೂಮಿಯ ಮೇಲಿನ ಎಲ್ಲ ಪ್ರಾಣಿಗಳೂ, ಎಲ್ಲ ಸಂಸ್ಕೃತಿಗಳೂ ಅಗತ್ಯ ಎನಿಸಿದೆ. ಆದ್ದರಿಂದ ನಾನು ಕೇಂದ್ರಿತ ನೆಲೆಯಲ್ಲಿ ಭೂಮಿಯ ಅಸ್ತಿತ್ವನ್ನು ಪ್ರತಿಪಾದಿಸುತ್ತಿದ್ದೇನೆ. ಈಗ ಮಾನವ ಅಭಿವೃದ್ಧಿ ಎಂಬುದು ಭೂಮಿಯ ಶೋಷಣೆ, ಬಳಕೆ ಅಲ್ಲ; ಅದು ಇತರ ಸಹ ಜೀವಿಗಳ ಅಸ್ತಿತ್ವ ನಾಶದ ನಡವಳಿಕೆಯಾಗಿದೆ. ಭೂಮಿಯ ಮೇಲೆ ಇರುವುದೆಲ್ಲ ತನಗಾಗಿ, ತನ್ನ ಮೋಜು ಮಸ್ತಿಗಾಗಿ ಎಂದು ತಿಳಿಯಲಾಗಿದೆ. ಇದು ಪುರಾತನ ಪ್ರಾಣಿ ಪ್ರವೃತ್ತಿಗಿಂತ ಭಿನ್ನವಾದುದೇನೂ ಅಲ್ಲ. ಮನುಷ್ಯ ತನ್ನೊಳಗಿನ ಅಂತರಂಗವೆಂಬ ವ್ಯಕ್ತಿತ್ವವನ್ನು ಮರೆತು ಕೂತಿದ್ದಾನೆ.

ಈ ಹೊತ್ತಿನ ಅಭಿವೃದ್ಧಿ ಸಿದ್ಧಾಂತದ ಬಳಸು ಮತತ ಬಿಸಾಡು ತತ್ವ ಏನು ಹೇಳುತ್ತಿದೆ, ಎಲ್ಲಿಗೆ ತಲುಪ ಬಹುದು? ಕೊಳ್ಳುವವರು ಬಳಸಬಹುದು, ಹೆಚ್ಚಾದವರು ಬಿಸಾಕಬಹುದು. ಆ ಎರಡೂ ಇಲ್ಲದವರು ಏನು ಮಾಡಬೇಕು. ಅವರ ದೇಹವನ್ನೇ ಬಿಸಾಡಬೇಕಾಗುತ್ತದೆ. ಅವರಲ್ಲಿ ಇನ್ನೇನಿರುತ್ತದೆ ಬಿಸಾಡಲು! ಅಭಿವೃದ್ಧಿಯೂ ಒಂದು ಕೊಲೆಗಡುಕ ತತ್ವ ಆಗಬಲ್ಲದು ಎಂಬುದು ಇದರಿಂದ ತಿಳಿದುಬರುತ್ತಿದೆ. ಅಭಿವೃದ್ಧಿ ತತ್ವ ಇರುವುದೇ ಬಡವರ ಉದ್ಧಾರಕ್ಕೆ ಎಂದು ತಿಳಿದುಕೊಂಡ ಒಂದು ಕಾಲವಿತ್ತು, ಅದು ಕೊನೆಯ ಮನುಷ್ಯನನ್ನು ಉದ್ದೇಶಿಸಿದ್ದಾಗ. ಈಗ ಕೊನೆಯ ಮನುಷ್ಯ ಯಾರ ಲಿಸ್ಟ್‌ನಲ್ಲೂ ಇಲ್ಲ. ಈಗ ಅವನು ತನ್ನದೇ ಅಭಿವೃದ್ಧಿ ತತ್ವವನ್ನು ಕಂಡುಕೊಳ್ಳಬೇಕಾಗಿದೆ. ಅದು ಅವನಿರುವ ಜಾಗದಲ್ಲಿ, ಅವನಿಗಿರುವ ಸಂಪನ್ಮೂಲದಲ್ಲಿ ಮತ್ತು ಅವನನ್ನು ಉಳಿಸಿಕೊಂಡು ಬಂದಿರುವ ಸಕಲ ಜೀವರಾಶಿಗಳ ಸ್ನೇಹ ಸಂಬಂಧದ ಪ್ರಕೃತಿಯ ಜೊತೆಗೆ. (ಮುಗಿಯಿತು) □

ಈ ಹೊತ್ತಿನ ಅಭಿವೃದ್ಧಿ ಸಿದ್ಧಾಂತದ ಬಳಸು ಮತತ ಬಿಸಾಡು ತತ್ವ ಏನು ಹೇಳುತ್ತಿದೆ, ಎಲ್ಲಿಗೆ ತಲುಪ ಬಹುದು? ಕೊಳ್ಳುವವರು ಬಳಸಬಹುದು, ಹೆಚ್ಚಾದವರು ಬಿಸಾಕಬಹುದು. ಆ ಎರಡೂ ಇಲ್ಲದವರು ಏನು ಮಾಡಬೇಕು. ಅವರ ದೇಹವನ್ನೇ ಬಿಸಾಡಬೇಕಾಗುತ್ತದೆ. ಅವರಲ್ಲಿ ಇನ್ನೇನಿರುತ್ತದೆ ಬಿಸಾಡಲು! ಅಭಿವೃದ್ಧಿಯೂ ಒಂದು ಕೊಲೆಗಡುಕ ತತ್ವ ಆಗಬಲ್ಲದು ಎಂಬುದು ಇದರಿಂದ ತಿಳಿದು ಬರುತ್ತಿದೆ. ಅಭಿವೃದ್ಧಿ ತತ್ವ ಇರುವುದೇ ಬಡವರ ಉದ್ಧಾರಕ್ಕೆ ಎಂದು ತಿಳಿದು ಕೊಂಡ ಒಂದು ಕಾಲವಿತ್ತು.

ಸಮಯ ಸಂದರ್ಭ ಬಂದಾಗ ನಾನೇ ಹೇಳುತ್ತೇನೆ.

○ ತೆಲಗು ಮೂಲ: ಡಾ. ಕೆ. ಸಿವಾರೆಡ್ಡಿ
ಕನ್ನಡಕ್ಕೆ: ವೆಂಕಟಾಪು ಸತ್ಯಂ, ಮಾಲೂರು

ಸಮಯ ಸಂದರ್ಭ ಬಂದಾಗ
ನಾನೇ ಹೇಳುತ್ತೇನೆ
ಅಲ್ಲಿಯವರೆಗೆ
ಕಣ್ಣುಗಳನ್ನು ತೆಗೆದು ನಿನ್ನ ಟೇಬಲ್ ಮೇಲಿಡುತ್ತೇನೆ
ಕನ್ನಡಿಯಂತೆ ಬಳಸಿಕೊ,
ನೀನೀಗ ಏನೇ ಕೇಳಿದರೂ
ನಾನು ಉತ್ತರ ಹೇಳಲಾರೆ
ನೋಡುತ್ತ ನಿಂತಿರುವುದು ತಪ್ಪು, ಕೇಳುತ್ತಾ ಇರುವುದೂ ತಪ್ಪು

ಒಂದೊಂದು ಸಮಯದಲ್ಲಿ
ಕೆಲವು ಸಾವಿರ ಕುದುರೆಗಳು ಹುಚ್ಚೆದ್ದು ಓಡುತ್ತಿರುತ್ತವೆ
ಒಂದೊಂದು ಖಂಡ
ಬೆಟ್ಟದ ಶಿಖರದಂತೆ ಮುರಿದು ಬೀಳುತ್ತಿರುತ್ತದೆ
ಬೀಳುತ್ತಿರುವ ಹುಲ್ಲುಮೆದೆಯನ್ನು ಸ್ತಂಭವೊಂದು ಕೈಹಿಡಿದು
ನಿಲ್ಲಿಸಿದಂತೆ ನಿಲ್ಲಿಸಲಾರೆವು
ಮುರಿದು ಬೀಳುವುದೆ ಅದರ ಸಹಜತೆಗಳಾಗಿರುವಾಗ;

ಅವನ್ಯಾರೊ ಬೆಟ್ಟವೊಂದನ್ನು ಛತ್ರಿಯಾಗಿಸಿಕೊಂಡು
ಬೆರಳ ತುದಿಯಲ್ಲಿ ನಿಲ್ಲಿಸಿದನಂತೆ
ಯಾವ ಛತ್ರಿಯೂ ಇಲ್ಲದೆ ಬಿಸಿಲನ್ನ, ಮಳೆಯನ್ನ
ಎದುರಿಸುವ ದಡ್ಡ ಮನುಷ್ಯರಿಗಿದು ಕಾಲವಲ್ಲ.

ಸಮಯ ಬಂದಾಗ ನಾನೇ ಹೇಳುತ್ತೇನೆ
ಅಲ್ಲಿಯವರೆಗೂ ಮಗುಚಿರುವ ನನ್ನ ಕೈಗಳ ಮೇಲೆ
ಮುನ್ನುಗ್ಗುತ್ತಿರುವ ಅಶ್ವ ಸಮೂಹವನ್ನ ನೋಡು

ಆಲದ ಮರದಲ್ಲಿನ ಉಡದಂತೆ
ನನ್ನ ಜುಟ್ಟನಿಡಿದು ಉಯ್ಯಾಲೆಯಾಡುತ್ತಿರುವ
ಸಣ್ಣ ಮಗುವಿನ ಕನಸನ್ನು ನೋಡು
ಇದಕ್ಕೂ ಮೊದಲು ಸುರಳಿಯಾಕಾರದಲ್ಲಿ ತಿರುಗಾಡುತ್ತ
ಪೊಲೀಸಿನವರು ಹೊರಟುಹೋದರು
ಮೂಸಿ ನದಿಯಿಂದ ಶ್ರೇಷ್ಠವಾದಂತಹ ಒಂದು ದುರ್ಗಂಧದ ಅಲೆ
ದಟ್ಟವಾಗಿ ಎಲ್ಲಾ ಕಡೆಗೂ ಹಬ್ಬಿ, ಹೊದಿಕೆ ಹಾಸಿ ಹೊಗಿದೆ

ಮರಳು ದಿಬ್ಬಗಳ ಮೇಲೆ
ಬೆರಳಿಂದ ಹುಚ್ಚು ಬರಹಗಳನ್ನು ಗೀಚುತ್ತ
ಪದ್ಯವೊಂದು ಉಳಿದು ಹೊಗಿದೆ

'ಸ್ಫೂರ್ತಿಧಾಮ' ಕೊಡಮಾಡುವ

'ಬೋಧಿ ವೃಕ್ಷ' ಮತ್ತು 'ಬೋ

ಬೋಧಿವೃಕ್ಷ

'ಸ್ಫೂರ್ತಿಧಾಮ'ವನ್ನು ನಿರ್ವಹಿಸುತ್ತಿರುವ 'ಅಂಬೇಡ್ಕರ್ ಶತಮಾನೋತ್ಸವ ಸಮಿತಿ ಟ್ರಸ್ಟ್' ಏಪ್ರಿಲ್ 14, 2011 ರಂದು ನಡೆಯಲಿರುವ 'ಅಂಬೇಡ್ಕರ್ ಹಬ್ಬ'ದಲ್ಲಿ ನೀಡಲಾಗುವ 'ಬೋಧಿ ವೃಕ್ಷ' ಮತ್ತು 'ಬೋಧಿ ವರ್ಧನ' ಪ್ರಶಸ್ತಿಗಾಗಿ ಅರ್ಹ ವ್ಯಕ್ತಿಗಳ ಆಯ್ಕೆಗೆ ಸೂಕ್ತ ಪ್ರಸ್ತಾವನೆ (Proposal)ಯನ್ನು ಆಹ್ವಾನಿಸುತ್ತಿದೆ.

"change the way we think, work, live and learn" ಎಂಬ ಘೋಷವಾಕ್ಯಕ್ಕೆ ಬದ್ಧವಾಗಿ ಕಾರ್ಯನಿರ್ವಹಿಸುತ್ತಿರುವ ಈ ಟ್ರಸ್ಟ್, ತಳಸಮುದಾಯಗಳ ಶೈಕ್ಷಣಿಕ ಅಭಿವೃದ್ಧಿ, ಸಾಂಸ್ಕೃತಿಕ ಅನನ್ಯತೆ, ಸಾಮಾಜಿಕ ಪರಿವರ್ತನೆ ಮತ್ತು ರಾಜಕೀಯ ತಾತ್ವಿಕತೆಯನ್ನು ವಿಸ್ತರಿಸುವ, ದೃಢವಾಗಿಸುವ ಕಾರ್ಯಗಳನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ. ಆ ಮೂಲಕ ಅವಕಾಶಗಳಿಂದ ವಂಚಿತವಾಗಿರುವ ತಳಸಮುದಾಯಗಳ ಪಾಲಿನ ನ್ಯಾಯವಾದ ಹಕ್ಕನ್ನು ದೊರಕಿಸಿಕೊಡುವುದು ಇದರ ನಿಶ್ಚಿತ ಅಸ್ಖಲಿತ ಧ್ಯೇಯವಾಗಿದೆ.

ಕಳೆದ ಒಂಭತ್ತು ವರ್ಷಗಳಿಂದ ಕನ್ನಡದ ವೈಚಾರಿಕ ಪ್ರಜ್ಞೆಯನ್ನು ವರ್ತಮಾನದ ತುರ್ತಿಗನುಗುಣವಾಗಿ ಅರ್ಥಪೂರ್ಣವಾಗಿ ವಿಸ್ತರಿಸುತ್ತಿರುವ 'ಸಂವಾದ' ಮಾಸ ಪತ್ರಿಕೆಯನ್ನು ಸ್ಫೂರ್ತಿಧಾಮ ಪ್ರಕಟಿಸುತ್ತಿದೆ.

ಅಧಿಕಾರದ ಯಂತ್ರಗಳಿಂದ ಶೋಷಣೆಗೊಳಗಾಗುವುದನ್ನು ತಪ್ಪಿಸುವುದಕ್ಕಾಗಿ 'ಜನಸಾಮಾನ್ಯರಿಗಾಗಿ ಕಾನೂನು', ಹಾಗೂ ಕೋಮು ಘರ್ಷಣೆ ತೀವ್ರವಾಗಿ ತಳಸಮುದಾಯಗಳ ರಾಜಕೀಯ ಆಯ್ಕೆ ಸಮಸ್ಯಾತ್ಮಕವಾಗಿರುವ ಇಂದಿನ ಸಂದರ್ಭದಲ್ಲಿ, ಈ ಬಿಕ್ಕಟ್ಟನ್ನು ನಿವಾರಿಸುವುದಕ್ಕೆ ನೆರವಾಗುವ 'ಧರ್ಮ ಮತ್ತು ಸಂಸ್ಕೃತಿ'ಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ 'ಓರಿಯಂಟೇಷನ್' ಕಾರ್ಯಕ್ರಮಗಳನ್ನು 'ಸ್ಫೂರ್ತಿಧಾಮ' ನಡೆಸುತ್ತದೆ.

ಕಳೆದ ಮೂರು ವರ್ಷಗಳಿಂದ ಅಂಬೇಡ್ಕರ್ ಜಯಂತಿಯನ್ನು 'ಅಂಬೇಡ್ಕರ್ ಹಬ್ಬ'ವಾಗಿ ಆಚರಿಸಿಕೊಂಡು ಬರುತ್ತಿರುವ 'ಸ್ಫೂರ್ತಿಧಾಮ', ಇದೇ ಸಂದರ್ಭದಲ್ಲಿ ತಳಸ್ತರದವರ ಅಭಿವೃದ್ಧಿ ಮತ್ತು ಏಳಿಗೆಗಾಗಿ ದುಡಿದವರನ್ನು ಗುರುತಿಸುವ, ಗೌರವಿಸುವ ಸಲುವಾಗಿ 'ಬೋಧಿ ವೃಕ್ಷ' ಮತ್ತು 'ಬೋಧಿ ವರ್ಧನ' ಪ್ರಶಸ್ತಿಯನ್ನು ನೀಡುತ್ತಿದೆ. ವರ್ಷಕ್ಕೆ ಒಂದು 'ಬೋಧಿವೃಕ್ಷ' ಮತ್ತು ಐದು 'ಬೋಧಿವರ್ಧನ' ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಮೊದಲನೆ ಪ್ರಶಸ್ತಿಗೆ ಒಂದು ಲಕ್ಷ ರೂ. ನಗದು ಮತ್ತು ಎರಡನೆ ಪ್ರಶಸ್ತಿಗೆ ತಲಾ ಇಪ್ಪತ್ತು ಸಾವಿರ ರೂ. ನಿಗದಿಯಾಗಿದೆ. 'ಸ್ಫೂರ್ತಿಧಾಮ'ದ 'ಅಂಬೇಡ್ಕರ್ ಹಬ್ಬ' ಎನ್ನುವುದು ನಾಡಿನ ಖ್ಯಾತ ಬುದ್ಧಿಜೀವಿಗಳು, ಅಂಬೇಡ್ಕರ್‌ವಾದಿಗಳು ಮತ್ತು ಬೌದ್ಧ ಸಂತರು ಹಾಗೂ ತಳ ಸಮುದಾಯಗಳೊಂದಿಗೆ ಕೆಲಸ ಮಾಡುತ್ತಿರುವ ಸಾವಿರಾರು ಕಾರ್ಯಕರ್ತರು ಸೇರುವ ಚಿಂತನೆಯ ವೇದಿಕೆ ಎಂದೇ ಹೆಸರಾಗಿದೆ.

2009ರ 'ಅಂಬೇಡ್ಕರ್ ಹಬ್ಬ'ದಲ್ಲಿ ಬೆಂಗಳೂರಿನ 'ಮಹಾಬೋಧಿ ಸೊಸೈಟಿ' ಸ್ಥಾಪಕರಾದ ಬೌದ್ಧ ಬಿಕ್ಕು ಆಚರಿಯ ಬುದ್ಧರಖ್ಖಿತ ಹಾಗೂ 2010ರಲ್ಲಿ ಖ್ಯಾತ ಅಂಕಣಕಾರ ಚಂದ್ರಭಾನ್ ಪ್ರಸಾದ್ ಅವರು 'ಬೋಧಿವೃಕ್ಷ' ಪ್ರಶಸ್ತಿಯನ್ನು ಪಡೆದುಕೊಂಡರು. ಕಾಗೋಡು ಹೋರಾಟದ ರೂವಾರಿ ಸಾಗರದ ಗಣಪತಿಯಪ್ಪ, ಜಲ ತಜ್ಞ ಕೋಲಾರದ ಕೆ. ನಾರಾಯಣ ಸ್ವಾಮಿ, ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು, ತಳಸಮುದಾಯದ ಮಕ್ಕಳಿಗೆ ಉಚಿತ ಶಿಕ್ಷಣವನ್ನು ನೀಡಿದ ಕನಕಪುರದ ಶ್ರೀ ಶ್ರೀನಿವಾಸಯ್ಯನವರು ಹಾಗೂ ಸ್ವತಃ ದೇವದಾಸಿಯಾಗಿದ್ದರೂ, ದೇವದಾಸಿ ಪದ್ಧತಿಯ ವಿರುದ್ಧ ಹೋರಾಡಿದ ಬಿಜಾಪುರದ

ವರ್ಧನ' ಪ್ರಶಸ್ತಿಗಳು

ಶ್ರೀಮತಿ ಮಹಾದೇವಮ್ಮ ಅವರು 'ಬೋಧಿವರ್ಧನ' ಪ್ರಶಸ್ತಿಯನ್ನು ಪಡೆದುಕೊಂಡ ಕೆಲವರು.

ಈ ಪ್ರಶಸ್ತಿಗಳು ಹಲವು ಕಾರಣಗಳಿಗಾಗಿ ವಿಭಿನ್ನವಾದವೂ ಹೌದು, ವಿಶಿಷ್ಟವಾದವೂ ಹೌದು. ನಮ್ಮಲ್ಲಿ ರಾಷ್ಟ್ರ, ಮತ್ತು ರಾಜ್ಯಮಟ್ಟದ ಸರ್ಕಾರಿ, ಅರೆಸರ್ಕಾರಿ, ಪ್ರತಿಷ್ಠಿತ ಅಕಾಡೆಮಿಗಳು, ಸಂಘ-ಸಂಸ್ಥೆಗಳು ಕೊಡುವ ಅನೇಕ ಪ್ರಶಸ್ತಿಗಳಿವೆ. ಆದರೆ, ಆರ್ಥಿಕ, ಸಾಮಾಜಿಕ, ರಾಜಕೀಯ ಅಥವ ಶೈಕ್ಷಣಿಕ ಬಂಡವಾಳವಿಲ್ಲದೆ ತಳಸ್ತರದವರ ಬದುಕನ್ನು ಗುಣಾತ್ಮಕವಾಗಿ ವಿಸ್ತರಿಸುವ ಕಾರ್ಯದಲ್ಲಿ ತೊಡಗಿ ಕೊಂಡಿರುವವರನ್ನು ಗೌರವಿಸುವ ಪ್ರಶಸ್ತಿಗಳು ನಮ್ಮಲಿಲ್ಲ. "A great man is different from an eminent one, in that he is ready to be a servant of the soceity" ಎಂದು ಅಂಬೇಡ್ಕರ್ ಹೇಳಿದ ಈ ಮಾತುಗಳು ತಳಸ್ತರದವರ ಚಲನೆಗೆ ತಳಪಾಯವಾಗಬೇಕಾದ ಸೇವೆಯ ಮೌಲ್ಯವನ್ನು ಎತ್ತಿ ಹಿಡಿಯುತ್ತದೆ.

ನಮ್ಮ ಆಧುನಿಕೋತ್ತರ ಕಾಲಘಟ್ಟದ ಅನೇಕ ರಾಜಕೀಯ, ಸಾಮಾಜಿಕ ವಿಕಾರಗಳು ಎಲ್ಲಾ ರೀತಿಯ ಪ್ರತ್ಯೇಕತೆಯ ನೀತಿ ಮತ್ತು ಆಚರಣೆಗಳನ್ನು ಗಟ್ಟಿಗೊಳಿಸುವುದಕ್ಕೆ ಕಂಕಣ ಬದ್ಧವಾಗಿಸಿ ಇದು, ವ್ಯಕ್ತಿ ಮತ್ತು ಸಮಾಜದ ಸಂಬಂಧದಲ್ಲಿ ಆಘಾತಕಾರಿ ವಿಚ್ಛಿದ್ರತೆಯನ್ನು ಸೃಷ್ಟಿಸುತ್ತಾ, 'ಸೇವೆ'ಯ ಸಾಧ್ಯತೆಗಳನ್ನೇ ಅಲ್ಲಗಳೆಯುತ್ತದೆ. ಇದಕ್ಕೆ ನೀರೆರೆಯುವಂತೆ ವ್ಯಾಪಕವಾಗಿ ಆವರಿಸಿಕೊಳ್ಳುತ್ತಿರುವ ಕೊಳ್ಳುಬಾಕ ಸಂಸ್ಕೃತಿ, ವ್ಯಕ್ತಿಯ ವೈಯಕ್ತಿಕ ಅಗತ್ಯಗಳು ಅಂತ್ಯವೇ ಆಗದ ಹಾಗೆ ನಿಗಾ ವಹಿಸುತ್ತದೆ. ಇಂಥ ಸಂದರ್ಭದಲ್ಲಿ ತೀರಾ ನಿಕೃಷ್ಟರೆಂದು ಪರಿಗಣಿಸಲ್ಪಡುವ ತಳಸಮುದಾಯದವರ ಹಿತಕ್ಕೆ ತಮ್ಮನ್ನು ತೆತ್ತುಕೊಳ್ಳುವವರನ್ನು 'ಮಹಾತ್ಮ'ರೆನ್ನದೆ, ಇರಲು ಸಾಧ್ಯವೇ? ಸಮುದಾಯದ ಬಗೆಗಿನ ಎಚ್ಚರ ಹಾಗೂ ಅದರೊಟ್ಟಿಗೆ ತನ್ನನ್ನು ತಳುಕು ಹಾಕಿಕೊಳ್ಳುವುದಕ್ಕೆ ಪ್ರೇರೇಪಿಸುವಂಥ ತಾಯ್ತನದ ವಾತ್ಸಲ್ಯ ಮಾತ್ರವೇ ನಮ್ಮ ಕಾಲದ ರೋಗಗ್ರಸ್ಥ ಸ್ಥಿತಿಯನ್ನು ಗುಣಪಡಿಸುವಂಥ ಸಹಜ ಜೀವಜಲವಾಗಿದೆ.

ಬುದ್ಧ, ಮೋಕ್ಷವನ್ನು ಹುಡುಕುತ್ತಾ ಸಮುದಾಯದ ಪ್ರೀತಿಯ ಬಂಧನದಲ್ಲಿ ಅದನ್ನು ಕಂಡುಕೊಂಡ ನಮ್ಮ ಕಾಲಘಟ್ಟವೂ ಒಂದು ಆಧ್ಯಾತ್ಮಿಕ ಪಯಣಕ್ಕೆ ಹಾತೊರೆಯುತ್ತಿದೆ. ಈ ಆಧ್ಯಾತ್ಮಿಕ ಪಯಣ ಆರಂಭವಾಗುವುದೇ ಈ ನೆಲದ ಬದುಕಿನೊಟ್ಟಿಗಿನ ಸಾವಯವ ಸಂಬಂಧದೊಂದಿಗೆ.

ಈ ಸಾವಯವ ಸಂಬಂಧವನ್ನು ಸ್ಥಾಪಿಸಿಕೊಂಡವರನ್ನು ಸನ್ಮಾನಿಸುವ ಮೂಲಕ 'ಸ್ಫೂರ್ತಿಧಾಮ' ತನ್ನ ಘನತೆಯನ್ನು ಹೆಚ್ಚಿಸಿಕೊಳ್ಳಬಯಸುತ್ತದೆ. ಇಂಥವರು ನಿಮಗೆ ತಿಳಿದಿದ್ದರೆ, ದಯವಿಟ್ಟು ನಮಗೆ ಅವರ ಬಗ್ಗೆ ಪೂರ್ಣಮಾಹಿತಿಯನ್ನು ನೀಡಿ. ಅಥವಾ ನೀವೇ ಅಂಥವರಾಗಿದ್ದರೆ, ದಯವಿಟ್ಟು ನಮ್ಮನ್ನು ಸಂಪರ್ಕಿಸಿ.



ವಿಳಾಸ: 'ಸ್ಫೂರ್ತಿಧಾಮ', ಅಂಜನಾನಗರ, ಮಾಗಡಿ ರಸ್ತೆ, ವಿಶ್ವನೀಡಂ ಅಂಚೆ,
ಬೆಂಗಳೂರು-560 091
ದೂರವಾಣಿ: 080-23480278

ಬೋಧಿವರ್ಧನ

ಜನಸತ್ತೆಯ ಕರಾಳ ಮುಖಗಳು

ನಾ ದಿವಾಕರ

ಸ್ವಾತಂತ್ರ್ಯೋತ್ತರ ಭಾರತದ ಪ್ರಾರಂಭಿಕ ವರ್ಷಗಳಲ್ಲಿ ರಾಜಕಾರಣ ಮತ್ತು ರಾಜಕೀಯ ಎಂದರೆ ಜನತೆಯ ಸೇವೆ ಮಾಡಲು ಒದಗುವ ಸದಾವಕಾಶ ಎಂದು ಭಾವಿಸಲಾಗುತ್ತಿತ್ತು. ಹಾಗೆಂದು ಹಿರಿಯರು ಹೇಳುತ್ತಿರುತ್ತಾರೆ. ಕೆಲವೊಂದು ನಿದರ್ಶನಗಳೂ ಲಭ್ಯವಿದೆ. 'ಜನ ಸೇವೆಯೇ ಜನಾರ್ಧನ ಸೇವೆ' ಎಂಬ ನಾಣ್ಣುಡಿ ಭಾರತದ ರಾಜಕಾರಣದಲ್ಲೂ ಮೊಳಗುತ್ತಿದ್ದುದು ಅನೇಕ ರಾಜಕೀಯ ಮುತ್ಸದ್ದಿಗಳ ನಿಸ್ವಾರ್ಥ ಸೇವಾ ಮನೋಭಾವ ಮತ್ತು ಜನಪರ ಕಾಳಜಿಗಳಿಂದಲೇ. ಆದರೆ ಆಗ ದೇಶದ ರಾಜಕೀಯ ಸನ್ನಿವೇಶ ವಿಭಿನ್ನವಾಗಿತ್ತು. ಮತದಾರರು ಪ್ರಬುದ್ಧತೆಯನ್ನು ಹೊಂದಿರದಿದ್ದರೂ ಅವರ ಸಂವೇದನೆಗಳನ್ನು ಗ್ರಹಿಸುವ ಸೂಕ್ಷ್ಮತೆಯನ್ನು ಜನನಾಯಕರು ಹೊಂದಿರುತ್ತಿದ್ದರು.

ರಾಷ್ಟ್ರದ ಹಿತಾಸಕ್ತಿಗಳು ವೈಯ್ಯಕ್ತಿಕ ಸ್ವಾರ್ಥಗಳನ್ನು ಮೀರಿ ನಿಲ್ಲುತ್ತಿತ್ತು. ತನ್ನನ್ನು ಎಲ್ಲಿ ಜನ ಭ್ರಷ್ಟನೆಂದು ಗುರುತಿಸುತ್ತಾರೋ ಎಂಬ ಭೀತಿ ರಾಜಕಾರಣಿಗಳನ್ನು ಸದಾ ಕಾಡುತ್ತಿತ್ತು. ಹಾಗಾಗಿ ಜನಸಾಮಾನ್ಯರ ನಡುವೆ ತಮ್ಮ ಪ್ರಭಾವ ಮತ್ತು ವರ್ಚಸ್ಸನ್ನು ಉಳಿಸಿಕೊಳ್ಳುವ ತವಕ ಪ್ರತಿಯೊಬ್ಬ ರಾಜಕಾರಣಿಯಲ್ಲೂ ಕಾಣಬಹುದಾಗಿತ್ತು. ದೇಶದ ಜನತೆಯ ಮುಂದೆ ಮತ ಯಾಚಿಸುವಾಗ ನಮ್ರತೆಯಿಂದ ಯೋಚಿಸುತ್ತಿದ್ದ ಕಾಲವೂ ಇತ್ತು. ಎಲ್ಲವೂ ಪರಿಶುದ್ಧವಾಗಿತ್ತು ಎಂದು ಹೇಳಲಾಗುವುದಿಲ್ಲವಾದರೂ, ಶ್ರದ್ಧೆ, ಸಂವಿಧಾನ ಬದ್ಧತೆ, ಪರಿಶುದ್ಧತೆ, ನಿಷ್ಠೆ ಮತ್ತು ಪ್ರಜಾತಾಂತ್ರಿಕ ಮೌಲ್ಯಗಳು ಸಜೀವವಾಗಿದ್ದವು.

ಈ ನಿಟ್ಟಿನಲ್ಲಿ ತಮ್ಮ ವಿರುದ್ಧ ಸಾರ್ವಜನಿಕ ವಲಯದಲ್ಲಿ ಯಾವುದೇ ಅಪವಾದ ಬಂದರೂ ತನಿಖೆಗೂ ಕಾಯದೆ ತಮ್ಮ ಸ್ಥಾನ ತ್ಯಜಿಸಿದ ಲಾಲ್‌ಬಹದ್ದೂರ್ ಶಾಸ್ತ್ರಿ, ಕೃಷ್ಣ ಮೆನನ್ ಇಂದಿಗೂ ಸ್ಮರಣಾರ್ಹರಾಗಿ ನಿಲ್ಲುತ್ತಾರೆ. ಅಷ್ಟೇಕೆ ಮಾಜಿ ಪ್ರಧಾನಿ ವಿ.ಪಿ. ಸಿಂಗ್, ರಾಮಕೃಷ್ಣ ಹೆಗಡೆ ಇತ್ತೀಚಿನ ಉದಾಹರಣೆಗಳಾಗಿ ಗೋಚರಿಸುತ್ತಾರೆ. ಈ ರಾಜಕಾರಣಿಗಳೂ ಭಾರತದ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಬೆಳೆದವರೇ, ಇದೇ ಪರಂಪರೆಯನ್ನು ಪೋಷಿಸಿದವರೇ. ಇಲ್ಲಿನ ರಾಜಕೀಯ ಸಂಸ್ಕೃತಿಯನ್ನು ಬೆಳೆಸಿದವರೇ. ಇವರೆಲ್ಲರೂ ಪದವಿ ತ್ಯಾಗ ಮಾಡಿದ್ದು ಕೇವಲ ತಮ್ಮ ಪಕ್ಷದ ಗೌರವ ಉಳಿಸಲೆಂದಲ್ಲ, ತಮ್ಮ ವೈಯ್ಯಕ್ತಿಕ ಪ್ರತಿಷ್ಠೆ, ನಿಷ್ಠೆ ಮತ್ತು ನೈತಿಕ ಮೌಲ್ಯಗಳನ್ನು ಉಳಿಸಿಕೊಳ್ಳಲು. ಹಾಗಾಗಿಯೇ ಈ ಹಂತದಲ್ಲಿ ಮೌಲ್ಯಾಧಾರಿತ ರಾಜಕಾರಣ ಎಂಬ ನುಡಿಗಟ್ಟು ಸಹ ಉಗಮಿಸಿತು. ವಿಪರ್ಯಾಸವೆಂದರೆ ಈ ಮೌಲ್ಯಾಧಾರಿತ ರಾಜಕಾರಣಕ್ಕೆ ಮೆರುಗು ತಂದಿತ್ತ ಕರ್ನಾಟಕವೇ ಆ ಮೌಲ್ಯಗಳ ರುದ್ರಭೂಮಿಯಾಗಿ ಪರಿಣಮಿಸಿದೆ.

ದೇಶಸೇವಾ ನಿಮಿತ್ತಂ ಎಂದು ತಮ್ಮ ರಾಜಕೀಯ ಜೀವನ ಪ್ರಾರಂಭಿಸಿದ ಸ್ವಾತಂತ್ರ್ಯೋತ್ತರ ಭಾರತದ ಪರಿಶುದ್ಧ ಸೇವಾತ್ಮಗಳು ಬಹುಶಃ ಇಂದು ತಮ್ಮ ಗೋರಿಗಳಿಂದ ಧಿಗ್ಗ ನೆದ್ದು ಕುಳಿತಿರಬೇಕು. ಏನು ನಡೆಯುತ್ತಿದೆ ನಮ್ಮ ಭರತಖಂಡದಲ್ಲಿ ಎಂದು ವ್ಯಥೆಪಡುತ್ತಿರಬೇಕು. ಇಂದಿನ ಭಾರತದ ರಾಜಕಾರಣವನ್ನು ನೋಡಿದರೆ, ನಮ್ಮ ದೇಶ ಹೀಗೂ ಇತ್ತೇ, ಎಂದು ಹುಬ್ಬೇರಿಸಬೇಕಾಗುತ್ತದೆ. ರಾಜಕೀಯ ರಂಗಕ್ಕೆ ಅರಂಗೇಟ್ರಂ ಪಡೆಯುವುದೇ ಈಗ ದುಸ್ಸಾಹಸ. ಹಣವೊಂದೇ ಸಾಲದು. ತೋಳ್ಬಲ, ಜಾತಿ ಬಲ, ಮತೀಯ ಬಲ, ಕುಲಬಾಂಧವರ ಬೆಂಬಲ ಹೀಗೆ ಹಲವಾರು ನಿಯಮಗಳು ಅಗತ್ಯ.

ಯಾವುದೇ ರಂಗವನ್ನು ಹಣ ನೀಡಿ ಪ್ರವೇಶಿಸುವವನು ತಾನು ಖರ್ಚು ಮಾಡಿದ ಹಣಕ್ಕೆ ಪ್ರತಿಫಲ ಬಯಸದೆ ಇರುತ್ತಾನೆಯೇ? ಅದೂ ಈ ಮಾರುಕಟ್ಟೆ ಪ್ರಪಂಚದಲ್ಲಿ. ಜನತೆಯ ಜೀವ ಉಳಿಸಬೇಕಾದ ವೈದ್ಯಕೀಯ ವೃತ್ತಿಯಲ್ಲಿರುವವರೇ ಹೀಗೆ ಯೋಚಿಸುವಾಗ ಇನ್ನು ರಾಜಕಾರಣಿಗಳೇನು? ಪಂಚಾಯತ್ ಮಟ್ಟದಿಂದ ಹಿಡಿದು ಸಂಸತ್ತಿನ ಅಟ್ಟದವರೆಗೆ ತಮ್ಮ ಗುರಿಯನ್ನು ನೆಟ್ಟಿರುವ ರಾಜಕೀಯ ಪಟುಗಳು ಜನ್ಮತಃ ವಾಮನ ಮೂರ್ತಿಗಳೇ.

ವಾಮನ ಎಂಬ ಶಬ್ದ ಮಾನವನ ಪಲ್ಲಟಗೊಂಡ ರೂಪ. ಹಾಗೆಯೇ ತಮ್ಮ ಅಂತಿಮ ಗುರಿ ತಲುಪಲು ಮೆಟ್ಟಿಲುಗಳನ್ನೇರುತ್ತಾ ನಡೆಯುವ ರಾಜಕಾರಣಿಗಳು, ಮೆಟ್ಟಿಲುಗಳಡಿಯಲ್ಲಿ ನೈತಿಕ ಮೌಲ್ಯಗಳು ಮಾತ್ರವಲ್ಲ ಪ್ರಜೆಗಳ ಆಶಯಗಳೂ ಅಡಗಿರುತ್ತವೆ ಎಂಬ ಸತ್ಯವನ್ನೇ ಮರೆಯುತ್ತಾ. ಹೀಗೆ ಮೌಲ್ಯಗಳ ಮೆಟ್ಟಿಲುಗಳನ್ನು ಮೆಟ್ಟುತ್ತಾ ಮಾನವತೆಯನ್ನು ತೊರೆದು ವಾಮನನ ಮಾರ್ಗದಲ್ಲಿ, ಕೆಲವೊಮ್ಮೆ ವಾಮ ಮಾರ್ಗದಲ್ಲಿ

ಭಾರತದ ಪ್ರಾರಂಭಿಕ ವರ್ಷಗಳಲ್ಲಿ ರಾಜಕಾರಣ ಮತ್ತು ರಾಜಕೀಯ ಎಂದರೆ ಜನತೆಯ ಸೇವೆ ಮಾಡಲು ಒದಗುವ ಸದಾವಕಾಶ ಎಂದು ಭಾವಿಸಲಾಗುತ್ತಿತ್ತು. ಹಾಗೆಂದು ಹಿರಿಯರು ಹೇಳುತ್ತಿರುತ್ತಾರೆ. ಕೆಲವೊಂದು ನಿದರ್ಶನಗಳೂ ಲಭ್ಯವಿದೆ. ಜನ ಸೇವೆಯೇ ಜನಾರ್ಧನ ಸೇವೆ ಎಂಬ ನಾಣ್ಣುಡಿ ಭಾರತದ ರಾಜಕಾರಣದಲ್ಲೂ ಮೊಳಗುತ್ತಿದ್ದುದು ಅನೇಕ ರಾಜಕೀಯ ಮುತ್ಸದ್ದಿಗಳ ನಿಸ್ವಾರ್ಥ ಸೇವಾ ಮನೋಭಾವ ಮತ್ತು ಜನಪರ ಕಾಳಜಿಗಳಿಂದಲೇ. ಆದರೆ ಆಗ ದೇಶದ ರಾಜಕೀಯ ಸನ್ನಿವೇಶ ವಿಭಿನ್ನವಾಗಿತ್ತು. ಮತದಾರರು ಪ್ರಬುದ್ಧತೆಯನ್ನು ಹೊಂದಿರದಿದ್ದರೂ ಅವರ ಸಂವೇದನೆಗಳನ್ನು ಗ್ರಹಿಸುವ ಸೂಕ್ಷ್ಮತೆಯನ್ನು ಜನನಾಯಕರು ಹೊಂದಿರುತ್ತಿದ್ದರು. ರಾಷ್ಟ್ರದ ಹಿತಾಸಕ್ತಿಗಳು ವೈಯ್ಯಕ್ತಿಕ ಸ್ವಾರ್ಥಗಳನ್ನು ಮೀರಿ ನಿಲ್ಲುತ್ತಿತ್ತು. ತನ್ನನ್ನು ಎಲ್ಲಿ ಜನ ಭ್ರಷ್ಟನೆಂದು ಗುರುತಿಸುತ್ತಾರೋ ಎಂಬ ಭೀತಿ ರಾಜಕಾರಣಿಗಳನ್ನು ಸದಾ ಕಾಡುತ್ತಿತ್ತು.

ಅನೇಕ ಬಲಿ-ಚಕ್ರವರ್ತಿಗಳನ್ನು ಮೆಟ್ಟುತ್ತಲೇ ನಡೆಯುವುದೂ ಸ್ವಾಭಾವಿಕವಾಗಿ ಹೋಗಿದೆ.

ಧನಿಕ ಪ್ರಭುತ್ವ ಸ್ವಾಹೋಲ್ಲಾಸ

ಭಾರತದ ರಾಜಕಾರಣದಲ್ಲಿ ಈ ಪ್ರವೃತ್ತಿ ಹಠಾತ್ತನೆ ಮೂಡಿದ್ದಲ್ಲ. ಸ್ವಾತಂತ್ರ್ಯಪೂರ್ವದಿಂದಲೂ ಯೋಜನಾ ಬದ್ಧವಾಗಿ ರೂಪಿಸಲ್ಪಟ್ಟ ಒಂದು ವ್ಯವಸ್ಥೆಯ ಭಾಗವಾಗಿಯೇ ನಾವು ಇಂದಿನ ಧನಿಕ ಪ್ರಭುತ್ವವನ್ನು ಕಾಣುತ್ತಿದ್ದೇವೆ. ಸಮಾಜವಾದ, ಸಮತಾವಾದ, ಮಿಶ್ರ ಆರ್ಥಿಕತೆ, ಸಾಮಾಜಿಕ ನ್ಯಾಯ ಇವೇ ಮುಂತಾದ ಮುಖವಾಡಗಳ ಹಿಂದೆ ನಡೆಯುತ್ತಿದ್ದ ರಿಹರ್ಸಲ್‌ಗಳು ಪರಿಪೂರ್ಣವಾಗಿ ರಂಗಪ್ರವೇಶ ಮಾಡಲು ಕೊಂಚ ಸಮಯ ಬೇಕಾಗಿತ್ತಷ್ಟೆ. ಇದರ ಮೂಲವನ್ನು ಗ್ರಹಿಸಲು ಮುಂಬೈ ಪ್ಲಾನ್ ಎಂದು ಹೇಳಲಾಗುವ ಭಾರತದ ಅಭಿವೃದ್ಧಿಯ ನೀಲಿ ನಕ್ಷೆಗೇ ಹಿಂದಿರುಗುವುದು ಅನಿವಾರ್ಯ. ಸ್ವತಂತ್ರ ಭಾರತದ ಜನತೆಗೆ ಸಮತಾವಾದದ ಭರವಸೆ ನೀಡಿ ಸಮಾಜವಾದದ ಭ್ರಮಾಲೋಕದಲ್ಲಿ ಕೊಂಡೊಯ್ಯುತ್ತಿದ್ದಾಗಲೇ, ಈ ಎರಡೂ ಮೌಲ್ಯಗಳನ್ನು ಇನ್ನಿಲ್ಲದಂತೆ ಮಾಡುವ ಬಂಡವಾಳ ವ್ಯವಸ್ಥೆಯನ್ನು ಗೋಪ್ಯವಾಗಿ ಬೆಳೆಸುತ್ತಾ ಬಂದಿದ್ದು ಈ ಹಿನ್ನೆಲೆಯಲ್ಲೇ ಎಂದು ಮಾತ್ರ ಈ ಸಂದರ್ಭದಲ್ಲಿ ಹೇಳಬಹುದು.

ಆದರೆ ಈ ಯೋಜನೆ ಕೇವಲ ನೀಲಿನಕ್ಷೆಯಾಗಲಿಲ್ಲ, ಭಾರತದ ಭವಿಷ್ಯವನ್ನೇ ನಿರ್ಧರಿಸುವ ಗ್ರಂಥವಾಗಿ ಪರಿಣಮಿಸಿತು. ಪ್ರಜೆಗಳಿಗೆ ಅವಶ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು, ಪ್ರಜೆಗಳ ಜೀವನ ಮಟ್ಟ ಸುಧಾರಿಸುವುದು, ಸಾಂವಿಧಾನಿಕ ಆಶಯಗಳ ಪೂರೈಕೆ, ಸಾಮಾಜಿಕ ಅನಿಷ್ಟಗಳ ನಿರ್ಮೂಲನೆ, ಸಂಪನ್ಮೂಲಗಳ ಸದ್ಬಳಕೆ ಇವೇ ಮುಂತಾದ ಉನ್ನತ ಧ್ಯೇಯಗಳು ಬಂಡವಾಳ ನಿರ್ವಹಣೆ ಮತ್ತು ಕ್ರೋಢೀಕರಣದ ವಿಷವೃತ್ತದಲ್ಲಿ ಸಿಲುಕಿ ತಮ್ಮ ಮೌಲ್ಯಯುತ ತಳಹದಿಯನ್ನೇ ಕಳೆದುಕೊಂಡವು. ಬಹುಶಃ 1960ರ ವೇಳೆಗೆ ಭಾರತದ ರಾಜಕಾರಣದಲ್ಲಿ ಈ ಪ್ರಕ್ರಿಯೆ ಸಂಪೂರ್ಣಗೊಂಡಿತ್ತು. ಮುಕ್ತವಾಗಿ ಪ್ರಕಟಗೊಳ್ಳಲು ಪೂರಕ ಸನ್ನಿವೇಶಗಳ ಅಗತ್ಯವೂ ಇತ್ತು. ಈ ಅಗತ್ಯತೆಯನ್ನು ಪೂರೈಸಿದ್ದು 1960ರ ನಂತರದ ಯುದ್ಧ ಪರಂಪರೆ-ಭಾರತೀಯ ಪ್ರಭುತ್ವದ ಸಮರಶೀಲತೆ. ಬಂಡವಾಳ ವ್ಯವಸ್ಥೆ ಊರ್ಜಿತವಾಗುವುದೇ ಆಕ್ರಮಣದ ನೆಲೆಗಟ್ಟಿನಲ್ಲಿ, ಸ್ವಾಧೀನದ ತಳಹದಿಯ ಮೇಲೆ, ಶೋಷಣೆ ಯನ್ನು ಆಧರಿಸಿ. ಯುದ್ಧ ಪರಂಪರೆ ಈ ನಿಟ್ಟಿನಲ್ಲಿ ಅತ್ಯುತ್ತಮ ಸಾಧನವಾಗುತ್ತದೆ. ಅಮೆರಿಕ, ಯೂರೋಪ್, ಬ್ರಿಟನ್ ಈಗ ಭಾರತ-ಪಾಕಿಸ್ತಾನಗಳು ಅತ್ಯುತ್ತಮ ನಿದರ್ಶನ.

1970ರ ನಂತರದ ರಾಜಕಾರಣದಲ್ಲಿ ಕಂಡುಬಂದ ಬದಲಾವಣೆಗಳನ್ನು ಈ ಹಿನ್ನೆಲೆಯಲ್ಲೇ ಗ್ರಹಿಸಬೇಕಾಗುತ್ತದೆ. ಒಂದೆಡೆ ಜನಾಂದೋಲನಗಳು ತೀವ್ರ ಸ್ವರೂಪ ಪಡೆದುಕೊಂಡು ಕೆಲವೆಡೆ ಹಿಂಸಾತ್ಮಕ ಮಾರ್ಗ ಅನುಸರಿಸುತ್ತಿದ್ದಂತೆಯೇ ಪ್ರಭುತ್ವವೂ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ತನ್ನೆಲ್ಲಾ ಪ್ರಾಬಲ್ಯವನ್ನೂ ಬಳಸಿದ್ದನ್ನು ಈ ದಶಕದಲ್ಲಿ ಕಾಣಬಹುದು. ತುರ್ತುಪರಿಸ್ಥಿತಿ ಈ ಪ್ರಕ್ರಿಯೆಯ ಒಂದು ಭಾಗ. ತುರ್ತುಪರಿಸ್ಥಿತಿಯನ್ನು ಹೇರಿ ದೇಶದ ಸಾರ್ವಭೌಮ ಪ್ರಜೆಗಳ ಮತ್ತು ಪವಿತ್ರ ಸಂವಿಧಾನದ ಅಪಮಾನ ಮಾಡಿದ್ದು ಭ್ರಷ್ಟಾಚಾರ ನಿಯಂತ್ರಣಕ್ಕಾಗಿ, ದೇಶದ ರಕ್ಷಣೆಗಾಗಿ, ಶಾಂತಿ ಸ್ಥಾಪನೆಗಾಗಿ ಎಂದು ವಾದಿಸುವವರು ಇಂದಿಗೂ ಇರಬಹುದು.

ಸ್ವಾತಂತ್ರ್ಯ ಪೂರ್ವದಿಂದಲೂ ಯೋಜನಾ ಬದ್ಧವಾಗಿ ರೂಪಿಸಲ್ಪಟ್ಟ ಒಂದು ವ್ಯವಸ್ಥೆಯ ಭಾಗವಾಗಿಯೇ ನಾವು ಇಂದಿನ ಧನಿಕ ಪ್ರಭುತ್ವವನ್ನು ಕಾಣುತ್ತಿದ್ದೇವೆ. ಸಮಾಜವಾದ, ಸಮತಾವಾದ, ಮಿಶ್ರ ಆರ್ಥಿಕತೆ, ಸಾಮಾಜಿಕ ನ್ಯಾಯ ಇವೇ ಮುಂತಾದ ಮುಖವಾಡಗಳ ಹಿಂದೆ ನಡೆಯುತ್ತಿದ್ದ ರಿಹರ್ಸಲ್‌ಗಳು ಪರಿಪೂರ್ಣವಾಗಿ ರಂಗ ಪ್ರವೇಶ ಮಾಡಲು ಕೊಂಚ ಸಮಯ ಬೇಕಾಗಿತ್ತಷ್ಟೆ. ಇದರ ಮೂಲವನ್ನು ಗ್ರಹಿಸಲು ಮುಂಬೈ ಪ್ಲಾನ್ ಎಂದು ಹೇಳಲಾಗುವ ಭಾರತದ ಅಭಿವೃದ್ಧಿಯ ನೀಲಿನಕ್ಷೆಗೇ ಹಿಂದಿರುಗುವುದು ಅನಿವಾರ್ಯ. ಸ್ವತಂತ್ರ ಭಾರತದ ಜನತೆಗೆ ಸಮತಾವಾದದ ಭರವಸೆ ನೀಡಿ ಸಮಾಜವಾದದ ಭ್ರಮಾಲೋಕದಲ್ಲಿ ಕೊಂಡೊಯ್ಯುತ್ತಿದ್ದಾಗಲೇ, ಈ ಎರಡೂ ಮೌಲ್ಯಗಳನ್ನು ಇನ್ನಿಲ್ಲದಂತೆ ಮಾಡುವ ಬಂಡವಾಳ ವ್ಯವಸ್ಥೆಯನ್ನು ಗೋಪ್ಯವಾಗಿ ಬೆಳೆಸುತ್ತಾ ಬಂದಿದ್ದು ಈ ಹಿನ್ನೆಲೆಯಲ್ಲೇ ಎಂದು ಮಾತ್ರ ಈ ಸಂದರ್ಭದಲ್ಲಿ ಹೇಳಬಹುದು.

ಸತ್ಯಾಂಶವೆಂದರೆ ತುರ್ತುಪರಿಸ್ಥಿತಿಯ ಜಾರಿಯಾದದ್ದು ಪ್ರಭುತ್ವದ ಪ್ರಾಬಲ್ಯ ಮತ್ತು ಪ್ರಾತಿನಿಧ್ಯತೆಯನ್ನು ಶಾಶ್ವತವಾಗಿ ಸಾಬೀತುಪಡಿಸುವ ಉದ್ದೇಶದಿಂದ ಮಾತ್ರ. ಹಾಗಾಗಿಯೇ ತುರ್ತುಪರಿಸ್ಥಿತಿಯನ್ನು ಎದುರಿಸಿ ಪ್ರಜಾಸತ್ತೆಗಾಗಿ ಸತ್ತುಬದುಕಿ ಹೋರಾಡಿದ ನೇತಾರ(!)ರೆಲ್ಲರೂ ಇಂದು ಯಾವುದೋ ಒಂದು ರೂಪದ ಕರಾಳ ಶಾಸನಗಳ ವಕ್ತಾರರಾಗಿ ಕಂಡುಬರುತ್ತಾರೆ. ಮತ್ತದೇ ಕಾರಣ, ದೇಶದ ಸುಭದ್ರತೆ, ಆಂತರಿಕ ಶತ್ರುಗಳ ದಮನ, ಶಾಂತಿ ಸ್ಥಾಪನೆ ! ಇತ್ಯಾದಿ, ಇತ್ಯಾದಿ......

ಪ್ರಭುತ್ವ ಪ್ರಬಲವಾಗುತ್ತಿರುವಂತೆಲ್ಲಾ ಆಳುವ ಪಕ್ಷಗಳು ಈ ಪ್ರಾಬಲ್ಯವನ್ನು ತಮ್ಮ ಸ್ವಹಿತಾಸಕ್ತಿಗಳಿಗಾಗಿ ಉಪಯೋಗಿಸಲು ಆರಂಭಿಸಿದ್ದನ್ನು 1980ರ ದಶಕದಲ್ಲೇ ಕಾಣಬಹುದಿತ್ತು. 1960-70ರ ದಶಕದ ಜನಪರ ಕಾಳಜಿಗಳು ಕ್ರಮೇಣ ಮರೆಯಾಗತೊಡಗಿದವು. ಪ್ರಜೆಗಳ ಸಾರ್ವಭೌಮ ಹಕ್ಕುಗಳು ವಿತರಿಸಲ್ಪಡುವ ಸವಲತ್ತುಗಳಾಗಿ ಪರಿವರ್ತಿತವಾದವು. ಮೂಲಭೂತ ಅಗತ್ಯತೆಗಳು ಸರ್ಕಾರನೀಡುವ ಬಳುವಳಿಗಳಾದವು. ಪ್ರಜೆಗಳ ಸಾರ್ವತ್ರಿಕ ಹಕ್ಕುಗಳಾದ ಶಿಕ್ಷಣ, ಆರೋಗ್ಯ, ವಸತಿ ಮತ್ತಿತರ ಸೌಕರ್ಯಗಳು ಸರ್ಕಾರ ನೀಡುವ ವರದಾನಗಳಾದವು. ಎಲ್ಲವೂ ಬಜೆಟ್ ನಿಯೋಜಿತ ವಿತರಣಾ ನೀತಿಗಳಿಗೆ ಒಳಪಟ್ಟವು.

ಈ ಬೆಳವಣಿಗೆಗಳ ಪರಿಣಾಮವೆಂದರೆ ಆಳುವ ವರ್ಗಗಳು ತಮ್ಮ ಸಾಂವಿಧಾನಿಕ ಕರ್ತವ್ಯಗಳನ್ನು ಬಂಡವಾಳ ಕ್ರೋಢೀಕರಣದ ದುರ್ಬೀನಿನಿಂದಲೇ ನೋಡಲಾರಂಭಿಸಿದ್ದು. ಪ್ರತಿಫಲ, ಪ್ರಜೆಗಳ ಸ್ವತ್ತಾಗಿದ್ದ ನೈಸರ್ಗಿಕ ಸಂಪನ್ಮೂಲಗಳು ಮತ್ತು ದೇಶದ ಉತ್ಪಾದನೆ ಆಳ್ವಿಕರ ನಿಯಂತ್ರಣಕ್ಕೊಳಪಟ್ಟ ಖಾಸಗಿ ಆಸ್ತಿಗಳಾದವು. ಇವನ್ನು ಜನತೆಗೆ ಹೇಗೆ, ಯಾವ ಪ್ರಮಾಣದಲ್ಲಿ, ಯಾವ ರೀತಿಯಲ್ಲಿ ಪ್ರಜೆಗಳಿಗೆ ವಿತರಿಸಬೇಕೆಂದು ನಿರ್ಧರಿಸುವುದು ಆಳ್ವಿಕರ ತೀರ್ಮಾನಕ್ಕೆ ಒಳಪಟ್ಟಿತು.

ದೇಶದ ರಾಜಕಾರಣದಲ್ಲಿ ಬಂಡವಾಳ ನೇರ ಪ್ರವೇಶ ಮಾಡಿದ್ದು ಈ ಹಂತದಲ್ಲೇ ಎಂದು ಹೇಳಲಾಗುವುದಿಲ್ಲ. ಈ ಮುನ್ನವೂ, ಅಂದರೆ ಸ್ವಾತಂತ್ರ್ಯಗಳಿಸಿದ ದಿನದಿಂದಲೂ ಬಂಡವಾಳ ಮತ್ತು ಬಂಡವಾಳಿಗರ ರಾಜಕೀಯ ಹಸ್ತಕ್ಷೇಪ ವಾಸ್ತವವೇ ಆಗಿದ್ದರೂ ರಾಜಕೀಯ ಪಕ್ಷಗಳು ಚುನಾವಣಾ ಸಂದರ್ಭದಲ್ಲಿ ಪಡೆಯುವ ಹಣಕಾಸು ನೆರವಿಗೆ ಸೀಮಿತವಾಗಿತ್ತು. ಆದರೆ 80ರ ದಶಕದ ನಂತರ ಬಂಡವಾಳವೇ ರಾಜಕಾರಣವನ್ನು ನಿಯಂತ್ರಿಸಲಾರಂಭಿಸಿದ್ದು ದೇಶದ ರಾಜಕೀಯ ಭೂಪಟವನ್ನೇ ಬದಲಾಯಿಸಿತು. ಏತನ್ಮಧ್ಯೆ ದೇಶದಲ್ಲಿ ತಲೆ ಎತ್ತಿದ ಜಾತಿ ರಾಜಕಾರಣ, ಪ್ರಾದೇಶಿಕತೆ, ಪ್ರಾಂತೀಯ ಮನೋಭಾವಗಳು ಬಂಡವಾಳದೊಡನೆ ಭಾವುಕತೆಯೂ ಬೆರೆತು ರಾಜಕೀಯ ವಾತಾವರಣ ಪ್ರಕ್ಷುಬ್ಧಗೊಂಡಿತ್ತು.

ಈ ಸಂದರ್ಭದಲ್ಲೇ ಭಾರತದ ಆರ್ಥಿಕತೆಯಲ್ಲೂ ಏರುಪೇರಾಗಿದ್ದು ರಾಜಕೀಯ ಪಲ್ಲಟಗಳಿಗೆ ಕಾರಣವಾಗಿತ್ತು. ಊಳಿಗಮಾನ್ಯ ವ್ಯವಸ್ಥೆಯ ಎಲ್ಲಾ ಲಕ್ಷಣಗಳನ್ನು ಉಳಿಸಿಕೊಂಡೇ ಬಂಡವಾಳ ಪದ್ಧತಿಯನ್ನು ಪೋಷಿಸಿಕೊಂಡು ಬಂದಿದ್ದ ಭಾರತದ ಆಳ್ವಿಕರಿಗೆ ನೈಸರ್ಗಿಕ ಸಂಪನ್ಮೂಲಗಳು ಮತ್ತು ದೇಶದ ಉತ್ಪಾದನಾ ಶಕ್ತಿಗಳು ಬಳಸಿ ಬಿಸಾಡಬಹುದಾದ ಆಕರಗಳಾಗಿದ್ದು ಈ ಹಂತದಲ್ಲೇ. ಇಡೀ ವ್ಯವಸ್ಥೆಯನ್ನು ತನ್ನ ಮುಷ್ಟಿಯಲ್ಲಿರಿಸಿಕೊಂಡಿದ್ದ ಬಂಡವಾಳ ವ್ಯವಸ್ಥೆ ಜಾಗತಿಕ ಹಣಕಾಸು ಬಂಡವಾಳದೊಡನೆ ಸಾಧಿಸಿದ ಮೈತ್ರಿಯ ಪರಿಣಾಮವೇ 1991ರಲ್ಲಿ ಭಾರತವನ್ನು ಪ್ರವೇಶಿಸಿದ ಜಾಗತೀಕರಣ. ಭಾರತದ ಪ್ರಜಾಪ್ರಭುತ್ವ ಧನಿಕ ಪ್ರಭುತ್ವದ ಆಕ್ರಮಣಕ್ಕೆ ಒಳಗಾದ ಈ ಹಂತದಲ್ಲೇ ಭಾರತದ ಆಳ್ವಿಕರೂ ಹೆಚ್ಚು ಹೆಚ್ಚು ಪ್ರಭುತ್ವ ಕೇಂದ್ರಿತವಾದದ್ದು ಜಾಗತೀಕರಣ ಪ್ರಕ್ರಿಯೆಯಲ್ಲೇ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

ನವ ಉದಾರವಾದದ ಹೊರೆ

1991ರಲ್ಲಿ ಭಾರತ ಜಾಗತೀಕರಣವನ್ನು ಅಪ್ಪಿಕೊಂಡ ಸಂದರ್ಭದಲ್ಲಿದ್ದ ರಾಜಕೀಯ ಪರಿಸ್ಥಿತಿ ಗೊಂದಲಮಯವಾಗಿತ್ತು. ರಾಜಕೀಯ ಮಿತ್ರ-ಶತ್ರುಗಳನ್ನು ಗುರುತಿಸುವುದಿರಲಿ, ದೇಶದ ಹಿತಶತ್ರುಗಳನ್ನು ಗುರುತಿಸುವುದೂ ಕಷ್ಟವಾಗಿತ್ತು. ಭವ್ಯ ಭಾರತ ಪರಂಪರೆಯ ರಕ್ಷಕರು ಹಿಂದೂ ಧರ್ಮದ ನೆರಳಿನಲ್ಲೇ ಭಾರತವನ್ನು ಏಕಮಾದ್ವಿತೀಯ ಧರ್ಮಾಧಾರಿತ ರಾಷ್ಟ್ರವನ್ನಾಗಿ ಪರಿವರ್ತಿಸಲು ಹರಸಾಹಸ ಮಾಡುತ್ತಿದ್ದರು. ಸಂವಿಧಾನವನ್ನೇ ಬದಲಾಯಿಸುವ ಪಿತೂರಿಯೂ ನಡೆಯುತ್ತಿತ್ತು. ರಾಷ್ಟ್ರ ಎಂಬ ಪರಿಕಲ್ಪನೆಗೆ ರಾಷ್ಟ್ರೀಯತೆಯ ಸಂಕುಚಿತ ಲೇಪನ ನೀಡುವ ಮೂಲಕ ಜನಸಮುದಾಯಗಳ ನಡುವೆ ಕಂದರ ನಿರ್ಮಿಸಿ ಆಳ್ವಿಕರ ಭದ್ರ ಕೋಟೆ ನಿರ್ಮಿಸುವ ಯೋಜನೆ ಸ್ಪಷ್ಟವಾಗಿ ರೂಪುಗೊಳ್ಳುತ್ತಿತ್ತು.

ಈ ಸಂದರ್ಭದಲ್ಲಿ ಭಾರತದ ಪ್ರಜೆಗಳು ಎದುರಿ

ಸಿದ್ದು ಹಲವು ಸವಾಲುಗಳು. ಒಂದೆಡೆ ಜಾಗತಿಕ ಮಾರುಕಟ್ಟೆಯನ್ನು ಪ್ರವೇಶಿಸುವ ಭರದಲ್ಲಿ ತಮ್ಮ ಸ್ವಂತಿಕೆಯನ್ನೇ ಮರೆತು ವಸಾಹತು ಯುಗಕ್ಕೆ ಹಿಂದಿರುಗಲೆತ್ನಿಸುತ್ತಿದ್ದ ಸರ್ಕಾರ ಒಂದೆಡೆ. ಜಾಗತಿಕ ಹಣಕಾಸು ಬಂಡವಾಳವನ್ನು ಸ್ವಾಗತಿಸಿ ಭಾರತದ ಮಾರುಕಟ್ಟೆಯನ್ನು ವಿಶ್ವದ ಎಲ್ಲ ರಾಷ್ಟ್ರಗಳಿಗೆ ಮುಕ್ತವಾಗಿಸುವ ಬಂಡವಾಳಿಗರು, ಉದ್ಯಮಿಗಳು ಒಂದೆಡೆ. ಭಾರತದ ಪವಿತ್ರ ಸಂವಿಧಾನವನ್ನೇ ಧಿಕ್ಕರಿಸಿ ತಮ್ಮ ಫ್ಯಾಸಿಸ್ಟ್ ಕಾರ್ಯಸೂಚಿಯನ್ನು ಪ್ರಜಾಸತ್ತೆಯ ಚೌಕಟ್ಟಿನಲ್ಲೇ ತರಲೆತ್ನಿಸುತ್ತಿದ್ದ ಧರ್ಮಾಂಧರು ಒಂದೆಡೆ. ಈ ಮೂರು ರಕ್ಕಸ ಶಕ್ತಿಗಳ ನಡುವೆ ಸಿಲುಕಿದ ಪ್ರತಿರೋಧದ ಕ್ಷೀಣ ದನಿ ಮತ್ತೊಂದೆಡೆ.

1990ರ ದಶಕದಲ್ಲಿ ಹಾಲಿ ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ವಿತ್ತಮಂತ್ರಿಗಳಾಗಿದ್ದರು. ಜಾಗತೀಕರಣ ಪ್ರಕ್ರಿಯೆಯನ್ನು ಭಾರತದಲ್ಲಿ ಜಾರಿಗೊಳಿಸುವ ಆ ಸಂದರ್ಭದಲ್ಲಿ ಮುಂಚೂಣಿಯ ಪಾತ್ರ ವಹಿಸಿದ್ದ ಸಿಂಗ್ ಅವರು ಮಾರುಕಟ್ಟೆ ಆರ್ಥಿಕತೆಯ ಫಲಾನುಫಲಗಳನ್ನು ವೈಭವೀಕರಿಸಿ, ಭಾರತದ ಭವಿಷ್ಯ ಅಡಗಿರುವುದೇ ಮುಕ್ತ ಮಾರುಕಟ್ಟೆಯಲ್ಲಿ ಎಂದು ಖಚಿತವಾಗಿ ಹೇಳಿದ್ದರು. ಮುಂದಿನ ಎರಡು ದಶಕಗಳಲ್ಲಿ ಭಾರತ ವಿಶ್ವದ ಮಾರುಕಟ್ಟೆಯಲ್ಲಿ ಅಗ್ರಸ್ಥಾನ ಗಳಿಸಿರುತ್ತದೆ ಎಂದು ಭವಿಷ್ಯವನ್ನೂ ನುಡಿದಿದ್ದರು.

ಯಾವುದೇ ನಿರ್ಬಂಧ ಅಥವಾ ನಿಯಂತ್ರಣಗಳಿಲ್ಲದ ಮುಕ್ತ ಮಾರುಕಟ್ಟೆ ವ್ಯವಸ್ಥೆಯನ್ನು ಸ್ಥಾಪಿಸುವುದರಿಂದಲೇ ಭಾರತದ ಸಾಮಾಜಿಕ-ಆರ್ಥಿಕ ಮುನ್ನಡೆ ಸಾಧ್ಯ ಎಂದೂ ಭವಿಷ್ಯ ನುಡಿದಿದ್ದರು. ಸಿಂಗ್ ಅವರ ಈ ಭವಿಷ್ಯ ನುಡಿಗೆ ತಾಳ ಹಾಕಿದ ಅರ್ಥಶಾಸ್ತ್ರಜ್ಞರಿಗೇನೂ ಕೊರತೆ ಇರಲಿಲ್ಲ. ಲೈಸೆನ್ಸ್ ರಾಜ್-ಪರ್ಮಿಟ್ ರಾಜ್ ವ್ಯವಸ್ಥೆಯಿಂದ ಮುಕ್ತಿ ಪಡೆದು, ಮಾರುಕಟ್ಟೆಯಲ್ಲಿ ಭಾಗವಹಿಸುವವರಿಗೆ ತಮ್ಮದೇ ಆದ ಆಯ್ಕೆ ಸ್ವಾತಂತ್ರ್ಯ ನೀಡುವುದು ಮತ್ತು ಮಾರುಕಟ್ಟೆಯಲ್ಲಿ ಬಿಕರಿಯಾಗುವ ವಸ್ತುಗಳಿಗೂ ಮುಕ್ತ ಚಲನೆಯ ಸ್ವಾತಂತ್ರ್ಯವನ್ನು ಒದಗಿಸುವುದು ನವ ಉದಾರವಾದದ ಮಾರುಕಟ್ಟೆ ನೀತಿಯ ಮೂಲ ಸಿದ್ಧಾಂತವಾಗಿತ್ತು.

ನವ ಉದಾರವಾದ ಭಾರತದ ಆರ್ಥಿಕ ಕ್ಷೇತ್ರದಲ್ಲಿ ಸುನಾಮಿ ಸೃಷ್ಟಿಸುತ್ತಿರುವಂತೆಯೇ, ಸಾಮಾಜಿಕ ಹಾಗು ರಾಜಕೀಯ ಸ್ತರಗಳಲ್ಲಿ ನವ ನವೀನ ವಿದ್ಯಮಾನಗಳನ್ನೂ ಸೃಷ್ಟಿಸಿತ್ತು. ಊಳಿಗಮಾನ್ಯ ವ್ಯವಸ್ಥೆಯ ಪಳೆಯುಳಿಕೆಗಳು ತಮ್ಮ ಪಾರಂಪರಿಕ ನಿಲುವು ಮತ್ತು ಪ್ರಾಬಲ್ಯವನ್ನು ಉಳಿಸಿಕೊಂಡೇ ನವ ಉದಾರವಾದದ ಹಣಕಾಸು ಬಂಡವಾಳವನ್ನು ಅಪ್ಪಿಕೊಂಡಿತ್ತು. ಉದ್ಯಮಶೀಲತೆ ಎಂದರೆ ದೇಶದ ಸಮಗ್ರ ಉತ್ಪನ್ನವನ್ನು ಹೆಚ್ಚಿಸುವ ಮೂಲಕ ಸಮತೋಲನ ಕಾಪಾಡುವ ನಿಟ್ಟಿನಲ್ಲಿ ಸರ್ವತೋಮುಖ ಅಭಿವೃದ್ಧಿ ಸಾಧಿಸುವುದು ಎಂದು ಅರ್ಥೈಸಲಾಗುತ್ತಿತ್ತು. ಆದರೆ ನವ ಉದಾರವಾದದಲ್ಲಿ ಉದ್ಯಮಶೀಲತೆ ಎಂದರೆ ಶೀಲ ವಿಲ್ಲದೆ ನಡೆಸುವ ಉದ್ಯಮ ಎಂಬಂತಾಯಿತು.

ಸಂಪತ್ತಿನ ಕ್ರೂಢೀಕರಣ, ಅಧಿಕಾರ ಕೇಂದ್ರೀಕರಣ, ಸಂಪನ್ಮೂಲಗಳ ಲೂಟಿ, ಕಾರ್ಪೋರೇಟ್ ಆಡಳಿತ, ವಿದೇಶಿ ಸಂಸ್ಥೆಗಳ ನಿಯಂತ್ರಣ ಇವೆಲ್ಲವೂ ಜಾಗತೀಕರಣದ ಮಂತ್ರಗಳಾದವು. ಮತ್ತೊಂದೆಡೆ ದೇಶ ಅರವತ್ತು ವರ್ಷ ಪೂರೈಸುತ್ತಿದ್ದಂತೆಯೇ ಆಳ್ವಿಕರು ತಮ್ಮ ಸ್ವಯಂ ನಿವೃತ್ತಿಯನ್ನೂ ಘೋಷಿಸಲು ನಿರ್ಧರಿಸಿದ್ದರು.

ಈಗ ಸರ್ಕಾರದ ಪಾತ್ರ ಏನಿದ್ದರೂ ಮೇಲ್ವಿಚಾರಣೆಯದು, ಆರ್ಥಿಕ ನಿರ್ವಹಣೆ ಎಲ್ಲವೂ ಕಾರ್ಪೋರೇಟ್ ಉದ್ಯಮಿಗಳದ್ದೇ ಎಂಬ ಹೊಸ ನೀತಿ ಜಾರಿಗೆ ಬಂದಿತ್ತು. ಹಾಗಾಗಿ ಪ್ರಜೆಗಳಿಗೆ ಒದಗಿಸಬೇಕಾದ ಮೂಲಭೂತ ಸೌಕರ್ಯಗಳು ಹಕ್ಕುಗಳ ಸ್ವರೂಪವನ್ನು ಕಳೆದುಕೊಂಡು ಆಗ್ರಹದ ರೂಪ ಪಡೆದವು. ಅಳದೆ ಇದ್ದರೆ ತಾಯಿಯೂ ಮಗುವಿಗೆ ಹಾಲುಣಿಸುವುದಿಲ್ಲ ಎಂಬಂತೆ ಪ್ರಜೆಗಳ ಆಗ್ರಹವಿಲ್ಲದೆ ಆಳ್ವಿಕರು ಏನನ್ನೂ ನೀಡುವಂತಿಲ್ಲ ಎಂಬ ಹೊಸ ನೀತಿ ಜಾರಿಗೆ ಬಂದಿದೆ. ದೇಶದ ಅಭಿವೃದ್ಧಿಗಾಗಿ, ಆರ್ಥಿಕ ಪ್ರಗತಿಗಾಗಿ, ಜಿಡಿಪಿ ವೃದ್ಧಿಗಾಗಿ ಪ್ರಜೆಗಳ ತ್ಯಾಗ, ಬಲಿದಾನ ಅನಿವಾರ್ಯ ಎಂಬ ಹೊಸ ನೀತಿ ವ್ಯಾಪಕವಾಗಿ ಹರಡಲಾರಂಭಿಸಿದೆ.

ಹಾಗಾಗಿ ಅಭಿವೃದ್ಧಿಗೆ ಅಡ್ಡಿಪಡಿಸುವ ಯಾವುದೇ ಪ್ರಜಾ ಸಮೂಹವನ್ನು ಬಗ್ಗು ಬಡಿಯಲು ಸೇನೆಯನ್ನೂ ಕಾರ್ಪೋರೇಟ್ ಉದ್ಯಮಿಗಳೇ ಸೃಷ್ಟಿಸುತ್ತಾರೆ, ಸರ್ಕಾರದ ಸಹಯೋಗದಿಂದ. ಛತ್ತೀಸ್‌ಘಡದ ಸಲ್ವಾಜುಡಂ ಸ್ಪಷ್ಟ ನಿದರ್ಶನ. ಈ ಸೇನಾಪಡೆಯ ರಕ್ಷಣೆಯಲ್ಲಿ ಅರಣ್ಯಗಳು, ನದಿ ಹೊಳ್ಳಗಳು, ಬೆಟ್ಟ ಗುಡ್ಡಗಳು ಅಭಿವೃದ್ಧಿಪಥದ ಮೈಲಿಗಲ್ಲುಗಳಾಗುತ್ತವೆ. ಸಣ್ಣ ಪುಟ್ಟ ಗ್ರಾಮಗಳು ಮುಳುಗುತ್ತವೆ, ನವ ವಸಾಹತುಗಳ ರೂಪದಲ್ಲಿ ಸ್ಥಾಪಿಸಲಾಗುವ ವಿಶೇಷ ಆರ್ಥಿಕ ವಲಯಗಳಿಗಾಗಿ ಗ್ರಾಮಗಳು ಮರೆಯಾಗುತ್ತವೆ. ಐಷಾರಾಮಿ ಜೀವನಕ್ಕೆ ದಾರಿ ಸುಗಮ ಮಾಡಲು ಲಕ್ಷಾಂತರ ಸೂರುಗಳು ನೆಲಸಮವಾಗುತ್ತವೆ. ಎಲ್ಲವೂ ದೇಶದ ಅಭ್ಯುದಯಕ್ಕಾಗಿ.

ಸರ್ಕಾರ, ಆಳ್ವಿಕೆ, ಪ್ರಭುತ್ವದ ಆಶಯಗಳ ಈಡೇರಿಕೆ ಇವೆಲ್ಲವೂ ಕಾರ್ಪೋರೇಟ್ ಉದ್ಯಮಗಳ ಪಾಲಾಗಿ ಜನಸಮುದಾಯಗಳು ತಮ್ಮ ಸೌಕರ್ಯಗಳಿಗಾಗಿ ಉದ್ಯಮಿಗಳನ್ನೇ ಆಶ್ರಯಿಸುವ ಪರಿಸ್ಥಿತಿ ಇನ್ನೇನು ಬರಲಿದೆ. ಆದರೆ ಸದ್ಯಕ್ಕೆ ಈ ಮಹತ್ಕಾರ್ಯಗಳನ್ನು ನಮ್ಮ ರಾಜಕೀಯ ಪಕ್ಷಗಳೇ ಮಾಡುತ್ತಿವೆ. ಆದರೆ ಸೇವಾಮನೋಭಾವದಿಂದಲ್ಲ. ನವ ಉದಾರವಾದ ನೀತಿಯಲ್ಲಿ ಸೇವೆಗೂ ಶುಲ್ಕವಿದೆ, ಪೇಟೆಂಟ್ ಇದೆ, ಅಂತಾರಾಷ್ಟ್ರೀಯ ಮಾರುಕಟ್ಟೆ ಮೌಲ್ಯವಿದೆ. ಹಾಗಾಗಿ ಜನತಾ ಜನಾರ್ದನರಿಗೆ ತಾವು ಸಲ್ಲಿಸುವ ಸೇವೆಗೂ ಆಳ್ವಿಕರು ಮೌಲ್ಯ ನಿರ್ಧರಿಸುತ್ತಾರೆ.

ಸರ್ಕಾರದ ಪಾತ್ರ ಏನಿದ್ದರೂ ಮೇಲ್ವಿಚಾರಣೆಯದು, ಆರ್ಥಿಕ ನಿರ್ವಹಣೆ ಎಲ್ಲವೂ ಕಾರ್ಪೋರೇಟ್ ಉದ್ಯಮಿಗಳದ್ದೇ ಎಂಬ ಹೊಸ ನೀತಿ ಜಾರಿಗೆ ಬಂದಿತ್ತು. ಹಾಗಾಗಿ ಪ್ರಜೆಗಳಿಗೆ ಒದಗಿಸಬೇಕಾದ ಮೂಲಭೂತ ಸೌಕರ್ಯಗಳು ಹಕ್ಕುಗಳ ಸ್ವರೂಪವನ್ನು ಕಳೆದುಕೊಂಡು ಆಗ್ರಹದ ರೂಪ ಪಡೆದವು. ಅಳದೆ ಇದ್ದರೆ ತಾಯಿಯೂ ಮಗುವಿಗೆ ಹಾಲುಣಿಸುವುದಿಲ್ಲ ಎಂಬಂತೆ ಪ್ರಜೆಗಳ ಆಗ್ರಹವಿಲ್ಲದೆ ಆಳ್ವಿಕರು ಏನನ್ನೂ ನೀಡುವಂತಿಲ್ಲ ಎಂಬ ಹೊಸ ನೀತಿ ಜಾರಿಗೆ ಬಂದಿದೆ. ದೇಶದ ಅಭಿವೃದ್ಧಿಗಾಗಿ, ಆರ್ಥಿಕ ಪ್ರಗತಿಗಾಗಿ, ಜಿಡಿಪಿ ವೃದ್ಧಿಗಾಗಿ ಪ್ರಜೆಗಳ ತ್ಯಾಗ, ಬಲಿದಾನ ಅನಿವಾರ್ಯ ಎಂಬ ಹೊಸ ನೀತಿ ವ್ಯಾಪಕವಾಗಿ ಹರಡಲಾರಂಭಿಸಿದೆ.

ಪೇ ಅಂಡ್ ಯೂಸ್ ಮತ್ತು ಯೂಸ್ ಅಂಡ್ ತ್ರೋ, ಅರ್ಥಾತ್ ಪಾವತಿ ಮಾಡಿ ಉಪಯೋಗಿಸಿ, ಉಪಯೋಗಿಸಿ ಬಿಸಾಡಿ ಎನ್ನುವುದು ನವ ಉದಾರವಾದದ ಮೂಲ ಮಂತ್ರ. ಪ್ರಜೆಗಳು ತಮಗೆ ಉಪಯೋಗವಾಗುವ ಸೌಕರ್ಯಗಳನ್ನು ಪಾವತಿ ಮಾಡಿ ಉಪಯೋಗಿಸಬೇಕು, ಆಳ್ವಿಕರು ಸಂಪನ್ಮೂಲಗಳನ್ನು ಮತ್ತು ಪ್ರಜೆಗಳನ್ನು ತಮಗೆ ಬೇಕಾದಂತೆ ಉಪಯೋಗಿಸಿ ಬಿಸಾಡುತ್ತಾರೆ. ಇದು ಈ ಮಂತ್ರದ ಮೂಲ ತಾತ್ಪರ್ಯ.

ಹಾಗಾಗಿ ಯಾವುದೇ ಸಮಾಜವನ್ನು, ಆರ್ಥಿಕ ವ್ಯವಸ್ಥೆಯನ್ನು ಪ್ರಗತಿಯ ಪಥದಲ್ಲಿ ಕೊಂಡೊಯ್ಯಲು ಅಗತ್ಯವಾದ ಬಂಡವಾಳಕ್ಕೆ ಅಪಾರ ಬೇಡಿಕೆ ಸೃಷ್ಟಿಯಾಗಿದೆ. ಬಂಡವಾಳ ಹೂಡುವವರಿಗೆ ಕೊರತೆ ಇಲ್ಲ. ಮೊದಲೆಲ್ಲಾ ವಿದೇಶಿ ಬಂಡವಾಳಕ್ಕೆ ಬಾಯ್ಬಿಡುತ್ತಿದ್ದ ಭಾರತದ ಆಳ್ವಿಕರು ಈಗ ಹೊರದೇಶದಲ್ಲಿ ಬಂಡವಾಳ ಹೂಡಬಲ್ಲ ದೇಶಿ ಉದ್ಯಮಿಗಳ ಸಹಯೋಗ ಹೊಂದಿದ್ದಾರೆ. ಸಮಸ್ಯೆ ಇರುವುದು ಬಂಡವಾಳ ಹೂಡಿಕೆಯಲ್ಲಿ ಅಲ್ಲ, ಬಂಡವಾಳ ಹಂಚಿಕೆಯಲ್ಲಿ. ದೇಶದ ಅಪಾರ ಸಂಪತ್ತನ್ನು, ನೈಸರ್ಗಿಕ ಸಂಪನ್ಮೂಲಗಳನ್ನು ಅಭಿವೃದ್ಧಿಗಾಗಿ ಬಳಸುವ ಪ್ರಕ್ರಿಯೆಯಲ್ಲಿ ನಿರ್ಣಾಯಕ ಪಾತ್ರವನ್ನು ಪ್ರಭುತ್ವವೇ ವಹಿಸಿಕೊಂಡಲ್ಲಿ ದೇಶದ ಉತ್ಪಾದನೆ ಜನಸಮುದಾಯಗಳನ್ನು ತಲುಪುವ ಸಾಧ್ಯತೆಗಳು ಹೆಚ್ಚು. ಆದರೆ ಇದೇ ನಿರ್ಣಾಯಕ ಪಾತ್ರವನ್ನು ಹಣಕಾಸು ಬಂಡವಾಳ ಕಾರ್ಪೋರೇಟ್ ಉದ್ಯಮಿಗಳ ಮೂಲಕ ನಿರ್ವಹಿಸಿದಲ್ಲಿ ಜನಸಾಮಾನ್ಯರು ಅಭಿವೃದ್ಧಿಯ ದಾಳಗಳಾಗುತ್ತಾರೆ. ಪ್ರಗತಿಯ ಮೆಟ್ಟಿಲುಗಳಾಗುತ್ತಾರೆ. ಸಂಪನ್ಮೂಲ ಕ್ರೋಢೀಕರಣದ ಸಾಧನಗಳಾಗುತ್ತಾರೆ. ಅಂತಿಮವಾಗಿ ನಿರ್ಗತಿಕರಾಗುತ್ತಾರೆ.

ಈ ಪ್ರಕ್ರಿಯೆಯಲ್ಲಿ ಪ್ರಭುತ್ವದ ಮೂಲ ನೀತಿಗಳು ಮತ್ತು ಆಳ್ವಿಕರ ಯೋಜನೆಗಳು ಮಹತ್ತರ ಪಾತ್ರ ವಹಿಸುತ್ತವೆ. ಕ್ರೋಢೀಕೃತ ಬಂಡವಾಳವನ್ನು ಹೇಗೆ ವಿನಿಯೋಗಿಸಬೇಕೆಂಬ ಪ್ರಭುತ್ವದ ಸೈದ್ಧಾಂತಿಕ ನಿಲುವುಗಳೇ ಆರ್ಥಿಕ ಪ್ರಗತಿಯ ಪಥವನ್ನೂ ನಿರ್ದೇಶಿಸುತ್ತದೆ. ಈ ನೀತಿಗಳಲ್ಲಿ ಸಾಂವಿಧಾನಿಕ ಆಶಯಗಳು ತಮ್ಮದೇ ಆದ ಮಹತ್ವ ಹೊಂದಿರುತ್ತವೆ. ಆದರೆ ಪ್ರಸ್ತುತ ಸಂದರ್ಭದಲ್ಲಿ ಭಾರತದ ಆಳುವ ವರ್ಗಗಳು ಸಾಂವಿಧಾನಿಕ ಆಶಯಗಳಿಗೆ ತಿಲಾಂಜಲಿ ನೀಡಿರುವುದರಿಂದ ಬಂಡವಾಳದ ವಿನಿಯೋಗ ಕೇವಲ ಉಳ್ಳವರ ನಡುವೆ ನಡೆಯುತ್ತಿದೆ. ಸಂಪತ್ತಿನ ವಿತರಣೆ ಶ್ರೀಮಂತರ ಪಾಲಾಗುತ್ತಿದೆ.

ಈ ನಿಟ್ಟಿನಲ್ಲಿ ಬಂಡವಾಳವನ್ನು ತಮ್ಮ ಕಬಂಧ ಬಾಹುಗಳಲ್ಲಿ ಹಿಡಿದಿಟ್ಟುಕೊಂಡಿರುವ ಕಾರ್ಪೋರೇಟ್ ಉದ್ಯಮಿಗಳು ಪ್ರಭುತ್ವದ ನೀತಿಯನ್ನೂ ನಿಯಂತ್ರಿಸಲು ಯತ್ನಿಸುವುದು ನವ ಉದಾರವಾದದ ವೈಶಿಷ್ಟ್ಯ. ವಿಶ್ವದ ಎಲ್ಲ ಬಂಡವಾಳಶಾಹಿ ರಾಷ್ಟ್ರಗಳಲ್ಲೂ ಈ ವಿದ್ಯಮಾನವನ್ನು ಕಾಣಬಹುದು. ಭಾರತದಲ್ಲೂ ಇದನ್ನೇ ಕಾಣುತ್ತಿದ್ದೇವೆ. ಹಾಗಾಗಿ ಇಡೀ ರಾಜಕೀಯ ವ್ಯವಸ್ಥೆ ಉದ್ಯಮಪತಿಗಳ ವಶದಲ್ಲಿರುತ್ತವೆ. ತಮ್ಮ ಅನುಕೂಲಗಳಿಗಾಗಿ ವಿಭಿನ್ನ ರಾಜಕೀಯ ಪಕ್ಷಗಳನ್ನು ಬೆಂಬಲಿಸುತ್ತಿದ್ದ ಬಂಡವಾಳ ಇಂದು ಅದೇ ಪಕ್ಷಗಳನ್ನು ನೇರವಾಗಿ ನಿಯಂತ್ರಿಸುತ್ತಿ

ರುವುದು, ಚುನಾವಣಾ ಪ್ರಕ್ರಿಯೆಯಲ್ಲಿ ಮತ್ತು ಸರ್ಕಾರದ ನೀತಿಗಳಲ್ಲಿ ವ್ಯಕ್ತವಾಗುತ್ತಿದೆ. ಕರ್ನಾಟಕದಲ್ಲಿ ಕಳೆದ ಎರಡು ತಿಂಗಳುಗಳಲ್ಲಿ ಕಾಣಲಾಗುತ್ತಿರುವ ರಾಜಕೀಯ ವಿದ್ಯಮಾನಗಳನ್ನು ಈ ದೃಷ್ಟಿಯಿಂದಲೇ ವಿಶ್ಲೇಷಿಸಬೇಕಾಗುತ್ತದೆ.

ಬಂಡವಾಳದ ರಾಜಕೀಯ–ಗುಜರಾತ್ ಮಾದರಿ

"ಕರ್ನಾಟಕವನ್ನು ಗುಜರಾತ್ ಮಾಡುತ್ತೇವೆ" ಎಂಬ ಘೋಷಣೆಯೊಂದಿಗೆ ಅಧಿಕಾರದ ಗದ್ದುಗೆ ಏರಿದ ಭಾಜಪ, ತನ್ನ ಎರಡು ವರ್ಷಗಳ ಆಳ್ವಿಕೆಯಲ್ಲಿ ಗುಜರಾತ್‌ನ ಒಂದು ಮುಖವನ್ನು ಕನ್ನಡಿಗರಿಗೆ ಪರಿಚಯ ಮಾಡಿಸಿದ್ದು, ಮತ್ತೊಂದು ಆಯಾಮವನ್ನು ಸಾಧಿಸುವಲ್ಲಿ ತೆವಳುತ್ತಿದೆ. ಕರ್ನಾಟಕಕ್ಕೆ ಮಾತ್ರವಲ್ಲ, ನವ ಉದಾರವಾದವನ್ನು ಪೋಷಿಸಿ, ಪ್ರೋತ್ಸಾಹಿಸಿ ಅಪ್ಪಿಕೊಳ್ಳುವ ಭಾರತದ ಎಲ್ಲ ಸ್ವರೂಪದ ಆಳುವ ವರ್ಗಗಳಿಗೂ ಗುಜರಾತ್ ಮಾದರಿ ಅಪ್ಯಾಯಮಾನವಾಗಿದೆ. ತಮ್ಮ ಹತ್ತು ವರ್ಷಗಳ ಆಳ್ವಿಕೆಯಲ್ಲಿ ನರೇಂದ್ರ ಮೋದಿ ಮಾಡಿರುವ ಸಾಧನೆಗಳನ್ನು ಕೇವಲ ಉದ್ಯಮಪತಿಗಳು, ಕಾರ್ಪೋರೇಟ್ ಸಂಸ್ಥೆಗಳು ಮಾತ್ರ ಶ್ಲಾಘಿಸುತ್ತಿಲ್ಲ.

ಅನೇಕ ಕಾಂಗ್ರೆಸ್ ಮುಖ್ಯಮಂತ್ರಿಗಳೂ ಮೋದಿ ಮಾದರಿಯ ಮೋಡಿಗೊಳಗಾಗಿದ್ದಾರೆ. ನವ ಉದಾರವಾದದ ಪರಿಕಲ್ಪನೆಯ ಅಭಿವೃದ್ಧಿಯ ವೈಭವದಲ್ಲಿ 2002ರ ದುರಂತಗಳು ಮರೆಯಾಗಿ ಹೋಗಿರುವುದೂ ಅಷ್ಟೇ ಸತ್ಯ. ಸ್ವತಂತ್ರ ಭಾರತದ ಇತಿಹಾಸದಲ್ಲಿ ಕಪ್ಪು ಚುಕ್ಕೆ ಎನಿಸಬೇಕಾಗಿದ್ದ, ಎನಿಸಿದ್ದ 2002ರ ಹತ್ಯಾಕಾಂಡ ಈಗ ಒಂದು ಅಪಭ್ರಂಶವಾಗಿ ಮಾತ್ರ ವ್ಯಕ್ತವಾಗುತ್ತಿದೆ. ಕಹಿ ಘಟನೆಗಳನ್ನು ಮರೆತು ಭವ್ಯ ಭವಿಷ್ಯದೆಡೆಗೆ ದಾಪುಗಾಲು ಹಾಕುವತ್ತ ಭಾರತದ ಜನತೆ ಸಾಗುತ್ತಿದೆ.

ಗುಜರಾತ್ ಮಾದರಿಯಾದರೂ ಏನು? ಸ್ವತಂತ್ರ ಭಾರತದಲ್ಲಿ ಯಾವ ರಾಜ್ಯವೂ ಸಾಧಿಸದಿದ್ದನ್ನು ಮೋದಿ ಸಾಧಿಸಿದ್ದಾರೆಯೇ? ಸಾಕ್ಷರತೆ ಶೇ. 90 ದಾಟಿರುವುದೇ, ಸರ್ವರಿಗೂ ಪ್ರಾಥಮಿಕ ಶಿಕ್ಷಣ ದೊರೆಯುತ್ತಿದೆಯೇ, ನಿರುದ್ಯೋಗ ನಿವಾರಣೆಯಾಗಿದೆಯೇ, ಮಹಿಳೆಯರು, ದಲಿತರು ಮತ್ತಿತರ ದುರ್ಬಲ ವರ್ಗಗಳ ಮೇಲಿನ ದೌರ್ಜನ್ಯ ಕೊನೆಗೊಂಡಿದೆಯೇ, ಉದ್ಯೋಗವನ್ನರಸಿ ವಲಸೆ ಹೋಗುವವರ ಸಂಖ್ಯೆ ಇಳಿಕೆಯಾಗಿದೆಯೇ, ಎಲ್ಲ ಪ್ರಜೆಗಳಿಗೂ ಉಚಿತ, ಉತ್ತಮ ಆರೋಗ್ಯ ಸೌಕರ್ಯ ಲಭ್ಯವಿದೆಯೇ? ಹೀಗೆ ಹತ್ತಾರು ಪ್ರಶ್ನೆಗಳು ಎದುರಾದಾಗ, ಗುಜರಾತ್ ಮಾದರಿಯ ಸತ್ಯಾಸತ್ಯತೆಗಳೇ ಅನುಮಾನಾಸ್ಪದವಾಗುತ್ತದೆ. ಆದರೂ 2002ರ ಮೋದಿಯನ್ನು ಕ್ಷಮಿಸುವಂತಹ ಪ್ರಗತಿಯನ್ನು ಗುಜರಾತ್ ಸಾಧಿಸಿರುವುದೇ ಎಂದು ಯೋಚಿಸಿದಾಗ ಗೋಚರಿಸುವ ಚಿತ್ರಣವೇ ಬೇರೆ.

ಕೈಗಾರಿಕೆ ಮತ್ತು ಬಂಡವಾಳ ಅಭಿವೃದ್ಧಿಗೆ ಹೆಸರಾಗಿದ್ದ ಗುಜರಾತ್ ಹಠಾತ್ತನೆ ಕೋಮು ಸಂಘರ್ಷದ ಕೇಂದ್ರ ಬಿಂದುವಾಗಿದ್ದು 2002ರಲ್ಲೇ. ಗುಜರಾತ್‌ನಲ್ಲಿ ಸಂಭವಿಸಿದ್ದು ಕೋಮು ಸಂಘರ್ಷವೇ ಆದರೂ ಸಮುದಾಯಗಳ ನಡುವಿನ ಕಲಹವೇ ಆದರೂ, ಈ ಘಟನೆಗಳ ತೆರೆಮರೆಯಲ್ಲಿ ಜಾಗತಿಕ ಬಂಡವಾಳ ಪ್ರೇರಿತ ಬಲಪಂಥೀಯ ಸರ್ಕಾರವೊಂದು ಅನುಸರಿಸಬೇಕಾದ ಎಲ್ಲಾ ತಂತ್ರಗಳನ್ನೂ ಮೋದಿ ಅನುಸರಿಸಿದ್ದು ಸ್ಪಷ್ಟ.

ಹಾಗಾಗಿ ಮೋದಿ ಎರಡು ವಿಭಿನ್ನ ರೀತಿಗಳಲ್ಲಿ ರಾಜಕೀಯ ಮಾದರಿಯಾಗಿ ರೂಪುಗೊಂಡರು. ಒಂದೆಡೆ ನವ ಉದಾರವಾದದ ಬಂಡವಾಳ ವ್ಯವಸ್ಥೆಯ ಹರಿಕಾರರಾಗಿ ಸಾಧನೆಯ ಉತ್ತುಂಗಕ್ಕೇರಿ ಇತರ ರಾಜ್ಯಗಳಿಗೆ ಮಾದರಿಯಾದರೆ ಮತ್ತೊಂದೆಡೆ ತೀವ್ರಗಾಮಿ ಕೋಮುವಾದವನ್ನು ಪೋಷಿಸುವ ಮೂಲಕ ಮತೀಯ ಅಲ್ಪಸಂಖ್ಯಾತರನ್ನು ಪ್ರತ್ಯೇಕತಾ ಭಾವನೆಗೊಳಪಡಿಸಿ ನಂತರ ಸಾಮಾಜಿಕ–ಆರ್ಥಿಕ ಪ್ರಗತಿಯ ಮೂಲಕ ಅವರನ್ನು ತಮ್ಮ ಆಳ್ವಿಕೆಯೆಡೆಗೆ ಸೆಳೆಯುವ ಮೂಲಕ ಒಂದು ವಿಶಿಷ್ಟ ಬಲಪಂಥೀಯ ಆಳ್ವಿಕೆಗೆ ಮಾದರಿಯಾಗಿದ್ದಾರೆ. ಹಾಗಾಗಿಯೇ ಇಂದು ಮೋದಿಯವರ ನವ ಉದಾರವಾದದ ಫಲಾನುಭವಿಗಳು 2002ರ ಕಹಿನೆನಪುಗಳನ್ನು ಮರೆತು ಮುನ್ನಡೆಯಲೆತ್ನಿಸುತ್ತಿದ್ದಾರೆ.

ಕೈಗಾರಿಕೀಕರಣ ಮತ್ತು ನೀರಾವರಿ ಕೃಷಿ ಕ್ಷೇತ್ರದಲ್ಲಿ ಅಪ್ರತಿಮ ಬೆಳವಣಿಗೆ ಕಂಡಿದ್ದ ಗುಜರಾತ್‌ನಲ್ಲಿ ಬಂಡವಾಳದ ಬೆಳವಣಿಗೆಯ ಹೊರತಾಗಿಯೂ ನಿರ್ಗತಿಕತೆಯನ್ನು ಅನುಭವಿಸುವ ಜನಸಂಖ್ಯೆಗೇನೂ ಕೊರತೆಯಿಲ್ಲ. ಆಗಲೂ ಇರಲಿಲ್ಲ, ಈಗಲೂ ಇಲ್ಲ. ವಜ್ರದ ವ್ಯಾಪಾರಿಗಳ ದಂತದರಮನೆಗಳ ಹಿನ್ನೆಲೆಯಲ್ಲೇ ನಿರ್ಗತಿಕ ಶ್ರಮಿಕರ ಜೀವನವೂ ಸಾಗುತ್ತಿದ್ದುದು ಎಲ್ಲೆಡೆಯಂತೆ ಗುಜರಾತಿನಲ್ಲೂ ಸಾಮಾನ್ಯವೇ. ಈ ಶ್ರಮಿಕ ವರ್ಗಗಳ ಪ್ರತಿಭಟನಾ ದನಿಗಳನ್ನು ಅಡಗಿಸಿ, ತಮ್ಮ ಉದಾರವಾದಿ ಪರಿಕಲ್ಪನೆಯ ಅಭಿವೃದ್ಧಿಯ ಪಥದಲ್ಲಿ ಈ ಜನಸಮೂಹವನ್ನೂ ಕೊಂಡೊಯ್ಯುವ ಮೋದೀಕರಣ ನೀತಿಯ ಪರಿಣಾಮವೇ 2002. ಈ ಗುರಿಯನ್ನು ಮುಟ್ಟಿದ ನಂತರದಲ್ಲಿ ಮೋದಿಯವರ ಸಾಧನೆ ಉಚ್ಛ್ರಾಯ ಮಟ್ಟಕ್ಕೇರಿದ್ದು ಸ್ವಾಭಾವಿಕವೆಂದೇ ಕಾಣುತ್ತದೆ.

ಕೈಗಾರಿಕೀಕರಣ ಮತ್ತು ನೀರಾವರಿ ಕೃಷಿ ಕ್ಷೇತ್ರದಲ್ಲಿ ಅಪ್ರತಿಮ ಬೆಳವಣಿಗೆ ಕಂಡಿದ್ದ ಗುಜರಾತ್‌ನಲ್ಲಿ ಬಂಡವಾಳದ ಬೆಳವಣಿಗೆಯ ಹೊರತಾಗಿಯೂ ನಿರ್ಗತಿಕತೆಯನ್ನು ಅನುಭವಿಸುವ ಜನಸಂಖ್ಯೆಗೇನೂ ಕೊರತೆಯಿಲ್ಲ. ಆಗಲೂ ಇರಲಿಲ್ಲ, ಈಗಲೂ ಇಲ್ಲ. ವಜ್ರದ ವ್ಯಾಪಾರಿಗಳ ದಂತದರಮನೆಗಳ ಹಿನ್ನೆಲೆಯಲ್ಲೇ ನಿರ್ಗತಿಕ ಶ್ರಮಿಕರ ಜೀವನವೂ ಸಾಗುತ್ತಿದ್ದುದು ಎಲ್ಲೆಡೆಯಂತೆ ಗುಜರಾತಿನಲ್ಲೂ ಸಾಮಾನ್ಯವೇ.

ಈ ಶ್ರಮಿಕ ವರ್ಗಗಳ ಪ್ರತಿಭಟನಾ ದನಿಗಳನ್ನು ಅಡಗಿಸಿ, ತಮ್ಮ ಉದಾರವಾದಿ ಪರಿಕಲ್ಪನೆಯ ಅಭಿವೃದ್ಧಿಯ ಪಥದಲ್ಲಿ ಈ ಜನಸಮೂಹವನ್ನೂ ಕೊಂಡೊಯ್ಯುವ ಮೋದೀಕರಣ ನೀತಿಯ ಪರಿಣಾಮವೇ 2002. ಈ ಗುರಿಯನ್ನು ಮುಟ್ಟಿದ ನಂತರದಲ್ಲಿ ಮೋದಿಯವರ ಸಾಧನೆ ಉಚ್ಛ್ರಾಯ ಮಟ್ಟಕ್ಕೇರಿದ್ದು ಸ್ವಾಭಾವಿಕವೆಂದೇ ಕಾಣುತ್ತದೆ. ಏಕೆಂದರೆ ಆಧುನಿಕ ಅಭಿವೃದ್ಧಿ ಪರಿಕಲ್ಪನೆಯ ಎಲ್ಲಾ ಪರಿಕರಗಳನ್ನೂ ಗುಜರಾತ್‌ನ ಜನತೆಗೆ ಒದಗಿಸುವುದರಲ್ಲಿ ಯಶಸ್ವಿಯಾಗಿರುವ ಮೋದಿ, ಇಂದು ಜಾಗತಿಕ ಬಂಡವಾಳಗಾರರಿಗೆ ಮಾತ್ರವಲ್ಲದೆ, ಸ್ಥಳೀಯ ಉದ್ಯಮಿಗಳಿಗೂ ಮಾದರಿಯಾಗಿ ಹೊರಹೊಮ್ಮಿದ್ದಾರೆ. ಜಾಗತಿಕ ಹಣಕಾಸು ಬಂಡವಾಳದ ವೈಭವದಲ್ಲಿ 2002ರ ಸಾವುನೋವುಗಳು, ದುಃಖ ವ್ಯಸನಗಳು ಮುಳುಗಿ ಹೋಗಿರುವುದೇ ಅಲ್ಲದೆ, ಜಾಗತೀಕರಣದ ಫ್ಲೈಓವರ್‌ಗಳ ಸ್ತಂಭಗಳಡಿ ಹುದುಗಿರುವ ಮೃತ ದೇಹಗಳೂ ಕಣ್ಮರೆಯಾಗಿ ಹೋಗಿವೆ.

2002ರ ಮೋದಿಯನ್ನು ಯಥಾವತ್ತಾಗಿ ಅನುಸರಿಸಿದ ಯಡಿಯೂರಪ್ಪನವರ ಸರ್ಕಾರ, 2010ರ ಮೋದಿಯನ್ನೇಕೆ ಅನುಕರಿಸಲಾಗಲಿಲ್ಲ. ವಿಡಂಬನಾತ್ಮಕ ಸಂಗತಿ ಎಂದರೆ ಗುಜರಾತಿನ ಚಿತ್ರಣವನ್ನೇ ಬದಲಿಸಿ, ಜಾಗತೀಕರಣದ ಭ್ರಮಾಲೋಕವೇ ಅಭಿವೃದ್ಧಿಯ ಅಂತಿಮ ಘಟ್ಟ ಎಂದು ನಿರೂಪಿಸಲು ಮೋದಿಗೆ ನೆರವಾದ ಜಾಗತಿಕ ಹಣಕಾಸು ಬಂಡವಾಳವೇ ಕರ್ನಾಟಕದ ಮಟ್ಟಿಗೆ ದೊಡ್ಡ ಹೊರೆಯಾಗಿ ಪರಿಣಮಿಸಿದೆ. ಕಳೆದ ಒಂದು ತಿಂಗಳಿನಲ್ಲಿ ಕರ್ನಾಟಕದ ರಾಜಕಾರಣದಲ್ಲಿ ನಡೆದಿರುವ ದರಿದ್ರ ರಾಜಕೀಯವನ್ನು ನೋಡಿದಾಗ, ಸಾಮಾನ್ಯವಾಗಿ ನಾವು ರಾಜಕೀಯ ಭ್ರಷ್ಟತೆ, ಮೌಲ್ಯಗಳ ಅಧಃಪತನ ಇತ್ಯಾದಿಗಳನ್ನು ಪರಿಗಣಿಸುತ್ತೇವೆ. ಎಲ್ಲ ಪಕ್ಷಗಳಿಗೂ ಅಧಿಕಾರ ದಾಹ ಹೆಚ್ಚಾಗಿದೆ ಎಂದು ಭಾವಿಸುತ್ತೇವೆ. ಕುರ್ಚಿಗಾಗಿ ಏನೆಲ್ಲಾ ಮಾಡಲೂ ನಮ್ಮ ರಾಜಕಾರಣಿಗಳು ಸಿದ್ಧ ಎಂದು ಆರೋಪಿಸುತ್ತೇವೆ.

ಇವೆಲ್ಲವೂ ಸತ್ಯ. ಸದನದಲ್ಲಿ ಬಟ್ಟೆ ಹರಿದುಕೊಳ್ಳುವ, ಆತ್ಮಹತ್ಯೆ ಮಾಡಿಕೊಳ್ಳುವ, ಕುರ್ಚಿ ಮೇಜುಗಳನ್ನು ಎತ್ತೊಗೆಯುವ ಶಾಸಕರಿದ್ದಾಗ ಈ ಭಾವನೆಗಳು ತಪ್ಪೇನಲ್ಲ. ಆದರೆ ಭಾಜಪ ಸರ್ಕಾರದಲ್ಲಿ ತೀವ್ರ ಬಿಕ್ಕಟ್ಟು ಉಂಟಾಗಿರುವುದು ಮಂತ್ರಿ ಮಂಡಲದ ಪುನಾರಚನೆಯ ನಂತರ ಎಂಬ ಅಂಶವನ್ನು ಅಲ್ಲಗಳೆಯಲಾಗುವುದಿಲ್ಲ. ಈ ಪುನಾರಚನೆ ನಡೆದಿರುವುದೂ ಜಾಗತಿಕ ಬಂಡವಾಳ ಸಮಾವೇಶದ ನಂತರದಲ್ಲಿ. ನಾಲ್ಕು ಲಕ್ಷ ಕೋಟಿ ರೂಗಳ ಬಂಡವಾಳ ರಾಜ್ಯಕ್ಕೆ ಹರಿದುಬರುವ ಭ್ರಮೆಯನ್ನು ಸೃಷ್ಟಿಸಿದ ಈ ಸಮಾವೇಶ ಆಳ್ವಿಕರಲ್ಲಿ, ಆಳಲು ಅವಕಾಶವಿಲ್ಲದವರಲ್ಲಿ, ಆಳುವ ಆಶಯವಿದ್ದವರಲ್ಲಿ ಏನೆಲ್ಲಾ ಭಾವನೆಗಳನ್ನು ಸೃಷ್ಟಿಸಿರಬೇಡ! ಗಣಿ, ಅರಣ್ಯ, ರಾಷ್ಟ್ರೀಯ ಉದ್ಯಾನವನ, ವಿದ್ಯುತ್ ಉತ್ಪಾದನೆ, ಮಾಹಿತಿ ತಂತ್ರಜ್ಞಾನ, ರಿಯಲ್ ಎಸ್ಟೇಟ್, ಅತ್ಯಾಧುನಿಕ ವಿಮಾನ ನಿಲ್ದಾಣಗಳು, ವೈಭವಯುತ ಕಾರಿಡಾರ್‌ಗಳು, ಫ್ಲೈಓವರ್‌ಗಳು, ವಿಶೇಷ ಆರ್ಥಿಕ ವಲಯಗಳು ಹೀಗೆ ಬಂಡವಾಳ ಹೂಡಿಕೆಯ ಅನೇಕ ಕೇಂದ್ರ ಬಿಂದುಗಳು ಕರ್ನಾಟಕದ ಗಗನವನ್ನು ಅಲಂಕರಿಸುತ್ತಿದ್ದರೆ, ಗಗನಕುಸುಮಕ್ಕೆ ಕೈಚಾಚಿದ ಆಳ್ವಿಕರ ಮನಸ್ಸು ತಹಬಂದಿಯಲ್ಲಿರಲು ಸಾಧ್ಯವೇ? ಹರಿದುಬರುವ ಬಂಡವಾಳವನ್ನು ಯಾರಿಗೆ ಹಂಚಬೇಕು, ಯಾರ ಸುಪರ್ದಿಗೆ ಒಪ್ಪಿಸಬೇಕು, ಎಷ್ಟು ಪ್ರಮಾಣದಲ್ಲಿ ಅದು ಜನತೆಯನ್ನು ತಲುಪಬೇಕು ಎಂದೆಲ್ಲಾ ನಿರ್ಧರಿಸಲು ಆಳ್ವಿಕರಲ್ಲಿ ಒಮ್ಮತ ಇರಬೇಕಲ್ಲವೇ? ಆದರೆ ಕರ್ನಾಟದಲ್ಲಿ ಅದು ಕಾಣುತ್ತಿಲ್ಲ.

ಇದೇ ಸನ್ನಿವೇಶವನ್ನು ಮೋದಿ ಎಷ್ಟು ಚೆನ್ನಾಗಿ ನಿಭಾಯಿಸಿದ್ದಾರೆಂದರೆ, ಅವರ ಬಂಡವಾಳ ವ್ಯವಸ್ಥೆ ಸೃಷ್ಟಿಸಿರುವ ವೈಭವೋಪೇತ ಆಧುನಿಕ ಭ್ರಮಾಲೋಕದಲ್ಲಿ ಸಿಲುಕಿರುವ ಇಡೀ ರಾಜ್ಯದ ಜನತೆ ತಮ್ಮ ಹೋರಾಟದ

ಛಾಪನ್ನೇ ಕಳೆದುಕೊಂಡುಬಿಟ್ಟಿದ್ದಾರೆ. 24 ಗಂಟೆ ವಿದ್ಯುತ್ ನೀಡುವ ಮೋದಿ ಸಹಜವಾಗಿ ಜನರಿಗೆ ಹತ್ತಿರವಾಗುತ್ತಾರ ಏಕೆಂದರೆ ಈ ವಿದ್ಯುತ್ ಎಂಬ ಪ್ರಜಾಸಂಪತ್ತು ಕಾರ್ಪೋರೇಟ್‌ಗಳ ಕೈವಶವಾಗಿರುವ ಒಳಸತ್ಯ ಜನತೆಯ ಮಟ್ಟಿಗೆ ಅಗೋಚರವಾಗಿಯೇ ಇರುತ್ತದೆ. ಆಧುನಿಕತೆಯ ವೈಭವಗಳು ಗುಜರಾತಿನ ಜನತೆಯ ಬೆಂದ ಉದರಗಳ ಮೇಲೆ ರೇಷಿಮೆ ಕಂಬಳಿಗಳನ್ನು ಹೊದಿಸಿರುವುದು ಹೊದ್ದುಕೊಂಡವರಿಗೇ ತಿಳಿದಿಲ್ಲ.

2002ರ ಗಾಯದ ಕಲೆಗಳನ್ನು ಮರೆಮಾಚಲು ಅಭಿವೃದ್ಧಿ ಎಂಬ ಮುಲಾಮನ್ನು ಉಪಯೋಗಿಸಿರುವ ಮೋದಿ ಗಾಯ ಆರಲು ಬಿಡುವುದೇ ಇಲ್ಲ ಎಂಬ ಸತ್ಯವನ್ನೂ ಗಾಯಗೊಂಡವರು ಗ್ರಹಿಸಿಲ್ಲ. ಸಂಪನ್ಮೂಲಗಳನ್ನು ಉಳ್ಳವರ ಕೈಗೊಪ್ಪಿಸಿ, ಇಲ್ಲದವರಿಗೆ ಒಂದು ತುಣುಕು ಎಸೆದು ಸಂತೃಪ್ತಿ ಪಡಿಸುವ ನವ ಉದಾರವಾದದ ಒಂದು ಆಯಾಮವನ್ನು ಮೋದಿ ಗುಜರಾತಿನಲ್ಲಿ ಅನಾವರಣಗೊಳಿಸಿದ್ದಾರೆ.

ಆದರೆ ಕರ್ನಾಟಕದ ಭಾಜಪ ಈ ನಿಟ್ಟಿನಲ್ಲಿ ತನ್ನ ಗುರುವಿನ ಹಾದಿಯಿಂದ ಭಿನ್ನ ಮಾರ್ಗದಲ್ಲಿ ಸಾಗಿದೆ. ಹಂಚಿ ತಿನ್ನಲೂ ಆಗದು, ಕದ್ದು ತಿನ್ನಲೂ ಆಗದು ಎಂಬ ಪರಿಸ್ಥಿತಿಯಲ್ಲಿರುವ ರಾಜ್ಯ ಸರ್ಕಾರ ಮುಂದಿನ ದಿನಗಳಲ್ಲಿ ಹರಿದು ಬರುವ ಬಂಡವಾಳದ ಗಂಗೆಯನ್ನು ಭಗೀರಥ ಆಪೋಷನ ತೆಗೆದುಕೊಂಡಂತೆ ಏಕಾಂಗಿಯಾಗಿ ಸ್ವಾಹಾ ಮಾಡಲು ಸಿದ್ಧವಾಗುತ್ತಿದ್ದಂತೆಯೇ, ಮತ್ತೊಂದೆಡೆ ಈ ಆಪೋಷನವನ್ನು ತಡೆಗಟ್ಟಲು ವಿರೋಧ ಪಕ್ಷಗಳು ತಯಾರಾಗುತ್ತಿರುವುದು ಪ್ರಸ್ತುತ ಸನ್ನಿವೇಶಕ್ಕೆ ಎಡೆಮಾಡಿಕೊಟ್ಟಿದೆ. ಆಕ್ರಮಿತ ಸಂಪತನ್ನೂ ಹಂಚಿ ತಿನ್ನಬಹುದು ಎಂಬ ಹೊಸ ನ್ಯಾಯಾಂಗ ಸಂಹಿತೆ ರೂಪುಗೊಂಡಿರುವ ಹಿನ್ನೆಲೆಯಲ್ಲಿ ಕರ್ನಾಟಕದ ರಾಜಕಾರಣಿಗಳೂ ಹೊಡೆದಾಡುತ್ತಿದ್ದಾರೆ.

ಈ ಹಂಚಿಕೆಯ ಕಾರ್ಯಕ್ರಮಕ್ಕೆ ಅಡ್ಡಿಯಾಗುತ್ತಿರುವುದು ಸಂವಿಧಾನ ಎಂಬ ಒಂದು ಗ್ರಂಥ, ಅಥವಾ ಪ್ರಜಾತಂತ್ರ ಎಂಬ ಮೌಲ್ಯ. ಇವುಗಳೊಡನೆ ಮತದಾರ ಎಂಬ ಪ್ರಭು ಮತ್ತು ಅವರ ಸುತ್ತಲಿನ ಸಮಸ್ಯೆಗಳು. ಈ ಎಲ್ಲ ಅಡ್ಡಿ ಆತಂಕಗಳನ್ನೂ ನಿರ್ನಾಮ ಮಾಡಿಬಿಟ್ಟರೆ, ಆಮೇಲೆ ಈಸ್ಕೊಂಡೋನು ಈರಭದ್ರ ಕೊಟ್ಟೋನು ಕೋಡಂಗಿ. ಜನತೆಯ ಬವಣೆಯೂ ಅಷ್ಟೇ ಆದೀತು.

ರಾಜ್ಯ ರಾಜಕಾರಣದಲ್ಲಿ ಸಂಭವಿಸುತ್ತಿರುವ ಪಲ್ಲಟಗಳಿಗೆ ಈ ಬಂಡವಾಳದ ಹೊರೆಯೇ ಕಾರಣವಾಗಿದೆ. ಧರಣಿಗೆ ಗಿರಿ ಭಾರವೇ, ಗಿರಿಗೆ ಮರವು ಭಾರವೇ ಎಂದು ಕವಿಯೊಬ್ಬರು ಹೇಳಿದ್ದಾರೆ. ಆದರೆ ನಮ್ಮ ಆಳ್ವಿಕರಿಗೆ ಅವರನ್ನು ನಿಯಂತ್ರಿಸುವ ಬಂಡವಾಳವೇ ಭಾರವಾಗಿದೆ. ತನ್ನ ಭಾರಕ್ಕೆ ತಾನೇ ಕುಸಿದ ಮದಗಜದ ಹಾಗೆ ಇಡೀ ವ್ಯವಸ್ಥೆ ಕುಸಿಯುತ್ತಿದೆ. ಈ ಹೊರೆಯನ್ನು ಹೊರಲಾರದೆ, ಪಕ್ಕದವನ ಬೊಕ್ಕತಲೆಗೆ ವರ್ಗಾಯಿಸಲಾಗದೆ, ಸುತ್ತಲಿನ ಕಂದರಗಳಿಗೆ ಸುರಿಯಲಾರದೆ, ತಾನೇ ಹೊತ್ತು ಪಾತಾಳಕ್ಕೆ ಕುಸಿಯುತ್ತಿದೆ ರಾಜ್ಯದ ರಾಜಕಾರಣ. ಮದಗಜಗಳ ಕಾಳಗದಲ್ಲಿ ಹುಲ್ಲು ಸವೆದುಹೋದಂತೆ ಸವಣೂರಿನ ಪಾಪಿಗಳು, ನೆರೆಗೆ ಸಿಲುಕಿದ ಅಮಾಯಕರು, ಕೂಳಿಲ್ಲದ ಅಸಹಾಯಕರು – ಪ್ರಬುದ್ಧ ಮತದಾರರೂ ಸಹ ನಲುಗಿ ಹೋಗುತ್ತಿದ್ದಾರೆ. ಆದರೆ ನಸುಕಿನಲಿ ನಡೆವ ಮುಸುಕಿನ ಗುದ್ದಾಟದಲ್ಲಿ ಗೆಲ್ಲುವವರಾರು ಸೋಲುವವರಾರು.

(ಮುಂದುವರೆಯುವುದು) ☐

ಜಾನುವಾರು ಹತ್ಯಾ ನಿಷೇಧ ಮಸೂದೆ:

(15ನೇ ಪುಟದಿಂದ)

ರಾಜ್ಯದ ಪೊಲೀಸ್ ನಾಯಿಗಳಿಗೆ ದಿನ ನಿತ್ಯ ಹಾಲು, ಮೊಟ್ಟೆ, ಅನ್ನ, ತರಕಾರಿ ಜೊತೆಗೆ 1 ಕಿಲೊ ಬೀಫ್ ನೀಡಲಾಗುತ್ತದೆ. ಏಕೆಂದರೆ ಇತರ ಮಾಂಸಗಳಿಗೆ ಹೋಲಿಸಿದರೆ ಇದರಲ್ಲಿರುವ ಕೊಬ್ಬಿನ ಅಂಶ ಅತ್ಯಂತ ಕಡಿಮೆ. ಬೆಲೆಯೂ ಕಡಿಮೆ. ಬೀಫ್‌ನಲ್ಲಿ ಶೇಕಡಾ 2.5ರಷ್ಟು ಕೊಬ್ಬು ಇದ್ದರೆ ಆಡಿನ ಮಾಂಸದಲ್ಲಿ ಶೇಕಡಾ 3.5 ಮತ್ತು ಕುರಿಮಾಂಸದಲ್ಲಿ ಶೇಕಡಾ 10ರಷ್ಟಿದೆ. ಪೊಲೀಸ್ ನಾಯಿಗಳಿಗೆ ಬೀಫ್ ಬದಲಿಗೆ ಇತರ ಮಾಂಸ ತಿನ್ನಿಸಿದರೆ ಅವುಗಳ ಆರೋಗ್ಯದ ಮೇಲೆ ನೇರ ಪರಿಣಾಮವಾಗಲಿದೆ.

ಪರಿಸ್ಥಿತಿ ಇದು. ಹೀಗಾಗಿ ಈ ಹೊಸ ಜಾನುವಾರು ಕಾಯ್ದೆ ಎಲ್ಲಾದರೂ ಜಾರಿಗೊಂಡಿತೆಂದರೆ ಮೊತ್ತಮೊದಲು ಸಂಕಷ್ಟಕ್ಕೀಡಾಗುವವರೇ ರೈತರು. ಈಗಾಗಲೆ ಇಳಿಮುಖವಾಗಿರುವ ಜಾನುವಾರು ಸಾಕಣೆ ಹೆಚ್ಚುಕಮ್ಮಿ ಸಂಪೂರ್ಣ ನಿಂತುಹೋಗಬಹುದು. ಇವೆಲ್ಲದರ ಕುರಿತು ಯಾವುದೇ ವೈಜ್ಞಾನಿಕ ಸಮೀಕ್ಷೆಯಾಗಲಿ, ಜನಾಭಿಪ್ರಾಯ ಸಂಗ್ರಹಣೆಯಾಗಲಿ ನಡೆಸದೆ ಏಕಾಏಕಿಯಾಗಿ ಈ ಕಾಯ್ದೆಯನ್ನು ಮಾಡಹೊರಟಿರುವುದು ಅದರ ಹಿಂದೆ ಅಡಗಿರುವ ದುರುದ್ದೇಶಗಳನ್ನು ಮಾತ್ರವಲ್ಲ ರೈತರ ಬಗೆಗೆ ಸರಕಾರಕ್ಕಿರುವ ದಿವ್ಯ ನಿರ್ಲಕ್ಷವನ್ನು ಸ್ಪಷ್ಟವಾಗಿ ಎತ್ತಿತೋರಿಸುತ್ತದೆ. ಸಂಘ ಪರಿವಾರದ ಬ್ರಾಹ್ಮಣವಾದಿಗಳಿಂದ ಮಿದುಳನ್ನು ತೊಳೆಸಿಕೊಂಡ ಮಂದಿ ರೈತರ ಬವಣೆಗಳ ಕುರಿತಾಗಲಿ ಬಹುಸಂಖ್ಯಾತ ಜನರ ಆಹಾರದ ಕುರಿತಾಗಲಿ ಮತ್ತಿತರ ದುಷ್ಪರಿಣಾಮಗಳ ಕುರಿತಾಗಲಿ ಹೇಗೆ ತಾನೆ ಚಿಂತಿಸಬಲ್ಲರು!

ರಾಜ್ಯದ ಪೊಲೀಸ್ ನಾಯಿಗಳಿಗೆ ದಿನನಿತ್ಯ ಹಾಲು, ಮೊಟ್ಟೆ, ಅನ್ನ, ತರಕಾರಿ ಜೊತೆಗೆ 1 ಕಿಲೊ ಬೀಫ್ ನೀಡಲಾಗುತ್ತದೆ. ಏಕೆಂದರೆ ಇತರ ಮಾಂಸಗಳಿಗೆ ಹೋಲಿಸಿದರೆ ಇದರಲ್ಲಿರುವ ಕೊಬ್ಬಿನ ಅಂಶ ಅತ್ಯಂತ ಕಡಿಮೆ. ಬೆಲೆಯೂ ಕಡಿಮೆ. ಬೀಫ್‌ನಲ್ಲಿ ಶೇಕಡಾ 2.5ರಷ್ಟು ಕೊಬ್ಬು ಇದ್ದರೆ ಆಡಿನ ಮಾಂಸದಲ್ಲಿ ಶೇಕಡಾ 3.5 ಮತ್ತು ಕುರಿ ಮಾಂಸದಲ್ಲಿ ಶೇಕಡಾ 10ರಷ್ಟಿದೆ. ಪೊಲೀಸ್ ನಾಯಿಗಳಿಗೆ ಬೀಫ್ ಬದಲಿಗೆ ಇತರ ಮಾಂಸ ತಿನ್ನಿಸಿದರೆ ಅವುಗಳ ಆರೋಗ್ಯದ ಮೇಲೆ ನೇರ ಪರಿಣಾಮವಾಗಲಿದೆ. ಅದಲ್ಲದೆ ವೆಚ್ಚವೂ ಏರಲಿದ್ದು ಸರಕಾರ ನೀಡುತ್ತಿರುವ 150 ರೂಪಾಯಿ ದಿನಭತ್ಯ ಎಲ್ಲಿಗೂ ಸಾಲದಾಗಬಹುದು.

ಅದೇ ರೀತಿ ರಾಜ್ಯದ ವಿವಿಧ ಮೃಗಾಲಯಗಳಿಗೆ ದಿನಾ 1800 ಕಿಲೊ ಬೀಫ್ ಸರಬರಾಜಾಗುತ್ತದೆ. ಬೀಫ್ ಬದಲಿಗೆ ಇತರ ಮಾಂಸಾಹಾರ ನೀಡಿದಲ್ಲಿ ಪ್ರಾಣಿಗಳ ಆರೋಗ್ಯಕ್ಕೆ ಹಾನಿಯಾಗಲಿದೆಯಲ್ಲದೆ ಖರ್ಚು ಕೂಡ ದುಪ್ಪಟ್ಟಾಗಲಿದೆ ಎಂದು ಭಾರತದ ಮೃಗಾಲಯ ಪ್ರಾಧಿಕಾರ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ.

ರೈತನಿಗೆ ಅನುಪಯುಕ್ತವಾಗುವ ಜಾನುವಾರುಗಳು ಸಕಲ ಮಾನವಕುಲಕ್ಕೇ ಉಪಯುಕ್ತವಾಗುತ್ತವೆ. ಮೈಸೂರಿನಲ್ಲಿ ಮಾರ್ವಾಡಿಯೊಬ್ಬ ನಡೆಸುತ್ತಿರುವ ಪಿಂಜ್ರಾಪೋಲ್ ಎನ್ನುವ ತಥಾಕಥಿತ ಪಶುಪಾಲನಾ ಸಂಸ್ಥೆ ವಾಸ್ತವದಲ್ಲಿ ಹಸುಗಳನ್ನು ಕೊಂದು ಅವುಗಳ ಉತ್ಪನ್ನಗಳನ್ನು ಮಾರಾಟ ಮಾಡುವ ಒಂದು ಭಾರೀ ಲಾಭದಾಯಕ ಉದ್ಯಮದಲ್ಲಿ ತೊಡಗಿದೆ. ಜಾನುವಾರುಗಳ ಚರ್ಮ, ರಕ್ತ, ಮಾಂಸ, ಎಲುಬು ಇತ್ಯಾದಿ ಉತ್ಪನ್ನಗಳನ್ನು ಸಂಸ್ಕರಿಸಿ ಹೇಗೆ ಔಷಧ, ಸುಗಂಧದ್ರವ್ಯ, ಸಕ್ಕರೆ, ಆಭರಣ, ಮುದ್ರಣ ಶಾಯಿ, ಇನ್ಸುಲಿನ್ ತಯಾರಿಯಲ್ಲಿಯೂ, ಬೇಕರಿ ಉತ್ಪನ್ನಗಳಲ್ಲಿಯೂ, ಬಣ್ಣ, ಕಟ್ಟಡ ಸಾಮಗ್ರಿ ಮುಂತಾದ ಕೈಗಾರಿಕೆಗಳಲ್ಲಿಯೂ ಬಳಸಲಾಗುತ್ತದೆ.

ಎನ್ನುವುದನ್ನು ನಾಗೇಶ ಹೆಗಡೆಯವರು ಎಳೆಎಳೆಯಾಗಿ ನಮ್ಮ ಮುಂದೆ ಬಿಚ್ಚಿಟ್ಟಿದ್ದಾರೆ (ಓದಿ: 'ಗೋವಿನ ಸುತ್ತ... ಮುಗಿಯದ ವೃತ್ತ', ಲೇ: ನಾಗೇಶ ಹೆಗಡೆ, ಗೌರಿ ಲಂಕೇಶ್, 29.9.2010). ಗೋವಿನಿಂದ ಲಭ್ಯವಾಗುವ ಈ ಉತ್ಪನ್ನಗಳ ಪ್ರಯೋಜನವನ್ನು ಪಡೆಯುತ್ತಿರುವ, ಅವುಗಳ ಪೈಕಿ ಕೆಲವನ್ನಾದರೂ ಬಳಸುತ್ತಿರುವ ಮಾನವರಲ್ಲಿ ಶಾಖಾಹಾರಿ ಗೋಭಕ್ತರೂ ಇಲ್ಲವೇ? ಇಂತಹ ತಥಾಕಥಿತ ಗೋಭಕ್ತರನ್ನು ಅತ್ಯಂತ ಕಟು ಶಬ್ದಗಳಲ್ಲಿ ಟೀಕಿಸಿರುವ ಮಹಾನುಭಾವರು ಹೊರಗಿನವರಾರೂ ಅಲ್ಲ, ಸಂಘ ಪರಿವಾರದ ಆರಾಧ್ಯದೈವವೇ ಆಗಿರುವ ವಿ.ಡಿ.ಸಾವರ್ಕರ್. ಗೋವನ್ನು ಭಾವನಾತ್ಮಕ ವಿಷಯವನ್ನಾಗಿಸಬೇಡಿ, ವೈಜ್ಞಾನಿಕವಾಗಿ ಚಿಂತಿಸಿ ಎಂದು ಕರೆಕೊಟ್ಟ ವಿ.ಡಿ.ಸಾವರ್ಕರ್‌ರ ಕೆಲವು ನುಡಿಮುತ್ತುಗಳು ಉಲ್ಲೇಖನೀಯವಾಗಿವೆ:

"ಹಸು ಮಾತೆಯಾಗಿರುವುದು ಅದರ ಕರುಗಳಿಗೆ ಹೊರತು ಹಿಂದೂಗಳಿಗಲ್ಲ. ಕತ್ತೆಗೆ ಬೇಕಿದ್ದರೆ ಅದು ಗೋವನ್ನು ತನಗಿಂತ ಶ್ರೇಷ್ಠವೆಂದು ಸ್ವೀಕರಿಸಲಿ."

"ಹಸುವನ್ನು ದೇವತೆಯೆಂದು, ಹಂದಿಯನ್ನು ವರಾಹಾವತಾರಿ ದೇವರೆಂದು ಪುರಾಣಗಳು ಕರೆಯುತ್ತವೆ. ಹೀಗಿರುವಾಗ ಕೇವಲ ಗೋರಕ್ಷಣೆಯೊಂದೇ ಏಕೆ? ಹಂದಿ ರಕ್ಷಣಾ ಸಂಘ ಸ್ಥಾಪಿಸಿ ಹಂದಿ ಪೂಜೆಯನ್ನೇಕೆ ಬಳಕೆಗೆ ತರಬಾರದು?"

"ಗೋರಕ್ಷಣೆಗೆ ಧಾರ್ಮಿಕ ಸ್ವರೂಪ ಬಿಟ್ಟು ಆರ್ಥಿಕ, ವೈಜ್ಞಾನಿಕ ಸ್ವರೂಪ ನೀಡುವುದು ಉಚಿತ. ಹಸು, ಎತ್ತುಗಳನ್ನು ದೇವರೆಂದು ಬಿಂಬಿಸುತ್ತಾ ತಿರುಗಾಡುವ ಗೋಭಕ್ತನನ್ನು ತಡೆದು ದೇಶ ಸೇವೆಗೆ ದುಡಿಸಬೇಕು."

"ಗೋಪೂಜೆಯಂಥ ಮೂರ್ಖತನಕ್ಕೆ ಧರ್ಮ ಎಂದು ಪುರಾಣಗಳು ಹೇಳಿರುವುದಕ್ಕೆ ತಲೆದೂಗಿದರೆ ರಾಷ್ಟ್ರದ ಸರ್ವನಾಶ ಖಂಡಿತ. ಗೋಹತ್ಯೆ ನಡೆದರೂ ಅಡ್ಡಿಯಿಲ್ಲ. ರಾಷ್ಟ್ರದ ಬುದ್ಧಿಹತ್ಯೆ ಮಾತ್ರ ಆಗಬಾರದು." (ಮಹಾರಾಷ್ಟ್ರ ಶಾರದಾ, 1935; 'ಸಾವರ್ಕರ್: ಒಂದು ಅನುಭವ ದರ್ಶನ', ಅನು: ಚಂದ್ರಕಾಂತ ಪೋಕಳೆ – ಡಾ। ಪಂಡಿತಾರಾಧ್ಯರ ಲೇಖನ, ವಾರ್ತಾ ಭಾರತಿ, 30.3.2010)

ಕರ್ನಾಟಕದ ಈ ಜಾನುವಾರು ಹತ್ಯೆ ಮಸೂದೆಯನ್ನು ರೂಪಿಸಿದವರ ಬುದ್ಧಿ ಸತ್ತುಹೋಗಿರುವುದಂತೂ ನೂರಕ್ಕೆ ನೂರರಷ್ಟು ಖಚಿತ. ☐

ಸಾಧನೆಗೆ ಅಂಗವಿಕಲತೆ ಸಮಸ್ಯೆಯೇ ಅಲ್ಲ...

ಅಂಗವಿಕಲರಲ್ಲಿ ಹುದುಗಿರುವ ಪ್ರತಿಭೆಯು ಬೆಳಕಿಗೆ ಬರುವಂತಾಗಲು
ಸರ್ಕಾರ ಅವರಿಗಾಗಿ ಹಲವಾರು ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತಂದಿದೆ.

ಅಂಗವಿಕಲರ ಕಲ್ಯಾಣ ಕಾರ್ಯಕ್ರಮಗಳು:

* ಶಿಕ್ಷಣ
* ಉದ್ಯೋಗ ಮತ್ತು ತರಬೇತಿ
* ಪುನರ್ವಸತಿ
* ಸಾಮಾಜಿಕ ಭದ್ರತೆ
* ವಿದ್ಯಾರ್ಥಿ ವೇತನ
* ಶ್ರವ್ಯ ಗ್ರಂಥಾಲಯ ಸ್ಥಾಪನೆ
* ಸ್ವಯಂ ಉದ್ಯೋಗ
* ದೂರವಾಣಿ ಬೂತ್ ಸೌಲಭ್ಯ
* ಸಾಲ ಸೌಲಭ್ಯ
* ವಿಮಾ ಯೋಜನೆ
* ಮಾಸಿಕ ನಿರ್ವಹಣೆ ಭತ್ಯೆ (ರೂ. ೪೦೦/-)
* ಉದ್ಯೋಗದಲ್ಲಿ ಶೇಕಡ ೩ರಷ್ಟು ಮೀಸಲು
* ವಿಶೇಷ ವಾಹನ
* ರಿಯಾಯಿತಿ ಬಸ್ ಪಾಸ್
* ಅಂಗವಿಕಲರಿಗಾಗಿ ಶಾಲೆಗಳು

ಉದಾಸೀನತೆ ಬಿಡಿ – ಉತ್ತೇಜನ ನೀಡಿ

ಕರ್ನಾಟಕ ವಾರ್ತೆ
Karnataka Information

ಬಿ.ಜೆ.ಪಿ.ಯ ಸೈದ್ಧಾಂತಿಕ ನೆಲೆಗಟ್ಟು

ಬಿ.ಹೆಚ್. ಸತ್ಯನಾರಾಯಣ

ಬಿಜೆಪಿಗೆ ದೀರ್ಘಕಾಲೀನ ಇತಿಹಾಸ ಇರಬಹುದಾದರೂ ಅದು ಇತ್ತೀಚಿನವರೆಗೂ ಅಖಿಲ ಭಾರತ ಮಟ್ಟದ ಪಕ್ಷವಾಗಿ ಹೊರಹೊಮ್ಮಿರಲಿಲ್ಲ. ಕಳೆದ ಎರಡು ದಶಕಗಳಲ್ಲಿ ಹಲವಾರು ಕಾರಣಗಳಿಂದ ಏಕಾಏಕಿ ದೊಡ್ಡ ಪಕ್ಷವಾಗಿ ಬೆಳೆಯಿತು. ಕಾಂಗ್ರೆಸ್ ಹೊರತು ಪಡಿಸಿದರೆ ಬಿಜೆಪಿ ಏಕೈಕ ದೊಡ್ಡ ಮಟ್ಟದ ರಾಷ್ಟ್ರೀಯ ಪಕ್ಷ. ಕಾಂಗ್ರೆಸ್ ಹಾಗೂ ಬಿಜೆಪಿಯನ್ನು ಹೊರಗಿಟ್ಟು ಯಾವುದೇ ಪಕ್ಷ ಕೇಂದ್ರದಲ್ಲಿ ಅಧಿಕಾರಕ್ಕೆ ಬರಲಾರದು ಎಂಬುದು ಸದ್ಯದ ಸ್ಥಿತಿ. ಆದಾಗ್ಯೂ ಬಿಜೆಪಿಯೂ ಇತ್ತೀಚೀನ ಬೆಳವಣಿಗೆ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿರುವಂತೆ ಗೋಚರಿಸುತ್ತಿದೆ. ಅದು ಎಷ್ಟು ಬೇಗ ಅತ್ಯಲ್ಪ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯನ್ನು ತಲುಪಿತೋ ಅದೇ ವೇಗದಲ್ಲಿ ತನ್ನ ಸ್ಥಾನವನ್ನು ಕಳೆದುಕೊಳ್ಳುತ್ತಿರುವ ಗತಿಯನ್ನು ತಲುಪಿದೆ.

ಇದಕ್ಕೆ ಪುರಾವೆಯಾಗಿ ಇತ್ತೀಚಿನ ಚುನಾವಣೆಗಳಲ್ಲಿ ಬಿಜೆಪಿಯ ಸಾಧನೆಯನ್ನು ಗಮನಿಸಬಹುದಾಗಿದೆ. 1984ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಪಡೆದಿದ್ದು ಕೇವಲ 2 ಸ್ಥಾನಗಳು, ನಂತರದಲ್ಲಿ ಬಿಜೆಪಿ ಅನುಸರಿಸಿದ ಸೈದ್ಧಾಂತಿಕ ನೀತಿಯಿಂದಾಗಿ ಅದರ ಸಂಖ್ಯೆ ಹೆಚ್ಚುತ್ತಾ ಬಂದಿತು. ಕೊನೆಗೊಮ್ಮೆ ಸರ್ಕಾರವನ್ನು ರಚಿಸಲೂ ಸಾಧ್ಯವಾಯಿತು. ಇದಕ್ಕೆ ಸಮನಾಂತರವಾಗಿ ಪಕ್ಷವು ಹಲವು ರಾಜ್ಯಗಳಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯಿತು. ಆದರೆ ಇದೇ ಸ್ಥಿತಿಯನ್ನು ಕೆಲವಾರು ವರ್ಷವಾದರೂ ಬಿಜೆಪಿಗೆ ಕಾಯ್ದುಕೊಂಡು ಹೋಗಲು ಸಾಧ್ಯವಾಗಲಿಲ್ಲ. ಅನಿರೀಕ್ಷಿತವಾಗಿ ಬಿಜೆಪಿ 2004ರಲ್ಲಿ ಹೀನಾಯ ಸೋಲು ಅನುಭವಿಸಬೇಕಾಯಿತು. ಇತ್ತೀಚಿನವರೆಗೂ ಬಿಜೆಪಿಗೆ ರಾಷ್ಟ್ರೀಯ ಮಟ್ಟದಲ್ಲಿ ಅಂಥ ಆಶಾವಾದವೇನೂ ಗೋಚರಿಸುತ್ತಿಲ್ಲ. ಇದಕ್ಕೆ ಕಾರಣಗಳು ಹಲವಾರು. ರಾಷ್ಟ್ರೀಯ ಪಕ್ಷವೊಂದರ ಇಂಥ ನಡೆಗಳನ್ನು ಅರ್ಥೈಸಿಕೊಳ್ಳಬೇಕಾದರೆ ಅದರ ಸೈದ್ಧಾಂತಿಕ ನಿಲುವುಗಳು, ಪ್ರಣಾಳಿಕೆ, ದೃಷ್ಟಿಕೋನ, ರಾಷ್ಟ್ರೀಯ-ಅಂತರಾಷ್ಟ್ರೀಯ ನೀತಿಗಳನ್ನು ಪರಿಶೀಲಿಸುವುದು ಅಗತ್ಯ.



ಸೈದ್ಧಾಂತಿಕ ನಿಲುವುಗಳು:

ಬಿಜೆಪಿಯ ಗತಿಯನ್ನು ಸರಿಯಾಗಿ ಅರ್ಥೈಸಿಕೊಳ್ಳಬೇಕಾದಲ್ಲಿ ಅದರ ಮಾತೃ ಸಂಸ್ಥೆ ಆರ್.ಎಸ್.ಎಸ್‌ನ ಸೈದ್ಧಾಂತಿಕತೆಯನ್ನು ಗ್ರಹಿಸಬೇಕಾಗಿದೆ. ರಾಷ್ಟ್ರೀಯ ಚಳವಳಿ ಕಾಲದಲ್ಲಿ ಕಾಂಗ್ರೆಸ್ ಸಂಸ್ಕೃತಿಗೆ ವಿರುದ್ಧವಾಗಿ ಹುಟ್ಟಿಕೊಂಡಿದ್ದೇ ಆರ್.ಎಸ್.ಎಸ್. ಮುಖ್ಯವಾಗಿ ಗಾಂಧಿ ಪ್ರತಿಪಾದನೆಯನ್ನು ತಣ್ಣಗೆ ವಿರೋಧಿಸುತ್ತಲೇ ತನ್ನ ಸಿದ್ಧಾಂತವನ್ನು ರೂಪಿಸುತ್ತಾ ಬಂದಿತು. ವಿವಿಧತೆಗೆ ಬದಲಾಗಿ ಏಕತೆಯನ್ನು, ಬಹುಧರ್ಮೀಯ ಕಲ್ಪನೆಗೆ ವಿರುದ್ಧವಾಗಿ ಹಿಂದೂರಾಷ್ಟ್ರ ಕಲ್ಪನೆಯನ್ನು ಅಳವಡಿಸಿಕೊಳ್ಳುತ್ತಾ ಸಾಗಿತ್ತು. ಆದರೆ ತನ್ನ ನಿಲುವುಗಳಿಂದಾಗಿ ಆರ್.ಎಸ್.ಎಸ್ ಬಹುಸಂಖ್ಯಾತರ ಪ್ರೀತಿಗೆ ಒಲಿಯಲೇ ಇಲ್ಲ. ಕೇವಲ ಸಮಾನ ಮನಸ್ಕರ ಒಂದು ಗುಂಪಾಗಿಯೇ ಬೆಳೆಯುತ್ತಾ ಬಂದಿತು. ಇದೇ ಸಂದರ್ಭದಲ್ಲಿ ತನ್ನ ರಾಜಕೀಯ ಮುಖವಾಣಿಯಾಗಿ ಜನಸಂಘವನ್ನು ಹುಟ್ಟುಹಾಕಿತು. ಜನಸಂಘವು ಹಲವು ರಾಜಕೀಯ ಪಕ್ಷಗಳು ಕೂಡಿ ನಡೆಸಿದ ಸಂಯುಕ್ತ ಸರ್ಕಾರ ಅಷ್ಟು ಯಶಸ್ವಿಯಾಗಲಿಲ್ಲ. ಇದರ ಮುಂದುವರಿಕೆಯಲ್ಲಿ 1990ರ ನಂತರದಲ್ಲಿ ತೀವ್ರ ಹಿಂದೂತ್ವ ವಾದವನ್ನು ಬಲವಾಗಿ ಪ್ರತಿ ಪಾದಿಸುತ್ತಾ ನಡೆಯಿತು.

ಅನ್ಯಧರ್ಮೀಯರ ವಿರೋಧದಲ್ಲಿ ಹಿಂದುತ್ವವಾದ ವಿಪುಲವಾಗಿ ಬೆಳೆದು ಬಿಜೆಪಿಗೆ ಕಡಿಮೆ ಕಾಲದಲ್ಲಿ ಒಳ್ಳೆಯ ಫಲಿತಾಂಶವನ್ನು ತಂದುಕೊಟ್ಟಿತು. ಆದಾಗ್ಯೂ ಬಿಜೆಪಿಯ ನೀತಿ ದೇಶದ ಬಹುಮೆಚ್ಚಿಗೆಯ ಕ್ರಮವಾಗೇನೂ ಇರಲಿಲ್ಲ. ಇಂಥ ಸಂದರ್ಭದಲ್ಲಿ ಬಿಜೆಪಿಯ ಸಹಾಯಕ್ಕೆ ಬಂದದ್ದು ವಾಜಪೇಯಿ ಮುಖವಾಡ. ಪರಸ್ಪರ ವಿರೋಧಾಭಾಸದಂತೆ ಗೋಚರಿಸುತ್ತಿದ್ದ ವಾಜಪೇಯಿ ಹಾಗೂ ಅಡ್ವಾಣಿ ಮುಖವಾಡಗಳಲ್ಲಿ ವಾಜಪೇಯಿ ಬಹುಸಂಖ್ಯಾತರ ಒಪ್ಪಿಗೆಯ ಸೂಚಕವಾದರು. ಹಾಗಾಗಿ ಅವರೇ ಈ ದೇಶದ ಬಿಜೆಪಿ ಸರ್ಕಾರದ ಮೊದಲ ಪ್ರಧಾನಿಯಾದರೆ ಇದನ್ನು ಅರಿತೇ ಅಡ್ವಾಣಿ ತನ್ನ ನಿಲುವುಗಳನ್ನು ಬದಲಿಸಿಕೊಳ್ಳಲು ಯತ್ನಿಸಿದರು. ಇದರಿಂದ ಸ್ವತಃ ಆರ್.ಎಸ್.ಎಸ್‌ನ ಕೆಂಗಣ್ಣಿಗೆ ಗುರಿಯಾದರು. ಆದರೂ ಅಡ್ವಾಣಿಯವರ ಕಾರ್ಯ ತಂತ್ರ ಫಲಿಸದೇ ಹೋಗಿ ಅವರು ಪ್ರಧಾನಿಯಾಗುವ ಕನಸು ಕನಸಾಗಿಯೇ ಉಳಿಯಿತು.

ಬಿಜೆಪಿ ಮುಂದುವರಿದು ತನ್ನ ನೀತಿಗಳಲ್ಲಿ ಇಂದು ಗಣನೀಯ ಬದಲಾವಣೆ ತಂದುಕೊಂಡಿದೆ. ಇದರ ಒಂದಂಶವಾಗಿ ಅಡ್ವಾಣಿ ಪರದೆಯ ಹಿಂದೆ ಸರಿದು ಆರ್.ಎಸ್.ಎಸ್‌ನ ಕಟ್ಟರ್ ವಾದಿ ನಿತಿನ್ ಗಡ್ಕರಿ ಪಕ್ಷದ ಸಾರಥ್ಯವನ್ನು ವಹಿಸಿಕೊಂಡಿದ್ದಾರೆ. ಹೀಗೆ ಪಕ್ಷ – ಸಂಘಟನೆಯ ಮೂಲ ಸೈದ್ಧಾಂತಿಕ ನೀತಿಯನ್ನು ಉಳಿಸಿಕೊಂಡೇ ಅಧಿಕಾರ ಸೂತ್ರ ಹಿಡಿಯುವ ಕಾರ್ಯತಂತ್ರ ರೂಪಿಸಬೇಕು. ಇದಕ್ಕಾಗಿ ಯುವ ನಾಯಕತ್ವ ಬೇಕು ಎಂಬ ಸಂಘ ಪರಿವಾರದ ಆಗ್ರಹ ಇದರ ಬೆನ್ನಲ್ಲೇ ತನ್ನ ಸೈದ್ಧಾಂತಿಕ ಬುನಾದಿಯನ್ನು ಬಲಪಡಿಸಬೇಕಾಗಿರುವ ಅನಿವಾರ್ಯತೆ ಇರುವ ಈ ಸಂದರ್ಭದಲ್ಲಿ ಭಾರತೀಯ ಜನತಾ ಪಕ್ಷದ ಸೈದ್ಧಾಂತಿಕ ನೆಲೆಗಟ್ಟನ್ನು ಎಳೆಎಳೆಯಾಗಿ ಬಿಡಿಸಿಡುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ.

ಸೈದ್ಧಾಂತಿಕ ನಿಲುವು:– ಭಾರತೀಯ ಜನತಾಪಕ್ಷದ ಇತಿಹಾಸದ ಪುಟಗಳನ್ನೊಮ್ಮೆ ತಿರುವಿ ಹಾಕಿದರೆ ಅದು ಆಯಾ ಸಂದರ್ಭಕ್ಕೆ ತಕ್ಕಂತೆ ತನ್ನ ಸಿದ್ಧಾಂತದಲ್ಲಿ ಮಾರ್ಪಾಟು ಮಾಡಿ

ಇತ್ತೀಚಿನ ಚುನಾವಣೆಗಳಲ್ಲಿ ಬಿಜೆಪಿಯ ಸಾಧನೆಯನ್ನು ಗಮನಿಸಬಹುದಾಗಿದೆ. ೧೯೮೪ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಪಡೆದಿದ್ದು ಕೇವಲ ೨ ಸ್ಥಾನಗಳು, ನಂತರದಲ್ಲಿ ಬಿಜೆಪಿ ಅನುಸರಿಸಿದ ಸೈದ್ಧಾಂತಿಕ ನೀತಿಯಿಂದಾಗಿ ಅದರ ಸಂಖ್ಯೆ ಹೆಚ್ಚುತ್ತಾ ಬಂದಿತು. ಕೊನೆಗೊಮ್ಮೆ ಸರ್ಕಾರವನ್ನು ರಚಿಸಲೂ ಸಾಧ್ಯವಾಯಿತು. ಇದಕ್ಕೆ ಸಮನಾಂತರವಾಗಿ ಪಕ್ಷವು ಹಲವು ರಾಜ್ಯಗಳಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯಿತು. ಆದರೆ ಇದೇ ಸ್ಥಿತಿಯನ್ನು ಕೆಲವಾರು ವರ್ಷವಾದರೂ ಬಿಜೆಪಿಗೆ ಕಾಯ್ದುಕೊಂಡು ಹೋಗಲು ಸಾಧ್ಯವಾಗಲಿಲ್ಲ. ಅನಿರೀಕ್ಷಿತವಾಗಿ ಬಿಜೆಪಿ ೨೦೦೪ರಲ್ಲಿ ಹೀನಾಯ ಸೋಲು ಅನುಭವಿಸ ಬೇಕಾಯಿತು. ಇತ್ತೀಚಿನವರೆಗೂ ಬಿಜೆಪಿಗೆ ರಾಷ್ಟ್ರೀಯ ಮಟ್ಟದಲ್ಲಿ ಅಂಥ ಆಶಾವಾದವೇನೂ ಗೋಚರಿಸುತ್ತಿಲ್ಲ. ಇದಕ್ಕೆ ಕಾರಣಗಳು ಹಲವಾರು. ರಾಷ್ಟ್ರೀಯ ಪಕ್ಷವೊಂದರ ಇಂಥ ನಡೆಗಳನ್ನು ಅರ್ಥೈಸಿ ಕೊಳ್ಳಬೇಕಾದರೆ ಅದರ ಸೈದ್ಧಾಂತಿಕ ನಿಲುವುಗಳು, ಪ್ರಣಾಳಿಕೆ, ದೃಷ್ಟಿಕೋನ, ರಾಷ್ಟ್ರೀಯ-ಅಂತರಾಷ್ಟ್ರೀಯ ನೀತಿಗಳನ್ನು ಪರಿಶೀಲಿಸುವುದು ಅಗತ್ಯ.

ಕೊಂಡಿರುವುದು ಗಮನಕ್ಕೆ ಬರುತ್ತದೆ. ಅವುಗಳಲ್ಲಿ ಅತ್ಯಂತ ಪ್ರಮುಖವಾದವು ಗಳೆಂದರೆ;

1. ಗಾಂಧಿ ಪ್ರೇರಿತ ಸಮಾಜವಾದ
2. ಹಿಂದುತ್ವ ಸಿದ್ಧಾಂತ
3. ಸ್ವದೇಶಿ ಸಿದ್ಧಾಂತ
4. ಸಾಮಾಜಿಕ ತಂತ್ರಗಾರಿಕೆ

1. ಗಾಂಧಿ ಪ್ರೇರಿತ ಸಮಾಜವಾದ (1980–84) ಒಂದು ರಾಜಕೀಯ ಪಕ್ಷವಾಗಿ ಜನ್ಮತಳೆದ ಕ್ಷಣದ ಲ್ಲಿಯೇ ಬಿಜೆಪಿ 'ಗಾಂಧಿ ಪ್ರೇರಿತ ಸಮಾಜವಾದ'ವನ್ನು ಪಕ್ಷದ ಸಿದ್ಧಾಂತವಾಗಿ ಒಪ್ಪಿಕೊಂಡಿತು. ಆದರೆ ಪಕ್ಷದ ಅಧ್ಯಕ್ಷ ಅಟಲ್ ಬಿಹಾರಿ ವಾಜಪೇಯಿ ಅವರು ಈ ಸೈದ್ಧಾಂತಿಕ ನಿಲುವನ್ನು ಪಕ್ಷದ ಮಟ್ಟದಲ್ಲಿ ಅನುಷ್ಠಾನಕ್ಕೆ ತರಲು ಅನುವಾಗುತ್ತಿದ್ದಂತೆಯೇ ಪಕ್ಷದಲ್ಲಿಯೇ ತೀವ್ರ ವಿರೋಧ ವ್ಯಕ್ತವಾಯಿತು. ತದನಂತರ ಪಕ್ಷ ಈ ಗಾಂಧಿ ಪ್ರೇರಿತ ಸಿದ್ಧಾಂತ ತನ್ನ ಪಕ್ಷದ ಸಂವಿಧಾನದ ಒಂದು ಅಂಶ ಮಾತ್ರ. ಆದರೆ 'ಅಂತರ್ಗತ ಮಾನವತಾವಾದ'ವೇ ತನ್ನ ಪಕ್ಷದ ಸೈದ್ಧಾಂತಿಕ ಬುನಾದಿ ಎಂದು ಘೋಷಿಸಿಕೊಂಡಿತು

"ಮುಂದಿನ ದಿನಗಳಲ್ಲಿ ರಾಷ್ಟ್ರೀಯತೆ, ರಾಷ್ಟ್ರೀಯ ಐಕ್ಯತೆ, ಪ್ರಜಾಪ್ರಭುತ್ವ, ಗಾಂಧಿ ಪ್ರೇರಿತ ಸಮಾಜವಾದ, 'ಸರ್ವಧರ್ಮ ಸಮಭಾವ'ದಂಥ ಸಕಾರಾತ್ಮಕ ಸೆಕ್ಯುಲರ್ ಹಾಗೂ ಮೌಲ್ಯಧಾರಿತ ರಾಜಕಾರಣ ಪಕ್ಷದ ಉಸಿರಾಗಲಿವೆ" ಎಂದು ಪಕ್ಷ ಘೋಷಿಸಿಕೊಂಡಿತು. ಈ ಘೋಷಣೆಗೆ ಪಕ್ಷ ನಿಷ್ಠವಾಗಿತ್ತಾದರೂ ಪ್ರಾರಂಭದ ಸಭೆಯಲ್ಲಿಯೇ ವಾಜಪೇಯಿ ಈ ಕುರಿತು ಪ್ರಸ್ತಾಪ ಮಾಡಿ, ಹೆಚ್ಚಿನ ಮಹತ್ವ ನೀಡಲಿಲ್ಲ. ಉದಾಹರಣೆಗೆ ರಾಜಮಾತೆ ವಿಜಯ ರಾಜೇ ಸಿಂಧ್ಯಾ ಮತ್ತು ಪಕ್ಷದ ಇತರರು ಅನುಮೋದಿಸಿ, ಅನುಸರಿಸುತ್ತಿದ್ದ 'ಗಾಂಧಿ ಪ್ರೇರಿತ ಸಮಾಜವಾದ'ದ ಸತ್ಯಾಸತ್ಯತೆಯನ್ನೇ ನೇರವಾದ ಮಾತುಗಳಲ್ಲಿ ಪ್ರಶ್ನಿಸಿದ್ದರು. ಭಾರತೀಯ ಜನಸಂಘದ ರೂಪದಲ್ಲಿದ್ದಾಗಿನಿಂದಲೂ ಹಿಂದುತ್ವದ ಸೋಗಿನಲ್ಲಿ ರಾಜಕೀಯ ಅಸ್ತಿತ್ವ ಕಂಡುಕೊಂಡಿದ್ದ ಬಿಜೆಪಿ ಅದಕ್ಕೆ ತಿಲಾಂಜಲಿ ಇತ್ತು 'ಗಾಂಧಿ ಪ್ರೇರಿತ ಸಮಾಜವಾದ'ದ ಮೂಲಕ ಹೊಸದೊಂದು ಅಸ್ಮಿತೆಯ ಹುಡುಕಾಟದಲ್ಲಿದೆ ಎಂದು ಕೆಲವರು ಭಾವಿಸಿದ್ದರು.

ಇದೆಲ್ಲದಕ್ಕಿಂತ ಹೆಚ್ಚಾಗಿ ಪಕ್ಷದ ಚಿಂತಕರ ಚಾವಡಿಗೆ

ಒಂದು ರಾಜಕೀಯ ಪಕ್ಷವಾಗಿ ಜನ್ಮತಳೆದ ಕ್ಷಣದಲ್ಲಿಯೇ ಬಿಜೆಪಿ 'ಗಾಂಧಿ ಪ್ರೇರಿತ ಸಮಾಜವಾದ'ವನ್ನು ಪಕ್ಷದ ಸಿದ್ಧಾಂತವಾಗಿ ಒಪ್ಪಿಕೊಂಡಿತು. ಆದರೆ ಪಕ್ಷದ ಅಧ್ಯಕ್ಷ ಅಟಲ್ ಬಿಹಾರಿ ವಾಜಪೇಯಿ ಅವರು ಈ ಸೈದ್ಧಾಂತಿಕ ನಿಲುವನ್ನು ಪಕ್ಷದ ಮಟ್ಟದಲ್ಲಿ ಅನುಷ್ಠಾನಕ್ಕೆ ತರಲು ಅನುವಾಗುತ್ತಿದ್ದಂತೆಯೇ ಪಕ್ಷದಲ್ಲಿಯೇ ತೀವ್ರ ವಿರೋಧ ವ್ಯಕ್ತವಾಯಿತು. ತದನಂತರ ಪಕ್ಷ ಈ ಗಾಂಧಿ ಪ್ರೇರಿತ ಸಿದ್ಧಾಂತ ತನ್ನ ಪಕ್ಷದ ಸಂವಿಧಾನದ ಒಂದು ಅಂಶ ಮಾತ್ರ. ಆದರೆ 'ಅಂತರ್ಗತ ಮಾನವತಾವಾದ'ವೇ ತನ್ನ ಪಕ್ಷದ ಸೈದ್ಧಾಂತಿಕ ಬುನಾದಿ ಎಂದು ಘೋಷಿಸಿಕೊಂಡಿತು ಮುಂದಿನ ದಿನಗಳಲ್ಲಿ ರಾಷ್ಟ್ರೀಯತೆ, ರಾಷ್ಟ್ರೀಯ ಐಕ್ಯತೆ, ಪ್ರಜಾಪ್ರಭುತ್ವ, ಗಾಂಧಿ ಪ್ರೇರಿತ ಸಮಾಜವಾದ, 'ಸರ್ವಧರ್ಮ ಸಮಭಾವ'ದಂಥ ಸಕಾರಾತ್ಮಕ ಸೆಕ್ಯುಲರ್ ಹಾಗೂ ಮೌಲ್ಯಧಾರಿತ ರಾಜಕಾರಣ ಪಕ್ಷದ ಉಸಿರಾಗಲಿವೆ" ಎಂದು ಪಕ್ಷ ಘೋಷಿಸಿಕೊಂಡಿತು.

ತಲೆನೋವಾಗಿ ಪರಿಣಮಿಸಿದ್ದು 'ಸಮಾಜವಾದ' ಎಂಬ ಶಬ್ದ. ರಾಷ್ಟ್ರೀಯ ಸ್ವಯಂ ಸೇವಕ ಸಂಘ ಸಿದ್ಧಾಂತಗಳಿಗೆ ಅಪಥ್ಯವಾದ ಮಾರ್ಕ್ಸ್‌ವಾದ ಹಾಗೂ ಬಿಜೆಪಿ ಈಗ ಅಳವಡಿಸಿಕೊಂಡಿರುವ 'ಸಮಾಜವಾದ'ದ ನಡುವೆ ಸಾಕಷ್ಟು ಸಾಮ್ಯತೆಗಳಿರುವುದರಿಂದ ಬಿಜೆಪಿಯ ಮೂಲ ಸಿದ್ಧಾಂತಗಳಿಗೇ ಮುಳುವಾಗಬಲ್ಲ ಸಾಮರ್ಥ್ಯ 'ಸಮಾಜವಾದಿ' ಸಿದ್ಧಾಂತಗಳಿಗಿದೆ ಎಂಬ ಆತಂಕ ಒಡಮೂಡಿತ್ತು. ಮಾತ್ರವಲ್ಲ ಬಿಜೆಪಿಯ ರಾಜಕೀಯ ಎದುರಾಳಿ ಕಾಂಗ್ರೆಸ್ ಕೂಡ ತನ್ನ ಹುಟ್ಟಿನಿಂದಲೇ ಸಮಾಜವಾದಿ ಧೋರಣೆಯನ್ನು ರೂಢಿಸಿಕೊಂಡಿದ್ದ ಈ ಹೊಸದೊಂದು 'ಹಗಲುವೇಷ' ಕಾಂಗ್ರೆಸ್‌ನ ಅನುಕರಣೆ ಯಾಗುವ ಎಲ್ಲಾ ಸಾಧ್ಯತೆಗಳೂ ಇದೆಯೆಂದು ಪಕ್ಷ ಭಾವಿಸಿತು.

ಪಕ್ಷ ಎತ್ತಿ ಹಿಡಿದ 'ಗಾಂಧಿ ಪ್ರೇರಿತ ಸಮಾಜವಾದ' ಮೂಲದಲ್ಲಿ ಭಾರತೀಯ ಸತ್ವವನ್ನು ಹೊಂದಿರುವಂಥದ್ದು ಎಂದು ಪಕ್ಷ ಪ್ರತಿಪಾದಿಸಿತು. ಸಮಾಧಾನಚಿತ್ತದಿಂದ ಗಮನಿಸಿದರೆ 'ಗಾಂಧಿ ಪ್ರೇರಿತ ಸಮಾಜವಾದ'ಕ್ಕೆ ಆರ್ಥಿಕ ಆಯಾಮವೂ ಇದೆ. ಆರ್ಥಿಕ ವಲಯದ ಪ್ರತಿಯೊಂದು ಕಾರ್ಯಕ್ಷೇತ್ರದಲ್ಲೂ ಸಹಕಾರಿ ವ್ಯವಸ್ಥೆ, ಟ್ರಸ್ಟೀಶಿಪ್‌ಗಳನ್ನು ಬಳಸಿಕೊಂಡು ಬಂಡವಾಳಶಾಹಿಗೆ ಪರ್ಯಾಯ ಶಕ್ತಿಯಾಗಬಲ್ಲ ಸಾಮರ್ಥ್ಯ ಈ ಗಾಂಧಿ ಪ್ರೇರಿತ ಸಮಾಜವಾದಕ್ಕಿದೆ. ಸಂಪತ್ತಿನ ಸಮಾನ ಹಂಚಿಕೆ ಹಾಗೂ ಸ್ವಯಂ ಇಚ್ಛೆಯಿಂದ ತನ್ನಲ್ಲಿ ಕ್ರೋಡೀಕರಿಸಿಕೊಂಡ ಐಶ್ವರ್ಯವನ್ನು ಸಮಾಜದ ತಳಮಟ್ಟದ ವರ್ಗಕ್ಕೆ ಹಸ್ತಾಂತರಿಸುವ ಆದರ್ಶವಾದಿ ಕನಸುಗಳನ್ನು ಹೊಂದಿದ್ದ ಗಾಂಧಿ ಸಿದ್ಧಾಂತಕ್ಕೆ ಈ 'ಗಾಂಧಿ ಪ್ರೇರಿತ ಸಮಾಜವಾದ' ಹತ್ತಿರದಲ್ಲಿಯೇ ಇತ್ತು. ಈ ಎಲ್ಲಾ ಸೈದ್ಧಾಂತಿಕ ದೊಂಬರಾಟಗಳ ಮೂಲಕ ಜನತಾ ಪಕ್ಷದ ಪರಂಪರೆಯ ವಾರಸುದಾರಿಕೆಯನ್ನು ಹೊಂದಿರುವಂಥ ಅತ್ಯಂತ ಕೇಂದ್ರೀಕೃತ ಪಕ್ಷ ತನ್ನದು ಎಂಬುದನ್ನು ಸಾಬೀತುಪಡಿಸುವ ಇರಾದೆ ಕೂಡ ಬಿಜೆಪಿಗಿತ್ತು. ಕಾಲ ಕಾಲಕ್ಕೆ ಬದಲಾದ ಬಿಜೆಪಿಯ ಸೈದ್ಧಾಂತಿಕ ಮುಖವಾಡ ಕೂಡ ಈ ಇರಾದೆಯ ಮುಂದುವರಿದ ಭಾಗವೇ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ.

ಇಷ್ಟೆಲ್ಲಾ ಸಾಮರ್ಥನೆಗಳ ನಡುವೆಯೂ 'ಸಮಾಜವಾದ' ಎಂಬ ಪರಿಭಾಷೆಯನ್ನು ಪಕ್ಷದ ಒಟ್ಟಾರೆ ನಿಲುವಾಗಿ ಒಪ್ಪಿಕೊಳುವ ಕುರಿತು ಪಕ್ಷದಲ್ಲಿಯೇ ಒಮ್ಮತ ವಿರಲಿಲ್ಲ. 'ಸಮಾಜವಾದಿ' ಎಂಬ ಶಬ್ದದ ಬದಲು 'ರಾಮರಾಜ್ಯ' ಎಂಬ ಶಬ್ದದ ಬಳಕೆ ಕೆಲವರಿಗೆ ಆಪ್ತವಾಗಿ ಕಂಡಿತ್ತು. ಹಾಗೆಂದ ಮಾತ್ರಕ್ಕೆ ನಮ್ಮ ಸಂದರ್ಭದ ಸಮಾಜೋ–ಆರ್ಥಿಕ ಸಂಕಷ್ಟಗಳಿಗೆ ಪರಿಣಾಮಕಾರಿಯಾಗಿ ಒದಗಿಬರುವ ಗಾಂಧಿಪ್ರಣೀತ ಪರಿಹಾರಗಳ ಬಗ್ಗೆ ಅವರಲ್ಲಿ ವಿರೋಧವಿತ್ತು ಎಂದೇನಲ್ಲ. ಆದ್ದರಿಂದ ಇದ್ಯಾವುದರ ಗೊಡವೆಯೂ ಬೇಡವೆಂಬಂತೆ 'ಅಂತರ್ಗತ ಮಾನವತಾವಾದ'ವನ್ನು ಪಕ್ಷದ ಸಿದ್ಧಾಂತವಾಗಿ ಒಪ್ಪಿಕೊಂಡ ಬಿಜೆಪಿ 'ಗಾಂಧಿ ಪ್ರೇರಿತ ಸಮಾಜವಾದ'ವನ್ನು ಮಾತ್ರ ತನ್ನ ಹಲವು ಬದ್ಧತೆ–ಸಿದ್ಧಾಂತಗಳ ಒಂದಂಶವೆಂಬಂತೆ ಅಳವಡಿಸಿಕೊಂಡಿತು.

ಅಹುಜಾ ಪ್ರಕಾರ, "ವಾಜಪೇಯಿ ಅವರು ಬಾಂದ್ರಾದಲ್ಲಿ ಮಾಡಿದ ಅಧ್ಯಕ್ಷೀಯ ಭಾಷಣದಲ್ಲಿ ಗಾಂಧಿ ಪ್ರೇರಿತ ಸಮಾಜವಾದದ ಸಲುವಾಗಿಯೇ 18 ಪ್ಯಾರಾಗ್ರಾಫ್‌ಗಳನ್ನು ಮೀಸಲಾಗಿಟ್ಟಿದ್ದರು. ಆದರೆ ಭಾಷಣ ಮಾಡಿ 18 ತಿಂಗಳು ಕಳೆಯುವುದರೊಳಗೆ ಸಿದ್ಧಾಂತದ ವೈಫಲ್ಯ ಢಾಳಾಗಿ ಗೋಚರಿಸತೊಡಗಿತು. ಪಕ್ಷದ ಪ್ರಸ್ತುತ ಸಿದ್ಧಾಂತವಾದ 'ಅಂತರ್ಗತ ಮಾನವತಾವಾದ'ಕ್ಕೆ ಅಸ್ತಿವಾರ ಹಾಕಿದವರು ದೀನ್‌ದಯಾಳ ಉಪಾಧ್ಯಾಯರಾದರೆ ಅದಕ್ಕೆ ದುರಂತ ಅಂತ್ಯ ಕಾಣಿಸಿದವರು ಮಾತ್ರ ಅಟಲ್ ಬಿಹಾರಿ ವಾಜಪೇಯಿ ಎನ್ನುವುದು ಪಕ್ಷದ ಮಂದಿ ಅರಗಿಸಿಕೊಳ್ಳಲಾ

ಗದ ಸತ್ಯ. ವಾಜಪೇಯಿ ಅವರಲ್ಲಿ ಪಕ್ಷದ ಕಾರ್ಯಕರ್ತರು ಅಗಾಧವಾದ ಗೌರವಾದರಗಳನ್ನು ಹೊಂದಿದ್ದರೂ 'ಗಾಂಧಿ ಪ್ರೇರಿತ ಸಮಾಜವಾದ'ವನ್ನು ಪ್ರಸ್ತಾಪಿಸಿ ಪಕ್ಷದ ಸಿದ್ಧಾಂತದ ಕುರಿತು ಅನಗತ್ಯ ಗೊಂದಲ ಸೃಷ್ಟಿಸಿದ ಅವರ ವಿವೇಚನಾರಹಿತ ನಡವಳಿಕೆಯನ್ನು ನಿರ್ಲಕ್ಷಿಸುವುದಾದರೂ ಅವರಿಗೆ ಹೇಗೆ ಸಾಧ್ಯ?

'ಗಾಂಧಿ ಪ್ರೇರಿತ ಸಮಾಜವಾದ' ಎಂಬುದು ಕೂಡ ಬಿಜೆಪಿಯ ಹಿತಾಸಕ್ತಿಗೆ ಪೂರಕವಾದ ಸೈದ್ಧಾಂತಿಕ ನಿಲುವು ಎಂಬುದರಲ್ಲಿ ಈಗ ಯಾವುದೇ ಅನುಮಾನಗಳು ಉಳಿದಿಲ್ಲ. ಭಾರತೀಯ ರಾಜಕಾರಣದಲ್ಲಿ ಒಂದು ಪ್ರಭಾವಶಾಲಿ ವಿರೋಧ ಪಕ್ಷವಾಗುವುದರಲ್ಲೂ ಎಡವಿದ ಜನಸಂಘದ ಮಿತಿಗಳ ಅರಿವು ವಾಜಪೇಯಿ ಅವರಿಗಿತ್ತು. ಪಕ್ಷಕ್ಕೆ ಅಂಟಿದ ಮೂಲಭೂತವಾದದ ಮಸಿಯನ್ನು ತೊಡೆದು ಅಭಿವೃದ್ಧಿಗೆ ಪೂರಕವಾದ ಆರ್ಥಿಕ ದೂರದರ್ಶಿತ್ವವನ್ನು ಎತ್ತಿ ಹಿಡಿಯುವ ನಿಟ್ಟಿನಲ್ಲಿ ವಾಜಪೇಯಿ ಅವರಿಗೆ ಈ ಬಗೆಯ ಸೈದ್ಧಾಂತಿಕ ತಂತ್ರಗಾರಿಕೆ ಹಾಗೂ ಬದಲಾವಣೆ ಅನಿವಾರ್ಯವಾಗಿತ್ತು.

ಇಂಥದ್ದೊಂದು ಅನಿವಾರ್ಯತೆ ವಾಜಪೇಯಿ ಅವರನ್ನು ಹೊಸದೊಂದು ಸೈದ್ಧಾಂತಿಕ ವ್ಯಾಖ್ಯಾನದಲ್ಲಿ ತೊಡಗಿಸಿದ್ದರಲ್ಲಿ ಅಚ್ಚರಿ ಏನೂ ಇಲ್ಲ. ಇದರ ಜೊತೆಗೆ ಗಾಂಧಿ ಪ್ರೇರಿತ ಸಮಾಜವಾದ ಹಾಗೂ ಮಾರ್ಕ್ಸ್‌ವಾದದ ನಡುವಿನ ವ್ಯತ್ಯಾಸವನ್ನು ಸ್ಪಷ್ಟಪಡಿಸುವ ಹೊಣೆಗಾರಿಕೆಯೂ ವಾಜಪೇಯಿ ಹೆಗಲೇರಿತ್ತು. ಅವರ ಪ್ರಕಾರ, ಪ್ರತಿಯೊಂದು ಸಂಗತಿಯೂ ಭೌತಿಕ ಸಂದರ್ಭದ ನಾಭಿಯಿಂದಲೇ ಉದ್ಭವವಾಗುತ್ತದೆ ಎಂಬ ಮಾರ್ಕ್ಸ್‌ವಾದಿ ಚಿಂತನೆ 'ಗಾಂಧಿ ಪ್ರೇರಿತ ಸಮಾಜವಾದ'ದ ಪಾಲಿಗೆ ಎಂದಿಗೂ ಅಪಥ್ಯ. ಹಾಗೆಯೇ, ಆರ್ಥಿಕ ಹಾಗೂ ರಾಜಕೀಯ ಅಧಿಕಾರ ಯಾವುದೋ ಒಂದು ನಿರ್ದಿಷ್ಟ ವರ್ಗದ ಮುಷ್ಟಿಯಲ್ಲಿದೆ ಎಂಬ ಅದರ ನಿಲುವು ಹಾಗೂ ಹಿಂಸೆಯನ್ನು ಸಮರ್ಥಿಸುವ ಅದರ ಧಾರ್ಷ್ಟ್ಯವನ್ನೂ ಗಾಂಧಿ ಪ್ರೇರಿತ ಸಮಾಜವಾದ ಸಾರಾಸಗಟಾಗಿ ತಿರಸ್ಕರಿಸುತ್ತದೆ. ಸೈದ್ಧಾಂತಿಕವಾಗಿ ಬಿಜೆಪಿ ಗಮನಾರ್ಹ ಬದಲಾವಣೆಗೆ ಒಡ್ಡಿಕೊಂಡರೂ ಅದರಿಂದ ಪಕ್ಷದ ಚುನಾವಣಾ ಭವಿಷ್ಯಕ್ಕೆ ಹೇಳಿಕೊಳ್ಳುವಂಥ ಯಾವುದೇ ಲಾಭವಾಗಲಿಲ್ಲ. 1983ರಲ್ಲಿ ದೆಹಲಿಯ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಹೀನಾಯ ಸೋಲು ಕಂಡ ಬಿಜೆಪಿ 1984ರ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ 229 ಕ್ಷೇತ್ರಗಳಲ್ಲಿ 2 ಸ್ಥಾನ ಗಳಿಸುವುದರೊಳಗೆ ಏದುಸಿರು ಬಿಡತೊಡಗಿತ್ತು.

ಹಿಂದುತ್ವ ಆಂದೋಲನ(1984–91)

1984ರಲ್ಲಿ ಲಾಲ್ ಕೃಷ್ಣ ಅಡ್ವಾಣಿ ಅವರು ಬಿಜೆಪಿಯ ಅಧ್ಯಕ್ಷ ಸ್ಥಾನಕ್ಕೇರುತ್ತಿದ್ದಂತೆಯೇ ಪಕ್ಷದ ಸಿದ್ಧಾಂತಗಳಲ್ಲಿ ಆಮೂಲಾಗ್ರ ಬದಲಾವಣೆಯಾಗತೊಡಗಿತು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮುಖವಾಣಿಯಂತಿದ್ದ 'ವಿಶ್ವ ಹಿಂದೂ ಪರಿಷತ್'(ವಿಎಚ್‌ಪಿ) ರಾಮ ಜನ್ಮಭೂಮಿಗೆ ಸಂಬಂಧಿಸಿದಂತೆ ಅತ್ಯಂತ ತೀವ್ರಗಾಮಿ ಧೋರಣೆಯನ್ನು ತಳೆದಿದ್ದು ಕೂಡ ಈ ಸಂದರ್ಭದಲ್ಲಿಯೇ. 1985ರ ಬಳಿಕ ಬಿಜೆಪಿಯಲ್ಲಿ ಸಾಕಷ್ಟು ಬದಲಾವಣೆಗಳಾದವು. ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ಕರೆದ ಲಾಲ್ ಕೃಷ್ಣ ಅಡ್ವಾಣಿ ಮುಂದಿನ ಐದು ವರ್ಷಗಳಲ್ಲಿ ಪಕ್ಷದ ಸಮಗ್ರ ಬೆಳವಣಿಗೆಗೆ ಚುರುಕು ಮುಟ್ಟಿಸಬಲ್ಲ ಪರಿಣಾಮಕಾರಿ ಕಾರ್ಯತಂತ್ರವೊಂದನ್ನು ರೂಪಿಸುವ ನಿಟ್ಟಿನಲ್ಲಿ 12ಮಂದಿ ಸದಸ್ಯರನ್ನು ಒಳಗೊಂಡ ಸಮಿತಿಯೊಂದನ್ನು ರಚಿಸಿದರು.

ನಿರ್ದಿಷ್ಟ ಕಾಲದಲ್ಲಿ ಆ ಸಮಿತಿ 43 ಪುಟಗಳ ವರದಿಯೊಂದನ್ನು ಸಿದ್ಧಪಡಿಸಿತು. ಆ ವರದಿಯಲ್ಲಿ ಹಿಂದಿನ ಚುನಾವಣೆಯಲ್ಲಿ ಭಾರತೀಯ ಜನಸಂಘ ಮಾಡಿದ ಸಾಧನೆಯ ಜೊತೆಗೆ ಭವಿಷ್ಯದ ಚುನಾವಣೆಗಳಲ್ಲಿ ಬಿಜೆಪಿ ಅಳವಡಿಸಿಕೊಳ್ಳಬಹುದಾದ ಚುನಾವಣಾ ತಂತ್ರಗಳ ಹೊಳವನ್ನೂ ನೀಡಿತ್ತು. ಈ ಗಮನಾರ್ಹ ಬದಲಾವಣೆಗಳಲ್ಲಿ ಬಿಜೆಪಿಯ ಸೈದ್ಧಾಂತಿಕ ದೃಷ್ಟಿಕೋನ ತನ್ನ ಮೊದಲಿನ 'ಗಾಂಧಿ ಪ್ರೇರಿತ ಸಮಾಜ ವಾದ'ದಿಂದ 'ಅಂತರ್ಗತ ಮಾನವತಾವಾದ'ಕ್ಕೆ ಹೊರಳಿದ್ದು ಕೂಡ ಒಂದು. ನಂತರ 'ಹಿಂದು ಅಸ್ಮಿತೆ' – 'ಹಿಂದೂ ಸಂಸ್ಕೃತಿ'ಯ ನೆಪದಲ್ಲಿ ಬಿಜೆಪಿ ಕ್ರಮೇಣ 'ಅಂತರ್ಗತ ಮಾನವತಾವಾದ'ದಿಂದ 'ಹಿಂದುತ್ವ'ಕ್ಕೆ ತನ್ನ ನಿಷ್ಠೆ ಬದಲಿಸಿತು.

'ಗಾಂಧಿ ಪ್ರೇರಿತ ಸಮಾಜವಾದ' ಎಂಬುದು ಕೂಡ ಬಿಜೆಪಿಯ ಹಿತಾಸಕ್ತಿಗೆ ಪೂರಕವಾದ ಸೈದ್ಧಾಂತಿಕ ನಿಲುವು ಎಂಬುದರಲ್ಲಿ ಈಗ ಯಾವುದೇ ಅನುಮಾನಗಳು ಉಳಿದಿಲ್ಲ. ಭಾರತೀಯ ರಾಜಕಾರಣದಲ್ಲಿ ಒಂದು ಪ್ರಭಾವಶಾಲಿ ವಿರೋಧ ಪಕ್ಷವಾಗುವುದರಲ್ಲೂ ಎಡವಿದ ಜನಸಂಘದ ಮಿತಿಗಳ ಅರಿವು ವಾಜಪೇಯಿ ಅವರಿಗಿತ್ತು. ಪಕ್ಷಕ್ಕೆ ಅಂಟಿದ ಮೂಲಭೂತವಾದದ ಮಸಿಯನ್ನು ತೊಡೆದು ಅಭಿವೃದ್ಧಿಗೆ ಪೂರಕವಾದ ಆರ್ಥಿಕ ದೂರದರ್ಶಿತ್ವವನ್ನು ಎತ್ತಿ ಹಿಡಿಯುವ ನಿಟ್ಟಿನಲ್ಲಿ ವಾಜಪೇಯಿ ಅವರಿಗೆ ಈ ಬಗೆಯ ಸೈದ್ಧಾಂತಿಕ ತಂತ್ರಗಾರಿಕೆ ಹಾಗೂ ಬದಲಾವಣೆ ಅನಿವಾರ್ಯವಾಗಿತ್ತು.

ಮೀನಾಕ್ಷಿಪುರಮ್‌ನ ಮತಾಂತರ ಮತ್ತು ಶಹಾಬಾನು ಪ್ರಕರಣದ ಸಂದರ್ಭವು ಬಿಜೆಪಿಗೆ ಹಿಂದುತ್ವ ಕುರಿತಾಗಿ ಮಾತನಾಡಲು ಉತ್ತಮ ವೇದಿಕೆ ಒದಗಿಸಿಕೊಟ್ಟಿತು. ಮುಸ್ಲಿಂ ಓಲೈಕೆ ವಿಷಯ ಮುಂದುಮಾಡಿತು. ಮುಖ್ಯವಾದ ದಂಗೆ ನಡೆದ 1980ರ ದಶಕವು ಅತೀ ಅಪಾಯಕರವಾಗಿತ್ತು. ಕಾಂಗ್ರೆಸ್ ಪಕ್ಷವು ಮೂಲಭೂತವಾದಿಗಳ ಜೊತೆ ಸಾಮಾನ್ಯ ರೀತಿಯಲ್ಲೇ ಇತ್ತು. ಆದ್ದರಿಂದ ಬಿಜೆಪಿಯ ಹಿಂದುತ್ವ ವಿಷಯವು ಹಿಂದು ಮತಗಳನ್ನು ಪಡೆದುಕೊಳ್ಳುವಲ್ಲಿ ಸಫಲವಾಯಿತು.

ನೆಹರು ಅವಧಿಯ ಪ್ರಾರಂಭದ ದಿನಗಳಲ್ಲಿಯೂ ಕೂಡ ಆರ್‌ಎಸ್‌ಎಸ್ ಕಾಂಗ್ರೆಸ್ ಸೇರುವಲ್ಲಿ ಆಸಕ್ತಿಯನ್ನು ಹೊಂದಿರಲಿಲ್ಲ. ಸರ್ದಾರ್ ಪಟೇಲ್ ಅವರು ಆರ್ ಎಸ್ ಎಸ್ ಅನ್ನು ಕಾಂಗ್ರೆಸ್‌ಗೆ ಸೇರಿಕೊಳ್ಳುವಂತೆ ಮನವಲಿಸುವಲ್ಲಿ ಸಾಕಷ್ಟು ಪ್ರಯತ್ನಪಟ್ಟಿದ್ದರು. ಆದರೆ ಇದರಲ್ಲಿ ಅವರು ಯಶಸ್ಸು ಸಾಧಿಸುವುದು ಸಾಧ್ಯವಾಗಲಿಲ್ಲ. ಆರ್ ಎಸ್ ಎಸ್‌ಗೆ ಯಾವತ್ತೂ ಹಿಂದುಪರ ಪಕ್ಷಗಳಾಗಿದ್ದ ಜನಸಂಘ ಅಥವಾ ಹಿಂದುಮಹಾಸಭಾದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಬೇಕೆಂಬ ಮನಸು ಕೂಡಾ ಇದ್ದಂತಿರಲಿಲ್ಲ. ಇವು ಇಂದಿರಾಗಾಂಧಿ ಅವರಿಗೆ ಬೆಂಬಲ ನೀಡಿದ್ದು ಇಂದಿರಾಗಾಂಧಿ ಅವರ ಸಾವಿನ ನಂತರ ಈ ಪಕ್ಷಗಳ ಹಾಗೂ ಕಾರ್ಯಕರ್ತರ ಗುಂಪನ್ನು ಕಾಂಗ್ರೆಸ್‌ಗೆ ಬೆಂಬಲ ಕೊಡುವಂತೆ ನಿರ್ದೇಶಿಸಲಾಯಿತು.

ಶಹಾಬಾನು ಪ್ರಕರಣದಲ್ಲಿ ಮುಸ್ಲಿಮ್ ಧುರೀಣ ಸೈಯದ್ ಶಹಾಬುದ್ದಿನ್ ಮುಂದಿನ ಪ್ರಧಾನ ಮಂತ್ರಿ ರಾಜೀವ್ ಗಾಂಧಿಯವರನ್ನು ಸುಪ್ರಿಮ್ ಕೋರ್ಟ್ ತೀರ್ಪಿಗೆ ವಿರುದ್ಧವಾಗಿ ಮುಸ್ಲಿಮ್ ಮಹಿಳಾ ಮಸೂದೆ ಜಾರಿಗೆ ತರುವ ಕಾರ್ಯಕ್ಕೆ ಮನವೊಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ. ಇದು ಮುಸ್ಲಿಮ್ ಮತಗಳನ್ನುಗಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಹಾಗೆಯೇ ಕಾಂಗ್ರೆಸ್ ಮುಂದೆ ಆರ್‌ಎಸ್‌ಎಸ್–ವಿಎಚ್‌ಪಿ ಸೇರಿ ಬಾಬ್ರಿ ಸ್ಥಳಕ್ಕೆ ಇದ್ದ ಬೀಗವನ್ನು ಒಡೆಯಲು ಪ್ರಯತ್ನಿಸಿದ್ದು ದೊಡ್ಡ ಪ್ರಕರಣವಾಯ್ತು. ನಂತರ ಇದು ಬಾಬ್ರಿ ಮಸೀದಿಯನ್ನು ಕೆಡಹುವ ಹಂತಕ್ಕೆ ತಲುಪಿತು.

ಬಿಜೆಪಿ ಈ ಸಮಯದಲ್ಲಿ ಕಾಂಗ್ರೆಸ್ ಪಕ್ಷ 'ಹಿಂದು' ಪರಿಕಲ್ಪನೆಯನ್ನು ತನ್ನ ಪಕ್ಷದ ಸಲುವಾಗಿ ಬಳಸಿಕೊಂಡಿದ್ದನ್ನು ಗಮನಿಸಿತು. ಆದ್ದರಿಂದ "ತಕ್ಷಣ ನಾಯಕತ್ವದಲ್ಲಿ ಬದಲಾವಣೆ ತರುವ ಮೂಲಕ ಚಟುವಟಿಕೆಯಿಂದ ಕೂಡಿದ ಹಿಂದೂಪರ ಅಲೆಯನ್ನು ಹುಟ್ಟುಹಾಕುವ ಮೂಲಕ ಬಿಜೆಪಿ ಹಿಂದುಗಳನ್ನು ಹುರಿದುಂಬಿಸಿತು". ಇದಲ್ಲದೆ ಇದು ಚುನಾವಣಾ ಆಯೋಗಕ್ಕೆ ಚುನಾವಣೆಯಲ್ಲಿ ತಾನು ಜನ್ಮಭೂಮಿ ವಿಷಯವನ್ನು ಬಳಸುವುದಿಲ್ಲ ಎಂದು ಭರವಸೆ ನೀಡಿತಾದರೂ ಚುನಾವಣೆ ಸಂದರ್ಭದಲ್ಲಿ ಇದನ್ನು ಸಾಕಷ್ಟು ಬಳಸಿಕೊಂಡಿತು.

ಹೀಗಾಗಿ 1984ರ ನಂತರ ಸಾಕಷ್ಟು ಬದಲಾವಣೆಗಳು ಹಾಗೂ ಅಸಮಧಾನಕರ ಅಂಶಗಳು ಈ ಸಮಯದಲ್ಲಿ ಕಂಡು ಬಂದವು. ಭಯೋತ್ಪಾದನೆ ಮತ್ತು ಕೋಮುವಾದೀಯ ಭಾವನೆಗಳು ಹಿಂದುಗಳ ಕೆಲವು ಗುಂಪುಗಳನ್ನು ಅಭದ್ರತೇಗೀಡುಮಾಡಿತು. ಬಿಜೆಪಿ ಈ ಹಿಂದು ಮತಗಳನ್ನು ಹೇಗಾದರೂ ಗಳಿಸಬೇಕು ಎಂಬುದನ್ನು ತಿಳಿದುಕೊಂಡಿತ್ತು. ಹೀಗಾಗಿ ಹೆಚ್ಚಿನ ಜನರ ರಾಜಕೀಯ ಆಕಾಂಕ್ಷೆಯನ್ನು ಚುನಾವಣಾ ಫಲಿತಾಂಶವಾಗಿ ಪರಿವರ್ತಿಸುವ ಪ್ರಯತ್ನ ಮಾಡಿತು.

1989ರ ಸಂಸತ್ತಿನ ಚುನಾವಣೆಯಲ್ಲಿ ಮೂರನೇ ಹೆಚ್ಚುಸ್ಥಾನ ಹೊಂದಿರುವ ಬಿಜೆಪಿ, ನ್ಯಾಷನಲ್ ಫ್ರಂಟ್ ಜೊತೆ ಒಪ್ಪಂದ ಮಾಡಿಕೊಂಡಿತು. ಆದರೆ 11ತಿಂಗಳ ನಂತರ ವಿ.ಪಿ.ಸಿಂಗ್ ನೇತೃತ್ವದಲ್ಲಿ ಮೀಸಲಾತಿ ಕುರಿತಾಗಿ ಹೊರತಂದ ಮಂಡಲ್ ವರದಿಯ ಕುರಿತು ವಿರೋಧ ವ್ಯಕ್ತವಾಯಿತು. ಇದೇ ಸಮಯದಲ್ಲಿ ಬಿಜೆಪಿ ಅಧ್ಯಕ್ಷ ಎಲ್.ಕೆ.ಅಡ್ವಾಣಿ ಅವರು ಗುಜರಾತ್‌ನ ಸೋಮನಾಥ್‌ದಿಂದ ಅಯೋಧ್ಯಾವರೆಗೆ ರಾಮರಥ ಯಾತ್ರೆ ನಡೆಸಿದರು.

ಬಾಬ್ರಿ ಮಸೀದಿಯ ಸ್ಥಳದಲ್ಲಿ ರಾಮಮಂದಿರ ಕಟ್ಟುವ ಸಲುವಾಗಿ ಜನರ ಬೆಂಬಲವನ್ನು ಕೇಳುವ ಸಲುವಗಿ ನಡೆಸಲಾಯಿತು. ಬಿಹಾರದ ಸಮಸ್ತಿಪುರದಲ್ಲಿ ಎಲ್.ಕೆ. ಅಡ್ವಾಣಿಯವರನ್ನು ಬಂಧಿಸಲಾಯ್ತು. ಇದರಿಂದ ಬಿಜೆಪಿ ನ್ಯಾಷನಲ್ ಫ್ರಂಟ್ ಜೊತೆಗಿನ ತನ್ನ ಒಪ್ಪಂದವನ್ನು ಹಿಂತೆ ಗೆದುಕೊಂಡಿತು. ಇದರಿಂದ ನ್ಯಾಷನಲ್ ಫ್ರಂಟ್ ಸರ್ಕಾರವು ತನ್ನ ಅಧಿಕಾರವನ್ನು ಕಳೆದುಕೊಳ್ಳಬೇಕಾಯಿತು ಜನತಾದಳದಲ್ಲಿ ಒಡಕು ಉಂಟಾಗಿದ್ದರಿಂದ, ಬಿಜೆಪಿ ಅತಿ ದೊಡ್ಡ ವಿರೋಧ ಪಕ್ಷವಾಗಿ ಹೊರಹೊ ಮ್ಮಿತು. ಚಂದ್ರ ಶೇಖರ್ ಅವರು ಜನತಾದಳದಿಂದ ಹೊರಬರುವ ಮೂಲಕ ಕಾಂಗ್ರೆಸ್‌ಪಕ್ಷದ ಬೆಂಬಲದಿಂದ ಸರ್ಕಾರವನ್ನು ರಚಿಸಿದರು.

ಜೊತೆಜೊತೆಗೆ ಬಿಜೆಪಿ ತಾನು ಇತರ ಯಾವುದೇ ಪಕ್ಷಗಳ ಜೊತೆ ಹೊಂದಾಣಿಕೆ ಮಾಡಿಕೊಂಡು ಸರ್ಕಾರ ರಚಿಸುವುದಿಲ್ಲ ಎಂದಿತು. ಬದಲಾಗಿ ತನ್ನ ವೈಯುಕ್ತಿಕ ಉನ್ನತಿಯನ್ನು ಗಮನದಲ್ಲಿರಿಸಿಕೊಂಡು ಕೆಲಸ ಮಾಡಲು ಪ್ರಾರಂಭಿಸಿತು. ಇದು ತನ್ನನ್ನು ಒಂದು ಹಿಂದೂ ರಾಷ್ಟ್ರ ಕಟ್ಟುವ ಕಲ್ಪನೆಯನ್ನು ಇರಿಸಿಕೊಂಡ ಪಕ್ಷವಾಗಿ ಗುರುತಿಸಿಕೊಳ್ಳಲು ನಿರ್ಧರಿಸಿತು. ಎಂಭತ್ತರ ದಶಕದ ನಂತರ ಬಹಳಷ್ಟು ಜನ ಇದನ್ನು ಕಾಂಗ್ರೆಸ್‌ಗೆ ಬದಲಾಗಿ ಒಡಮೂಡುತ್ತಿರುವ ಶಕ್ತಿಯುತ ಪಕ್ಷವಾಗಿನೋಡಲು ಪ್ರಾರಂಭಿಸಿದರು. ಜನಸಂಘ ಪಕ್ಷಕ್ಕೆ ಹೋಲಿಸಿದಲ್ಲಿ ಬಿಜೆಪಿ ಒಂದು ಸಾಮಾಜಿಕ ಮತಕ್ಷೇತ್ರವನ್ನು ಹುಟ್ಟುಹಾಕುವಲ್ಲಿ ದಿಟ್ಟಹೆಜ್ಜೆಯನ್ನು ಹಾಕಿತು. ಬಿಜೆಪಿ ಕೇವಲ ಉತ್ತರ ಭಾರತದಲ್ಲಿ ಮಾತ್ರವಲ್ಲದೆ ದಕ್ಷಿಣ ಭಾರತದಲ್ಲೂ ಕೂಡ ಪಕ್ಷ ಸ್ಥಾಪಿಸುವ ಪ್ರಯತ್ನ ಮಾಡಿತು.

ಬಿಜೆಪಿ ತನ್ನ ಆದರ್ಶದ ಬತ್ತಳಿಕೆಯಲ್ಲಿ ಇಟ್ಟುಕೊಂಡಿದ್ದ ವಿಷಯಗಳನ್ನು ತಿಳಿದುಕೊಳ್ಳುವುದು ತುಂಬಾ ಆಸಕ್ತಿದಾಯಕವಾಗಿದೆ. ಇದು ಹಿಂದೂತ್ವದ ಪ್ರತಿಪಾದನೆಯಿಂದ ಭಾರತೀಯ ರಾಷ್ಟ್ರೀಯತೆಯನ್ನು ತನ್ನ ಆದರ್ಶದ ವ್ಯಾಪ್ತಿಯೊಳಗೆ ಬರುವ ಇನ್ನಿತರ ಮುಖ್ಯ ಸಾಮಾಜಿಕ ವಿಷಯಗಳನ್ನು ತನ್ನ ಪಕ್ಷದ ಮುಖ್ಯ ಪ್ರಣಾಳಿಕೆಯಾಗಿಸಿಕೊಂಡಿತು. ಬಿಜೆಪಿಯು ಸಮಾಜದ ಸೌಲಭ್ಯ ವಂಚಿತ ದಲಿತ, ಬುಡಕಟ್ಟು, ಹಿಂದುಳಿದ ಜಾತಿಯನ್ನು ಮತ್ತು ರೈತ ಸಮುದಾಯದವರನ್ನು ಕೂಡ ತನ್ನ ಪಕ್ಷದ ಕಡೆ ಸೆಳೆಯಲು ಪ್ರಯತ್ನಿಸಿತು. ಬಿಜೆಪಿ ತನ್ನ 'ಅಯೋಧ್ಯಾ' ಹೋರಾಟದ ಕುರಿತು 'ಇದು ಕೇವಲ ದೇವಸ್ಥಾನವನ್ನು ಕಟ್ಟುವ ಪ್ರಯತ್ನ ಮಾತ್ರವಲ್ಲ. ಈ ಮೂಲಕ ದೇಶದ ಸಾಂಸ್ಕೃತಿಕ ಗುರುತನ್ನು ಪುನಃ ದೃಢೀಕರಿಸುವ ಪ್ರಯತ್ನ' ಎಂದು ಹೇಳಿಕೊಂಡಿತು.

ಈ ಸಂದರ್ಭದಲ್ಲೇ ಬಿಜೆಪಿ 'ನೆಹರು ಜಾತ್ಯತೀತ' ಪರಿಕಲ್ಪನೆಯನ್ನು ಬಳಸಿಕೊಂಡು ತನ್ನ ಪಕ್ಷದ ಹೊಸ ಅಜೆಂಡಾವನ್ನು ಇನ್ನೂ ಸ್ಫೂರ್ತಿಯುತವಾಗಿ ರೂಪಿಸಿತು. 'ಬಾಬ್ರಿ ಮಸೀದಿ' ಕೆಡಹಿದ ನಂತರದಲ್ಲಿ ಎಲ್ಲೆಡೆ ಇದರ ಕುರಿತಾಗಿ ತೀವ್ರ ವಿರೋಧ ವ್ಯಕ್ತವಾದಾಗ ಅಡ್ವಾಣಿ ಅವರು ಬಿಜೆಪಿಯ ಜಾತ್ಯತೀತತೆಯ ಪರಿಕಲ್ಪನೆಗೆ ಹೊಸ ವ್ಯಾಖ್ಯಾನವನ್ನು ಕೊಡುವುದು ಅಗತ್ಯವಾಯಿತು.

ಅಯೋಧ್ಯಾ ಚಳವಳಿಯ ಟೀಕಾಕಾರರು ಬಿಜೆಪಿಯು ಚುನಾವಣೆಯನ್ನು ಗೆಲ್ಲುವ ದೃಷ್ಟಿಯಿಂದ ಮತ್ತು ಜಾತ್ಯತೀತತೆಯನ್ನು ಹಾಳುಗೆಡಹುವ ಸಲುವಾಗಿ ಇದನ್ನು ಬಳಸುತ್ತಿದೆ ಎಂದು ಹೇಳುತ್ತಾರೆ. ಅದೇನೆ ಇದ್ದರೂ ಬಿಜೆಪಿ ಪಕ್ಷವನ್ನು ದೇಶದ ರಾಜಕೀಯದಲ್ಲಿ ಕಾಣುವಂತಾಗಿಸಿದ್ದು 'ಹಿಂದೂತ್ವ' ಹಾಗೂ ತನ್ನದೇ ಆದ ಚುನಾವಣಾ ಕಣವನ್ನು ಸಜ್ಜುಗೊಳಿಸಿಕೊಳ್ಳುವಲ್ಲಿ ಸಹಾಯ ಮಾಡಿದ್ದು ಕೂಡಾ 'ಹಿಂದೂತ್ವ'ವೇ ಆಗಿದೆ. ಅಡ್ವಾಣಿಯವರು ಹಿಂದೂತ್ವವನ್ನು 'ಪಕ್ಷದ ಆದರ್ಶವಾದದ ಶುಭ ಚಿಹ್ನೆ' ಎಂದು ವಿವರಿಸುತ್ತಾರೆ. ಭಾರತದಲ್ಲಿಯ ರಾಷ್ಟ್ರೀಯತೆಯ ಕುರಿತಾದ ಪ್ರವಚನಗಳು ಹೆಚ್ಚುಹೆಚ್ಚು ಹಿಂದೂತ್ವದಕಡೆ ಮುಖ ಮಾಡುತ್ತಿವೆ.

ಅಡ್ವಾಣಿಯವರ ಪ್ರಕಾರ ಜಾತ್ಯತೀತತೆ ಎಂದರೆ 'ಸರ್ವಪಂಥ-ಸಮಭಾವ'. ಎಲ್ಲ ಧರ್ಮಗಳಿಗೂ ಮುಖ್ಯವಾಗಿ ಮೂರು ಸಮನಾದ ಹಕ್ಕುಗಳನ್ನು ಸಂವಿಧಾ ನದಲ್ಲಿ ನೀಡಲಾಗಿದೆ ಅವೆಂದರೆ: 1. ದೇವಾಧಿಪತ್ಯ ಅಥವಾ ಧರ್ಮಾಧಿಪತ್ಯವನ್ನು ತಿರಸ್ಕರಿಸಬಹುದು. 2. ನಂಬಿಕೆ ಧರ್ಮಗಳನ್ನು ಆಧರಿಸದೆ ಎಲ್ಲರಿಗೂ ಸಮಾನತೆ. 3. ಧರ್ಮ ಮತ್ತು ನಂಬಿಕೆಯ ಸಂಪೂರ್ಣ ಸ್ವಾತಂತ್ರ್ಯದ ಹಕ್ಕು. ಅಡ್ವಾಣಿಯವರು ಹಿಂದೂತ್ವದಲ್ಲಿ ಹಾಸುಹೊಕ್ಕಾಗಿರುವ ಹಲವಾರು ನಂಬಿಕೆಯ ಕುರಿತಾಗಿ ಹಾಗೂ ವಿಧಗಳ ಕುರಿತಾಗಿ ಪ್ರತಿಪಾದಿಸಿದರು.

ಯಾವುದೇ ನಂಬಿಕೆಯನ್ನು ಹಿಂದೂತ್ವದಲ್ಲಿ ತಿರಸ್ಕರಿಸಲು ಹೇಳಿಲ್ಲ. ಇದರಿಂದಾಗಿಯೇ ಹಿಂದೂತ್ವವು ಭಾರತದಲ್ಲಿ ಜಾತ್ಯತೀತತೆ ಇಲ್ಲಿಯವರೆಗೂ ಮುಂದುವರೆಯಲು ಕಾರಣವಾಗಿದೆ. "ನಾವು ಕೂಡ ಭಾರತ ಜಾತ್ಯತೀತ ರಾಷ್ಟ್ರ ಎಂಬುದನ್ನು ಒಪ್ಪಿಕೊಳ್ಳುತ್ತೇವೆ ಏಕೆಂದರೆ ಹೆಚ್ಚಿನ ಸಂಖ್ಯೆಯ ಹಿಂದುಗಳು ಭಾರತದಲ್ಲಿದ್ದಾರೆ. ಧರ್ಮಾಧಿಪತ್ಯವು ನಮ್ಮ ಇತಿಹಾಸ ಮತ್ತು ಸಂಪ್ರದಾಯಕ್ಕೆ ಹೊರಗಿನದು" ಎಂದು ಲಾಲ್ ಕೃಷ್ಣ ಅಡ್ವಾಣಿಯವರು ಟೆಲಿಗ್ರಾಫ್ ಪತ್ರಿಕೆಗೆ (ಜನವರಿ 04, 1993) ನೀಡಿದ್ದ ಸಂದರ್ಶನದಲ್ಲಿ ಪ್ರತಿಪಾದಿಸಿದರು.

ಸುಮಾರು ನಲ್ವತ್ತು ದಶಕಗಳಿಂದ ಭಾರತಕ್ಕೆ ತನ್ನದೇ ಆದ ಗುರುತನ್ನು ಬೆಳೆಸಿಕೊಳ್ಳದಂತೆ ಜಾತ್ಯತೀತತೆಯ ಹೆಸರಿನಲ್ಲಿ ತಡೆಯಲಾಗುತ್ತಿದೆ. ಜಾತ್ಯತೀತತೆಯನ್ನು ಹಿಂದುಧರ್ಮದ ವಿರುದ್ಧ ತಮಗಿರುವ ದ್ವೇಷವನ್ನು ತೋರಿಸಿಕೊಳ್ಳಲು ಬಳಸಲಾಗುತ್ತಿದೆ. ಇದಕ್ಕೆ ಕಪಟ-ಜಾತ್ಯತೀತತೆ (psudo-secularism) ಎಂದು ಕರೆಯಬಹುದು ಎಂದು ಬಿಜೆಪಿವಾದ ಮಂಡಿಸಿತು. ಬಿಜೆಪಿ ಪಕ್ಷವು, ಜಾತ್ಯತೀತತೆಯ ಪರಿಕಲ್ಪನೆಯು ಸಮಾಜವಾದ ದಂತೆ ಅವನತಿ ಹೊಂದುತ್ತಿದೆ. ಕಾರಣ ಜಾತ್ಯಾತೀತ ಮನೋಭಾವ ಇಲ್ಲದವರು ಇದರ ಹೆಸರು ಹೇಳಿಕೊಂಡು ಓಡಾಡುತ್ತಿರುವುದು ಕಾರಣವಾಗಿದೆ. ಆದ್ದರಿಂದ ಹಿಂದೂತ್ವವು ನಿಜವಾದ ಜಾತ್ಯತೀತತೆಯಾಗಿದೆ ಎಂದು ವಾದಿಸಿತು. ಅಡ್ವಾಣಿಯವರು ಹಿಂದೂತ್ವದಲ್ಲಿ ಹಾಸುಹೊಕ್ಕಾಗಿರುವ ವಿವಿಧ ನಂಬಿಕೆ ಪ್ರಕಾರಗಳಕುರಿತು ಮಾತನಾಡುತ್ತಾ 'ಹಿಂದೂತ್ವವು ಯಾವತ್ತೂ ಧರ್ಮದ ಹೆಸರಿನಲ್ಲಿ ಯಾರ ನಂಬಿಕೆಯನ್ನೂ ತಡೆಯುವ ಕೆಲಸ ಮಾಡಿಲ್ಲ. ಇಂದು ಭಾರತದಲ್ಲಿ ಜಾತ್ಯತೀತತೆ ಉಳಿದಿದ್ದರೆ ಅದಕ್ಕೆ ಕಾರಣ ಹಿಂದೂತ್ವವೇ ಆಗಿದೆ. ಆದ್ದರಿಂದ ಹಿಂದುತ್ವವೊಂದೆ ಜಾತ್ಯತೀತತೆಯ ಉಳುವಿಗೆ ಕಾರಣವಾಗಿದೆ ಎಂದು ಪ್ರತಿಪಾದಿಸಿದರು.

ಈರೀತಿಯ ವ್ಯಾಖ್ಯಾನವು ಹಿಂದುತ್ವ ಮತ್ತು ಜಾತ್ಯತೀತತೆಯ ಕುರಿತಾದ ತೀವ್ರ ಚರ್ಚೆಗೆ ಕಾರಣವಾದವು. ಅಡ್ವಾಣಿಯವರಿಗೆ ಹಿಂದುತ್ವ ಕೇವಲ ಚುನಾವಣಾ ಸಂಬಂಧಿ ವಿಷಯವಲ್ಲ ಕೋಮುವಾದಿ ಮತ್ತು ಜಾತಿ ರಾಜಕಾರಣದಿಂದ ಮಸುಕಾಗಿರುವ 'ಭಾರತದ ರಾಜಕೀಯದಲ್ಲಿ ನೈತಿಕ ರಾಜಕಾರಣ ಬೆಳೆಸುವುದು ಇದರ ಮುಖ್ಯ ಉದ್ದೇಶ ಎಂದು ಅಡ್ವಾಣಿಯವರು ಪ್ರತಿಪಾದಿಸಿದರು. ಬಿಬಿಸಿ ಲಂಡನ್‌ಗೆ ನೀಡಿದ್ದ ಸಂದರ್ಶನದಲ್ಲಿ ಅಡ್ವಾನಿಯವರು ಹೆಮ್ಮೆಯಿಂದ 'ಬಿಜೆಪಿ ಪಕ್ಷವನ್ನು ಒಂದು ಹಿಂದು ಪಕ್ಷ ಎಂದು ಕರೆಯುವುದರಲ್ಲಿ ಯಾವುದೇ ತಪ್ಪಿಲ್ಲ' ಎಂದು ಹೇಳಿಕೆ ನೀಡಿದ್ದಾರೆ.

ಅಯೋಧ್ಯಾ ಚಳವಳಿಯ ಟೀಕಾಕಾರರು ಬಿಜೆಪಿಯು ಚುನಾವಣೆಯನ್ನು ಗೆಲ್ಲುವ ದೃಷ್ಟಿಯಿಂದ ಮತ್ತು ಜಾತ್ಯತೀತತೆಯನ್ನು ಹಾಳುಗೆಡಹುವ ಸಲುವಾಗಿ ಇದನ್ನು ಬಳಸುತ್ತಿದೆ ಎಂದು ಹೇಳುತ್ತಾರೆ. ಅದೇನೆ ಇದ್ದರೂ ಬಿಜೆಪಿ ಪಕ್ಷವನ್ನು ದೇಶದ ರಾಜಕೀಯದಲ್ಲಿ ಕಾಣುವಂತಾಗಿಸಿದ್ದು 'ಹಿಂದೂತ್ವ' ಹಾಗೂ ತನ್ನದೇ ಆದ ಚುನಾವಣಾ ಕಣವನ್ನು ಸಜ್ಜುಗೊಳಿಸಿಕೊಳ್ಳುವಲ್ಲಿ ಸಹಾಯ ಮಾಡಿದ್ದು ಕೂಡಾ 'ಹಿಂದೂತ್ವ'ವೇ ಆಗಿದೆ. ಅಡ್ವಾಣಿಯವರು ಹಿಂದೂತ್ವವನ್ನು 'ಪಕ್ಷದ ಆದರ್ಶವಾದದ ಶುಭ ಚಿಹ್ನೆ' ಎಂದು ವಿವರಿಸುತ್ತಾರೆ. ಭಾರತದಲ್ಲಿಯ ರಾಷ್ಟ್ರೀಯತೆಯ ಕುರಿ ತಾದ ಪ್ರವಚನಗಳು ಹೆಚ್ಚುಹೆಚ್ಚು ಹಿಂದೂತ್ವದಕಡೆ ಮುಖ ಮಾಡುತ್ತಿವೆ. ಖ್ಯಾತ ಪತ್ರಕರ್ತ ಎಂ.ವಿ ಕಾಮತ್ ಅವರ ಪ್ರಕಾರ ಬುದ್ಧಿಜೀವಿಗಳು ಹಿಂದೂತ್ವಕ್ಕೆ ಕೊಡಲು ಹಿಂಜರಿದ ಸ್ಥಾನವನ್ನು ಗೌರವವನ್ನು ಬಿಜೆಪಿ ನೀಡಿದೆ.

ಸ್ವದೇಶಿ ಕಾಲ: 1992ರಲ್ಲಿ ಬಿಜೆಪಿಯು ತನ್ನ ಆರ್ಥಿಕ ನೀತಿಯನ್ನು ಪ್ರಕಟಿಸಿತು. ಕಾಂಗ್ರೆಸ್-ಐ ಪಕ್ಷದ ಆರ್ಥಿಕ ನೀತಿಗೆ ಹೋಲಿಸಿದರೆ ಇದನ್ನು ಪಕ್ಷವು 'ಸ್ವದೇಶಿ ಪರ್ಯಾಯ ವ್ಯವಸ್ಥೆ' ಎಂದು ಗರ್ವದಿಂದ ಹೇಳಿಕೊಂಡಿತು. ಡಿಸೆಂಬರ್ 6, 1992ರಲ್ಲಿ ಬಾಬ್ರಿ ಮಸೀದಿ ಕೆಡಹಿದ ನಂತರದಲ್ಲಿ 'ಹಿಂದುತ್ವ'ದ ವಿಷಯವನ್ನು ಚುನಾವಣಾ ಸಂಬಂಧಿ ವಿಷಯಗಳಲ್ಲಿ ಬಳಸುವಂತಿರಲಿಲ್ಲ. ಸಹಜವಾಗಿ ಪಕ್ಷವು ಹೊಸ ವಿಷಯವನ್ನು ಇದಕ್ಕಾಗಿ ಹುಡುಕಬೇಕಾಗಿತ್ತು.

ಬಿಜೆಪಿಗೆ ಸ್ವದೇಶಿ ಪರಿಕಲ್ಪನೆಯು ಮೂಲ ಮಂತ್ರವಾಯಿತು. ರಾಷ್ಟ್ರೀಯ ಸಂಪತ್ತು, ವಸ್ತುಗಳು ಹಾಗೂ ಮಾನವಸಂಪನ್ಮೂಲವನ್ನು ಬಳಸಿಕೊಳ್ಳುವುದು, ಜೊತೆಗೆ ಹೈಟೆಕ್ ಕೈಗಾರಿಕೆಗಳಿಕೆ ಸ್ವಲ್ಪಮಟ್ಟಿಗಿನ ವಿದೇಶಿ ಬಂಡ

ವಾಳವನ್ನು ಬಳಸಿಕೊಳ್ಳುವ ಮೂಲಕ, ಬಂಡವಾಳ ಹೂಡಿಕೆ ವಾತಾವರಣವನ್ನು ನಿರ್ಮಿಸಿ ಸ್ವಾವಲಂಬನೆಯನ್ನು ಗಳಿಸಿಕೊಳ್ಳುವುದು. ಬದಲಾಗುತ್ತಿರುವ ಮತ್ತು ಬೆಳೆಯುತ್ತಿರುವ ಅಂತರರಾಷ್ಟ್ರೀಯ ತಂತ್ರಜ್ಞಾನವನ್ನು ಗಮನದಲ್ಲಿರಿಸಿಕೊಂಡು ರಾಷ್ಟ್ರಮಟ್ಟದಲ್ಲಿ ಸಂಪೂರ್ಣ ಉದ್ಯೋಗ ನೀಡುವ ನೀತಿಯ ಮೂಲಕ ವೇಗದ ಬದಲಾವಣೆಯನ್ನು ತರುವ ಉದ್ದೇಶವನ್ನು ತನ್ನ ಪ್ರಣಾಳಿಕೆಯಲ್ಲಿ ಶೃತ ಪಡಿಸಿತು. ಸಾಮಾಜಿಕ ಸಾಮರಸ್ಯ ಎಂದರೆ ಸಮಾಜದ ದುರ್ಬಲ ವಿಭಾಗಗಳಾದ ಮಹಿಳೆ, ಹಿಂದುಳಿದ ಜಾತಿ – ಪಂಗಡ, ಹಿಂದುಳಿದ ಪ್ರದೇಶ ಮುಂತಾದವುಗಳ ಕುರಿತಾಗಿಯೂ ಗಮನ ನೀಡುವ ಮೂಲಕ ರಾಷ್ಟ್ರದ ಉನ್ನತಿಗೆ ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಳ್ಳುವಂತೆ ಮಾಡುವುದಾಗಿದೆ.

ಸ್ವದೇಶಿ ಪರಿಕಲ್ಪನೆಯ ಹಿನ್ನೆಲೆ:

ಸ್ವದೇಶಿ ಪರಿಕಲ್ಪನೆಯು ಗಾಂಧೀಜಿಯವರಿಂದ ಪ್ರಾರಂಭವಾದದ್ದಲ್ಲ. ಸ್ವದೇಶಿ ಪರಿಕಲ್ಪನೆಯು ಮೊದಲು ಭಾರತೀಯ ರಾಷ್ಟ್ರೀಯತಾ ಕೋಶದಲ್ಲಿ ಗಾಂಧೀಜಿಯವರು ರಾಜಕೀಯಕ್ಕೆ ಪಾದಾರ್ಪಣೆ ಮಾಡುವ ಮುನ್ನ ಕಾಣಿಸಿಕೊಂಡಿದೆ. ಆದರೂ ಗಾಂಧೀಜಿಯವರು ಇದಕ್ಕೆ ಒಂದು ಉತ್ತಮ ಪ್ರಚಾರ ನೀಡಿ ಮಾದರಿಯಾದರು. ಲಾರ್ಡ್ ಕರ್ಜನ್ 'ಸ್ವದೇಶಿ' ಶಬ್ದ ಭಾರತೀಯ ರಾಷ್ಟ್ರೀಯ ಶಬ್ದ ಕೋಶದಲ್ಲಿ ಸೇರಲು ಕಾರಣರಾದರು. ಬಂಗಾಳ ವಿಭಜನೆಯಾದ 1905 ಅಕ್ಟೋಬರ್‌ನ ನಂತರ 'ಸ್ವದೇಶಿ' ಎಂದರೆ ದೇಶಭಕ್ತಿ ಎಂದಾಗಿತ್ತು. ಸುರೇಂದ್ರನಾಥ್ ಬ್ಯಾನರ್ಜಿ ಅವರು ಅದು ಈರೀತಿ ಅರ್ಥ ಕೊಡುವುದಕ್ಕೆ ಕಾರಣರಾದರು. ಇದು ಹುಟ್ಟಿದ ಸಂದರ್ಭದಲ್ಲಿ ರಾಷ್ಟ್ರೀಯ ಆರ್ಥಿಕತೆ ಮತ್ತು 'ಸ್ವದೇಶಿ' ಪರಿಕಲ್ಪನೆಗೆ ಯಾವುದೇ ಸಂಬಂಧವಿಲ್ಲವಾಗಿತ್ತು.

ಈ 'ಸ್ವದೇಶಿ' ಚಳವಳಿಯು ಗಾಂಧೀಜಿ ಮತ್ತು ಇತರೆ ಸ್ವಾತಂತ್ರ್ಯ ಚಳವಳಿಯ ನೇತಾರರಿಂದ ರಾಷ್ಟ್ರೀಯತಾ ಚಳವಳಿಯಲ್ಲಿ ಉತ್ತುಂಗವನ್ನು ತಲುಪಿತು. ಸ್ವಾಭಾವಿಕವಾಗಿ ಇದು ಭಾರತದ ರಾಷ್ಟ್ರೀಯ ಚಳವಳಿಯಲ್ಲಿ ಎಲ್ಲರೂ ರೂಢಿಸಿಕೊಳ್ಳಲು ಬಯಸುವ ಒಂದು ಬೆಲೆಕಟ್ಟಲಾಗದ ಸ್ವತ್ತಾಗಿತ್ತು.

ಸ್ವದೇಶಿಯ ಅರ್ಥವಿವರಣೆಗಳು:

ಬಿಜೆಪಿ ಹೇಳುವಂತೆ, ಸ್ವದೇಶಿ ಎಂದರೆ ಒಬ್ಬ ವ್ಯಕ್ತಿ ತನ್ನ ಸ್ವಂತ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಿಕೊಳ್ಳುವ ಒಂದು ಯೋಜನೆ. ಸ್ವದೇಶಿ ಎಂದರೆ ಉನ್ನತ ಮಟ್ಟದ ತಂತ್ರಜ್ಞಾನಕ್ಕೆ ವಿರುದ್ಧವಾಗಿರುವುದಿಲ್ಲ. ಆದರೆ ಇದು ರಾಷ್ಟ್ರದ ಆರ್ಥಿಕ ಬಲವರ್ಧನೆಗೆ ಪೂರಕವಾಗಿರುವಂತದ್ದು. ಸ್ವಾವಲಂಬನೆ ಮತ್ತು ಸ್ವಸಮರ್ಥತೆಯನ್ನು ಸಾಧಿಸುವುದು ಹಾಗೂ ಇತರ ರಾಷ್ಟ್ರಗಳ ಒತ್ತಡವನ್ನು ಎದುರಿಸಿ ನಿಲ್ಲುವ ತಾಳ್ಮೆ, ಇವುಗಳನ್ನು ಸ್ವದೇಶಿಯ ಸ್ಫೂರ್ತಿ – ಪ್ರಾಯೋಗಿಕತೆ ಎಂದು ಪರಿಗಣಿಸಲಾಗಿದೆ. ಈ ಸ್ವ–ಸಮರ್ಥತೆ ಮತ್ತು ಸ್ವ–ಗೌರವವನ್ನು ಸಾಧಿಸುವುದು ಇದರೊಂದಿಗೆ ಹತ್ತಿರದ ಸಂಬಂಧವನ್ನು ಹೊಂದಿದೆ. ಭಾರತೀಯ ಪರಿಸ್ಥಿತಿಗೆ ಮತ್ತು ಜನ ಸಮುದಾಯಕ್ಕೆ ಯೋಗ್ಯವಾದ ಸ್ವದೇಶಿ ಮತ್ತು ಆರ್ಥಿಕ ನೀತಿಯನ್ನು ಈ ರಾಷ್ಟ್ರ ಅಳವಡಿಸಿಕೊಳ್ಳಲೇಬೇಕು ಎಂದು ಬಿಜೆಪಿ ಪ್ರತಿಪಾದಿಸುತ್ತದೆ.

ಕೆಲವೊಮ್ಮೆ ಸ್ವದೇಶಿಯ ಮೇಲಿನ ಅತಿಯಾದ ಒತ್ತಡವು ಆಧುನಿಕ ಜಗತ್ತಿನ ಅಗತ್ಯತೆಗಳೊಂದಿಗೆ ಸ್ವದೇಶಿ ತಂತ್ರಜ್ಞಾನವನ್ನು ಉತ್ಪಾದನೆಗೆ ಪುರಾತನ ವಿಜ್ಞಾನಗಳನ್ನು

> **ಬಿಜೆಪಿ ಹೇಳುವಂತೆ, ಸ್ವದೇಶಿ ಎಂದರೆ ಒಬ್ಬ ವ್ಯಕ್ತಿ ತನ್ನ ಸ್ವಂತ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಿಕೊಳ್ಳುವ ಒಂದು ಯೋಜನೆ. ಸ್ವದೇಶಿ ಎಂದರೆ ಉನ್ನತ ಮಟ್ಟದ ತಂತ್ರಜ್ಞಾನಕ್ಕೆ ವಿರುದ್ಧವಾಗಿರುವುದಿಲ್ಲ. ಆದರೆ ಇದು ರಾಷ್ಟ್ರದ ಆರ್ಥಿಕ ಬಲವರ್ಧನೆಗೆ ಪೂರಕವಾಗಿರುವಂತದ್ದು. ಸ್ವಾವಲಂಬನೆ ಮತ್ತು ಸ್ವಸಮರ್ಥತೆಯನ್ನು ಸಾಧಿಸುವುದು ಹಾಗೂ ಇತರ ರಾಷ್ಟ್ರಗಳ ಒತ್ತಡವನ್ನು ಎದುರಿಸಿ ನಿಲ್ಲುವ ತಾಳ್ಮೆ, ಇವುಗಳನ್ನು ಸ್ವದೇಶಿಯ ಸ್ಫೂರ್ತಿ ಪ್ರಾಯೋಗಿಕತೆ ಎಂದು ಪರಿಗಣಿಸಲಾಗಿದೆ.ಈ ಸ್ವ–ಸಮರ್ಥತೆ ಮತ್ತು ಸ್ವ–ಗೌರವವನ್ನು ಸಾಧಿಸುವುದು ಇದರೊಂದಿಗೆ ಹತ್ತಿರದ ಸಂಬಂಧವನ್ನು ಹೊಂದಿದೆ. ಭಾರತೀಯ ಪರಿಸ್ಥಿತಿಗೆ ಮತ್ತು ಜನ ಸಮುದಾಯಕ್ಕೆ ಯೋಗ್ಯವಾದ ಸ್ವದೇಶಿ ಮತ್ತು ಆರ್ಥಿಕ ನೀತಿಯನ್ನು ಈ ರಾಷ್ಟ್ರ ಅಳವಡಿ ಸಿಕೊಳ್ಳಲೇಬೇಕು ಎಂದು ಬಿಜೆಪಿ ಪ್ರತಿಪಾದಿಸುತ್ತದೆ.**

ಬಳಸಿಕೊಳ್ಳುತ್ತಿರುವಂತೆ ಕಾಣಬಹುದು. ಇನ್ನು ಕೆಲವೊಮ್ಮೆ ಸ್ವದೇಶಿಯು ಜಗತ್ತನ್ನು ಜಯಿಸುವ ಭಾರತದ ಮಾರ್ಗವಾಗಿಯೂ ಕಾಣಬಹುದು. ಇಡೀ ಜಗತ್ತಿಗೆ ಸಂತೋಷ, ಸಮೃದ್ಧಿ ಮತ್ತು ಶಾಂತಿಯನ್ನು ತರುವ ಅಭಿವೃದ್ಧಿಯ ಮಾದರಿಯನ್ನು ಒದಗಿಸುವ ಭರವಸೆಯನ್ನು ಭಾರತವು ಹೊಂದಬೇಕು ಎಂದು ಪ್ರತಿಪಾದಿಸುತ್ತದೆ.

ಸ್ವದೇಶಿ ನೀತಿಯು ಆರ್ಥಿಕ ನೀತಿಯ ಮೇಲೆ ವಿಶಿಷ್ಟವಾದ ಪ್ರಾಧಾನ್ಯತೆಯನ್ನು ನೀಡುತ್ತಿದೆ. ಇದು ಪಾಶ್ಚಿಮಾತ್ಯ ಭೌತಿಕವಾದದ ಮೇಲಿನ ಕುರುಡು ಅವಲಂಬನೆಗೆ ವಿರುದ್ಧವಾಗಿದೆ. ಇದು ಅನುಭೋಗಿ ಸರಕುಗಳ ಮಾರುಕಟ್ಟೆಯ ಬಹುರಾಷ್ಟ್ರೀಯತೆಯ ಆಗಮನವನ್ನು ವಿರೋಧಿಸುತ್ತದೆ. ಉದಾಹರಣೆಗೆ ಸ್ವಾತಂತ್ರ್ಯ ಪೂರ್ವ ಸ್ವದೇಶಿ ಕಾರ್ಯಾಚರಣೆ ಸಂದರ್ಭದಲ್ಲಿ ದತ್ತೋಪಂತ್ ತೆಂಗಾಡಿ ಇವರು ಬಹುರಾಷ್ಟ್ರೀಯ ಉತ್ಪನ್ನಗಳನ್ನು ಬಹಿಷ್ಕರಿಸುವಂತೆ ಎಲ್ಲಾ ಜನರನ್ನು ಪ್ರೇರೇಪಿಸಿದರು.

ಸ್ವದೇಶಿಯ ದ್ವಂದ್ವತೆ:

ಸ್ವದೇಶಿಯ ವಿಶಿಷ್ಟತೆಯನ್ನು ಪಕ್ಷದ ಒಳಗಡೆಯೆ ಗುರುತಿಸಲಾಯಿತು. ಉದಾರೀಕರಣದ ನೀತಿಯನ್ನು ವಿರೋಧಿಸುತ್ತಿದ್ದ ಹಲವಾರು ಆರ್.ಎಸ್.ಎಸ್‌ನ ಪ್ರಬಲ ಕಾರ್ಯಕರ್ತರು ಇದ್ದರು. ಇನ್ನು ಕೆಲವರು ಬಿ.ಜೆ.ಪಿಯ ಈ ಸ್ವದೇಶಿ ಕಲ್ಪನೆ ಬಿಡುವುದನ್ನು ಇಚ್ಚಿಸುತ್ತಿದ್ದರು. ಆದರೆ ಈ ರೀತಿಯ ಭಿನ್ನತೆಗಳು ಸ್ವದೇಶಿಯನ್ನು ಅರ್ಥೈಸಿಕೊಳ್ಳುವಿಕೆಯಲ್ಲಿ ದ್ವಂದ್ವಕ್ಕೆ ದಾರಿ ಮಾಡಿಕೊಡುತ್ತಿದ್ದವು. ಅಲ್ಲದೆ ಇವು ನಿರಾಕರಣೆಗೆ ಮತ್ತು ಗೊಂದಲಕ್ಕೆ ದಾರಿ ಮಾಡಿಕೊಡುತ್ತಿದ್ದವು.

ಸ್ವದೇಶಿ ಮತ್ತು ಆಧುನಿಕತೆಯ ನಡುವೆ ಪಕ್ಷವು ವಿಭಜನೆಯಾಯಿತು. ಬಿ.ಜೆ.ಪಿಯಲ್ಲಿನ ಕೆಲವು ವ್ಯಾಪಾರಿಗಳು ಈ ವಿದೇಶಿ ಸ್ಪರ್ಧೆಯಿಂದಾಗಿ ಹೆದರಿದರು. ಈ ವ್ಯಾಪಾರಿಗಳು ಹೊರಗಿನ ಸ್ಪರ್ಧೆಯನ್ನು ತಡೆಯುವಂತೆ ನೀತಿಯ ಮೇಲೆ ಹೆಚ್ಚಿನ ಒತ್ತಡವನ್ನು ಹೇರತೊಡಗಿದರು. ಹಾಗೂ ಅವರು ಮಾರುಕಟ್ಟೆಯಲ್ಲಿ ಕಳಪೆ ಗುಣಮಟ್ಟದ ವಸ್ತುಗಳನ್ನು ರಾಶಿ ಹಾಕುವ ಸ್ವಾತಂತ್ರ್ಯವನ್ನು ಆನಂದಿಸತೊಡಗಿದ್ದರು. ಅಲ್ಲಿ ಆರ್ಥಿಕತೆಯ ಆಂತರಿಕ ಉದಾರೀಕರಣಕ್ಕೆ ಸಂಬಂಧಿಸಿದಂತೆ ದ್ವಂದ್ವ ಭಾವನೆಗಳಿದ್ದವು. ಕೆಲವರು ನಿರ್ದಿಷ್ಟ ಕ್ಷೇತ್ರಗಳನ್ನು ಹೊರತುಪಡಿಸಿ ಇತರ ಹಲವಾರು ಕ್ಷೇತ್ರಗಳಲಿ ಮುಕ್ತಮಾರುಕಟ್ಟೆ ನೀತಿ ಅನುಸರಿಸಬೇಕು ಎಂಬ ನಂಬಿಕೆಯನ್ನು ಕೆಲವರು ಹೊಂದಿ, ಇನ್ನೂ ಕೆಲವರು ಕೈಗಾರಿಕೆಯ ಮೇಲೆ ಸ್ವಲ್ಪ ಮಟ್ಟಿನ ನಿಯಂತ್ರಣಗಳಾದರೂ ಇರಲೇಬೇಕು ಎಂದು ನಂಬಿದ್ದರು.

ವಿದೇಶಿ ವಿನಿಮಯಕ್ಕೆ ಸಂಬಂಧಿಸಿದಂತೆ ಕೂಡ ಇಲ್ಲಿ ಹಲವಾರು ಭಿನ್ನವಾದ ಅಭಿಪ್ರಾಯಗಳಿವೆ. ಪಕ್ಷದ ದೃಷ್ಟಿಕೋನದಲ್ಲಿ ವಿದೇಶಿ ವಿನಿಮಯವು ಕೇವಲ ಅತ್ಯುನ್ನತ ತಂತ್ರಜ್ಞಾನ ಮತ್ತು ರಫ್ತು–ಪೂರ್ವಾಭಿಮುಖದ ಕ್ಷೇತ್ರಗಳಲ್ಲಿ ಮಾತ್ರ ಬರಬೇಕೆ ಹೊರತು ಖಂಡಿತವಾಗಿಯೂ ಅನುಭೋಗಿ ಸರಕುಗಳ ವಲಯಕ್ಕಲ್ಲ ಎಂಬುದಾಗಿದೆ. ಬಿ.ಜೆ.ಪಿಯು ಭಾರತೀಯ ಆರ್ಥಿಕತೆಯನ್ನು ಚಿಕ್ಕ ಪ್ರಮಾಣದಲ್ಲಿ ಹೊರಗಿನ ಪೈಪೋಟಿಗೆ ತೆರೆದಿಡುವ ಆಶಯವನ್ನು ಹೊಂದಿದೆ.

ಬಿಜೆಪಿ ಸರ್ಕಾರ ಮತ್ತು ಸ್ವದೇಶಿ;

ಹದಿಮೂರು ಪಕ್ಷಗಳ ರಾಷ್ಟ್ರೀಯ ಆಡಳಿತ ಕಾರ್ಯಸೂಚಿಯು ಸ್ವದೇಶಿ ನೀತಿಯನ್ನು ಮುಂದುವರೆಸಿಕೊಂಡು ಹೋಗುವ ಕುರಿತು ಇಚ್ಛೆಯನ್ನು ವ್ಯಕ್ತಪಡಿಸಿತ್ತು. ಆದರೆ ಅಂತಹ ಒಂದು ನೀತಿಯನ್ನು ಆ ಸಮ್ಮಿಶ್ರ ಸರ್ಕಾರದ ಅಂಗ ಪಕ್ಷಗಳು ತಮ್ಮದೇ ಆದ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಗ್ರಹಿಸಿದವು. ಬಿಜೆಪಿಯ ಮಿತ್ರರಲ್ಲೊಬ್ಬರಾದ ಜಾರ್ಜ್ ಫರ್ನಾಂಡಿಸ್ ಪ್ರಕಾರ, "ಸ್ವದೇಶಿ ಎಂದರೆ ಯಾವುದು ಭಾರತದಲ್ಲಿಯೇ ಉತ್ಪಾದನೆಯಾಗಿದೆಯೊ ಅದು, ಭಾರತದವರೇ ಉತ್ಪಾದಿಸಿದ್ದು – ಅಂದರೆ, ಭಾರತದ್ದೇ ಬಂಡವಾಳ, ಭಾರತದ್ದೇ ದುಡಿಮೆ." ಗೋವಿಂದಾಚಾರ್ಯರು ಸ್ವದೇಶಿಯನ್ನು ಇನ್ನೊಂದು ರೀತಿಯಲ್ಲಿ ವ್ಯಾಖ್ಯಾನಿಸುತ್ತಾರೆ.

ಅವರ ಪ್ರಕಾರ, ಗೊಬ್ಬರಕ್ಕೆ ನೀಡುವ ಸಹಾಯಧನವನ್ನು ಗೊಬ್ಬರ ತಯಾರಕರ ಬದಲಾಗಿ ರೈತರಿಗೇ ನೀಡಬೇಕು. ಬಿಜೆಪಿಯ ಇನ್ನೊಬ್ಬ ಮಿತ್ರರಾದ ಮಮತಾ ಬ್ಯಾನರ್ಜಿಯ ಪ್ರಕಾರ ನೆನೆಗುದಿಗೆ ಬಿದ್ದಿರುವ ಪಿ.ಎಸ್.ಯು.ವನ್ನು ಪುನರುಜ್ಜೀವಿತಗೊಳಿಸುವುದು ಮತ್ತು ಆಕೆ ಅದನ್ನು ತಮ್ಮ ರಾಜ್ಯವಾದ ಪಶ್ಚಿಮ ಬಂಗಾಳದಲ್ಲಿ ಕಾರ್ಯಗತಗೊಳಿಸಬೇಕು ಎಂದು ಬಯಸುತ್ತಾರೆ. ಮುರಳಿ ಮನೋಹರ ಜೋಷಿಯವರು ಹೇಳುತ್ತಾರೆ, "ಸ್ವದೇಶಿ ಅಂದರೆ ನನ್ನ ಪ್ರಕಾರ ಟಾಟಾಗಳು, ಗೋದ್ರೇಜ್‌ಗಳು ಕೇವಲ ಕಮಿಶನ್ ಏಜೆಂಟುಗಳ ಮಟ್ಟಕ್ಕೆ ಇಳಿಯಬಾರದು. ಉದಾರೀಕರಣ ನಮ್ಮಲ್ಲಿ ಕೇವಲ ವ್ಯಾಪಾರೀ ಮಳಿಗೆಗಳನ್ನು ಇರುವಂತೆ ಮಾಡಬಾರದು, ಬದಲಾಗಿ ನಾನು ನಮ್ಮ ಉದ್ದಿಮೆಗಳನ್ನೂ ಕಾಪಾಡಿಕೊಳ್ಳಬೇಕು."

ಬಿಜೆಪಿಯ ಈ ಎಲ್ಲ ಹೆಜ್ಜೆಗಳು ಕಾಂಗ್ರೆಸ್ ತಾನು ಅಧಿಕಾರದಲ್ಲಿದ್ದಾಗ ಅಳವಡಿಸಿಕೊಂಡ ಆರ್ಥಿಕ ನೀತಿಗಳನ್ನೇ ಹೋಲುತ್ತಿರುವಂತೆ ಕಾಣುತ್ತವೆ. ಹಾಗಾಗಿ ಬಿಜೆಪಿಯು ಹೇಳಿದ 'ಸ್ವದೇಶಿ ಪರ್ಯಾಯ'ವು ಇನ್ನು



ಯಾವುದೇ ಇತರ ಪಕ್ಷವು ಅಳವಡಿಸಿಕೊಂಡ ಆರ್ಥಿಕ ನೀತಿಗಳಿಗಿಂತ ಭಿನ್ನವಾಗಿಯೇನೂ ಇರಲಿಲ್ಲ. ಅಡ್ವಾಣಿ ಸಹಾ ಉದಾರೀಕರಣ ಮತ್ತು ಜಾಗತೀಕರಣದ ಸತ್ಯವನ್ನು ಅರ್ಥಮಾಡಿಕೊಂಡಿದ್ದಾರೆ. ಅವರೇ ಹೇಳಿದಂತೆ, “ಜಗತ್ತು ಸತ್ಯವಾಗಿ ದಿನದಿಂದ ದಿನಕ್ಕೆ ಸಣ್ಣದಾಗುತ್ತಿದೆ. ಜಗತ್ತಿನೊಡನೆ ಸಾಗದೇ ಯಾವ ದೇಶವೂ ಉದ್ಧಾರವಾಗಲು ಸಾಧ್ಯವಿಲ್ಲ. ಆದರೆ ಎಲ್ಲ ಕಾಲದಲ್ಲಿಯೂ ಇನ್ನೊಬ್ಬರ ಮೇಲೆ ಅವಲಂಬಿತವಾದರೆ ಯಾವ ದೇಶವೂ ಮುಂದೆ ಸಾಗುವುದೂ ಸಾಧ್ಯವಿಲ್ಲ.

ಹಾಗಾಗಿ ನಾವು ರಕ್ಷಣಾತ್ಮಕವಾಗಿ ವರ್ತಿಸುವ ಅಗತ್ಯವಿಲ್ಲ. ಸರ್ಕಾರ ಅತ್ಯಂತ ಉತ್ಕಟವಾಗಿ ಜಾಗತೀಕರಣದ ಕುರಿತು ವಕಾಲತ್ತು ವಹಿಸುವುದು ಅದರ ಅಸಹಾಯಕತೆಯನ್ನೂ, ಅಳುಕನ್ನೂ ತೋರಿಸುತ್ತದೆ. ಜಗತ್ತು ನಮಗೆ ಏನನ್ನಾದರೂ ನೀಡುತ್ತದೆ ಎಂದಾದರೆ ನಾವೂ ಸಹಾ ಜಗತ್ತಿಗೆ ಏನನ್ನಾದರೂ ನೀಡಲು ಶಕ್ತರಿದ್ದೇವೆ. ಏನನ್ನಾದರೂ ಸಾಧನೆ ಮಾಡುವುದಿದ್ದರೆ ನಾವು ಭಾರತದಲ್ಲಿಯೇ ಏಕೆ ಮಾಡಬಾರದು? ನಾವು ಜಗತ್ತಿನಿಂದ ಮುಚ್ಚಿಕೊಂಡಿರಲು ಸಾಧ್ಯವಿಲ್ಲ, ಹಾಗೆಯೇ ಜಗತ್ತು ನಮ್ಮನ್ನು ಮುಳುಗಿಸಿ ಬಿಡದಂತೆಯೂ ಎಚ್ಚರ ವಹಿಸಬೇಕು.”

ಈ ಎಲ್ಲ ವ್ಯಾಖ್ಯಾನಗಳೂ ‘ಸ್ವದೇಶಿ’ ಅನುಸರಿಸಲು ಅತ್ಯಂತ ಕಷ್ಟಕರವಾದ ಅಜೆಂಡಾ ಎಂಬುದನ್ನು ಹೇಳುತ್ತದೆ. ಬಿಜೆಪಿ ತಾನು 1998ರಲ್ಲಿ ಅಧಿಕಾರಕ್ಕೆ ಬಂದು ಸಮ್ಮಿಶ್ರ ಸರ್ಕಾರವನ್ನು ನಡೆಸಲು ಹೊರಟಾಗ ತನ್ನ ಸ್ವದೇಶಿ ಅಜೆಂಡಾವನ್ನು ಸ್ವಲ್ಪ ಮೆದುವಾಗಿಸಬೇಕಾಯಿತು. ಅಧಿಕಾರಕ್ಕೆ ಬಂದ ನಂತರ ಸ್ವದೇಶಿಯ ಕುರಿತಾದ ಬಿಜೆಪಿಯ ಬದ್ಧತೆಯು ಪರೀಕ್ಷೆಗೆ ಈಡಾಯಿತು. ಅಧಿಕಾರದಲ್ಲಿ ಅನುಸರಿಸಿದ ನೀತಿಗಳು ಬಿಜೆಪಿಗೆ ಸ್ವದೇಶಿ ಕಲ್ಪನೆಯಲ್ಲಿ ಸ್ಪಷ್ಟತೆ ಇಲ್ಲ ಎಂಬುದನ್ನು ಸಾಬೀತು ಪಡಿಸಿದೆ. ಉದಾಹರಣೆಗೆ, ಬಿಜೆಪಿ ಸರ್ಕಾರವು ಆಸ್ಟ್ರೇಲಿಯಾದಿಂದ ಗೋಧಿ ಮತ್ತು ಜೈವಿಕ ತಂತ್ರಜ್ಞಾನದಿಂದ ಮಾಡಿದ ಸೋಯಾ ಬೀನ್‌ನ ಆಮದನ್ನು ಮುಂದುವರೆಸಿತು. ವಿದೇಶೀ ನೇರ ಬಂಡವಾಳ ಹಾಗೂ ಹಣಕಾಸು ವಲಯದ ಉದಾರೀಕರಣದ ಕುರಿತಂತೆ ವಿತ್ತ ಸಚಿವ ಯಶವಂತ ಸಿನ್ಹಾ ಅವರು, ಸ್ವದೇಶಿ ಜಾಗತೀಕರಣದ ವಿರೋಧಿಯಲ್ಲ ಮತ್ತು ಸುಧಾರಣೆಗಳನ್ನು ಚುರುಕುಗೊಳಿಸಲಾಗುತ್ತದೆ ಎಂದು ಹೇಳಿದ್ದಾರೆ.

ಇದು ಸ್ವದೇಶಿ ಧ್ಯೇಯಕ್ಕೆ ಸಂಪೂರ್ಣ ವಿರೋಧವಾಗಿತ್ತು. ಬಿಜೆಪಿ ಚುನಾವಣೆಯಲ್ಲಿನ ಸ್ಲೋಗನ್, ‘ಕಂಪ್ಯೂಟರ್ ಚಿಪ್ಸ್, ನಾಟ್ ಪೊಟ್ಯಾಟೋ ಚಿಪ್ಸ್’ ಎಂದು ಆಗಿತ್ತು. ಆದರೆ ನಂತರದಲ್ಲಿ ಅದು ಜಾರಿಗೆ ಬರಲಿಲ್ಲ. ಆದ್ಯವಲ್ಲದ ವಲಯಗಳನ್ನು ಆದ್ಯ ವಲಯಗಳನ್ನಾಗಿ ಪರಿವರ್ತಿಸಲಾಯಿತು. ಹಾಗಾಗಿ ಸ್ವದೇಶಿ ಕೇವಲ ವಿನಿಮಯಕ್ಕೆ ಬಳಕೆಯಾಯಿತು. ಮತ್ತು ಅದನ್ನು ಸಮರ್ಥಿಸಿಕೊಳ್ಳಲು, ಸ್ವದೇಶಿ– ‘ಸ್ವದೇಶಿ ವ್ಯವಹಾರ ಸಿದ್ಧಾಂತ’ ಎಂಬುದನ್ನು ಹೆಚ್ಚಾಗಿ ಬಳಸಿಕೊಳ್ಳಲಾಯಿತು. “ಕಳೆದ ಕೆಲವು ವಾರಗಳ ದಾಖಲೆಗಳನ್ನು ನೋಡಿದಾಗ ಬಿಜೆಪಿ, ಸ್ವದೇಶಿ ಸ್ಲೋಗನ್ ಅನ್ನು ಕೇವಲ ಚುನಾವಣೆಯಲ್ಲಿ ಗೆಲ್ಲಲು ಬಳಸಿಕೊಳ್ಳಲಾಯಿತೇ ಹೊರತೂ ಅಧಿಕೃತ ಆದೇಶ ಹೊರಡಿಸಿ ಅದನ್ನು ನಿಜವಾಗಿಯೂ ಜಾರಿಗೆ ತರುವ ಆಸಕ್ತಿ ಅದಕ್ಕೆ ಇಲ್ಲ ಎನ್ನುವುದು ಅರಿವಾಗುತ್ತದೆ. ಅಲ್ಲದೇ ಅದು ಸ್ವದೇಶೀ–ವಿರೋಧಿನೀತಿಗಳನ್ನು ಜಾರಿಗೆ ತರಲು ಅವಸರ ಮಾಡುತ್ತಿರುವುದನ್ನು ನೋಡಿದಾಗ, ಬಿಜೆಪಿಗೆ ಸ್ವದೇಶಿ ನೀತಿಯ ಕುರಿತು ಸರಿಯಾಗಿ ಮನದಟ್ಟಾಗಿಲ್ಲ ಎಂಬುದು ಜನರಿಗೆ ತಿಳಿಯುವಂತಾಯಿತು ಎಂಬುದನ್ನು ಗುರುತಿಸಲಾಯಿತು.

ಸ್ವದೇಶೀ ಅಜೆಂಡಾವನ್ನು ಮೃದುಗೊಳಿಸಲಾಯಿತಾದರೂ, ಅದಕ್ಕೆ ಸಂಬಂಧಪಟ್ಟಂತೆ ಕೆಲವು ವಿಷಯಗಳ ಕುರಿತು ಆ ಪಕ್ಷದಲ್ಲಿ ಸ್ಪಷ್ಟ ನಿಲುವುಗಳಿದ್ದವು. ಉದಾಹರಣೆಗೆ, ರಾಷ್ಟ್ರೀಕೃತ ಬ್ಯಾಂಕುಗಳು ತಮ್ಮ ಷೇರಿನ ಒಂದು ಭಾಗವನ್ನು ಸಾರ್ವಜನಿಕರಿಗೆ ಹಾಗೂ ಉದ್ಯೋಗಿಗಳಿಗೆ ನೀಡಬೇಕು ಎಂದು ಬಿಜೆಪಿ ಬಯಸಿತ್ತು. ಜೊತೆಗೆ, ಇನ್ನು ಮುಂದೆ ರಾಷ್ಟ್ರೀಕರಣ ಮಾಡಬಾರದು ಮತ್ತು ಭವಿಷ್ಯದಲ್ಲಿ ಖಾಸಗಿ ವಲಯಕ್ಕೆ ಬ್ಯಾಂಕಿಂಗ್ ವಲಯವನ್ನು ಪ್ರವೇಶಿಸಲು ಉತ್ತೇಜಿಸಬೇಕು ಎಂಬ ನರಸಿಂಹನ್ ಸಮಿತಿ ಸಲಹೆಗಳ ಕುರಿತು ತಮ್ಮ ಸಮರ್ಥನೆಯನ್ನು ವ್ಯಕ್ತಪಡಿಸಿತ್ತು.

ಬಿಜೆಪಿಯ ಈ ಎಲ್ಲ ಹೆಜ್ಜೆಗಳು ಕಾಂಗ್ರೆಸ್ ತಾನು ಅಧಿಕಾರದಲ್ಲಿದ್ದಾಗ ಅಳವಡಿಸಿಕೊಂಡ ಆರ್ಥಿಕ ನೀತಿಗಳನ್ನೇ ಹೋಲುತ್ತಿರುವಂತೆ ಕಾಣುತ್ತವೆ. ಹಾಗಾಗಿ ಬಿಜೆಪಿಯು ಹೇಳಿದ ‘ಸ್ವದೇಶಿ ಪರ್ಯಾಯ’ವು ಇನ್ನು ಯಾವುದೇ ಇತರ ಪಕ್ಷವು ಅಳವಡಿಸಿಕೊಂಡ ಆರ್ಥಿಕ ನೀತಿಗಳಿಗಿಂತ ಭಿನ್ನವಾಗಿಯೇನೂ ಇರಲಿಲ್ಲ. ಅಡ್ವಾಣಿ ಸಹಾ ಉದಾರೀಕರಣ ಮತ್ತು ಜಾಗತೀಕರಣದ ಸತ್ಯವನ್ನು ಅರ್ಥಮಾಡಿಕೊಂಡಿದ್ದಾರೆ. ಅವರೇ ಹೇಳಿದಂತೆ, “ಜಗತ್ತು ಸತ್ಯವಾಗಿ ದಿನದಿಂದ ದಿನಕ್ಕೆ ಸಣ್ಣದಾಗುತ್ತಿದೆ. ಜಗತ್ತಿನೊಡನೆ ಸಾಗದೇ ಯಾವ ದೇಶವೂ ಉದ್ಧಾರವಾಗಲು ಸಾಧ್ಯವಿಲ್ಲ.ಹಾಗಾಗಿ ನಾವು ರಕ್ಷಣಾತ್ಮಕವಾಗಿ ವರ್ತಿಸುವ ಅಗತ್ಯವಿಲ್ಲ. ಸರ್ಕಾರ ಅತ್ಯಂತ ಉತ್ಕಟವಾಗಿ ಜಾಗತೀಕರಣದ ಕುರಿತು ವಕಾಲತ್ತು ವಹಿಸುವುದು ಅದರ ಅಸಹಾಯಕತೆಯನ್ನೂ, ಅಳುಕನ್ನೂ ತೋರಿಸುತ್ತದೆ.

ಈ ಪಕ್ಷ ರಾಷ್ಟ್ರೀಕೃತ ಬ್ಯಾಂಕ್‌ಗಳ ನಡುವಿನ ಸ್ಪರ್ಧೆಯನ್ನು ತೀವ್ರಗೊಳಿಸಿತು. ಸಾಮಾಜಿಕ ಉದ್ದೇಶಗಳನ್ನು ಪೂರೈಸುವಲ್ಲಿ ವಿದೇಶೀ ಬ್ಯಾಂಕುಗಳು ಭಾರತೀಯ ಬ್ಯಾಂಕುಗಳ ರೀತಿಯಲ್ಲಿ ವ್ಯವಹರಿಸಬೇಕು ಎಂಬುದು ಅದರ ಬಯಕೆಯಾಗಿತ್ತು. ಬಿಜೆಪಿಯು ಷೇರು, ಖಾಸಗಿ ವಲಯದಲ್ಲಿನ ಬಂಡವಾಳ ಹಿಂತೆಗೆದುಕೊಳ್ಳುವಿಕೆಗೆ ವಿರೋಧಿಯಾಗಿರಲಿಲ್ಲ. ಈ ಹಣದಿಂದ ಸಾಲವನ್ನು ಕಡಿಮೆ ಮಾಡಿಕೊಳ್ಳಲು ಬಯಸಿತ್ತು. ಕೊರತೆಯ ಅರ್ಥವ್ಯವಸ್ಥೆಯ ಕುರಿತಂತೆಯೂ ಬಿಜೆಪಿ ತೀವ್ರವಾದ ಕಡಿತವನ್ನು ಮಾಡಬೇಕೆಂದು ಸಲಹೆ ಮಾಡಿತ್ತು. ಅಷ್ಟೇ ಅಲ್ಲದೆ ಈ ಪಕ್ಷವು ಅನೇಕ ಸಹಾಯಧನಗಳ ಮೊಟಕುಗೊಳಿಸುವಿಕೆಯನ್ನು ವಿರೋಧಿಸಿತ್ತು.

ಅನಿವಾಸಿ ಭಾರತೀಯರ ಹೂಡಿಕೆಯನ್ನು ಇದು ಬಹಳಷ್ಟು ಉತ್ಸಾಹದಿಂದ ಸ್ವಾಗತಿಸಿತ್ತು. ಸರ್ಕಾರದ ನೀತಿಗಳ ಕುರಿತು ಜಗದೀಶ್ ಶೆಟ್ಟಿಗಾರ್ ಹೀಗೆ ಹೇಳುತ್ತಾರೆ, “ಎಂಎನ್‌ಸಿಗಳು ದೇಶದಲ್ಲಿ ಹೂಡಿಕೆ ಮಾಡಲು ವಿದೇಶೀ ವಿಮೆಯನ್ನು ಒಂದು ನಿರ್ಬಂಧವಾಗಿಸಿದ್ದರಿಂದಾಗಿ 1991ರಲ್ಲಿ ಉಂಟಾದ ‘ಪಾವತಿ ಬಾಕಿ ಬಿಕ್ಕಟ್ಟು’ ಮತ್ತೆ ಉಂಟಾಗಬಾರದೆಂದು ಮತ್ತು ವ್ಯಾಪಾರದಲ್ಲಿ ಆದಾಯಕ್ಕಿಂತ ಖರ್ಚು ಹೆಚ್ಚು ಬೆಳೆಯುತ್ತಿರುವುದರಿಂದಾಗಿ ಸರ್ಕಾರಕ್ಕೆ ವಿಮೆ ಕ್ಷೇತ್ರದಲ್ಲಿ ವಿದೇಶಿ ಬಂಡವಾಳ ಹೂಡುವಿಕೆಗೆ ಅವಕಾಶ ನೀಡುವುದು ಅನಿವಾರ್ಯವಾಯಿತು.

ಒತ್ತಡ ತರುವ ಗುಂಪಾಗಿ ಸ್ವದೇಶಿ ಜಾಗರಣ್ ಮಂಚ್ (ಎಸ್‌ಜೆಎಮ್): ಬಿಜೆಪಿಯ ಸ್ವದೇಶಿ ನೀತಿಯ ಜಾರಿಯನ್ನು ಅದರ ಸಹೋದರ ಸಂಸ್ಥೆಯಾದ ಸ್ವದೇಶಿ ಜಾಗರಣ್ ಮಂಚ್ ಮೆಚ್ಚಲಿಲ್ಲ. ಬಿಜೆಪಿಯು ಪಟ್ಟಭದ್ರ–ಹಿತಾಸಕ್ತಿಗಳಿಗೆ ಮತ್ತು ವ್ಯವಹಾರ ಲಾಬಿ ಮಾಡುವವರಿಗೆ ಶರಣಾಗುವುದು ಎಸ್‌ಜೆಎಮ್‌ಗೆ ಇಷ್ಟವಾಗಲಿಲ್ಲ. ಸರ್ಕಾರವು ತನ್ನ ಸ್ವದೇಶಿ–ವಿರೋಧಿ ಗುಣವನ್ನು ತೆಗೆದುಹಾಕುವುದಕ್ಕಾಗಿ ವ್ಯಾಪಾರ ಮತ್ತು ಆರ್ಥಿಕ ಸಲಹಾ ಸಮಿತಿಗಳನ್ನು ಪುನಾರಚನೆ ಮಾಡಬೇಕೆಂದು ಎಸ್‌ಜೆಎಮ್ ಒತ್ತಾಯಿಸಿತು. ರಾಷ್ಟ್ರದ ಹಿತಾಸಕ್ತಿಯನ್ನು ಕಡೆಗಣಿಸಿ ಅಧಿಕಾರಶಾಹಿಗೆ ನೀಡಿರುವ ಮನ್ನಣೆ ಮತ್ತು ಪ್ರಚಾರವನ್ನು ರದ್ದುಗೊಳಿಸಬೇಕೆಂದು ಸರ್ಕಾರವನ್ನು ಕೇಳಿಕೊಂಡಿತು.

ವಿಎಚ್‌ಪಿ ಹಾಗೂ ಎಸ್‌ಜೆಎಮ್ ಹೇಳುವ ಪ್ರಕಾರ ಬಿಜೆಪಿ ಹೆಚ್ಚು ಹೆಚ್ಚಾಗಿ ಸ್ವದೇಶಿ ನೀತಿಯಿಂದ ದೂರ ಸಾಗುತ್ತಿದೆ ಎಂದು ಕಾಣುತ್ತದೆ. ಸರ್ಕಾರವು ರೂಪಿಸಿದ ವಿಮಾ ಪಾಲಿಸಿಯಲ್ಲಿ ಸ್ವದೇಶಿ ಸ್ಪಂದನೆ ಕಡಿಮೆಯಿದ್ದು, ಅದರಲ್ಲಿ ತರ್ಕಾಧಾರಿತವಾದ ತತ್ವಗಳು ಹೆಚ್ಚಾಗಿ ಕೆಲಸ ಮಾಡಿವೆ.

ಸ್ವದೇಶಿ ಎಂಬ ತತ್ವವು ಬಿಜೆಪಿಯು ಪ್ರತಿಪಾದಿಸಿದ ಆರ್ಥಿಕ ರಾಷ್ಟ್ರೀಯತೆ ಎಂಬ ಪದದ ಭಾಗವಾಗಿದ್ದು, ಇದು ಗಾಂಧೀವಾದಿ ಸ್ವದೇಶಿಯಲ್ಲದೆ, ಪಾಶ್ಚಾತ್ಯೀಕರಣವನ್ನು ತಿರಸ್ಕರಿಸುವ ಆದರೆ ಸಾಂಸ್ಕೃತಿಕ ಪ್ರಾಶಸ್ತ್ಯಕ್ಕೆ ಸರಿಯೆನಿಸುವ ಅಭಿವೃದ್ಧಿಗಳಿಗೆ ಅವಕಾಶ ನೀಡುವ ಜಪಾನಿನ ಮಾದರಿಯ ಆರ್ಥಿಕ ರಾಷ್ಟ್ರೀಯತೆಯನ್ನು ಬಿಂಬಿಸುತ್ತದೆ. ಇದು ಭಾರತದ ಆಂತರಿಕವಾದ ಸಾಂಸ್ಕೃತಿಕ ಹಾಗೂ ಆರ್ಥಿಕ ಸಾಮರ್ಥ್ಯಗಳ ಮೇಲೆ ಹೆಚ್ಚಿನ ಒತ್ತನ್ನು ನೀಡುತ್ತದೆ. ಅಂತಹ ಸಾಂಸ್ಕೃತಿಕ ದೃಢತೆಯು

ರಾಷ್ಟ್ರೀಯ ಆರ್ಥಿಕತೆಗೆ ಅಗತ್ಯ ತಿರುವನ್ನು ನೀಡಿ ಅದು ಸ್ವತಂತ್ರವಾಗಿ ಬೆಳೆಯುವಂತೆ ಮಾಡುತ್ತದೆ ಎಂದು ಅದು ನಂಬುತ್ತದೆ.

ಆರ್ಥಿಕ ರಾಷ್ಟ್ರೀಯತೆ ಎಂದರೆ ಹೊರಗಿನವರು ತಮ್ಮ ಮೇಲೆ ಅಧಿಕಾರ ಚಲಾಯಿಸುವುದನ್ನು ಭಾರತವು ತಿರಸ್ಕರಿಸುವುದು ಎಂದು ಬಿಜೆಪಿ ಸಿದ್ಧಾಂತವಾದಿಗಳು ವಾದಿಸಿದರು. ಭಾರತದ ರಾಷ್ಟ್ರೀಯ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುವವರೆಗೂ ವಿದೇಶೀ ಹೂಡಿಕೆದಾರರಿಗೆ ಯಾವತ್ತೂ ಸ್ವಾಗತವಿದೆ. ಅದರ ಒಬ್ಬ ಪ್ರಮುಖ ರಾಜತಾಂತ್ರಿಕ ವ್ಯಾಖ್ಯಾನಕಾರರ ಪ್ರಕಾರ, "ಭಾರತವೆಂದರೆ ಒಂದು ಮಾರುಕಟ್ಟೆಯಲ್ಲ, ಇದೊಂದು ದೇಶ. ವಿದೇಶಿಯರು ಭಾರತೀಯ ಮಾರುಕಟ್ಟೆಯನ್ನು ನಿಯಂತ್ರಿಸುವುದನ್ನು ನಾನು ಇಷ್ಟಪಡುವುದಿಲ್ಲ". ಏಕೆಂದರೆ ಮಾರುಕಟ್ಟೆ ಮತ್ತು ದೇಶ ಇವೆರಡರ ನಡುವಿನ ಗೆರೆ ಅತ್ಯಂತ ತೆಳುವಾಗಿದೆ ಎಂದಿದ್ದಾರೆ.

ಆರ್.ಎಸ್.ಎಸ್. ನ ಬತ್ತಳಿಕೆಯಲ್ಲಿರುವ ಇತರ ಪರಿಕಲ್ಪನೆಗಳಂತೆ ಸ್ವದೇಶಿ ಸಹಾ ಅನೇಕ ಪ್ರಾಮುಖ್ಯತೆಗಳನ್ನು ಮತ್ತು ಅರ್ಥಗಳನ್ನು ಹೊಂದಿದೆ. ಸ್ವದೇಶಿಯ ನೀಲನಕ್ಷೆಯನ್ನು ಬೇಕಿದ್ದರೆ ಹಿಂದೂ ಧರ್ಮಗ್ರಂಥಗಳಿಂದ ಆರಿಸಬಹುದಾಗಿದೆ ಎಂದು ಕೆಲವರು ಭಾವಿಸುತ್ತಾರೆ. ಉದಾಹರಣೆಗೆ, ಹಿಂದೂ ಧರ್ಮ ಸಂಸ್ಕೃತಿ ಮಂಡಲ ಎಂಬ ನಾಗಪುರದ ದಂಟೋಲಾದಲ್ಲಿನ ಆರ್.ಎಸ್.ಎಸ್. ನ ಶಾಖೆ "ಪ್ರಿನ್ಸಿಪಲ್ಸ್ ಅಂಡ್ ಪ್ರೋಗ್ರಾಮ್ಸ್ ಆಫ್ ಸ್ವದೇಶಿ ಎಕಾನಮಿ" ಎಂಬ ಕಿರುಹೊತ್ತಿಗೆಯನ್ನು ಪ್ರಕಟಿಸಿತು.

ಬಾಳಾಸಾಹೇಬ್ ಡಿಯೋರಾಸ್ ಅವರು ಅದನ್ನು ಬಿಡುಗಡೆ ಮಾಡಿದರು. ಅದರಲ್ಲಿ ಭಾರತೀಯರಿಗೂ ವೇದಗಳು ಆದರ್ಶ ಆರ್ಥಿಕತೆಯೆಂದು ಸ್ತುತಿಸಲಾಗಿದೆ. ಭಾರತದ ಆರ್ಥಿಕತೆಯ ಸಂದರ್ಭದಲ್ಲಿ, ಮಾರ್ಕ್ಸ್ ಆರ್ಥಿಕತೆಯನ್ನು ಧಾರ್ಮಿಕತೆಯಿಂದ ಬೇರ್ಪಡಿಸಿರುವುದಕ್ಕೆ ವಿರುದ್ಧವಾಗಿ, ಆರ್ಥಿಕತೆಯು ಧಾರ್ಮಿಕತೆಯ ಆಧಾರದಲ್ಲಿ ರೂಪುಗೊಳ್ಳಬೇಕು ಎಂದು ಸಲಹೆ ನೀಡುತ್ತದೆ. ಅದು ಬಹುರಾಷ್ಟ್ರೀಯ ಸಂಸ್ಥೆಗಳನ್ನು ಏಕಸ್ವಾಮ್ಯ ಬಂಡವಾಳಶಾಹಿಗಳೆಂದೂ ಮತ್ತು ಭಾರತೀಯ ಮೊನೊಪೊಲಿ ಹೌಸ್‌ಗಳನ್ನು ಮಾರುಕಟ್ಟೆ ಆರ್ಥಿಕತೆ ಎಂದೂ ಪರಿಗಣಿಸುತ್ತದೆ. ಅತುಲ್ ಮೆಹ್ತಾ ಹೇಳಿದಂತೆ, "ಆ ಕಿರುಹೊತ್ತಿಗೆಯನ್ನು ಸಾಲುಗಳ ಮಧ್ಯೆ ಇರುವ ವಿಷಯಕ್ಕಾಗಿ ಓದಬೇಕು. ಅದರಲ್ಲಿ ಸ್ವದೇಶಿಯ ನಂತರ ಹಿಂದೂ ಆರ್ಥಿಕ ವ್ಯವಸ್ಥೆಯನ್ನು ರೂಪಿಸುವಂತೆ ಕಾಣುತ್ತಿದೆ."

ಸಾಮಾಜಿಕ ಚಿಂತನೆಯನ್ನು ಪ್ರಭಾವಿಸುವಿಕೆಯ ಹಂತ: (1996 ರಿಂದ) – ಮೊದಲ ಹಂತದಲ್ಲಿ ಬಿಜೆಪಿ ಪಕ್ಷವು ತನ್ನ ಚುನಾವಣಾ ಪ್ರಚಾರದಲ್ಲಿ ಮಂದಿರ ಅಥವಾ ಮಂಡಲಗಳನ್ನು ಕಾರ್ಯಕ್ರಮಗಳನ್ನಾಗಿ ಬಳಸಿ, 1996 ರ ಚುನಾವಣೆಯ ಪ್ರಚಾರಕ್ಕಾಗಿ ಅದು ಹೊಸ ಹಾಗೂ ಪರಿಣಾಮಕಾರಿ ವಿಷಯಗಳಿಗಾಗಿ ಕತ್ತಲಲ್ಲಿ ತಡಕಾಡುತ್ತಿತ್ತು. ಅದು ಹಿಂದೂತ್ವವನ್ನು ಬಿಟ್ಟುಕೊಡದಿದ್ದರೂ, ದೇಶದ ಎಲ್ಲ ಸ್ತರದ ಜನರಿಗೂ, ಅದರಲ್ಲೂ ದಲಿತರಿಗೆ ಇಷ್ಟವಾಗುವಂತೆ ಪಕ್ಷವನ್ನು ವಿಶಾಲ ತಳಹದಿಯುಳ್ಳದ್ದಾಗಿ ರೂಪಿಸಿಕೊಳ್ಳುವುದು ಅದರ ಮುಖ್ಯ ಕಾಳಜಿಯಾಗಿತ್ತು. ಆ ಕಾರಣಕ್ಕಾಗಿಯೇ ಅದು ಮಂಡಲ್ ಸಮಿತಿಯ ಸಲಹೆಗಳನ್ನು ಜಾರಿಗೆ ತರುವ ಮಾತನಾಡಿತು. ಅಲ್ಲದೆ, ಅದು ಉತ್ತರ ಪ್ರದೇಶದಲ್ಲಿ ಬಿಎಸ್‌ಪಿಗೆ ಬೆಂಬಲವನ್ನು ಸೂಚಿಸಿತು ಬಿಹಾರದಲ್ಲಿ ಸಮತಾ ಪಕ್ಷದೊಂದಿಗೆ ಕೈಜೋಡಿಸಿದ್ದು, ಬಿಜೆಪಿ ಕೇವಲ ಮೇಲ್ವರ್ಗದ ಪಕ್ಷವಲ್ಲ ಎಂಬುದನ್ನು ದಲಿತರಿಗೆ ಮನವರಿಕೆ ಮಾಡಿಕೊಡುವ ಪ್ರಯತ್ನವಾಗಿತ್ತು.

ಸಾಂಸ್ಕೃತಿಕ ಪರಂಪರೆ ಅಥವಾ ರಾಷ್ಟ್ರೀಯವಾದದ ಆಧಾರದಲ್ಲಿ ಯಾವುದೇ ವಿಶ್ಲೇಷಣೆ ನೀಡಿದರೂ, ಹಿಂದೂತ್ವಕ್ಕೆ ಸೀಮಿತ ಪ್ರಸ್ತುತತೆ ಇದೆ. ಹೊಸ ತಲೆಮಾರಿನ ವಿಜ್ಞಾನ ಹಾಗೂ ತಂತ್ರಜ್ಞಾನದ ತಾಳಕ್ಕೆ ಹೆಜ್ಜೆ ಹಾಕುತ್ತಿರುವ ಯುವ ಜನಾಂಗವು ಹಿಂದುತ್ವದ ಬಗ್ಗೆ ಹೆಚ್ಚು ಆಕರ್ಷಿತವಾಗುತ್ತಿಲ್ಲ. ಮಂದಿರ ನಿರ್ಮಾಣವಾಗಲಿ ಅಥವಾ ಅಡ್ವಾಣಿ ಹೊಸತಾಗಿ ಪ್ರತಿಪಾದಿಸುತ್ತಿರುವ 'ಒಳಗೊಳ್ಳುವಿಕೆ ತತ್ವವಾಗಲಿ' ಹೊಸ ಪೀಳಿಗೆಗೆ ಮುಖ್ಯವಾಗುತ್ತಿಲ್ಲ. ಅವರೆಲ್ಲ ಹಿಂದೂ ಆಗಿದ್ದಾರೆ. ಜನಸಂಖ್ಯೆಯಲ್ಲಿ ತಾವೇ ಶೇ80 ರಷ್ಟಿರುವಾಗ ತಮಗೇತರ ಭಯ ಎನ್ನುವ ವಿಶ್ವಾಸ ಅವರಲ್ಲಿ ಇದೆ. ಮತಗಳಿಸುವ ಏಕೈಕ ಉದ್ದೇಶದಿಂದ ಕೃತಕವಾಗಿ ಸೃಷ್ಟಿಸಿದ ಭಯದ ನೆರವು ಪಡೆಯಲು ಬಿಜೆಪಿ ಹವಣಿಸುತ್ತಿದೆ. ಆದರೆ ಇದರಿಂದ ಲಾಭಕ್ಕಿಂತ ನಷ್ಟವೇ ಹೆಚ್ಚು. ಆರ್.ಎಸ್.ಎಸ್ ಜೊತೆ ಒಂದಾಗಿ ಹೋಗಿರುವ ಪಕ್ಷಕ್ಕೆ ತನ್ನದೇ ಆದ ಪ್ರತ್ಯೇಕ ಅಸ್ತಿತ್ವವೇ ಇಲ್ಲದಂತಾಗಿದೆ.

ಸಾಮಾಜಿಕ ಚಿಂತನಾಕ್ರಮವನ್ನು ಬದಲಾಯಿಸುವ ಬಿಜೆಪಿಯ ಈ ಕ್ರಮವು ದಲಿತರನ್ನು ಮತ್ತು ಮಧ್ಯಮ ಜಾತಿಯವರನ್ನು ತಮ್ಮ ಪಕ್ಷದೆಡೆಗೆ ಸೆಳೆಯುವ ಮೂಲಕ ತಮ್ಮ ತಳಪಾಯವನ್ನು ವಿಸ್ತರಿಸಿಕೊಳ್ಳುವುದಾಗಿತ್ತು. ಈ ಸಾಮಾಜಿಕ ಚಿಂತನಾಕ್ರಮವನ್ನು ಬದಲಾಯಿಸುವ ಹಂತದ ಕರ್ತೃವಾದ ಕೆ.ಎನ್.ಗೋವಿಂದಾಚಾರ್ಯ ಅವರು ಬಿಜೆಪಿಯ ಚಾಲ್, ಚೆಹರಾ ಮತ್ತು ಚರಿತ್ರೆಯನ್ನು ಬದಲಾಯಿಸಿಕೊಳ್ಳುವುದಾಗಿತ್ತು.

ಬಿಜೆಪಿಯು ತನ್ನ ಸಿದ್ಧಾಂತದಲ್ಲಿ ಒಬಿಸಿಗೆ ಮೀಸಲು ಮತ್ತು ಮಂಡಲ್ ಆಯೋಗದ ಸೂಚನೆಗಳನ್ನು ಜಾರಿಗೆ ತರುವುದರ ಕುರಿತು ಒತ್ತು ನೀಡಿತು. 1993 ರಲ್ಲಿ ತನ್ನ ರಾಷ್ಟ್ರೀಯ ಮಂಡಳಿ ಸಮ್ಮೇಳನದಲ್ಲಿ ಅದು ಹಿಂದುಳಿದ ವರ್ಗದವರಿಗೆ ಮತ್ತು ಪರಿಶಿಷ್ಟ ಪಂಗಡದವರಿಗೆ 27% ಮೀಸಲಾತಿಯನ್ನು ಮತ್ತು ಆರ್ಥಿಕವಾಗಿ ಹಿಂದುಳಿದ ಎಲ್ಲಾ ಜಾತಿಯವರಿಗೆ 10% ಮೀಸಲಾತಿಯನ್ನು ನೀಡುವುದಾಗಿ ಒಪ್ಪಿ ಅಳವಡಿಸಿಕೊಂಡಿತು. ಅಲ್ಪಸಂಖ್ಯಾತರಿಗೂ ಬಹುಸಂಖ್ಯಾತರಿಗೆ ಸಮಾನವಾದ ಸುರಕ್ಷತೆ, ಸಾಮಾಜಿಕ ನ್ಯಾಯ ಮತ್ತು ಸಮಾನತೆಯನ್ನು ಒದಗಿಸಿಕೊಡುವುದಾಗಿ ಭರವಸೆ ನೀಡಲಾಯಿತು.

ಆದರೆ ಮೀಸಲಾತಿಯ ಕುರಿತು ಪಕ್ಷದಲ್ಲಿಯೇ ಭಿನ್ನಾಭಿಪ್ರಾಯ ಶುರುವಾಯಿತು. ಮುಂದುವರಿದ ಜಾತಿಯವರು ವಿರೋಧಿಸಿ, ಪ.ಜಾ., ಪ.ಪಂ. ಮತ್ತು ಇತರ ಹಿಂದುಳಿದ ಜಾತಿಯವರು ಮಾತ್ರ ಮಂಡಲ್ ಶಿಫಾರಸುಗಳನ್ನು ಬೆಂಬಲಿಸುವಂತಾಯಿತು.

ಹಾಗಾಗಿ, ಸಾಮಾಜಿಕ ಚಿಂತನೆಯನ್ನು ಪ್ರಭಾವಿಸುವಿಕೆಯ ಹಂತವು ಕೇವಲ ಒಂದು ಕಾರ್ಯನೀತಿಯ ವಿಷಯವೇ ಹೊರತು ಆಳವಾದ ಮನೋನಿಶ್ಚಯವೇನೂ ಆಗಿರಲಿಲ್ಲ. ಹಾಗಾಗಿ ಆ ಪಕ್ಷವು ಹೆಚ್ಚಾಗಿ ಸಾಂಕೇತಿಕತೆಯನ್ನು ಅವಲಂಬಿಸಿತು. ಬಿಜೆಪಿ ಪಕ್ಷವು ಅಂಬೇಡ್ಕರ್ ಬೌದ್ಧ ಧರ್ಮಕ್ಕೆ ಸೇರಿದ್ದನ್ನು ಹಿಂದೂ ತತ್ವಗಳ ಮೂಲಕ ವ್ಯಾಖ್ಯಾನಿಸಲು ಪ್ರಯತ್ನಿಸಿತು. ಇದನ್ನು ಸೈದ್ಧಾಂತಿಕ ಮತ್ತು ಸಾಂಘಿಕ ಮಟ್ಟಗಳಲ್ಲಿ ಮಾಡಲಾಯಿತು. ತನ್ನ ಯೋಜನಾ ನೀತಿಯ ಅನುಸಾರವಾಗಿ ಬಿಜೆಪಿ–ಎಬಿವಿಪಿ ಜೊತೆಗೂಡಿ ದಲಿತರು ಮತ್ತು ಒಬಿಸಿಗೆ ಸೇರಿದ ಜನರನ್ನು ತನ್ನ ಸಾಂಘಿಕ ರಚನೆಯ ಭಾಗವಾಗಿ ಮಾಡಿಕೊಳ್ಳಲು ಪ್ರಯತ್ನಿಸಿತು. ಅದು ಅಂಬೇಡ್ಕರ್ ಕುರಿತಂತೆ ಅನೇಕ ಉಪನ್ಯಾಸ ಸರಣಿಗಳು ಮತ್ತು ವಿಚಾರಗೋಷ್ಠಿಗಳನ್ನು ನಡೆಸುತ್ತಿದೆ ಮತ್ತು ಅಂಬೇಡ್ಕರರ ಜನ್ಮ ಶತಾಬ್ದಿಯನ್ನು ಆಚರಿಸುತ್ತಿದೆ. ಹೆಡ್ಗೆವಾರ್ ಮತ್ತು ಸಾವರ್ಕರ್ ಇಬ್ಬರೂ ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆಯ ವಿರೋಧಿಗಳಾದ್ದರಿಂದಾಗಿ ಅವರನ್ನು ಅಂಬೇಡ್ಕರ್ ಅವರೊಂದಿಗೆ ಹೋಲಿಸುತ್ತಾರೆ ಕೂಡಾ.

ಈ ಮೇಲಿನ ಕಾರ್ಯನೀತಿ ಮತ್ತು ಯೋಜನಾ ನೀತಿಯ ಅನುಸಾರವಾಗಿ, ಬಿಜೆಪಿಯು ತನ್ನ ಅನೇಕ ಜಾತಿಗಳನ್ನು ತನ್ನ ಸಾಂಘಿಕ ಮತ್ತು ಮತದಾರರ ವ್ಯಾಪ್ತಿಯಲ್ಲಿ ಸೇರಿಸಿಕೊಳ್ಳಲು ಪ್ರಯತ್ನಿಸಿತು. ಅದು ಹಿಂದುಳಿದ ವರ್ಗದ ನಾಯಕರಾದ ವಿನಯ್ ಕಟಿಯಾರ್, ಕಲ್ಯಾಣ್ ಸಿಂಗ್ ಮತ್ತು ಉಮಾ ಭಾರತಿಯಂತವರಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ನೀಡಿತು. ಪಕ್ಷದ ಅಧಿಕಾರ ವ್ಯವಸ್ಥೆಯಲ್ಲಿ ಹಿಂದುಳಿದ ಜಾತಿಯವರಿಗೆ ಮತ್ತು ಪಂಗಡದವರಿಗೆ ಮಹತ್ವದ ಸ್ಥಾನವನ್ನು ನೀಡಿತು.

ಈ ವಿಭಿನ್ನ ಸೈದ್ಧಾಂತಿಕ ಮನೋಭಾವಗಳು ಭಿನ್ನವಾದವೇನಲ್ಲ. ಅವು ಪರಸ್ಪರ ಬಲಪಡಿಸುವುದಾಗಿದ್ದು, ಪ್ರಾಮುಖ್ಯತೆಯ ವಿಭಿನ್ನ ಛಾಯೆಗಳನ್ನು ಹೊಂದಿವೆ. ಆದರೂ, ಬಿಜೆಪಿಯು ಈ ವಿಭಿನ್ನ ಸೈದ್ಧಾಂತಿಕ ಮನೋಭಾವಗಳನ್ನು ಬೇರೆ ಬೇರೆ ಶ್ರೋತೃಗಳೊಡನೆ ಮಾತನಾಡುವಾಗ ಅಗತ್ಯಕ್ಕೆ ತಕ್ಕಂತೆ ಹೊಂದಿಸಿಕೊಂಡು ಮಾತನಾಡಿದೆ. ಅದು ತನ್ನ ಸೈದ್ಧಾಂತಿಕ ಮಾತುಕತೆಯನ್ನು ಸಾಂದರ್ಭಿಕವಾಗಿ ತನ್ನ ಮಾತುಗಳನ್ನು ಕೇಳುವ ಶ್ರೋತೃಗಳಿಗಾಗಿ ಬದಲಾಯಿಸಿಕೊಂಡಿದೆ.

ಹೀಗೆ ಚುನಾವಣೆಯಿಂದ ಚುನಾವಣೆಗೆ ತನ್ನ ಉಳುವಿಗಾಗಿ ಬಿಜೆಪಿಯಿಂದ ನಡೆಸಲ್ಪಟ್ಟ ನಿರಂತರದ ಹೊಂದಾಣಿಕೆಗಳು, ರಾಜಕೀಯ ಮತ್ತು ತತ್ವವಾದಗಳು ರಾಜಕೀಯದ ಅಗತ್ಯತೆಗಳಿಗೆ ಅನುಗುಣವಾಗಿ ತತ್ವವಾದದ ಹೊಂದಾಣಿಕೆಗೆ ದಾರಿ ಮಾಡಿಕೊಡುತ್ತ ಹೇಗೆ ಪ್ರಕ್ಷುಬ್ಧತೆಯನ್ನು ಸೃಷ್ಟಿಸುತ್ತವೆ ಎಂಬುದನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ. ಯಾವುದನ್ನೂ ಅಂಗೀಕರಿಸಲು ಸಾಧ್ಯವಿರಲಿಲ್ಲ. ರಾಜಕೀಯ ಉಳಿವಿಗಾಗಿ ಸಂಯೋಜನೆಗೊಂಡ ನಂತರ ಕೂಡ ಹೆಚ್ಚಾಗಿ ಇದೇ ರೀತಿಯಲ್ಲಿ ಬದಲಾವಣೆ ಹೊಂದಿತು. ಸಚಿವ ಸಂಪುಟದ ಮೂಲಕ ಪ್ರಾದೇಶಿಕ ಪಕ್ಷಗಳಿಗೆ ಸಂಪುಟದಲ್ಲಿ ಅವಕಾಶ ಕಲ್ಪಿಸಿದ್ದು ಇದು ಬಿಜೆಪಿಯ ಹೊಂದಿಕೊಳ್ಳುವಿಕೆ, ವ್ಯಾವಹಾರಿಕತೆ

ಮತ್ತು ಸಂಘಟನಾತ್ಮಕ ರಾಜಕೀಯವನ್ನು ತೋರಿಸುತ್ತದೆ. ಇದು ಹಿಂದುತ್ವ ವಾದವು ಪ್ರತ್ಯೇಕೀಕರಣದ ತತ್ವವಾಗಬೇಕಾದ ಯಾವುದೇ ಅಗತ್ಯತೆಗಳಿರಲಿಲ್ಲ. ಆದರೆ ಸಾಮೂಹಿಕತೆಯ ಮಟ್ಟಕ್ಕೆ ಬೆಳೆಯಬಹುದಾಗಿತ್ತು ಎಂಬುದನ್ನು ಕೂಡಾ ಸೂಚಿಸುತ್ತದೆ.

ಸಾಂಸ್ಕೃತಿಕ ಪರಂಪರೆ ಅಥವಾ ರಾಷ್ಟ್ರೀಯವಾದದ ಆಧಾರದಲ್ಲಿ ಯಾವುದೇ ವಿಶ್ಲೇಷಣೆ ನೀಡಿದರೂ, ಹಿಂದೂತ್ವಕ್ಕೆ ಸೀಮಿತ ಪ್ರಸ್ತುತತೆ ಇದೆ. ಹೊಸ ತಲೆಮಾರಿನ ವಿಜ್ಞಾನ ಹಾಗೂ ತಂತ್ರಜ್ಞಾನದ ತಾಳಕ್ಕೆ ಹೆಜ್ಜೆ ಹಾಕುತ್ತಿರುವ ಯುವಜನಾಂಗವು ಹಿಂದೂತ್ವದ ಬಗ್ಗೆ ಹೆಚ್ಚು ಆಕರ್ಷಿತವಾಗುತ್ತಿಲ್ಲ. ಮಂದಿರ ನಿರ್ಮಾಣವಾಗಲಿ ಅಥವಾ ಅಡ್ವಾಣಿ ಹೊಸತಾಗಿ ಪ್ರತಿಪಾದಿಸುತ್ತಿರುವ 'ಒಳಗೊಳ್ಳುವಿಕೆ ತತ್ವವಾಗಲಿ' ಹೊಸ ಪೀಳಿಗೆಗೆ ಮುಖ್ಯವಾಗುತ್ತಿಲ್ಲ. ಅವರೆಲ್ಲ ಹಿಂದೂ ಆಗಿದ್ದಾರೆ. ಜನಸಂಖ್ಯೆಯಲ್ಲಿ ತಾವೇ ಶೇ80 ರಷ್ಟಿರುವಾಗ ತಮಗೇತರ ಭಯ ಎನ್ನುವ ವಿಶ್ವಾಸ ಅವರಲ್ಲಿ ಇದೆ. ಮತಗಳಿಸುವ ಏಕೈಕ ಉದ್ದೇಶದಿಂದ ಕೃತಕವಾಗಿ ಸೃಷ್ಟಿಸಿದ ಭಯದ ನೆರವು ಪಡೆಯಲು ಬಿಜೆಪಿ ಹವಣಿಸುತ್ತಿದೆ. ಆದರೆ ಇದರಿಂದ ಲಾಭಕ್ಕಿಂತ ನಷ್ಟವೇ ಹೆಚ್ಚು. ಆರ್.ಎಸ್.ಎಸ್ ಜೊತೆ ಒಂದಾಗಿ ಹೋಗಿರುವ ಪಕ್ಷಕ್ಕೆ ತನ್ನದೇ ಆದ ಪ್ರತ್ಯೇಕ ಅಸ್ತಿತ್ವವೇ ಇಲ್ಲದಂತಾಗಿದೆ. ನಾಗಪುರದಿಂದ ಬೆರಳೆಣಿಕೆಯಷ್ಟು ಜನ ನೀಡುವ ಆದೇಶವೇ ಬಿಜೆಪಿ ಮುಖಂಡರಿಗೆ ಮುಖ್ಯವಾಗುತ್ತಿದೆ. ಮತದಾರರಿಂದ ಇಲ್ಲವೇ ಬಿಜೆಪಿ ಸದಸ್ಯರಿಂದ ಯಾವತ್ತೂ ಚುನಾವಣೆಯಲ್ಲಿ ಗೆದ್ದು ಬಂದ ಈ ನಾಯಕರು ದೇಶದ ಸಮಸ್ಯೆಗಳಿಗೆಲ್ಲ ಪರಿಹಾರ ಘೋಷಿಸುತ್ತಾರೆ. ಅವರೆಲ್ಲಾ ಒಂದರ್ಥದಲ್ಲಿ ಸಂಕುಚಿತ ಧಾರ್ಮಿಕ ಆಚರಣೆಗಳನ್ನು ಅತಿರೇಕದ ರೂಪದಲ್ಲಿ ಜಾರಿಗೆ ತರಬೇಕೆಂಬ ಮತಾಂಧ ಮುಖಂಡರಂತೆ ವರ್ತಿಸುತ್ತಾರೆ. ಬಿಜೆಪಿಗೆ ತನ್ನದೇ ಆದ ಕಾರ್ಯಕರ್ತರ ಕೊರತೆ ಇದೆ. ಒರಿಸ್ಸಾದಲ್ಲಿ ಕ್ರೈಸ್ತ ವಿರೋಧಿ ದ್ವೇಷದ ಕಿಚ್ಚು ಹಚ್ಚಿದ ಬಜರಂಗದಳ ಮತ್ತು ಗುಜರಾತ್‌ನಲ್ಲಿ ನರಹತ್ಯೆಗೆ ಕಾರಣವಾದ ವಿ.ಹೆಚ್.ಪಿ. ಸದಸ್ಯರನ್ನೇ ಅದು ಅವಲಂಬಿಸಿದೆ.

ತುರ್ತು ಪರಿಸ್ಥಿತಿ ಕೊನೆಗೊಂಡ ನಂತರ ಹೊಸ ಸ್ವರೂಪ ಪಡೆಯಲು ಬಿಜೆಪಿಗೆ ಅವಕಾಶ ಒದಗಿತ್ತು. ಆರ್.ಎಸ್.ಎಸ್. ಜೊತೆಗಿನ ಸಂಬಂಧವನ್ನು ಕಡಿದುಕೊಳ್ಳುವುದಾಗಿಯೂ ಅದು ಭರವಸೆ ನೀಡಿತ್ತು. ಇಂದಿರಾಗಾಂಧಿಯವರನ್ನು ಅಧಿಕಾರದಿಂದ ಪದಚ್ಯುತಗೊಳಿಸಿದ ಜಯಪ್ರಕಾಶ್ ನಾರಾಯಣ್‌ರಿಗೆ ನೀಡಿದ್ದ ವಚನವನ್ನು ಈ ಮೊದಲಿನ ಜನಸಂಘದ ಕೆಲವರು ಪಾಲಿಸಲೇ ಇಲ್ಲ. ವಚನ ಪಾಲನೆ ಬದಲಿಗೆ ಅವರು ಹೊಸ ಪಕ್ಷ ಬಿಜೆಪಿ ಸ್ಥಾಪಿಸಿದರು. 1980ರಲ್ಲಿ ಜನತಾಪಕ್ಷ ಅಧಿಕಾರಕ್ಕೆ ಎರವಾದಾಗ ಕಾಂಗ್ರೆಸ್ ವಿರೋಧಿ ಮತಗಳು ವಿಭಜನೆಗೊಳ್ಳಲು ಬಿಜೆಪಿಯೇ ಕಾರಣ ಎನ್ನುವ ಟೀಕೆಯೂ ವ್ಯಾಪಕವಾಗಿ ಕೇಳಿ ಬಂದಿತು. 2009ರ ಲೋಕಸಭಾ ಚುನಾವಣೆಯ ನಂತರ, ಬಿಜೆಪಿ ಒಳಗಿನ ಕೆಲ ಉದಾರವಾದಿಗಳು ಯಾರ ಹಂಗಿಲ್ಲದೇ ಏಕಾಂಗಿಯಾಗಿ ಮುಂದುವರೆಯುವ ಒಲವು ವ್ಯಕ್ತಿ ಪಡಿಸುತ್ತಿದ್ದಾರೆ ಎನ್ನಲಾಗಿದೆ.

ಆದರೆ ತಮ್ಮ ಸ್ವಂತ ಬಲದ ಮೇಲೆ ಕಾರ್ಯಕರ್ತರ ತಂಡ ಕಟ್ಟಲು ಅವರಿಗೆ ಸಾಧ್ಯವೇ ಇಲ್ಲ ಎನ್ನುವ ವಾಸ್ತವವನ್ನು ಅರಿಯಬೇಕಿದೆ. ಪಕ್ಷವನ್ನು ಹೊಸದಾಗಿ ಕಟ್ಟುವುದು ತುಂಬಾ ಪ್ರಯಾಸದ ಕೆಲಸ. ಯುವಕರು ಅದನ್ನು ಮಾಡಬಹುದು. ಇತ್ತೀಚಿನ ಮಾಹಿತಿಯಂತೆ ಆರ್.ಎಸ್.ಎಸ್‌ನ ಬೆಳಗಿನ ಶಿಬಿರಗಳಿಗೆ ಭಾಗವಹಿಸುವ ಯುವಕರ ಆಸಕ್ತಿ ಕಡಿಮೆಯಾಗುತ್ತಿದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿನ ಒಂದು ರಾಜಕೀಯ ಪಕ್ಷವನ್ನು ಹೊರಗಿನ ಸಂಘಟನೆಯೊಂದು ನೇರವಾಗಿ ನಿಯಂತ್ರಿಸುತ್ತಿರುವುದು ವಿಚಿತ್ರ. ಕೇಂದ್ರದಲ್ಲಿ ಎರಡು ಬಾರಿ ಮಿತ್ರ ಪಕ್ಷಗಳ ಸಹಕಾರದಿಂದ ಅಧಿಕಾರ ನಡೆಸಿದ ರಾಜ ಕೀಯ ಪಕ್ಷವೊಂದಕ್ಕೆ ಈ ಗತಿ ಬರಬಾರದಿತ್ತು. ಬಲ ಪಂಥೀಯ ವಿಚಾರಧಾರೆಯ ಬಿಜೆಪಿಯಲ್ಲಿ ಏನೇ ಲೋಪಗಳಿದ್ದರೂ, ಅದು ಸಾಕಷ್ಟು ಬೆಳೆದಿದೆ.

ರಾಷ್ಟ್ರ ಮತ್ತು ರಾಜ್ಯ ರಾಜಕಾರಣದಲ್ಲಿ ಏಳು-ಬೀಳು ಕಂಡಿದೆ. ಅಂತಹ ಪಕ್ಷವೊಂದನ್ನು ನಾಗಪುರದ ಆರ್. ಎಸ್.ಎಸ್ ಕಾರ್ಯಾಲಯ ನಿಯಂತ್ರಿಸುತ್ತಿರುವುದು ಒಳ್ಳೆಯ ಬೆಳವಣಿಗೆಯಲ್ಲ. ಬಿಜೆಪಿಯು ಹಿಂದೂತ್ವ ತೊರೆದು ಆರ್.ಎಸ್.ಎಸ್ ಜೊತೆಗಿನ ಸಂಬಂಧ ಕಡಿದುಕೊಂಡರೆ, ಸದ್ಯಕ್ಕೆ ತುಂಬಾ ಅಗತ್ಯವಾಗಿರುವ ಕಾಂಗ್ರೆಸ್‌ಗೆ ಪರ್ಯಾಯ ಪ್ರಬಲ ಪಕ್ಷವಾಗಿ ಬೆಳೆಯಲು ಸಾಧ್ಯ. ಸದ್ಯಕ್ಕೆ ಪಕ್ಷವು ಅದೇ ಹಳೆಯ ಹಿಂದೂತ್ವದ ವರ್ಚಸ್ಸಿನಲ್ಲಿ ಕಳೆದು ಹೋಗಿದೆ. ಅದಕ್ಕೆ ಅದರದ್ದೇ ಆದ ಸ್ವಂತ ಅಸ್ತಿತ್ವವೇ ಇಲ್ಲದಂತಾಗಿದೆ. ದೇಶದಲ್ಲಿ ಕ್ರಮೇಣ ವೈವಿಧ್ಯತೆಯಲ್ಲಿ ಏಕತೆ ಮಂತ್ರ ಜನಪ್ರಿಯಗೊಳ್ಳುತ್ತಿದೆ. ಜಾತ್ಯಾತೀತ ಭಾವನೆಯೂ ಬಲಗೊಳ್ಳುತ್ತಿದೆ. ಅದರ ಎದುರು ಮೃದು ಅಥವಾ ಕಠಿಣ ಸ್ವರೂಪದ ಹಿಂದೂತ್ವ ಗೌಣವಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಕಳೆದುಕೊಂಡ ನೆಲೆಯನ್ನು ಮತ್ತೆ ಹೇಗೆ ಗಳಿಸಿಕೊಂಡಿತು ಎನ್ನುವುದೇ ನಮ್ಮ ಮುಂದಿರುವ ಪ್ರಶ್ನೆಯಾಗಿದೆ.

References:

1.James Manor, "Anomie in Indian Politics: Origins and Potential Wider impact", Economic and Political Weekly (Annual Namber, 1983), P. 725-734.

2.Robert Hordgrave, "India on the Eve of Elections: Congress and the opposition", Pacific Affairs (Fall, 1984), P. 409.

3.B.D Graham, Hindu Nationalism and Indian Politics ; The Origins and Development of the Bharatiya Jana Sangh (Cambridge University press, 1990), P.256.

4.Yogendra K. Malik and V.B. Singh, Hindu Nationalists in India ; The Rise of Bhartiya Janatha Party (New Delhi, 1994), P.76

5.Peter Van der Veer, 'Ayodhya and Somanath; Eternal Shrines, contested Histories', Social Research (Newyork, 59(1)) Spring 1992, P. 102.

6.Parwez Hafez, 'BJP's 3-TAgenda : Real versus Spurious', Asian Age, 7 June 1995.

7.Asian Age, 18 December 1997, See also Sudindra Kal Korsis (BJP National Executive member) article ("lets give BJP a chance) Nov 26, 1997.

8..C Zaehner, Hinduism (oxford ; oup, 1994), P.137.

9.Romila Thapar, 'Religion, Culture and Nation', Monthly Public Opinion Survey (New Delhi), 36(7), April 1991, P-3.

10. Ashis Nandy 'Secularism', Seminar, No. 394, June 1992, P-29.

11.K.R. Malkani, 'Understanding the BJP', Seminar, No. 417, May 1994, P. 14.

12.Amartya Sen, 'The Threats to Secular India', The Newyork Times Review of Books 50,7 (8 April 1993), P 26.

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ.

ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು.

ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ಒಬಾಮಾಗೆ ನಾವು ಧಿಕ್ಕಾರ ಅಂದರೆ ತಪ್ಪಾಗುತ್ತದೆಯೇ?



ಬರಾಕ್ ಹುಸೇನ್ ಒಬಾಮಾ ಹೆಂಡತಿ ಮಿಶೆಲ್‌ರೊಂದಿಗೆ ಭಾರತದ ಭೇಟಿಗೆ ಬಂದಿದ್ದಾರೆ. ಭಾರತದ ಅಧಿಕಾರಸ್ಥ ವಲಯಗಳು 'ಧಣಿ'ಯ ಭೇಟಿಯಿಂದ ಸಂಭ್ರಮಿತವಾಗಿವೆ. ಆಡಳಿತ ವ್ಯವಸ್ಥೆಯ ಉನ್ನತ ವಲಯವೆಲ್ಲಾ ಸಂಪೂರ್ಣವಾಗಿ 'ಧಣಿ'ಯ ಭೇಟಿಯ ದೇಖು ರೇಖು ನೋಡಿಕೊಳ್ಳುವಲ್ಲಿ ತಲ್ಲೀನವಾಗಿದೆ. ಎಸ್ಟೇಟ್ ಉಸ್ತುವಾರಿಯಲ್ಲಿ ತೊಡಗಿರುವ ನೌಕರರು ಚಾಕರರು, ವಿದೇಶವಾಸಿಯಾದ ತಮ್ಮ ಧಣಿ ಮೇಲ್ವಿಚಾರಣೆಗೆಂದು ಭೇಟಿ ನೀಡುವ ಸನ್ನಿವೇಶದಲ್ಲಿ ಆಡುವ ರೀತಿ ಈ ಸಂದರ್ಭದಲ್ಲಿ ನೆನಪಿಗೆ ಬರುತ್ತಿದೆ. 'ಧಣಿ' ಬರಿಗೈಯಲ್ಲಿ ಬಂದಿರುವುದಿಲ್ಲ, ಉಡುಗೊರೆಗಳನ್ನು ತಂದಿರುತ್ತಾನೆ, ಮನಸ್ಸು ಮುದಗೊಂಡರೆ ಸಂಬಳ ಸವಲತ್ತು ಹೆಚ್ಚಿಸಲೂಬಹುದು ಮುಂತಾದ ಬಗೆಬಗೆಯ ನಿರೀಕ್ಷೆಗಳು ಎಸ್ಟೇಟ್‌ನ ನೌಕರರಲ್ಲಿ ನೆಲೆಗೊಂಡಿರುವ ರೀತಿಯಲ್ಲೇ ಇವರಿಗೂ ಇರುವಂತಿದೆ.

ಒಬಾಮಾ ಬೇರೆ ರೀತಿಯ 'ಧಣಿ'ಯಿರಬಹುದು. ಆತನ ಭೇಟಿಯ ರಾಜಕೀಯಾರ್ಥಿಕ ಆಯಾಮಗಳು ವಿಸ್ತೃತವಾಗಿರಬಹುದು. ಭೇಟಿಗಾಗಿ ಕಾತರಿಸಿದವರ ಮನಸ್ಸಿನ ಆಸೆಗಳು ನಿರೀಕ್ಷಿಸುತ್ತಿರುವ ಉಡುಗೊರೆಗಳು ಮಾತ್ರ ಸಿಗುತ್ತವೋ, ಇಲ್ಲವೋ ಈಗಲೇ ಹೇಳಬರುವಂತಿಲ್ಲ.

ಒಬಾಮಾ ಹೃದಯವಂತ ವ್ಯಕ್ತಿ ಎಂಬುದರ ಬಗ್ಗೆ ಅನುಮಾನವಿರಬೇಕಾಗಿಲ್ಲ. ಸಾಕಷ್ಟು ರಾಜಕೀಯ ಚಿಂತನೆ ಮತ್ತು ಮುತ್ಸದ್ಧಿತನದ ಗುಣಗಳೂ ಇದ್ದಂತಿವೆ. ಒಬಾಮಾ 'ಧಣಿ'ಯ ಬಿಗುಮಾನವಿಲ್ಲದೆ, ಬಿಂಕವಿಲ್ಲದೇ ಕಾಣಿಸಿಕೊಳ್ಳುವ ಹಾಗೂ ವರ್ತಿಸುವ ವ್ಯಕ್ತಿ. ಒಬಾಮಾ ಕಪ್ಪು ವರ್ಣೀಯನಾದುದರಿಂದ, ಜನಾಂಗ ಮೂಲದಲ್ಲಿ ಆಫ್ರಿಕಾ ಖಂಡದವನಾದುದರಿಂದ ಆತ ಇತರೆ ಬಿಳಿಯ ಧಣಿಗಳಂತೆ 'ಪ್ರತ್ಯೇಕ'ವಾಗಿ ಕಾಣಿಸುತ್ತಿಲ್ಲದಿರಬಹುದು. ಬಣ್ಣ, ದೇಹಭಾಷೆ, ಮುಖಭಾವ ಮುಂತಾದವುಗಳೆಲ್ಲ ಕೂಡಿಯೇ ವ್ಯಕ್ತಿಯೊಬ್ಬನನ್ನು ದರ್ಪಿಷ್ಠನನ್ನಾಗಿ ಅಥವಾ ಸಜ್ಜನಿಕೆಯ ಸಾತ್ವಿಕನನ್ನಾಗಿ ನಮ್ಮೆದುರು ಪ್ರಸ್ತುತಪಡಿಸುತ್ತವೆ.

ಒಬಾಮಾ ಹೃದಯವಂತ ವ್ಯಕ್ತಿ ಎಂಬುದರ ಬಗ್ಗೆ ಅನುಮಾನವಿರಬೇಕಾಗಿಲ್ಲ. ಸಾಕಷ್ಟು ರಾಜಕೀಯ ಚಿಂತನೆ ಮತ್ತು ಮುತ್ಸದ್ಧಿತನದ ಗುಣಗಳೂ ಇದ್ದಂತಿವೆ. ಒಬಾಮಾ 'ಧಣಿ'ಯ ಬಿಗುಮಾನವಿಲ್ಲದೆ, ಬಿಂಕವಿಲ್ಲದೇ ಕಾಣಿಸಿಕೊಳ್ಳುವ ಹಾಗೂ ವರ್ತಿಸುವ ವ್ಯಕ್ತಿ. ಒಬಾಮಾ ಕಪ್ಪು ವರ್ಣೀಯನಾದುದರಿಂದ, ಜನಾಂಗ ಮೂಲದಲ್ಲಿ ಆಫ್ರಿಕಾ ಖಂಡದವನಾದುದರಿಂದ ಆತ ಇತರೆ ಬಿಳಿಯ ಧಣಿಗಳಂತೆ 'ಪ್ರತ್ಯೇಕ'ವಾಗಿ ಕಾಣಿಸುತ್ತಿಲ್ಲದಿರಬಹುದು. ಬಣ್ಣ, ದೇಹಭಾಷೆ, ಮುಖಭಾವ ಮುಂತಾದವುಗಳೆಲ್ಲ ಕೂಡಿಯೇ ವ್ಯಕ್ತಿಯೊಬ್ಬನನ್ನು ದರ್ಪಿಷ್ಠನನ್ನಾಗಿ ಅಥವಾ ಸಜ್ಜನಿಕೆಯ ಸಾತ್ವಿಕನನ್ನಾಗಿ ನಮ್ಮೆದುರು ಪ್ರಸ್ತುತಪಡಿಸುತ್ತವೆ.

ಒಬಾಮಾ ಅಮೆರಿಕಾದ ಅಧ್ಯಕ್ಷನಾಗುವ ಹಂತದಲ್ಲಿದ್ದಾಗ ನಾವು ಕೆಲವರು ಸ್ನೇಹಿತರು ಇದೊಂದು ಚಾರಿತ್ರಿಕ ಪವಾಡ ಸಂಭವಿಸಿ ಬಿಡಲಿ ಎಂಬ ಹಾರೈಕೆಯಲ್ಲಿದ್ದೆವು. ಅದು ಅಷ್ಟು ಸರಳವಾಗಿ ಸಂಭವಿಸಲಾರದೇನೋ ಎಂಬ ಆತಂಕದಲ್ಲೂ ಇದ್ದೆವು. ಅಮೆರಿಕಾದ ಅಧ್ಯಕ್ಷ ಯಾರೇ ಆದರೂ ಆತ ಅಮೆರಿಕಾದ ಅಧ್ಯಕ್ಷನಂತೆಯೇ ಇರುತ್ತಾನೆ ಎಂಬ ಬಗ್ಗೆ ನನಗೆ ಹೆಚ್ಚೂ ಕಮ್ಮಿ ಖಾತ್ರಿ ಇತ್ತು. ಆದರೂ ಒಬಾಮಾ ಅಧ್ಯಕ್ಷನಾಗುವಗಳಿಗೆ ಚಾರಿತ್ರಿಕ ಮಹತ್ವವನ್ನು ಪಡೆದಿದೆ ಎಂದು ನನ್ನ ಮನಸ್ಸಿಗೆ ಅನಿಸುತ್ತಿತ್ತು. ಇದು ರಾಜಕೀಯ ಚಿಂತನೆಯನ್ನು ಹೊರತುಪಡಿಸಿದ ಸಾಮಾಜಿಕ ಚಿಂತನೆಯ ಒಂದು ಬಗೆಯಾಗಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ. ಅಧ್ಯಕ್ಷನಾಗಿ ಅದರ ಚರಿತ್ರೆಯಲ್ಲಿ ಮೊದಲ ಬಾರಿಗೆ ಕಪ್ಪುವರ್ಣೀಯನೊಬ್ಬ ಆಯ್ಕೆಯಾಗುವುದೆಂಬುದು ಸ್ವತಃ ಅಮೆರಿಕಾದ ಸಾಮಾಜಿಕ ಚರಿತ್ರೆಗೆ ಒಂದು ಭಿನ್ನ ಅಧ್ಯಾಯವನ್ನು ಜೋಡಿಸಿತೆಂಬುದು ನಿಜವೂ ಕೂಡ. ಬಹಳ ವರ್ಷಗಳ ಕಾಲ ಗುಲಾಮರಾಗಿದ್ದುಕೊಂಡು, ಕನಿಷ್ಠ ನಾಗರೀಕ ಹಕ್ಕುಗಳಿಂದಲೂ ವಂಚಿತರಾಗಿದ್ದ ಕಪ್ಪು ವರ್ಣೀಯ ಸಮುದಾಯದ ವ್ಯಕ್ತಿಯೊಬ್ಬ ಅಮೆರಿ ಕಾದ ಶ್ವೇತ ಭವನದಲ್ಲಿ ಅಧ್ಯಕ್ಷನಾಗಿ ಕೂರುವುದೆಂದರೆ ಅದು ಖಂಡಿ ತವಾಗಿ ಅವಿಸ್ಮರಣೀಯ ಮೈಲಿಗಲ್ಲು.

ಅಂತಹ ಒಂದು ಬದಲಾದ ಮನಃಸ್ಥಿತಿಗೆ ಅಮೆರಿಕಾ ಬಂದು ತಲುಪುವುದಕ್ಕೆ ಸಾಕಷ್ಟು ಸಮಯ ಹಿಡಿಯಿತು ಮಾತ್ರವಲ್ಲದೆ ಅಮೆರಿಕಾದ ರಾಜಕೀಯಾರ್ಥಿಕ ಸನ್ನಿವೇಶ ಅಂತಹದೊಂದು ಬದಲಾವಣೆಯ ಅಗತ್ಯವನ್ನು ನಿರ್ಮಾಣ ಮಾಡಿತ್ತು ಎಂಬುದನ್ನು ನಾವಿಲ್ಲಿ ನೆನಪಿಡಬೇಕಾಗುತ್ತದೆ. ತನ್ನ ಜಾಗತೀಕರಣ ಪ್ರಕ್ರಿಯೆಯ ಮುನ್ನಡೆಯಲ್ಲಿ ಅತ್ಯಂತ ಬಿಕ್ಕಟ್ಟಿನ ಆರ್ಥಿಕ ಮುಗ್ಗಟ್ಟನ್ನು ಅಮೆರಿಕಾ ಎದುರಿಸುತ್ತಿದ್ದ ಸಮಯವದು. ಇದೇ ಜಾಗತೀಕರಣ ಪ್ರಕ್ರಿಯೆಯ ಅಂಗವಾಗಿ ವಿಶ್ವಾಧಿಪತ್ಯವನ್ನು ದಕ್ಕಿಸಿಕೊಳ್ಳಲು ಅಮೆರಿಕಾ ಕೈಗೊಂಡ ರಾಜಕೀಯ ಕ್ರಮಗಳು, ಮಿಲಿಟರಿ ನಡೆಗಳು ಅದನ್ನು ಪ್ರಪಂಚದ ಹಲವು ದೇಶಗಳ ಜನತೆಗೆ ಶತೃವನ್ನಾಗಿಸಿತ್ತು. ಸೆಪ್ಟಂಬರ್ 11ರ ಭಯೋತ್ಪಾದಕ ದಾಳಿ ಅಮೆರಿಕಾದ ಭದ್ರತೆಯ ಬಗೆಗಿನ ನಂಬುಗೆಗಳನ್ನು ಹುಸಿಗೊಳಿಸಿತ್ತು. ವಾಣಿಜ್ಯದ ಮುಖಾಂತರ ವಿಶ್ವವನ್ನೇ ತನ್ನ ಅಧೀನದಲ್ಲಿರಿಸಿಕೊಳ್ಳುವ ಅಮೆರಿಕಾದ ಕನಸು ವಿಶ್ವ ವಾಣಿಜ್ಯ ಕೇಂದ್ರದ ಮೇಲೆ ನಡೆದ ಭಯೋತ್ಪಾದಕ ದಾಳಿಯಿಂದ ಬೆಚ್ಚಿಬಿದ್ದಿತು.

ಇದರಿಂದಾಗಿ ಅಮೆರಿಕಾದ ನಾಗರೀಕರಿಗೆ ಯುದ್ಧದಾಹಿಯಾದ, ಪ್ರಪಂಚದ ವಿರೋಧ ಕಟ್ಟಿಕೊಳ್ಳುವ ಜೇಮ್ಸ್ ಬಾಂಡ್ ನಾಯಕನಿಗಿಂತ ಸಮಾಜ ಸುಧಾರಣೆಯ ಮಾನವೀಯ ಚಿಂತನೆಯ ಛಾಪು ಹೊಂದಿರುವ ನಾಯಕನೊಬ್ಬನ ಅವಶ್ಯಕತೆಯಿತ್ತು. ಇದರ ಜೊತೆಗೆ ಜಗತ್ತಿನೆದುರು ತನ್ನ ಚಿಂತನೆಯ ಹಾದಿಗಳು ಬದಲಾಗಿವೆ, ತನ್ನ ಚಾರಿತ್ರಿಕ ತಪ್ಪುಗಳಿಗೆ ತನ್ನೊಳಗೊಂದು ಪಶ್ಚಾತ್ತಾಪವಿದೆ, ಅದಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಅಮೆರಿಕ ಸಿದ್ಧವಾಗುತ್ತಿದೆ ಎಂಬ ಸಂದೇಶವನ್ನು ಜಗತ್ತಿಗೆ ಕೊಡಲು ಅಮೆರಿಕಾದ ಹೊಸ ತಲೆಮಾರು ಕಾಯುತ್ತಿತ್ತು. ಅದರ ಇಂತಹ ಅಗತ್ಯಗಳಿಗೆ ಸೂಕ್ತ ಆಯ್ಕೆಯಾಗಿ ಕಂಡುಬಂದಿದ್ದು ಬರಾಕ್ ಹುಸೇನ್ ಒಬಾಮಾ.

ಕಪ್ಪು ವರ್ಣೀಯರ ನಾಯಕನಾಗಿ ರೂಪುಗೊಂಡಿದ್ದ ಒಬಾಮಾನನ್ನು ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡುವ ಮುಖಾಂತರ ತಾನು ವರ್ಣಭೇದ ನೀತಿಯ ದೋಷಗಳಿಂದ ಹೊರಬಂದಿದ್ದೇನೆ ಎಂದು ಅದು ತೋರಿಸಿಕೊಳ್ಳಬಯಸಿತು. ಸಾಲದ್ದಕ್ಕೆ ಒಬಾಮಾ ಮುಸ್ಲಿಂ ತಂದೆಗೆ, ಕ್ರಿಶ್ಚಿಯನ್ ತಾಯಿಗೆ ಹುಟ್ಟಿ ಕ್ರಿಶ್ಚಿಯನ್ ಧರ್ಮದಲ್ಲಿ ನಂಬಿಕೆ ಇಟ್ಟವನು. ಇದರಿಂದ ಒಂದು ಸಂಕರ ಧರ್ಮೀಯತೆ ಹಾಗೂ ಸಹಿಷ್ಣು ಸಂಸ್ಕೃತಿ ಆತನೊಳಗೆ ನೆಲೆಗೊಂಡಿರುವ ಅವಕಾಶವಿದೆ ಎಂಬ ನಂಬಿಕೆ ಬಹಳ ಜನರದ್ದು. ಇಸ್ಲಾಂ ಜಗತ್ತಿನಿಂದ ಅಮೆರಿಕಾಕ್ಕೆ ಎದುರಾಗಿರುವ ತೀವ್ರ ಪ್ರತಿರೋಧವನ್ನು ಒಬಾಮಾನ ಅಧ್ಯಕ್ಷ ಹುದ್ದೆ ಸ್ವಲ್ಪ ತಣ್ಣಗೆ ಮಾಡಬಹುದು ಎಂಬ ನಿರೀಕ್ಷೆ ಅಮೆರಿಕಾದ ಸಾಮಾಜಿಕ ಮನೋಸ್ಥಿತಿಯಲ್ಲಿ ಇರುವುದನ್ನು ನಾವು ಊಹಿಸಬಹುದಾಗಿದೆ.



ಒಬಾಮಾ ಅಮೆರಿಕಾದ ಅಧ್ಯಕ್ಷನಾಗಿದ್ದು ಕೇವಲ ಅಮೆರಿಕಾದ ಕಪ್ಪು ವರ್ಣೀಯರಿಗಷ್ಟೇ ಅಲ್ಲ, ಪ್ರಪಂಚದಲ್ಲಿರುವ ಎಲ್ಲ ಕಪ್ಪು, ಕಂದು, ಹಳದಿ ವರ್ಣೀಯರಿಗೂ ಹೆಮ್ಮೆಯ ವಿಷಯವೇ. ಕೈಗಾರಿಕಾ ಕ್ರಾಂತಿಯ ನಂತರ ಯೂರೋಪ್ ಮತ್ತು ಅಮೆರಿಕಾದ ಶ್ವೇತ ವರ್ಣೀಯರು ಜಗತ್ತಿನ ಮೇಲೆ ಹೇರಿದ ಸ್ವಯಂ ಶ್ರೇಷ್ಠತೆ, ಮೇಲರಿಮೆ ಹಾಗೂ ದಮನಗಳ ವಿರುದ್ಧದ ಹೋರಾಟದಲ್ಲಿ ಈ ಘಟನೆಯೂ ಕೂಡ ಒಂದು ನಿರ್ಣಾಯಕ ಮುನ್ನಡೆಯನ್ನು ಪ್ರತಿಬಿಂಬಿಸಿದೆ. ತಮ್ಮ ರಾಷ್ಟ್ರದ ಏಳಿಗೆಗೆ, ಸಂಪತ್ತಿನ ನಿರ್ಮಾಣಕ್ಕೆ ಕಾರಣವಾದ ಕಪ್ಪು ವರ್ಣೀಯರನ್ನು ಅಮೆರಿಕಾ ದ್ವಿತೀಯ ದರ್ಜೆಯ ಜನರನ್ನಾಗಿ ನಡೆಸಿಕೊಂಡಿತ್ತು. ಈಗದು ತಾನಾಗಿ ತನ್ನ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿ ಕೊಳ್ಳಲೇಬೇಕಾದ ಅನಿವಾರ್ಯತೆಗೆ ಬಂದು ನಿಂತಿದೆ.

ಜಗತ್ತಿನ ವಿವಿಧೆಡೆಗಳಲ್ಲಿ ಸಮಾನತೆಯ ಪರವಾದ ಆಶಯಗಳುಳ್ಳ ಜನರು ಬರಾಕ್ ಒಬಾಮಾ ಆಯ್ಕೆ ಎಂಬುದು ಪ್ರಪಂಚದ ಸಂಸ್ಕೃತಿ ಸಾಮಾಜಿಕವಾಗಿ ಸಮಾನತೆಯೆಡೆಗೆ ಚಲಿಸಿದ್ದಕ್ಕೆ ಒಂದು ಅರ್ಥಪೂರ್ಣ ಸಂಕೇತ ಎಂದು ಭಾವಿಸಿದರು. ಅದಕ್ಕಾಗಿಯೇ ಆತನ ಆಯ್ಕೆಯನ್ನು ಬಯಸಿದರು. ಈ ಎಲ್ಲ ಆಶಯ, ಆಸೆ, ಹಾರೈಕೆಗಳ ಸಾಕಾರವೆಂಬಂತೆ ಬರಾಕ್ ಒಬಾಮಾ ಅಮೆರಿಕಾದ ಅಧ್ಯಕ್ಷನಾದ.

ನಮ್ಮ ವಾಸ್ತವದ ದುರಂತ ಹೇಗಿದೆಯೆಂದರೆ, ಕಪ್ಪು ವರ್ಣೀಯ ಒಬಾಮಾನನ್ನು ಕಂಡು ನಮ್ಮ ಸಾಮಾಜಿಕ ಮನಸ್ಸು ಎಂಥದೋ ಪ್ರೀತಿಯನ್ನು ಅನುಭವಿಸುತ್ತಿರುವಾಗಲೇ ನಮ್ಮ ರಾಜಕೀಯ ಮನಸ್ಸು ಆತನನ್ನು ಜಗತ್ತಿನ ನಾಯಕನೆಂದು ಒಪ್ಪಿಕೊಳ್ಳಲು ನಿರಾಕರಿಸುತ್ತಿದೆ. ನೆಲ್ಸನ್‌ಮಂಡೇಲ ದಕ್ಷಿಣ ಆಫ್ರಿಕಾದಂತಹ ಒಂದು ರಾಷ್ಟ್ರದಲ್ಲಿ ವರ್ಣಭೇದ ನೀತಿಯ ವಿರುದ್ಧ ಹೋರಾಟ ನಡೆಸಿ ಅಲ್ಲಿ ಕಪ್ಪು ವರ್ಣೀಯರ ಆಡಳಿತ ನೆಲೆಗೊಳ್ಳುವುದಕ್ಕೆ ನಡೆಸಿದ ಹೋರಾಟ, ಅದರಿಂದ ಆ ದೇಶದ ಚರಿತ್ರೆಯಲ್ಲಿ ಆರಂಭವಾಗಿರುವ ಸಾಮಾಜಿಕ ತಿರುವುಗಳನ್ನು ಗಮನಿಸಿದರೆ ಆತನನ್ನು ಪರಿಗಣಿಸುವಷ್ಟು ಮಹತ್ವದಲ್ಲೇ ಒಬಾಮಾನನ್ನು ಪರಿಗಣಿಸಲು ಸಾಧ್ಯವಾಗುತ್ತದೆ ಎಂದು ನನಗೆ ಅನಿಸುತ್ತಿಲ್ಲ. ದಕ್ಷಿಣ ಆಫ್ರಿಕಾದಲ್ಲಿ ಉಂಟಾದ ಬದಲಾವಣೆ ಶ್ವೇತ ಭವನದಲ್ಲಿ ಕಪ್ಪು ವರ್ಣೀಯ ಒಬಾಮಾ ಬಂದು ಕೂತಿದ್ದಕ್ಕಿಂತ ಹೆಚ್ಚು ನಿರ್ಣಾಯಕ ಮಹತ್ವವುಳ್ಳದ್ದಾಗಿದೆ. ಅದರ ಪ್ರಭಾವ ದಕ್ಷಿಣ ಆಫ್ರಿಕಾಕ್ಕೆ ಮಾತ್ರ ಸೀಮಿತವಾಗಿಲ್ಲ. ಹಾಗೆ ನೋಡಿದರೆ ಬರಾಕ್ ಒಬಾಮಾ ಅಧ್ಯಕ್ಷ ಪದವಿಗೆ ಏರುವ ಸಂದರ್ಭಕ್ಕೆ ದಕ್ಷಿಣ ಆಫ್ರಿಕಾದ ಕಪ್ಪು ವರ್ಣೀಯರ ಹೋರಾಟದ ಗೆಲುವು ಪರೋಕ್ಷವಾಗಿ ಮುನ್ನುಡಿ ಬರೆದಿತ್ತೇ ಎಂಬುದನ್ನೂ ಗಮನಿಸಬೇಕಾಗುತ್ತದೆ.

ಅಮೆರಿಕಾದ ಸಾಮಾಜಿಕ ಚರಿತ್ರೆಯಲ್ಲಿ ಉಂಟಾಗಿರುವ ಇಂತಹ ತಿರುವುಗಳನ್ನು ಕಡಿಮೆಯಾಗಿ ಅಂದಾಜಿಸಬೇಕು ಎಂದಲ್ಲ. ಒಬಾಮಾ ಅಮೆರಿಕಾದ ಅಧ್ಯಕ್ಷನಾಗಿದ್ದು ಕೇವಲ ಅಮೆರಿಕಾದ ಕಪ್ಪು ವರ್ಣೀಯರಿಗಷ್ಟೇ ಅಲ್ಲ, ಪ್ರಪಂಚದಲ್ಲಿರುವ ಎಲ್ಲ ಕಪ್ಪು, ಕಂದು, ಹಳದಿ ವರ್ಣೀಯರಿಗೂ ಹೆಮ್ಮೆಯ ವಿಷಯವೇ. ಕೈಗಾರಿಕಾ ಕ್ರಾಂತಿಯ ನಂತರ ಯೂರೋಪ್ ಮತ್ತು ಅಮೆರಿಕಾದ ಶ್ವೇತ ವರ್ಣೀಯರು ಜಗತ್ತಿನ ಮೇಲೆ ಹೇರಿದ ಸ್ವಯಂ ಶ್ರೇಷ್ಠತೆ, ಮೇಲರಿಮೆ ಹಾಗೂ ದಮನಗಳ ವಿರುದ್ಧದ ಹೋರಾಟ ದಲ್ಲಿ ಈ ಘಟನೆಯೂ ಕೂಡ ಒಂದು ನಿರ್ಣಾಯಕ ಮುನ್ನಡೆಯನ್ನು ಪ್ರತಿಬಿಂಬಿಸಿದೆ. ತಮ್ಮ ರಾಷ್ಟ್ರದ ಏಳಿಗೆಗೆ, ಸಂಪತ್ತಿನ ನಿರ್ಮಾಣಕ್ಕೆ ಕಾರಣವಾದ ಕಪ್ಪು ವರ್ಣೀಯರನ್ನು ಅಮೆರಿಕಾ ದ್ವಿತೀಯ ದರ್ಜೆಯ ಜನರನ್ನಾಗಿ ನಡೆಸಿಕೊಂಡಿತ್ತು. ಈಗದು ತಾನಾಗಿ ತನ್ನ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಲೇಬೇಕಾದ ಅನಿವಾರ್ಯತೆಗೆ ಬಂದು ನಿಂತಿದೆ.

ಹಾಗೆ ನೋಡಿದರೆ ಇದು ಅಮೆರಿಕಾ ಶ್ವೇತ ವರ್ಣೀಯ ಸಮಾಜದಲ್ಲಿ ಹೊಮ್ಮಿದ ಉದಾತ್ತ ಚಿಂತನೆಯ ಫಲ ಎಂದು ಹೇಳಲು ಸಾಧ್ಯವಾಗುವುದಿಲ್ಲ. ಅಮೆರಿಕಾದಲ್ಲೇ ಇರುವ ಕಪ್ಪು ವರ್ಣೀಯರು ಅವಿರತವಾಗಿ ನಡೆಸಿದ ಸಮಾನತೆಯ ಪರವಾದ ಹೋರಾಟ ಹಾಗೂ ಜಗತ್ತಿನ ಇತರ ದೇಶಗಳಲ್ಲಿ ಬಿಳಿಯರ ಎದುರು, ಇಂಗ್ಲಿಷಿನ ಎದುರು, ಅವರ ಸಂಸ್ಕೃತಿಯ ಆಧಿಪತ್ಯದ ಎದುರು ಎರಡನೆಯ ದರ್ಜೆಯವೆಂದು ಹೀಗಳೆಯಲ್ಪಟ್ಟಿದ್ದ ಸಮುದಾಯಗಳು, ಸಂಸ್ಕೃತಿಗಳು ಮತ್ತು ಭಾಷೆಗಳು ಕೈಗೊಂಡ ಸ್ವಾಭಿಮಾನ ನಿರ್ಮಾಣ ಹೋರಾಟಗಳ ಪ್ರತ್ಯಕ್ಷ ಪರೋಕ್ಷ ಫಲಿತಾಂಶ ಕೂಡ. ಇದನ್ನು ಒಂದು ಮೊತ್ತವಾಗಿಯೇ ನಾವು ಪರಿಗಣಿಸಬೇಕು. ಶೋಷಕರಲ್ಲಿ ಉಂಟಾಗುವ ಮನಃಪರಿವರ್ತನೆ ಕೇವಲ ಅವರ ಉದಾತ್ತ ಚಿಂತನೆಯಿಂದ ರೂಪುಗೊಳ್ಳುವುದಿಲ್ಲ. ಶೋಷಣೆಯ ವ್ಯವಸ್ಥೆಯ ವಿರುದ್ಧ ದಮನಿತ ವಲಯಗಳು ನಡೆಸುವ ಹೋರಾಟ ಈ ಬದಲಾವಣೆಯನ್ನು ಆಗುಮಾಡುತ್ತಿರುತ್ತದೆ.

ಹಾಗಿದ್ದರೂ ನಮ್ಮ ವರ್ತಮಾನದ ಸಂದಿಗ್ಧತೆ ಕಡಿಮೆಯಾಗಿಲ್ಲ. ಸಾಮಾಜಿಕವಾಗಿ ನಾವು ಯಾವುದರ ಬಗ್ಗೆ ಸಂತಸಭರಿತರಾಗಿದ್ದೇವೆಯೋ ಅದನ್ನು ರಾಜಕೀಯವಾಗಿ, ಆರ್ಥಿಕವಾಗಿ ಹೇಳಲಾಗದ ಪರಿಸ್ಥಿತಿಯಲ್ಲಿದ್ದೇವೆ. ಒಬಾಮಾ ದಮನಿತ ಸಮುದಾಯದ ಒಡಲಿನಿಂದಲೇ ಮೂಡಿ ಬಂದು ಅಮೆರಿಕಾದ ಅಧ್ಯಕ್ಷನಾಗಿರಬಹುದು. ಅಂದ ಮಾತ್ರಕ್ಕೆ ಆತನಿಗೆ ಈ ಜಾಗತಿಕ ವ್ಯವಸ್ಥೆಯ ದಮನಿತ ಹಿತಾಸಕ್ತಿಗಳ ಪ್ರತಿನಿಧಿಯಾಗಿ ಕೆಲಸ ಮಾಡಲು ಅವಕಾಶವಿದೆ ಎಂದು ಭಾವಿಸುವುದು ಅವಾಸ್ತವಿಕವಾಗುತ್ತದೆ. ಒಬಾಮಾ ಕಪ್ಪು ವರ್ಣೀಯನ ಮುಖವಾಡದಲ್ಲಿರುವ ಶ್ವೇತ ವರ್ಣೀಯ ಜಾಗತಿಕ ವ್ಯವಸ್ಥೆಯ ನಿರ್ವಾಹಕನಾಗಿ ಮಾತ್ರ ಮುಂದುವರಿಯಲಿದ್ದಾನೆ ಎನ್ನುವುದು ಸಿನಿಕತನದಂತೆ ಕಾಣಬಹುದಾದರೂ ವಾಸ್ತವಿಕ ಅಭಿಪ್ರಾಯವಾಗಿ.

ಇದನ್ನು ಮಾತಿಗೆ ನಿದರ್ಶನವಾಗಿ ಈ ಹಿಂದೆ ಭಾರತಕ್ಕೆ ಭೇಟಿ ನೀಡಿದ್ದ ಬಿಲ್ ಕ್ಲಿಂಟನ್ ಹಾಗೂ ಒಬಾಮಾ ಭಾಷಣಗಳ ನಿಲುವಿನಲ್ಲಿರುವ ಸಾಮ್ಯತೆಗಳನ್ನು ನೋಡಬಹುದಾಗಿದೆ. ಕ್ಲಿಂಟನ್ ಭಾರತಕ್ಕೆ ಬಂದಿದ್ದುದು ಇಲ್ಲಿಗೆ ಹತ್ತೂವರೆ ವರ್ಷಗಳ ಹಿಂದೆ. ಆಗ ಭಾರತವಿದ್ದ ಪರಿಸ್ಥಿತಿ ಈಗಿಗಿಂತ ಭಿನ್ನವಾಗಿತ್ತು. ಕ್ಲಿಂಟನ್ ಭೇಟಿ ನೀಡುವ ಎರಡೂವರೆ ವರ್ಷಗಳ ಹಿಂದಷ್ಟೇ ಭಾರತ ನ್ಯೂಕ್ಲಿಯರ್ ಬಾಂಬ್ ಪ್ರಯೋಗ ನಡೆಸಿ ಜಗತ್ತಿನ ಹಲವು ದೇಶಗಳಿಂದ ಹಲವಾರು ದಿಗ್ಬಂಧನಗಳಿಗೆ ಗುರಿಯಾಗಿತ್ತು. ಒಂದು ವರ್ಷದ ಹಿಂದಷ್ಟೇ ಕಾರ್ಗಿಲ್ ಯುದ್ಧ ನಡೆದಿತ್ತು. ಈ ಯುದ್ಧವನ್ನು ಕೊನೆಗೊಳಿಸಿದ್ದು ಕ್ಲಿಂಟನ್‌ರ ಸದ್ದಿಲ್ಲದ ಮಧ್ಯಪ್ರವೇಶಿಕೆ. ಈ ವಾಸ್ತವಾಂಶವನ್ನು ಭಾರತವಾಗಲೀ ಪಾಕೀಸ್ತಾನವಾಗಲಿ ಬಹಿರಂಗವಾಗಿ ಒಪ್ಪಿಕೊಳ್ಳಲು ಸಿದ್ಧವಿರಲಿಲ್ಲ. ಆ ಸಂದರ್ಭದಲ್ಲಿ ಕ್ಲಿಂಟನ್ ಭಾರತ ಮತ್ತು ಅಮೆರಿಕಾದ ನಡುವಿನ ಹೊಸ ಬಗೆಯ ಸ್ನೇಹ ಬಾಂಧವ್ಯಗಳಿಗೆ ಅಡಿಪಾಯ ಹಾಕಿದರು. ತಮ್ಮ ಜಾಣತನ ಮತ್ತು ಮುತ್ಸದ್ದಿತನದ ತೋರಿಕೆಗಳಿಂದ ಕ್ಲಿಂಟನ್ ಭಾರತೀಯ ಆಳುವ ವರ್ಗಕ್ಕೆ ನಿರಾಳತೆ ತಂದಿದ್ದರು. ಹಲವು ದಿಗ್ಬಂಧನಗಳನ್ನು ಸಡಿಸಿಲಿಸಿದ್ದರು.

ಅದೇ ಸಂಬಂಧಗಳ ಹೊಸ ಹಂತದ ಮುಂದುವರಿಕೆಯನ್ನು ಈಗಿನ ಒಬಾಮಾ ಭೇಟಿ ಸಾಧಿಸಿದೆ. ಅದರಲ್ಲಿ ವ್ಯತ್ಯಾಸವೇನೂ ಇಲ್ಲ. ಭಾರತೀಯ ಜನಸಾಮಾನ್ಯರ ಹಿತಾಸಕ್ತಿ ರಕ್ಷಣೆಯ ಪ್ರಸ್ತಾಪಗಳು ಈ ಸಂದರ್ಭದಲ್ಲಿ ಬರಲಿಲ್ಲ. ಕ್ಲಿಂಟನ್ ಭೇಟಿಗಿಂತ ಒಬಾಮಾ ಭೇಟಿ ಮುಂದುವರಿದ ಹಂತ ಯಾಕೆಂದರೆ ಒಬಾಮಾ ಭಾರತದ ಅಣ್ವಸ್ತ್ರ ಪ್ರಯೋಗವನ್ನು ಸಮ್ಮತಿಸಿದ್ದಾರೆ ಮಾತ್ರವಲ್ಲದೆ ಭಾರತವು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಖಾಯಂ ಸದಸ್ಯತ್ವ ಪಡೆಯುವ ಬೇಡಿಕೆಯನ್ನೂ ಬೆಂಬಲಿಸುವುದಾಗಿ ಹೇಳಿಕೆ ನೀಡಿದ್ದಾರೆ. ಇವು ಪೂರ್ಣವಾಗಿ ರಾಜತಾಂತ್ರಿಕ ವಿಷಯ

ಗಳಿಗೆ ಸಂಬಂಧಿಸಿದ್ದು. ಇದರ ಹೊರತಾಗಿ ಅಮೆರಿಕಾದಿಂದ ಹಲವಾರು ಅಣು ರಿಯಾಕ್ಟರ್‌ಗಳನ್ನು ಭಾರತಕ್ಕೆ ಮಾರುವ ಒಪ್ಪಂದಕ್ಕೆ ಸಹಿಹಾಕಲಾಗಿದೆ. ಇದು ಅಮೆರಿಕಾಕ್ಕೆ ಲಾಭ ತರುವ ಒಪ್ಪಂದ ಮಾತ್ರವಲ್ಲ ಭಾರತದ ಜನಸಾಮಾನ್ಯರ ಪಾಲಿಗೆ ಅಪಾಯಕಾರಿ ಪರಿಣಾಮಗಳನ್ನು ಉಂಟುಮಾಡುವ ಒಪ್ಪಂದ ಕೂಡ.

ಒಬಾಮಾ ಮೂರು ದಿನಗಳ ತನ್ನ ಭೇಟಿಯಲ್ಲಿ ಬೇರೇನನ್ನು ಸಾಧಿಸಿದಂತಾಯಿತು. ಭಾರತದ ಜನತೆಯ ಕಷ್ಟಾರ್ಜಿತದ ಹಣದಿಂದ ಅಮೆರಿಕಾಕ್ಕೆ ಲಾಭ ಮಾಡಿಕೊಳ್ಳುವುದನ್ನು ಮುಂದುವರಿಸಲು ಹೊಸ ಒಪ್ಪಂದಗಳನ್ನು ಮಾಡಿಕೊಳ್ಳಲಾಯಿತು. ಅದರ ಹೊರತಾಗಿ ಗಾಂಧೀಜಿಯ ಬಗ್ಗೆ, ಭಾರತದ ಪರಂಪರೆಯ ಬಗ್ಗೆ, ಭಾರತದ ಪ್ರಜಾಪ್ರಭುತ್ವದ ಬಗ್ಗೆ, ಅಮೆರಿಕಾ ಭಾರತದ ಮಧುರ ಸಂಬಂಧದ ಬಗ್ಗೆ, ಭಾರತ ಮತ್ತು ಪಾಕೀಸ್ತಾನದ ಸಂಬಂಧದ ಸಮಸ್ಯೆ ಹಾಗೂ ಅದರಲ್ಲಿ ಅಮೆರಿಕಾದ ಪಾತ್ರದ ಬಗ್ಗೆ ಒಂದಷ್ಟು ಭಾಷಣಗಳನ್ನು ಮಾಡಿದಂತಾಯಿತು. ಪತ್ರಕರ್ತ ಗಿರೀಶ್ ನಿಕ್ಕಂ ತಮ್ಮ ಅಂತರ್ಜಾಲ ತಾಣದ ಅಂಕಣದಲ್ಲಿ ಹೇಳಿರುವುದನ್ನು ಸಮ್ಮತಿಸುವುದಾದರೆ ಒಬಾಮಾಗಿಂತ ಕ್ಲಿಂಟನ್ ಭಾಷಣಗಳು ಹೆಚ್ಚು ಆಕರ್ಷಕವಾಗಿದ್ದವಂತೆ. ಭಾಷೆ, ಪ್ರಸ್ತುತಪಡಿಸುವ ರೀತಿ, ಕೇಳುಗರನ್ನು ಮುದಗೊಳಿಸುವ ಜಾಣತನದಲ್ಲಿ ಒಬಾಮಾಗಿಂತ ಕ್ಲಿಂಟನ್ ಹೆಚ್ಚು ಕುಶಲಿಯಾದ ವೃತ್ತಿಪರ ಭಾಷಣಕಾರ ಎಂದು ಆ ಅಂಕಣದಲ್ಲಿ ಹೇಳಲಾಗಿದೆ.

ಕ್ಲಿಂಟನ್ ಗಾಂಧೀಜಿಯ ಬಗ್ಗೆ ಹೇಳಿದ್ದು ಈ ಪ್ರವಾಸದಲ್ಲಿ ನಾನು ಗಾಂಧಿ ಸ್ಮಾರಕಕ್ಕೆ ಭೇಟಿ ನೀಡುವ ಅವಕಾಶ ಪಡೆದಿರುವುದು ಅತ್ಯಂತ ಮಹತ್ವದ್ದಾಗಿದೆ. ಸಂಯುಕ್ತ ಸಂಸ್ಥಾನಗಳ ಎಲ್ಲ ಜನತೆಯ ಪರವಾಗಿ ಗಾಂಧಿಯವರ ಬದುಕು, ಅವರ ಕಾರ್ಯ ಮತ್ತು ಚಿಂತನೆಗಾಗಿ, ಯಾವ ಚಿಂತನೆಗಳು ಇರದಿದ್ದರೆ ಸಂಯುಕ್ತ ಸಂಸ್ಥಾನಗಳ ಮಹತ್ತರ ನಾಗರಿಕ ಹಕ್ಕುಗಳ ಕ್ರಾಂತಿಯೆಂಬುದು ಶಾಂತಿಯುತವಾಗಿ ನೆರವೇರಲು ಸಾಧ್ಯವಿರಲಿಲ್ಲವೋ ಅದಕ್ಕಾಗಿ ಕೃತಜ್ಞತೆ ಅರ್ಪಿಸಲು ನಾನು ಈ ಸ್ಮಾರಕಕ್ಕೆ ಭೇಟಿ ನೀಡಿದ್ದೇನೆ.

ಒಬಾಮಾ ಗಾಂಧಿಯ ಬಗ್ಗೆ ಹೇಳಿರುವುದು – ಪ್ರೇಮ ಮತ್ತು ನ್ಯಾಯದ ಸಂದೇಶವನ್ನು ಹೊಂದಿರುವ ನಿಮ್ಮ ದೇಶದ ರಾಷ್ಟ್ರಪಿತನಾದ ಮಹಾತ್ಮಾ ಗಾಂಧಿಯವರ ಸ್ಮಾರಕಕ್ಕೆ ಭೇಟಿ ನೀಡುತ್ತಿರುವುದು ನನಗೆ ಮತ್ತು ಮಿಷಲ್‌ಗೆ ವಿಶೇಷ ಅರ್ಥವನ್ನು ಹೊಂದಿದೆ. ... ಅವರು ಅಮೆರಿಕಾ ಮತ್ತು ಪ್ರಪಂಚದೊಂದಿಗೆ ಹಂಚಿಕೊಂಡ ಸಂದೇಶವಿರದಿದ್ದಲ್ಲಿ ನಾನು ಈ ದಿನ ಅಮೆರಿಕಾದ ಅಧ್ಯಕ್ಷನಾಗಿ ನಿಮ್ಮ ಮುಂದೆ ನಿಂತಿರಲು ಸಾಧ್ಯವಿರುತ್ತಿರಲಿಲ್ಲ ಎಂಬ ಅರಿವಿದೆ ನನಗೆ.

ಭಾರತದ ಪರಂಪರೆಯ ಬಗ್ಗೆ ಕ್ಲಿಂಟನ್ ಹೇಳುವುದು – ಹಲವಾರು ಸಂಕೀರ್ಣತೆಗಳ ಮತ್ತು ಎದ್ದು ಕಾಣುವ ವೈರುಧ್ಯಗಳ ನಡುವೆಯೂ ಭಾರತ ನಮಗೆ ಹಲವು ಮೂಲಭೂತ ಪಾಠಗಳನ್ನು ತಿಳಿಸಿಕೊಡುತ್ತಿದೆ ಎಂದು ನಾನು ನಂಬುತ್ತೇನೆ.

ಒಬಾಮಾ ಹೇಳುವುದು ಈ ದೇಶ ಬಹಳ ಬಡವಾಗಿರುವುದರಿಂದ, ಅತಿ ವಿಸ್ತಾರವಾಗಿರುವುದರಿಂದ, ಅತಿ ವಿಭಿನ್ನತೆ ಹೊಂದಿರುವುದರಿಂದ ಅದು ಯಶಸ್ವಿಗೊಳ್ಳುವುದು ಕಷ್ಟ ಎಂಬ ಅನುಮಾನಗಳನ್ನು ಅಲ್ಲಗಳೆಯುವ ಹಾಗೆ ನೀವು ಪ್ರತಿಕೂಲಗಳನ್ನು ದಾಟಿ ಪ್ರಪಂಚಕ್ಕೆ ಮಾದರಿಯಾಗಿದ್ದೀರಿ.

ಕ್ಲಿಂಟನ್ ಮತ್ತು ಒಬಾಮಾ ಭಾರತ ಮತ್ತು ಪಾಕಿಸ್ತಾನಗಳ ಸಂಬಂಧ ಸುಧಾರಣೆಯ ಬಗ್ಗೆ ಹೇಳಿರುವ ನಿಲುವುಗಳಲ್ಲಿ ಕೂಡ ಆಗಿಗೂ ಈಗಿಗೂ ಯಾವುದೇ ವ್ಯತ್ಯಾಸ ಕಂಡುಬರುವುದಿಲ್ಲ.

ಅಮೆರಿಕಾ ಮತ್ತು ಭಾರತ ಸಂಬಂಧಗಳ ನಡುವಿನ ಸವಾಲುಗಳ ಬಗ್ಗೆ ಕ್ಲಿಂಟನ್ ಹೇಳುವುದು – ಬರಲಿರುವ ವರ್ಷಗಳಲ್ಲಿ ನಾಲ್ಕು ಮುಖ್ಯ ಸವಾಲುಗಳನ್ನು ಅದು ಜಂಟಿಯಾಗಿ ಎದುರುಗೊಳ್ಳಬೇಕಾಗಿದೆ. ಮೊದಲನೆಯದು ಉಭಯತ್ರರ ನಡುವಿನ ಆರ್ಥಿಕ ಸಂಬಂಧಗಳನ್ನು ಸರಿಪಡಿಸಿಕೊಳ್ಳುವುದು. ಈ ಆರ್ಥಿಕ ಸಂಬಂಧಗಳಿಂದ ಹೆಚ್ಚೆಚ್ಚು ಭಾರತೀಯರು ಮತ್ತು ಅಮೆರಿಕನ್ನರು ಅನುಕೂಲ ಪಡೆಯುವಂತಾಗಬೇಕು. ಮುಖ್ಯವಾಗಿ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಮಾಲಿನ್ಯರಹಿತ ಶಕ್ತಿ ಮೂಲಗಳು ಈ ಕ್ಷೇತ್ರಗಳಲ್ಲಿ ಉಭಯತ್ರರಿಗೆ ಉಂಟಾಗುವ ಗಳಿಕೆಯ ಬಗ್ಗೆ ಗಮನ ಹಾಕಬೇಕು. ಖಾಸಗಿ ಕ್ಷೇತ್ರದ ಬಂಡವಾಳ ಈ ಪ್ರಗತಿಯನ್ನು ಮುನ್ನಡೆಸಲಿದೆ. ಸರ್ಕಾರಗಳಾಗಿ ನಮ್ಮ ಜವಾಬ್ದಾರಿ ಎಂದರೆ ಆ ಪ್ರಗತಿ ಸಾಧ್ಯಗೊಳಿಸಲು ಖಾಸಗಿಯವರಿಗೆ ಅನುಕೂಲಕರ ಪರಿಸ್ಥಿತಿಯನ್ನು ಏರ್ಪಡಿಸುವುದು. ಹಾಗೆಯೇ ಉಭಯ ದೇಶಗಳ ನಡುವೆ ವಾಣಿಜ್ಯ ಮತ್ತು ಬಂಡವಾಳ ಹೂಡಿಕೆಗೆ ಉಳಿದುಕೊಂಡಿರುವ ಅಡೆತಡೆಗಳನ್ನು ನಿವಾರಿಸುವುದು.

ಎರಡನೆಯದು, ಶ್ರೀಮಂತರು ಮತ್ತು ಬಡವರ ಬದುಕುಗಳನ್ನು ಒಂದೇ ರೀತಿಯಲ್ಲಿ ಮೇಲಕ್ಕೆತ್ತುವ ಹಾಗೆ ಜಾಗತಿಕ ಆರ್ಥಿಕ ಬೆಳವಣಿಗೆಯನ್ನು ಕಾಪಾಡಿಕೊಳ್ಳುವುದು. ಅದು ಪ್ರಪಂಚದೆಲ್ಲೆಡೆ ಸಾಮಾಜಿಕ ನ್ಯಾಯದ ಉದ್ದೇಶವನ್ನು ಈಡೇರಿಸುವ ವಿಧಾನದಲ್ಲಿ ನಡೆಯುವಂತೆ ಮಾಡಬೇಕು.

ಒಬಾಮಾ ಮೂರು ದಿನಗಳ ತನ್ನ ಭೇಟಿಯಲ್ಲಿ ಬೇರೇನನ್ನು ಸಾಧಿಸಿದಂತಾಯಿತು. ಭಾರತದ ಜನತೆಯ ಕಷ್ಟಾರ್ಜಿತದ ಹಣದಿಂದ ಅಮೆರಿಕಾಕ್ಕೆ ಲಾಭ ಮಾಡಿಕೊಳ್ಳುವುದನ್ನು ಮುಂದುವರಿಸಲು ಹೊಸ ಒಪ್ಪಂದಗಳನ್ನು ಮಾಡಿಕೊಳ್ಳಲಾಯಿತು. ಅದರ ಹೊರತಾಗಿ ಗಾಂಧೀಜಿಯ ಬಗ್ಗೆ, ಭಾರತದ ಪರಂಪರೆಯ ಬಗ್ಗೆ, ಭಾರತದ ಪ್ರಜಾಪ್ರಭುತ್ವದ ಬಗ್ಗೆ, ಅಮೆರಿಕಾ ಭಾರತದ ಮಧುರ ಸಂಬಂಧದ ಬಗ್ಗೆ, ಭಾರತ ಮತ್ತು ಪಾಕೀಸ್ತಾನದ ಸಂಬಂಧದ ಸಮಸ್ಯೆ ಹಾಗೂ ಅದರಲ್ಲಿ ಅಮೆರಿಕಾದ ಪಾತ್ರದ ಬಗ್ಗೆ ಒಂದಷ್ಟು ಭಾಷಣಗಳನ್ನು ಮಾಡಿದಂತಾಯಿತು. ಪತ್ರಕರ್ತ ಗಿರೀಶ್ ನಿಕ್ಕಂ ತಮ್ಮ ಅಂತರ್ಜಾಲ ತಾಣದ ಅಂಕಣದಲ್ಲಿ ಹೇಳಿರುವುದನ್ನು ಸಮ್ಮತಿಸುವುದಾದರೆ ಒಬಾಮಾಗಿಂತ ಕ್ಲಿಂಟನ್ ಭಾಷಣಗಳು ಹೆಚ್ಚು ಆಕರ್ಷಕವಾಗಿದ್ದವಂತೆ.

ಮೂರನೆಯದು ಕೈಗಾರಿಕಾಯುಗದ ಕೆಲವು ಕಾಲಾವಸಾನಗೊಂಡ ಸತ್ಯಗಳನ್ನು ಬದಲಿಸುವುದು ಮಾಹಿತಿಯುಗದ ಬೆಳವಣಿಗೆ ಮತ್ತು ಸಮೃದ್ಧತೆಗೆ ಅಗತ್ಯ. ಇಂದು ಭಾರತ ಮತ್ತು ಅಮೆರಿಕಾಗಳಲ್ಲಿ ತೀವ್ರ ಪ್ರಗತಿಯಲ್ಲಿರುವ ಉದ್ದಿಮೆಗಳನ್ನು ಗಮನಿಸಿರಿ. 20ನೇ ಶತಮಾನದಲ್ಲಿ ತೈಲವು ಆ ಸಂಪನ್ಮೂಲ ಹೊಂದಿದ್ದ ದೇಶಗಳನ್ನು ಸಿರಿವಂತಗೊಳಿಸಿದ ಹಾಗೆಯೇ ಜ್ಞಾನವೆಂಬುದು 21ನೇ ಶತಮಾನದಲ್ಲಿ ಅದನ್ನು ಹೊಂದಿರುವ ದೇಶಗಳಿಗೆ ಸಿರಿವಂತಿಕೆ ತರುತ್ತಿದೆ. ವ್ಯತ್ಯಾಸವೇನೆಂದರೆ ಜ್ಞಾನವೆಂಬುದು ಎಲ್ಲಾ ಕಡೆಯ ಜನತೆ ಪಡೆಯಬಹುದಾಗಿರುವ ಸಂಪನ್ಮೂಲವಾಗಿದ್ದು, ಎಂದಿಗೂ ಕೊನೆಯರಿಯದ್ದಾಗಿದೆ.

ನಾಲ್ಕನೆಯದು ನಾವು ಪ್ರಜಾಪ್ರಭುತ್ವ ಮತ್ತು ಪ್ರಗತಿಯ ಫಲಿತಗಳನ್ನು ಅವುಗಳ ವಿರುದ್ಧ ಇರುವ ಶಕ್ತಿಗಳಿಂದ ಕಾಪಾಡಿಕೊಳ್ಳಬೇಕಾಗಿರುವುದು. ಸಂಘಟಿತ ಅಪರಾಧ ಮತ್ತು ಮಾದಕ ದ್ರವ್ಯಗಳ ಅಪಾಯವಿದೆ. ಗುಲಾಮಗಿರಿಯ ಆಧುನಿಕ ರೂಪವಾಗಿರುವ ಮಾನವ ಸಾಗಾಣಿಕೆಯ ಕೆಡುಕಿದೆ ಹಾಗೂ ಭಯೋತ್ಪಾದನೆಯ ಅಪಾಯವಿದೆ. ಇವೆಲ್ಲವನ್ನೂ ಉಭಯ ದೇಶಗಳು ಚೆನ್ನಾಗಿಬಲ್ಲವು.

ಒಬಾಮಾ ಈ ಕುರಿತು ಹೇಳುವುದು – ನಮ್ಮ ಮುಂದಿರುವ ಶತಮಾನದಲ್ಲಿ ಉಭಯ ದೇಶಗಳ ಸಂಬಂಧಗಳನ್ನು ಸುಸ್ಪಷ್ಟ ಪಾಲುದಾರಿಕೆಯನ್ನಾಗಿ ಬೆಳೆಸುವ ಅವಕಾಶವಿದೆ. ಇದನ್ನು ಮೂರು ಕ್ಷೇತ್ರಗಳಲ್ಲಿ ಜೊತೆಗೂಡಿ ಕೆಲಸ ಮಾಡುವುದರಿಂದ ಸಾಧಿಸಬಹುದಾಗಿದೆ. ಮೊದಲನೆಯದು ಜಾಗತಿಕ ಪಾಲುದಾರರಾಗಿರುವ ನಾವು ನಮ್ಮೆರಡೂ ದೇಶಗಳ ಸಂಪತ್ಸಮೃದ್ಧಿಯನ್ನು ಹೆಚ್ಚಿಸಿಕೊಳ್ಳಬಹುದಾಗಿದೆ. ಜೊತೆಗೂಡಿ ಉನ್ನತ ತಂತ್ರಜ್ಞಾನದ, ಹೆಚ್ಚು ಸಂಬಳದ ಕೆಲಸಗಳನ್ನು ಭವಿಷ್ಯದಲ್ಲಿ ನಿರ್ಮಾಣ ಮಾಡಬಹುದಾಗಿದೆ. ಈ ನನ್ನ ಭೇಟಿಯೊಂದಿಗೆ ನಾವು ನಮ್ಮ ನಾಗರಿಕ ಅಣು ಒಪ್ಪಂದವನ್ನು ಜಾರಿಗೊಳಿಸಲು ಸಿದ್ಧರಾಗುತ್ತಿದ್ದೇವೆ. ಭಾರತದ ಹೆಚ್ಚುತ್ತಿರುವ ವಿದುಚ್ಛಕ್ತಿ ಬೇಡಿಕೆಗಳನ್ನು ಇದು ಪೂರೈಸುವುದಲ್ಲದೆ ಉಭಯ ದೇಶಗಳಲ್ಲೂ ಸಾವಿರಾರು ಉದ್ಯೋಗಗಳ ಸೃಷ್ಟಿಗೆ ಇದು ನೆರವಾಗಲಿದೆ.

ನಾವು ನಮ್ಮ ಸಹಯೋಗದ ಅಭಿವೃದ್ಧಿಯನ್ನು ಮುನ್ನಡೆಸಲು ಕೆಲಸ ಮಾಡುತ್ತಾ ನಮ್ಮ ಮತ್ತೊಂದು ಆದ್ಯತೆಯಾಗಿರುವ ಜಂಟಿ ರಕ್ಷಣಾ ವ್ಯವಸ್ಥೆಗೆ ಸಿದ್ಧರಾಗಬೇಕಾಗಿದೆ. ಅದರಲ್ಲೂ ಮುಖ್ಯವಾಗಿ ಮುಂದಿನ ಎರಡು ವರ್ಷಗಳ ಕಾಲ ಭಾರತವು ಭದ್ರತಾ ಮಂಡಳಿಯ ಸದಸ್ಯನಾಗಿ ಕಾರ್ಯ ನಿರ್ವಹಿಸುವ ಸಂದರ್ಭದಲ್ಲಿ ಜಾಗತಿಕ ನಾಯಕರಾಗಿರುವ ಅಮೆರಿಕಾ ಮತ್ತು ಭಾರತಗಳೆರಡೂ ಜಾಗತಿಕ ರಕ್ಷಣಾ ವ್ಯವಸ್ಥೆಯಲ್ಲಿ ಪಾಲುದಾರಿಕೆ ಏರ್ಪಡಿಸಿಕೊಳ್ಳಬಹುದಾಗಿದೆ.

ವ್ಯವಸ್ಥೆ ಎನ್ನುವುದು ಅಗತ್ಯಾನುಸಾರ ತನ್ನ ಮುಖವಾಣಿಗಳಾಗಿ ಬೇರೆ ಬೇರೆ ಬಗೆಯವರನ್ನು ಆಯ್ದುಕೊಳ್ಳಬಹುದು. ಆದರೆ ಅದು ತನ್ನ ಹಿತಾಸಕ್ತಿಯನ್ನು ಬದಲಿಸಿಕೊಳ್ಳುವುದಿಲ್ಲ. ಹತ್ತೂವರೆ ವರ್ಷಗಳ ಅಂತರದಲ್ಲಿ ಭಿನ್ನ ಸಾಮಾಜಿಕ ಹಿನ್ನೆಲೆಯ ಇಬ್ಬರು ಅಧ್ಯಕ್ಷರು ತಮ್ಮ ಭಾಷಣಗಳಲ್ಲಿ ವ್ಯಕ್ತಪಡಿಸಿರುವ ನಿಲುಗಲಲ್ಲಿರುವ ಸಾಮ್ಯತೆ ಮತ್ತು ಮುಂದುವರಿಕೆ ಈ ಅಂಶವನ್ನು ನಿರ್ದೇಶಿಸುತ್ತಿದೆ. ಅದೇ ವ್ಯವಸ್ಥೆಯನ್ನು ಪ್ರತಿನಿಧಿಸಲು ಅದರದೇ ಬೆಂಬಲದಿಂದ ಬಂದು ಕೂರುವ ವ್ಯಕ್ತಿ ಯಾರೇ ಇರಲಿ ಅದರಲ್ಲಿ ಮೂಲಭೂತ ವ್ಯತ್ಯಾಸ ತರುವುದು ಕಷ್ಟ. ಬಿಜೆಪಿಯಲ್ಲಿ ವಾಜಪೇಯಿ ಇರಲಿ ಅಥವಾ ಕಾಂಗ್ರೆಸ್‌ನಲ್ಲಿ ಸಿದ್ಧರಾಮಯ್ಯ ಅಥವಾ

ಖರ್ಗೆ ಇರಲಿ, ಅವರು ವ್ಯಕ್ತಿಗತವಾಗಿ ಒಂದಷ್ಟು ಪ್ರಮಾಣದ ನಿರಾಳತೆಯನ್ನು ಅಥವಾ ಸಡಿಲಿಕೆಯನ್ನು ಉಂಟು ಮಾಡಬಹುದೇ ಹೊರತು ಅದು ಆ ಪಕ್ಷದ ಗುಣ ಸ್ವಭಾವಗಳನ್ನೇ ಬದಲಿಸುವಷ್ಟಿರುವುದಿಲ್ಲ. ಬೇಕಿದ್ದರೆ ಅವರ ಇಚ್ಛೆಯನುಸಾರ ಅವರು ಬೇರೊಂದು ಪಕ್ಷವನ್ನು ಕಟ್ಟಬಹುದು ಅಥವಾ ಅವರಿರುವ ವ್ಯವಸ್ಥೆಯೊಳಗೇ ಇವರದೇ ಆಲೋಚನೆಗಳವರು ನಿರ್ಣಾಯಕ ಪಾತ್ರ ನಿರ್ವಹಿಸುವ ಹಂತ ಬರುವವರೆಗೆ ಕಾಯಬೇಕಾಗುತ್ತದೆ.

ಇದನ್ನು ನಾವು ಭಾರತೀಯ ವ್ಯವಸ್ಥೆಗೂ ಅನ್ವಯಿಸಿ ನೋಡಬಹುದಾಗಿದೆ. ದಲಿತ ಜಾತಿಗೆ ಸೇರಿದವರೊಬ್ಬರು ಈವರೆಗೂ ಈ ದೇಶದ ಪ್ರಧಾನಮಂತ್ರಿ ಸ್ಥಾನಕ್ಕೆ ಏರಲಾಗಿಲ್ಲ ಎಂಬ ಕೊರಗು ನಮ್ಮೆಲ್ಲರಲ್ಲಿ ಇದ್ದೇ ಇದೆ. ನಮ್ಮ ರಾಜಕೀಯ ಪಕ್ಷಗಳು ತಮ್ಮ ಮತ ಸಮೀಕರಣದ ಅಂಗವಾಗಿ ಇಂದಲ್ಲ ನಾಳೆ ದಲಿತರೊಬ್ಬರನ್ನು ಆ ಸ್ಥಾನಕ್ಕೆ ಕೂರಿಸಬೇಕಾಗಿ ಬರುತ್ತದೆ. ನೂರಾರು ವರ್ಷಗಳಿಂದ ಅಸ್ಪೃಶ್ಯತೆ ಅನುಭವಿಸಿ ಸಮಾಜದ ಕಟ್ಟಕಡೆಯ ಸ್ಥಾನಕ್ಕೆ ತಳ್ಳಲ್ಪಟ್ಟಿದ್ದ ದಲಿತ ಸಮುದಾಯದಿಂದ ಪ್ರಧಾನಮಂತ್ರಿ ಸ್ಥಾನ ಅಲಂಕರಿಸುವ ವ್ಯಕ್ತಿಯೊಬ್ಬರು ಮೂಡಿ ಬಂದರೆ ಅದು ಖಂಡಿತವಾಗಿ ದಮನಿತ ಜನತೆಯ ಸ್ವಾಭಿಮಾನಕ್ಕೆ ಗರಿ ಮೂಡಿಸುತ್ತದೆ. ಅದು ದಲಿತ ರಾಜಕಾರಣ ಗಳಿಸಿಕೊಳ್ಳುವ ಬಲ ಹಾಗೂ ಅದರ ಸಾಮಾಜಿಕ ನೆಲೆಗಳ ವಿಸ್ತರಣೆಯ ಸೂಚಕವೂ ಆಗಿರುತ್ತದೆ. ಆದ್ದರಿಂದ ಅಂತಹದೊಂದು ಹಕ್ಕನ್ನು ಪ್ರತಿಪಾದಿಸುವುದಕ್ಕಾಗಿ ಈ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಸಾಮಾಜಿಕ ನ್ಯಾಯ ಆಶಿಸುವವರು ಪ್ರಯತ್ನಿಸುವುದು ಸಹಜವೂ ಆಗಿದೆ.

ಇಂತಹ ಪ್ರಶ್ನೆಗಳು ಬಂದಾಗ ಸಾಮಾನ್ಯವಾಗಿ ತೀವ್ರಗಾಮಿ ಎಡಪಂಥೀಯ ಚಿಂತಕರು ಇದನ್ನು ಮುಖಾಲಂಕಾರದ ಬದಲಾವಣೆ ಎಂದು ವಿಮರ್ಶಿಸುವುದುಂಟು. ಆದರೆ ಭಾರತೀಯ ಜಾತಿ ವ್ಯವಸ್ಥೆಯ ಅಸಮಾನತೆಗಳನ್ನು, ಅದು ಹೇರಿರುವ ಸಾಮಾಜಿಕ ವಿಧಿನಿಷೇಧಗಳನ್ನು ಗಮನಿಸಿದರೆ, ನೆರಳೂ ಕೂಡ ಸೋಕಿಸಬಾರದೆಂಬ ಶಾಸ್ತ್ರಾಚಾರಗಳ ಬಲದಲ್ಲಿ ಯಾರನ್ನು ಹೊರಗಿಟ್ಟಿದ್ದರೋ ಅಂತಹ ಸಮುದಾಯಕ್ಕೆ ಸೇರಿದವರೊಬ್ಬರು ಅಧಿಕಾರದ ಕೇಂದ್ರ ಲಾಂಛನವಾದ ಪ್ರಧಾನಮಂತ್ರಿ ಹುದ್ದೆ ಅಲಂಕರಿಸುವುದು ಸಾಮಾಜಿಕ ತಾರತಮ್ಯಗಳ ಕಟ್ಟಳೆಗಳನ್ನು ಮುರಿಯುವುದರಲ್ಲಿ ಎಷ್ಟು ದೊಡ್ಡ ಪಾತ್ರ ನಿರ್ವಹಿಸುತ್ತದೆಂಬುದನ್ನು ಪರಿಗಣಿಸಬೇಕಾಗುತ್ತದೆ.

ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಇಂತಹವು ನಮ್ಮಂತಹ ಸಮಾಜಗಳಿಗೆ ಅತಿ ಮುಖ್ಯ ಪ್ರಶ್ನೆಗಳೆಂಬುದನ್ನು ನಾವು ಅಲ್ಲಗಳೆಯಲಾಗುವುದಿಲ್ಲ. ಇಂತಹ ಸಮಸ್ಯೆಗಳನ್ನು ನಾವು ಎರಡು ಆಯಾಮಗಳಿಂದಲೂ ಎದುರಿಸಬೇಕಾಗಿದೆ ಎಂಬುದು ನಿಜ. ಕೇವಲ ಅಲಂಕಾರದ ಪದವಿಗಳನ್ನು ಅಲಂಕರಿಸಿದ ಮಾತ್ರಕ್ಕೆ ಅವು ಇಡೀ ಸಮುದಾಯದ ಸಬಲೀಕರಣವನ್ನು ಸಾಧಿಸುತ್ತವೆಂದು ಹೇಳಲಾಗುವುದಿಲ್ಲ. ಹಾಗೆಯೇ ಆ ಬಗೆಯ ಮೇಲ್ಮುಖ ಚಲನೆಯ ಸಾಂಕೇತಿಕ ನಡಿಗೆಗಳಿಲ್ಲದೆ ನಮ್ಮ ಸಾಂಸ್ಕೃತಿಕ ಅಸ್ಮಿತೆಯನ್ನು ಸಾಮಾಜಿಕ ಸಮಾನತೆಯನ್ನು ಪ್ರತಿಪಾದಿಸಲು ದಮನಿತ ಸಮುದಾಯಗಳಿಗೆ ಏಕಾಏಕಿ ಸಾಧ್ಯವಾಗಿಬಿಡುತ್ತದೆ ಎಂದು ಊಹಿಸಿಕೊಳ್ಳುವುದೂ ಕೂಡ ಸರಿಯಾಗುವುದಿಲ್ಲ.

ಇವುಗಳನ್ನು ನಾವು ರಾಜಕೀಯಾರ್ಥಿಕ ಆಯಾಮದಿಂದ ಬೇರ್ಪಡಿಸಿ ನೋಡಿದರೆ ವ್ಯರ್ಥ ಎಂಬ ಎಚ್ಚರ

ದಮನಕಾರಿ ವ್ಯವಸ್ಥೆಯ ಆಶ್ರಯದಡಿಯಲ್ಲಿ ಅಧಿಕಾರಕ್ಕೆ ಬಂದ ಯಾವುದೇ ವ್ಯಕ್ತಿ ಆ ವ್ಯವಸ್ಥೆಯ ನಿಯಂತ್ರಣಗಳಲ್ಲೇ ಕೆಲಸ ಮಾಡುತ್ತಾನೆ. ಆದ್ದರಿಂದ ಆತ ಯಾವ ಮೂಲದಿಂದ ಹುಟ್ಟಿ ಬಂದಿದ್ದರೂ, ಯಾವುದೇ ಮೈ ಬಣ್ಣ ಹೊಂದಿದ್ದರೂ ನಾವು ಹೊಂದಬಹುದಾಗಿರುವ ಸಹಾನುಭೂತಿ ಬಹಳ ಅತ್ಯಲ್ಪವಾದುದು ಮಾತ್ರ. ಆದ್ದರಿಂದ ಜಗತ್ತಿನ ಮೇಲೆ ತನ್ನ ಅಧಿಪತ್ಯವನ್ನು ಹೇರಿರುವ ಅಮೆರಿಕಾಕ್ಕೆ ನಾವು ಧಿಕ್ಕಾರ ಸೂಚಕವಾಗಿ ಕಪ್ಪು ಬಾವುಟ ಎತ್ತಿ ಹಿಡಿದರೆ ಅದು ಒಬಾಮ ಮುಖಕ್ಕೆ ತಾಗಲೇಬೇಕು.

ನಮ್ಮನ್ನು ಸದಾ ಕಾಪಾಡಬೇಕು. ಹಾಗಾಗಿಯೇ ಒಬಾಮಾ ಭಾರತಕ್ಕೆ ಬಂದಾಗ ಒಂದು ದೇಶವಾಗಿ ನಮಗೆ ಬರುವ ಭಾಗ್ಯವೇನು ಎಂಬ ಪ್ರಶ್ನೆಯನ್ನು ಎತ್ತಿಕೊಳ್ಳಲೇಬೇಕಾಗುತ್ತದೆ. ಆತ ಅಮೆರಿಕಾ ಜಾಗತೀಕರಣ ಹಿತಾಸಕ್ತಿಯ ಪ್ರತಿನಿಧಿಯಾಗಿ ಮಾತ್ರ ವ್ಯವಹರಿಸಬಲ್ಲ. ಅಮೆರಿಕಾ ಭಾರತಕ್ಕೆ ಏನೇನು ಮಾಡಿದೆ? ಮತ್ತೇನೇನನ್ನು ಮಾಡಬಯಸಿದೆ? ಎಂಬ ರಾಜಕೀಯಾರ್ಥಿಕ ಎಚ್ಚರಿಕೆ ಹೊರತಾಗಿ ನಾವು ಅಮೆರಿಕಾ ಅಧ್ಯಕ್ಷ ಒಬಾಮಾನನ್ನು ಸ್ವಾಗತಿಸಲಾರೆವು. ಒಬಾಮಾಗೆ ಇರಬಹುದು ಎಂದು ನಾವು ಕಲ್ಪಿಸಿಕೊಳ್ಳುವ ಸಂವೇದನಾಶೀಲತೆಯನ್ನು ಮೆಚ್ಚಿಕೊಳ್ಳುವಾಗಲೂ ಅದು ಕೇವಲ ಸಮುದ್ರದ ಮೇಲಿನ ನೊರೆಯ ಹಾಗೆ ಎಂಬುದನ್ನು ನೆನಪಿಡಬೇಕಾಗುತ್ತದೆ. ಕಡಲಿನ ಅಲೆಗಳ ಸ್ವಭಾವದ ಮೇಲೆ ಮಾತ್ರವೇ ನಾವು ಅದನ್ನು ಅರ್ಥೈಸಬಹುದೇ ಹೊರತು ಅದರ ಮೇಲಿನ ಬಿಳಿನೊರೆಯ ಮುಖಾಂತರವಾಗಿ ಅಲ್ಲ. ಜಾಗತಿಕ ದಮನವಿರೋಧಿ ಆಶಯಗಳಿಗೆ ಶಕ್ತಿ ತುಂಬುವುದು ನಮ್ಮ ಈಗಿನ ಕೆಲಸವಾಗಿದೆ.

ದಮನಕಾರಿ ವ್ಯವಸ್ಥೆಯ ಆಶ್ರಯದಡಿಯಲ್ಲಿ ಅಧಿಕಾರಕ್ಕೆ ಬಂದ ಯಾವುದೇ ವ್ಯಕ್ತಿ ಆ ವ್ಯವಸ್ಥೆಯ ನಿಯಂತ್ರಣಗಳಲ್ಲೇ ಕೆಲಸ ಮಾಡುತ್ತಾನೆ. ಆದ್ದರಿಂದ ಆತ ಯಾವ ಮೂಲದಿಂದ ಹುಟ್ಟಿ ಬಂದಿದ್ದರೂ, ಯಾವುದೇ ಮೈ ಬಣ್ಣ ಹೊಂದಿದ್ದರೂ ನಾವು ಹೊಂದಬಹುದಾಗಿರುವ ಸಹಾನುಭೂತಿ ಬಹಳ ಅತ್ಯಲ್ಪವಾದುದು ಮಾತ್ರ. ಆದ್ದರಿಂದ ಜಗತ್ತಿನ ಮೇಲೆ ತನ್ನ ಅಧಿಪತ್ಯವನ್ನು ಹೇರಿರುವ ಅಮೆರಿಕಾಕ್ಕೆ ನಾವು ಧಿಕ್ಕಾರ ಸೂಚಕವಾಗಿ ಕಪ್ಪು ಬಾವುಟ ಎತ್ತಿ ಹಿಡಿದರೆ ಅದು ಒಬಾಮ ಮುಖಕ್ಕೆ ತಾಗಲೇಬೇಕು. ಅದು ಒಬಾಮ ಹಾಗೂ ಆತನ ಮೆಚ್ಚಿನ ಮಡದಿ ಮಿಶೆಲ್‌ಗೆ ನಾವು ತೋರಿಸಿದ ಅಗೌರವವಲ್ಲ. ಬದಲಾಗಿ ಅಮೆರಿಕಾ ದೇಶವು ಈ ಜಗತ್ತಿನಲ್ಲಿ ನಡೆಸುತ್ತಿರುವ ಪಾತಕಗಳಿಗೆ ತೋರಿಸುತ್ತಿರುವ ಧಿಕ್ಕಾರ. ಜಗತ್ತಿನ ಮಾನವೀಯತೆಯ ನಿರ್ಮಾಣಕ್ಕೆ ಕೊಡುಗೆ ನೀಡಲು ಅಮೆರಿಕಾ ಅಧ್ಯಕ್ಷನಾಗಿ ತಾನು ಅಸಹಾಯಕನಾಗಿದ್ದೇನೆ ಎಂಬ ಅಂಶ ಒಬಾಮಾ ಮನಸ್ಸಿನಲ್ಲೂ ಉಳಿದುಕೊಂಡಿದ್ದು ಈ ಪ್ರತಿಭಟನೆಯನ್ನು ಅರ್ಥಮಾಡಿಕೊಳ್ಳಬಹುದಾದರೆ ಆತ ಅಷ್ಟರಮಟ್ಟಿಗೆ ಹೆಚ್ಚು ಹೃದಯವಂತ ಎನ್ನಬಹುದೇನೋ. □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೧
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೨

ಕ್ರೀಡೆ ಮತ್ತು ಆಹಾರ ಕ್ರಮ

ದಲಿತ್ ಡೈರಿ

ಚಂದ್ರಭಾನ್ ಪ್ರಸಾದ್

ಅನು: ಸತ್ಯಪ್ರಕಾಶ್ ಎಂ ಆರ್

ಆರ್ಥಿಕ ಬೆಳವಣಿಗೆಯಲ್ಲಿ ಅದ್ಭುತಗಳನ್ನು ಸಾಧಿಸುತ್ತಿರುವ ನವ ಭಾರತ ಇತ್ತೀಚೆಗೆ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಕೂಡ ಅತ್ಯುತ್ತಮ ಪ್ರದರ್ಶನ ನೀಡಿದೆ. ಕ್ರೀಡಾಕೂಟದಲ್ಲಿ 38 ಚಿನ್ನದ ಪದಕಗಳನ್ನೊಳಗೊಂಡಂತೆ ಒಟ್ಟು 101 ಪದಕಗಳನ್ನು ಪಡೆದು ಭಾರತ ಎರಡನೆಯ ಸ್ಥಾನ ಗಳಿಸಿತು. ಆದರೆ ಭೌಗೋಳಿಕವಾಗಿ ನಮ್ಮ ಹರಿಯಾಣ ರಾಜ್ಯದಷ್ಟಿರುವ ಆಸ್ಟ್ರೇಲಿಯಾ ಮೊದಲ ಸ್ಥಾನ ಗಳಿಸಿತು.

ಅದೇನೇ ಇರಲಿ, 2012ರಲ್ಲಿ ಲಂಡನ್‌ನಲ್ಲಿ ನಡೆಯಲಿರುವ ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ಅದ್ಭುತ ಪ್ರದರ್ಶನ ನೀಡುವ ನಿಟ್ಟಿನಲ್ಲಿ ಭಾರತ ಸ್ಪಷ್ಟ ಸೂಚನೆ ನೀಡಿದೆ. 2024ರಲ್ಲಿ ಭಾರತ ಕ್ರೀಡಾ ಕ್ಷೇತ್ರದ ಮಹಾನ್ ಶಕ್ತಿಯಾಗಿ ಹೊರಹೊಮ್ಮಲಿದೆ ಎಂದು ಈಗಾಗಲೇ ಬಹಳಷ್ಟು ಮಂದಿ ವಿಶ್ಲೇಷಕರು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. 2020ರ ವೇಳೆಗೆ ಭಾರತ ಆರ್ಥಿಕ ಶಕ್ತಿಯಾಗಿ ಮುಂಚೂಣಿಗೆ ಬಂದಿರುತ್ತದೆ.

ಹೀಗಾಗಿ ಕ್ರೀಡಾ ಕ್ಷೇತ್ರದಲ್ಲಿ ಕೂಡ ಸಾಧನೆ ಮಾಡಲಿದೆ ಎಂಬ ಆಶಾವಾದ ಇದು. ಆದರೆ ಮುಂಬರುವ ಒಲಂಪಿಕ್ಸ್‌ನಲ್ಲಿ ಚೀನಾ, ರಷ್ಯಾ, ಜಪಾನ್, ಜರ್ಮನಿ, ಫ್ರಾನ್ಸ್ ಮತ್ತಿತರ ದೇಶಗಳು ಸ್ಪರ್ಧಿಸುವುದರಿಂದ ಭಾರತದ ಕನಸು ಭಗ್ನವಾಗುವುದೇ? ಲಂಡನ್ ಒಲಂಪಿಕ್ಸ್‌ನಲ್ಲಿ ಭಾರತ ಅದ್ಭುತ ಪ್ರದರ್ಶನ ನೀಡಲಿ, 2024ರ ಒಲಂಪಿಕ್ಸ್‌ನಲ್ಲಿ ಮೊದಲ ಸ್ಥಾನ ಪಡೆಯಲಿ ಎನ್ನುವುದು ನಮ್ಮೆಲ್ಲರ ಆಸೆ. ಆದರೆ ಆಶಾವಾದ ನಿಜವಾಗಬೇಕೆಂದೇನಿಲ್ಲವಲ್ಲ.

ಭಾರತ ಸಾಮಾಜಿಕವಾಗಿ ಬದಲಾಗದ ಹೊರತು 2024ರ ಒಲಂಪಿಕ್ಸ್‌ನ ಕನಸು ಕನಸಾಗಿಯೇ ಉಳಿಯಲಿದೆ. ಹರಿಯಾಣ ಮತ್ತು ಆಸ್ಟ್ರೇಲಿಯಾದ ಉದಾಹರಣೆಗಳೊಂದಿಗೆ ಕೆಲವು ವಿಚಾರಗಳನ್ನು ಇಲ್ಲಿ ಮಂಡಿಸುತ್ತಿದ್ದೇನೆ. ಹರಿಯಾಣದ ಜನಸಂಖ್ಯೆ 21.98 ಮಿಲಿಯನ್‌ನಷ್ಟಿದ್ದರೆ, ಆಸ್ಟ್ರೇಲಿಯಾದ ಜನಸಂಖ್ಯೆ 21.26 ಮಿಲಿಯನ್‌ನಷ್ಟಿದೆ. ಭಾರತದ ಎರಡನೆಯ ಶ್ರೀಮಂತ ರಾಜ್ಯ ಹರಿಯಾಣ. ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಅತಿಹೆಚ್ಚು ಪದಕಗಳನ್ನು ಗೆದ್ದ ಹರಿಯಾಣ ರಾಜ್ಯದ ಬಗ್ಗೆ ನಾವು ಹೆಮ್ಮೆ ಪಡಬೇಕು ಹೌದು. ಆದರೆ ಇಲ್ಲಿನ ವಾಸ್ತವ ಸ್ಥಿತಿ ಬೇರೆಯೇ ಇದೆ.

> **ಭಾರತ ಸಾಮಾಜಿಕವಾಗಿ ಬದಲಾಗದ ಹೊರತು ೨೦೨೪ರ ಒಲಂಪಿಕ್ಸ್‌ನ ಕನಸು ಕನಸಾಗಿಯೇ ಉಳಿಯಲಿದೆ. ಹರಿಯಾಣ ಮತ್ತು ಆಸ್ಟ್ರೇಲಿಯಾದ ಉದಾಹರಣೆಗಳೊಂದಿಗೆ ಕೆಲವು ವಿಚಾರಗಳನ್ನು ಇಲ್ಲಿ ಮಂಡಿಸುತ್ತಿದ್ದೇನೆ. ಹರಿಯಾಣದ ಜನಸಂಖ್ಯೆ ೨೧.೯೮ ಮಿಲಿಯನ್‌ನಷ್ಟಿದ್ದರೆ, ಆಸ್ಟ್ರೇಲಿಯಾದ ಜನಸಂಖ್ಯೆ ೨೧.೨೬ ಮಿಲಿಯನ್‌ನಷ್ಟಿದೆ. ಭಾರತದ ಎರಡನೆಯ ಶ್ರೀಮಂತ ರಾಜ್ಯ ಹರಿಯಾಣ. ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಅತಿಹೆಚ್ಚು ಪದಕಗಳನ್ನು ಗೆದ್ದ ಹರಿಯಾಣ ರಾಜ್ಯದ ಬಗ್ಗೆ ನಾವು ಹೆಮ್ಮೆ ಪಡಬೇಕು ಹೌದು. ಆದರೆ ಇಲ್ಲಿನ ವಾಸ್ತವ ಸ್ಥಿತಿ ಬೇರೆಯೇ ಇದೆ. ಟ್ರ್ಯಾಕ್ ಮತ್ತು ಫೀಲ್ಡ್ ಸ್ಪರ್ಧೆಗಳು, ಈಜು, ಜಿಮ್ನಾಸ್ಟಿಕ್ ಸ್ಪರ್ಧೆಗಳಲ್ಲಿ ಪ್ರಾಬಲ್ಯ ಸಾಧಿಸದೆ ಯಾವುದೇ ರಾಷ್ಟ್ರ ಕ್ರೀಡಾ ಕ್ಷೇತ್ರದಲ್ಲಿ ಅದ್ಭುತ ಸಾಧಿಸಲು ಸಾಧ್ಯವಾಗುವುದಿಲ್ಲ.**

ಟ್ರ್ಯಾಕ್ ಮತ್ತು ಫೀಲ್ಡ್ ಸ್ಪರ್ಧೆಗಳು, ಈಜು, ಜಿಮ್ನಾಸ್ಟಿಕ್ ಸ್ಪರ್ಧೆಗಳಲ್ಲಿ ಪ್ರಾಬಲ್ಯ ಸಾಧಿಸದೆ ಯಾವುದೇ ರಾಷ್ಟ್ರ ಕ್ರೀಡಾ ಕ್ಷೇತ್ರದಲ್ಲಿ ಅದ್ಭುತ ಸಾಧಿಸಲು ಸಾಧ್ಯವಾಗುವುದಿಲ್ಲ. ಉದಾಹರಣೆಗೆ ಆಸ್ಟ್ರೇಲಿಯಾ ಮತ್ತು ಹರಿಯಾಣದ ನಡುವೆ ಸ್ಪರ್ಧೆ ನಡೆದರೆ ಬಹುಶಃ ಆಸ್ಟ್ರೇಲಿಯಾ ಕುಸ್ತಿ, ವೈಟ್‌ಲಿಫ್ಟಿಂಗ್ ಮತ್ತು ಬಾಕ್ಸಿಂಗ್‌ನಲ್ಲಿ ಮಾತ್ರ ಹರಿಯಾಣದ ಎದುರು ಪರಾಭವಗೊಳ್ಳಬಹುದು. ಉಳಿದ ಎಲ್ಲ ಸ್ಪರ್ಧೆಗಳಲ್ಲಿ ಹರಿಯಾಣ ಹೇಳ ಹೆಸರಿಲ್ಲದಂತಾಗುತ್ತದೆ. ಒಂದುವೇಳೆ ಭಾರತ ಮತ್ತು ಆಸ್ಟ್ರೇಲಿಯಾದ ನಡುವೆ ಸ್ಪರ್ಧೆ ನಡೆದರೂ ಕೂಡ ಇದೇ ಪರಿಸ್ಥಿತಿ ಇರುವುದರಲ್ಲಿ ಸಂಶಯವಿಲ್ಲ. ಆದರೆ ಭಾರತದ ಜನಸಂಖ್ಯೆ ಆಸ್ಟ್ರೇಲಿಯಾಕ್ಕಿಂತ ಐವತ್ತು ಪಟ್ಟು ಹೆಚ್ಚಿದೆ.

19ನೇ ಕಾಮನ್‌ವೆಲ್ತ್ ಕ್ರೀಡಾಕೂಟದ ಟ್ರ್ಯಾಕ್ ಮತ್ತು ಫೀಲ್ಡ್ ಸ್ಪರ್ಧೆಗಳಲ್ಲಿ ಭಾರತ ಈ ಬಾರಿ ಪದಕಗಳನ್ನು ಪಡೆದಿರುವುದು ದಿಟವಾದರೂ, ಇವು ಕೆಲವೇ ಪದಕಗಳಿಗೆ ಸೀಮಿತವಾಗಿತ್ತು. ಬಹಳಷ್ಟು ಆಟಗಳಿಗೆ ಬೇರೆ ರೀತಿಯ ದೈಹಿಕ ಸಾಮರ್ಥ್ಯದ ಅವಶ್ಯಕತೆಯಿದೆ. ಕ್ರೀಡೆಗಳನ್ನು ದೈಹಿಕ ಸಾಮರ್ಥ್ಯದ ಆಧಾರದ ಮೇಲೆ ಐದು ವಿಭಾಗಗಳಾಗಿ ವಿಂಗಡಿಸಬಹುದು: ಕಾಲುಗಳನ್ನು ಆಧರಿಸಿದ ಕ್ರೀಡೆಗಳು, ಕೈಗಳನ್ನು ಆಧರಿಸಿದ ಕ್ರೀಡೆಗಳು, ಕೈಗಳು ಮತ್ತು ಕಾಲುಗಳನ್ನು ಆಧರಿಸಿದ ಕ್ರೀಡೆಗಳು, ದೇಹವನ್ನಾಧರಿಸಿದ ಕ್ರೀಡೆಗಳು, ದೇಹ–ಕಾಲುಗಳು–ಕೈಗಳನ್ನಾಧರಿಸಿದ ಕ್ರೀಡೆಗಳು. ಬಹುತೇಕ ಟ್ರ್ಯಾಕ್ ಮತ್ತು ಫೀಲ್ಡ್, ಈಜು ಮತ್ತು ಜಿಮ್ನಾಸ್ಟಿಕ್ ಕ್ರೀಡೆಗಳು ಹೆಚ್ಚು ಕಮ್ಮಿ ಕಾಲುಗಳನ್ನಾಧರಿಸಿದ್ದು, ಕೆಲವು ಕೈಗಳು ಮತ್ತು ಕಾಲುಗಳನ್ನು ಆಧರಿಸಿರುತ್ತವೆ.

ಕಾಲುಗಳು ಮತ್ತು ಕೈಗಳನ್ನಾಧರಿಸಿದ ಕ್ರೀಡೆಗಳಿಗೆ ದೇಹದಾರ್ಢ್ಯಕ್ಕಿಂತ ಸಾಮರ್ಥ್ಯದ ಅಗತ್ಯತೆ ಹೆಚ್ಚು. ಕುಸ್ತಿ, ಬಾಕ್ಸಿಂಗ್ ಮತ್ತು ವೈಟ್ ಲಿಫ್ಟಿಂಗ್ ಸ್ಪರ್ಧೆಗಳಿಗೆ ಕಡಿಮೆ ಅವಧಿಗೆ ತೀವ್ರವಾದ ದೈಹಿಕ ಸಾಮರ್ಥ್ಯದ ಅಗತ್ಯತೆ ಇರುತ್ತದೆ. ಈ ರೀತಿಯ ದೈಹಿಕ ಸಾಮರ್ಥ್ಯ ಹೊಂದಲು ಒಂದು ಭಿನ್ನವಾದ ಆಹಾರ ಕ್ರಮವನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಈ ಆಹಾರ ಕ್ರಮವು ಡೈರಿ ಆಧಾರಿತ ಆಹಾರ ಪದಾರ್ಥಗಳು ಮತ್ತು ಡ್ರೈ ಫ್ರೂಟ್ಸ್‌ಗಳನ್ನು ಒಳಗೊಂಡಿರಬೇಕಾಗುತ್ತದೆ.

ದೈಹಿಕ ಸಾಮರ್ಥ್ಯ ಸಮಯಾಧಾರಿತವಾದುದು. ಉದಾಹರಣೆಗೆ ವೈಟ್‌ಲಿಫ್ಟಿಂಗ್, ಕುಸ್ತಿ ಮತ್ತು ಬಾಕ್ಸಿಂಗ್‌ನಂತಹ ಕ್ರೀಡೆಗಳಿಗೆ 2–3 ನಿಮಿಷದವರೆಗೆ ನಿಲ್ಲುವ ಸಾಮರ್ಥ್ಯ ಬೇಕಾದರೆ, ಕಾಲುಗಳನ್ನಾಧರಿಸಿದ ಟ್ರ್ಯಾಕ್ ಮತ್ತು ಫೀಲ್ಡ್, ಈಜು ಮತ್ತು ಜಿಮ್ನಾಸ್ಟಿಕ್ ಕ್ರೀಡೆಗಳಿಗೆ ಹೆಚ್ಚು ಅವಧಿಯವರೆಗೆ ಅಂದರೆ ಕೆಲವು ಗಂಟೆಗಳವರೆಗೆ ದೈಹಿಕ ಸಾಮರ್ಥ್ಯ ಕಾಯ್ದುಕೊಳ್ಳಬೇಕಾಗುತ್ತದೆ. ಸೈಕ್ಲಿಂಗ್ ಮತ್ತು ಮ್ಯಾರಥಾನ್‌ನಂತಹ ಕ್ರೀಡೆಗಳಿಗೆ ಅತ್ಯಧಿಕ ಸಾಮರ್ಥ್ಯವನ್ನು ದೀರ್ಘಕಾಲದವರೆಗೆ ಇರಿಸಿಕೊಳ್ಳಬೇಕಾಗುತ್ತದೆ.

ಇನ್ನು ಹರಿಯಾಣದ ವಿಚಾರಕ್ಕೆ ಬರುವುದಾದರೆ, ಕುಸ್ತಿ, ವೈಟ್ ಲಿಫ್ಟಿಂಗ್ ಮತ್ತು ಬಾಕ್ಸಿಂಗ್ ಕ್ರೀಡೆಗಳಲ್ಲಿ ಅದ್ಭುತ ಪ್ರದರ್ಶನ ನೀಡಿದ ಈ ರಾಜ್ಯದ ಕ್ರೀಡಾಪಟುಗಳು, ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ನೀರಸ ಪ್ರದರ್ಶನ ನೀಡಿದರು. ಓರ್ವ ಕ್ರೀಡಾಪಟುವಿನ ದೈಹಿಕ ಸಾಮರ್ಥ್ಯ ಆತ ಸೇವಿಸುವ ಆಹಾರವನ್ನು ಅವಲಂಬಿಸಿರುತ್ತದೆ. ಬಹುತೇಕ ಸಸ್ಯಾಹಾರಿಗಳಾದ ಭಾರತೀಯ ಕ್ರೀಡಾಪಟುಗಳು ಐದು ನಿಮಿಷಕ್ಕಿಂತ ಅಧಿಕ ಅವಧಿಯವರೆಗೆ ದೈಹಿಕ ಸಾಮರ್ಥ್ಯವನ್ನು ಕಾಯ್ದುಕೊಳ್ಳಲು ಕಷ್ಟಪಡುತ್ತಾರೆ.

ಆಸ್ಟ್ರೇಲಿಯಾದಲ್ಲಿ ಪ್ರತಿ ವ್ಯಕ್ತಿ ವಾರ್ಷಿಕ 250 ಮೊಟ್ಟೆಗಳನ್ನು ಸೇವಿಸಿದರೆ, ಭಾರತದಲ್ಲಿ ಇದರ ಪ್ರಮಾಣ 38 ಮಾತ್ರ. ವಿಟಮಿನ್ ಸಿ ಒಂದನ್ನು ಹೊರತುಪಡಿಸಿ, ಉಳಿದೆಲ್ಲ ವಿಟಮಿನ್‌ಗಳು ಮೊಟ್ಟೆಯಲ್ಲಿರುತ್ತವೆ. ಸಮರ್ಪಕ ರೀತಿಯಲ್ಲಿ ಪ್ಯಾಕಿಂಗ್ ಮಾಡಿದರೆ ಮೊಟ್ಟೆಯಲ್ಲಿರುವ ಪ್ರೋಟೀನ್ ಅಂಶಗಳಿಗೆ ತೊಂದರೆ ಉಂಟಾಗುವುದಿಲ್ಲ. ಹರಿಯಾಣದಲ್ಲಿ ಜನ ಯಾವ ರೀತಿಯ ಆಹಾರ ಸೇವಿಸುತ್ತಾರೆ? 2005–06ರ ರಾಷ್ಟ್ರೀಯ ಕೌಟುಂಬಿಕ ಆರೋಗ್ಯ ಸಮೀಕ್ಷೆ (ಎನ್‌ಎಫ್‌ಎಚ್‌ಎಸ್)ಯ ಪ್ರಕಾರ ಹರಿಯಾಣದ ಶೇ.9ರಷ್ಟು ಮಂದಿ ಗಂಡಸರು ಮಾತ್ರ ವಾರ

ಭಾರತದ ಒಲಂಪಿಕ್ಸ್ ಕನಸು

ದಲ್ಲಿ ಒಮ್ಮೆಯಾದರೂ ಮೊಟ್ಟೆ ಸೇವಿಸುತ್ತಾರೆ. ಆದರೆ ಹರಿಯಾಣದ ಶೇ. 87.8ರಷ್ಟು ಮಂದಿ ವಾರದಲ್ಲಿ ಒಮ್ಮೆಯಾದರೂ ಹಾಲನ್ನು ಸೇವಿಸುತ್ತಾರೆ. ಇನ್ನು ಮಾಂಸ, ಮೀನು, ಕೋಳಿ ಮತ್ತಿತರ ಮಾಂಸಹಾರದ ವಿಚಾರಕ್ಕೆ ಬರುವುದಾದರೆ ಎನ್‌ಎಫ್‌ಎಚ್‌ಎಸ್-3ರ ಪ್ರಕಾರ ಹರಿಯಾಣದ ಶೇ.5.5ರಷ್ಟು ಮಂದಿ ಮಾತ್ರ ವಾರದಲ್ಲಿ ಒಮ್ಮೆಯಾದರೂ ಮಾಂಸಾಹಾರ ಸೇವನೆ ಮಾಡುತ್ತಾರೆ.

ಅಧಿಕ ಅವಧಿಯವರೆಗೆ ದೈಹಿಕ ಸಾಮರ್ಥ್ಯ ಹೊಂದಲು ಸಸ್ಯಾಹಾರ, ಮಾಂಸಾಹಾರ, ಹಣ್ಣು, ಹಾಲು ಎಲ್ಲವನ್ನು ಒಳಗೊಂಡ ಸಮಗ್ರವಾದ ಆಹಾರ ಕ್ರಮವನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಆಸ್ಟ್ರೇಲಿಯಾದ ಸಾಮಾನ್ಯ ವ್ಯಕ್ತಿ ಮಾಂಸವಿಲ್ಲದ ಆಹಾರವನ್ನು ಊಹಿಸಿಕೊಳ್ಳುವುದೂ ಇಲ್ಲ. ಆಸ್ಟ್ರೇಲಿಯನ್ನರು ದನ, ಹಂದಿ ಮತ್ತು ಕುರಿ ಮಾಂಸ, ಮೀನು, ಮೊಟ್ಟೆ, ಬೆಣ್ಣೆ, ಚೀಸ್, ಹಣ್ಣು ಹಂಪಲು, ಹಾಲು ಎಲ್ಲವನ್ನೂ ಸೇವಿಸುತ್ತಾರೆ. ಭಾರತ ಮಾಂಸಾಹಾರ ಆಹಾರ ಕ್ರಮವನ್ನು ಅಳವಡಿಸಿಕೊಳ್ಳದೆ 2024ರ ಲಂಡನ್ ಒಲಂಪಿಕ್ಸ್‌ನಲ್ಲಿ ಅಮೆರಿಕಾ, ಚೀನಾ ಮತ್ತು ರಷ್ಯಾ ದೇಶಗಳಿಗೆ ಪ್ರತಿಸ್ಪರ್ಧೆ ಒಡ್ಡಲು ಸಾಧ್ಯವಿಲ್ಲ.

ಭಾರತದ ಆಹಾರ ಕ್ರಮ ಆದಾಯಕ್ಕಿಂತ ಹೆಚ್ಚಾಗಿ ಜಾತಿಯನ್ನಾಧರಿಸಿದೆ. ಒಂದು ಅದ್ಭುತ ಕ್ರೀಡಾ ರಾಷ್ಟ್ರವಾಗಿ ಹೊರಹೊಮ್ಮಲು ಭಾರತ ಮೊದಲಿಗೆ ಜಾತಿಯಾಧಾರಿತ ಆಹಾರಕ್ರಮವನ್ನು ಬಿಡಬೇಕು. ಕೇವಲ ಆರ್ಥಿಕ ಶಕ್ತಿಯೊಂದೇ ಕ್ರೀಡಾಕ್ಷೇತ್ರದ ಸಾಧನೆಗೆ ಪೂರಕವಾಗಲಾರದು.

* * * * * *

ಕ್ರೀಡಾ ಕ್ಷೇತ್ರದ ಯಶಸ್ಸು ಕೇವಲ ಕ್ರೀಡಾ ಸೌಕರ್ಯ ಮತ್ತು ಕ್ರೀಡಾಪಟುಗಳನ್ನು ಅವಲಂಬಿಸಿರುವುದಿಲ್ಲ. ಕ್ರೀಡಾ ಕ್ಷೇತ್ರದ ಯಶಸ್ಸು ಜನಪ್ರಿಯತೆಯ ಮಾನದಂಡ ಮಾತ್ರವಲ್ಲ. ಕ್ರೀಡೆಯಲ್ಲಿನ ಯಶಸ್ಸು ದೇಶದ ನಾಗರಿಕರ ಮೇಲೆ ಅಗಾಧವಾದ ಪರಿಣಾಮ ಬೀರುವುದರಲ್ಲಿ ಎರಡು ಮಾತಿಲ್ಲ. ಕ್ರೀಡಾ ಕ್ಷೇತ್ರದ ಯಶಸ್ಸಿನಿಂದ ಉತ್ತೇಜಿತರಾಗಿ ಇತರ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಾಗರಿಕರು ಕೂಡ ತಂತಮ್ಮ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಾರೆ. ಕ್ರೀಡೆಯಲ್ಲಿನ ಸಾಧನೆ ಸಾಮಾನ್ಯರಿಗೂ ಆತ್ಮಗೌರವದ ಉತ್ತೇಜನ ಒದಗಿಸುತ್ತದೆ. ಇತ್ತೀಚೆಗೆ ಮುಕ್ತಾಯಗೊಂಡ 19ನೇ ಕಾಮನ್‌ವೆಲ್ತ್ ಕ್ರೀಡಾಕೂಟ ಆರಂಭವಾಗುವುದಕ್ಕೆ ಮುಂಚೆ ಹಲವಾರು ವಿವಾದಗಳನ್ನು ಸೃಷ್ಟಿಸಿದ್ದರೂ, ಕ್ರೀಡಾಕೂಟದಲ್ಲಿ ಭಾರತದ ಕ್ರೀಡಾಪಟುಗಳು ಮಾಡಿದ ಸಾಧನೆ ಸಾಮಾನ್ಯ ಭಾರತೀಯರ ಆತ್ಮಗೌರವವನ್ನು ಹೆಚ್ಚಿಸಿದ್ದು ಸುಳ್ಳಲ್ಲ.

ಆದರೆ ನವೆಂಬರ್ 12, 2010ರಂದು ಚೀನಾದ ಗುಂಗ್ಝೂ ನಗರದಲ್ಲಿ ನಡೆಯಲಿರುವ ಏಷ್ಯಾ ಕ್ರೀಡಾಕೂಟ ಭಾರತದ ಕಾಮನ್‌ವೆಲ್ತ್ ಯಶಸ್ಸಿಗೆ ದೊಡ್ಡ ಸವಾಲನ್ನೊಡ್ಡಲಿದೆ. ಈ ಕ್ರೀಡಾಕೂಟದಲ್ಲಿ ಚೀನಾ, ಜಪಾನ್ - ದಕ್ಷಿಣ ಕೊರಿಯಾದ ಕ್ರೀಡಾಪಟುಗಳು ಕೂಡ ಭಾಗವಹಿಸುವುದರಿಂದ ಭಾರತದ ಕಾಮನ್‌ವೆಲ್ತ್ ರೀತಿಯ ಯಶಸ್ಸಿನ ಕನಸು ಭಗ್ನವಾಗುವುದೇ?

ಚೀನಾದವರು ಭಾರತೀಯರಿಗಿಂತ ಉತ್ತಮವಾದ ಆಹಾರ ಸೇವಿಸುತ್ತಾರೆ ಎಂದು ನಾವು ಸ್ಪಷ್ಟವಾಗಿ ಹೇಳಲಾಗುವುದಿಲ್ಲ. ಆದರೆ ಮಾಂಸಾಹಾರ ಸೇವನೆಯಲ್ಲಿ ಭಾರತ ಚೀನಾಗಿಂತ ಹಿಂದುಳಿದಿರುವುದಂತೂ ಸತ್ಯ. 2002ರಲ್ಲಿ ನಡೆದ ಅಧ್ಯಯನವೊಂದರ ಪ್ರಕಾರ ಚೀನಾದ ಪ್ರತಿವ್ಯಕ್ತಿ ವರ್ಷಕ್ಕೆ 52.4 ಕೆ.ಜಿ ಮಾಂಸ ಸೇವಿಸುತ್ತಾರೆ. ಮೊಟ್ಟೆ ಮತ್ತು ಮೀನಿನ ಸೇವನೆ ಕೂಡ ಇದೇ ಪ್ರಮಾಣದಲ್ಲಿದೆ. 1984ರಲ್ಲಿ ನ್ಯೂಯಾರ್ಕ್‌ನಲ್ಲಿ ನಡೆದ ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ಚೀನಾ ಕೇವಲ ಎರಡು ಚಿನ್ನದ ಪದಕಗಳನ್ನು ಒಳಗೊಂಡಂತೆ ಒಟ್ಟು 22 ಪದಕಗಳನ್ನು ಮಾತ್ರ ಗೆದ್ದಿತ್ತು. ಆದರೆ 2008ರಲ್ಲಿ ಬೀಜಿಂಗ್‌ನಲ್ಲಿ ನಡೆದ ಒಲಂಪಿಕ್ಸ್‌ನಲ್ಲಿ ಚೀನಾ 232 ಚಿನ್ನದ ಪದಕಗಳನ್ನೊಳಗೊಂಡಂತೆ ಒಟ್ಟು 554 ಪದಕಗಳನ್ನು ತನ್ನದಾಗಿಸಿ ಕೊಂಡಿತು.

ನಾನು ಸಸ್ಯಾಹಾರಿಗಳ ವಿರುದ್ಧ ಪ್ರಚಾರ ಮಾಡುತ್ತಿಲ್ಲ. ಸಸ್ಯಾಹಾರ ಕೂಡ ಮಾಂಸಾಹಾರದಷ್ಟೇ ಅಥವಾ ಅದಕ್ಕಿಂತ ಉತ್ತಮವಾದ ಆಹಾರವೆನ್ನುವುದು ಸತ್ಯ.

ಆದರೆ ಭಾರತದಲ್ಲಿ ಮಾಂಸಾಹಾರಿಗಳಿಗಿಂತ ಸಸ್ಯಾಹಾರಿಗಳ ಸಂಖ್ಯೆ ಯಾಕೆ ಹೆಚ್ಚಾಗಿದೆ? ಭಾರತೀಯ ಸಮಾಜ ಚೀನಾಗಿಂತ ಅಸಮಾನತೆಯಿಂದ ಕೂಡಿರುವುದರಿಂದ ಮಾಂಸಾಹಾರಿಗಳ ಸಂಖ್ಯೆ ತೀರ ಕಡಿಮೆ ಇದೆ ಎಂದು ವಾದಿಸಬಹುದು. "ಬಡ ಭಾರತೀಯರು ಹೆಚ್ಚು ಬೆಲೆ ತೆತ್ತು ಮಾಂಸಾಹಾರ ಸೇವಿಸಲು ಹೇಗೆ ಸಾಧ್ಯ?" ಎಂದೂ ಕೂಡ ವಾದಿಸಬಹುದು. ಹೀಗಾಗಿ ಬಡವರನ್ನು ಈ ಚರ್ಚೆಯಿಂದ ಹೊರಗಿಡೋಣ.

ರಾಷ್ಟ್ರದ ಜನರ ಆರೋಗ್ಯ ಪರಿಸ್ಥಿತಿಯನ್ನು ತಿಳಿದುಕೊಳ್ಳಲು ಭಾರತ ಸರ್ಕಾರ ಸಮೀಕ್ಷೆಯನ್ನು ಕೈಗೊಳ್ಳುತ್ತದೆ. ರಾಷ್ಟ್ರೀಯ ಕೌಟುಂಬಿಕ ಆರೋಗ್ಯ ಸಮೀಕ್ಷೆ (ಎನ್‌ಎಫ್‌ಎಚ್‌ಎಸ್) ಎಂಬ ಹೆಸರಿನ ಸಮೀಕ್ಷೆಯನ್ನು 2005-06ರಲ್ಲಿ ಕೈಗೊಳ್ಳಲಾಗಿತ್ತು. ಸಮೀಕ್ಷೆಯ ವರದಿ ಈಗ ಎನ್‌ಎಫ್‌ಎಚ್‌ಎಸ್-3 ಎಂದೇ ಪ್ರಸಿದ್ಧವಾಗಿದೆ. ವರದಿಯಲ್ಲಿ ಆದಾಯದ ಹಿನ್ನೆಲೆಯಲ್ಲಿ ಭಾರತೀಯರ ಆಹಾರ ಕ್ರಮದ ಬಗ್ಗೆ ಕೂಡ ಮಾಹಿತಿ ಲಭ್ಯವಿದೆ. ವರದಿ ಸಿದ್ಧಪಡಿಸುವ ನಿಟ್ಟಿನಲ್ಲಿ ದೇಶದ ಒಟ್ಟಾರೆ ಜನಸಂಖ್ಯೆಯನ್ನು ಐದು ಭಾಗಗಳಾಗಿ ವಿಂಗಡಿಸಲಾಗಿದೆ. ತೀರ ಬಡವರಿಂದ ಶ್ರೀಮಂತರವರೆಗೆ ಆರೋಹಣ ಶ್ರೇಣಿಯಲ್ಲಿ ವಿಭಾಗೀಕರಣ ಮಾಡಲಾಗಿದೆ. ಎನ್‌ಎಫ್‌ಎಚ್‌ಎಸ್-3ರಲ್ಲಿ ಭಾರತದ ಶ್ರೀಮಂತರು ಯಾವ ರೀತಿಯ ಆಹಾರ ಸೇವಿಸುತ್ತಾರೆ ಎಂಬ ಮಾಹಿತಿ ಈ ವರದಿಯಲ್ಲಿದೆ. ದೇಶದ ಸುಮಾರು ಶೇ. 20ರಷ್ಟು ಶ್ರೀಮಂತರು ಏನು ಆಹಾರ ಸೇವಿಸುತ್ತಾರೆ ನೋಡೋಣ.

ವರದಿಯ ಪ್ರಕಾರ ಶ್ರೀಮಂತರಲ್ಲಿ ಶೇ. 32.3ರಷ್ಟು ಮಹಿಳೆಯರು ಮಾತ್ರ ವಾರಕ್ಕೆ ಒಮ್ಮೆಯಾದರೂ ಮೊಟ್ಟೆ ಸೇವಿಸುತ್ತಿದ್ದರು. ಅಂದರೆ ಉಳಿದ 2/3ರಷ್ಟು ಮಂದಿ ಮಹಿಳೆಯರು ಮೊಟ್ಟೆಗಳನ್ನು ಸೇವಿಸುತ್ತಲೇ ಇಲ್ಲ ಎಂದರ್ಥ. ಇನ್ನುಳಿದಂತೆ ಶೇ. 35.4ರಷ್ಟು ಮಹಿಳೆಯರು ಮಾತ್ರ ಮೀನು/ ಕೋಳಿ/ ಮಾಂಸವನ್ನು ವಾರಕ್ಕೆ ಒಮ್ಮೆಯಾದರೂ ಸೇವಿಸುತ್ತಿದ್ದರು. ಇನ್ನು ಪುರುಷರ ವಿಚಾರಕ್ಕೆ ಬರುವುದಾದರೆ ಶೆ. 41.9ರಷ್ಟು ಮಂದಿ ಪುರುಷರು ಮಾತ್ರ ವಾರಕ್ಕೆ ಒಮ್ಮೆಯಾದರೂ ಮೊಟ್ಟೆ ಸೇವಿಸುತ್ತಿದ್ದು, ಶೇ. 41.6ರಷ್ಟು ಮಂದಿ ಮೀನು/ ಕೋಳಿ/ ಮಾಂಸವನ್ನು ಸೇವಿಸುತ್ತಿದ್ದರು.

ಉದಾಹರಣೆಗೆ ಓರ್ವ ವ್ಯಕ್ತಿ ಸಸ್ಯಾಹಾರಿಯಾಗಿದ್ದರೆ ಆತನ ಸಸ್ಯಾಹಾರ ಕ್ರಮ ಅತ್ಯುತ್ತಮ ಪೌಷ್ಠಿಕಾಂಶಗಳಿಂದ ಕೂಡಿದ್ದಾಗಿರಬೇಕು. ಆದರೆ ಎನ್‌ಎಫ್‌ಎಚ್‌ಎಸ್-3 ವರದಿಯ ಪ್ರಕಾರ ಶ್ರೀಮಂತರಲ್ಲಿ ಶೇ. 25.2ರಷ್ಟು ಮಹಿಳೆಯರು ಮಾತ್ರ ವಾರಕ್ಕೆ ಒಮ್ಮೆಯಾದರೂ ಹಾಲು ಸೇವಿಸುತ್ತಿದ್ದರು, ಮತ್ತು ಶೇ. 28.2ರಷ್ಟು ಮಂದಿ ಮಾತ್ರ ವಾರಕ್ಕೆ ಒಮ್ಮೆಯಾದರೂ ಹಣ್ಣು ಸೇವಿಸುತ್ತಿದ್ದರು. ಕಾಳುಗಳು ಮತ್ತು ಹಸಿರು ತರಕಾರಿ, ಸೊಪ್ಪಿನ ಸೇವನೆ ಶೇ. 90ರಷ್ಟು ಇರುವುದೂ ನಿಜ. ಆದರೆ ಈ ಅಂಕಿ ಅಂಶಗಳು ವಾರಕ್ಕೆ ಅನ್ವಯಿಸಲ್ಪಡುತ್ತದೆಯೇ ಹೊರತು ಪ್ರತಿದಿನಕ್ಕಲ್ಲ. ಪುರುಷರ ಆಹಾರ ಸೇವನೆಯ ಪ್ರಮಾಣ ಸ್ವಲ್ಪಮಟ್ಟಿಗೆ ಉತ್ತಮವಾಗಿದೆ.

ಇದರರ್ಥ ಏನು? ಭಾರತದ ಶ್ರೀಮಂತ ವರ್ಗ ಆರೋಗ್ಯಕರವಾದ ಆಹಾರ ಸೇವಿಸುತ್ತಿಲ್ಲ. ಪರಿಸ್ಥಿತಿ ಹೀಗಿರುವಾಗ ಜಾಗತಿಕ ಮಟ್ಟದಲ್ಲಿ ಅದ್ಭುತ ಸಾಧನೆ ಮಾಡಬೇಕೆನ್ನುವ ಭಾರತದ ಕನಸು ನನಸಾಗಲು ಹೇಗೆ ಸಾಧ್ಯ? ಜಾತಿಯಾಧಾರಿತ ಆಹಾರ ಕ್ರಮ ಮಾಂಸಾಹಾರವಷ್ಟೇ ಅಲ್ಲದೆ ಸಸ್ಯಾಹಾರದ ಮೇಲೂ ಕೂಡ ಬೇಕು ಬೇಡಗಳ ನಿಯಂತ್ರಣ ಹೇರಿದೆ. ಭಾರತದ ಚಿನ್ನದ ಕನಸಿಗೆ ಜಾತಿ ತೊಡಕಾಗಿರುವುದು ನಿಜವಲ್ಲವೇ?

ಪರಿಸ್ಥಿತಿಯ ವ್ಯಂಗ್ಯ ನೋಡಿ ಹೇಗಿದೆ. ಚಿನ್ನದ

ಚೀನಾದವರು ಭಾರತೀಯರಿಗಿಂತ ಉತ್ತಮವಾದ ಆಹಾರ ಸೇವಿಸುತ್ತಾರೆ ಎಂದು ನಾವು ಸ್ಪಷ್ಟವಾಗಿ ಹೇಳಲಾಗುವುದಿಲ್ಲ. ಆದರೆ ಮಾಂಸಾಹಾರ ಸೇವನೆಯಲ್ಲಿ ಭಾರತ ಚೀನಾಗಿಂತ ಹಿಂದುಳಿದಿರುವುದಂತೂ ಸತ್ಯ. 2002ರಲ್ಲಿ ನಡೆದ ಅಧ್ಯಯನವೊಂದರ ಪ್ರಕಾರ ಚೀನಾದ ಪ್ರತಿವ್ಯಕ್ತಿ ವರ್ಷಕ್ಕೆ 52.4 ಕೆ.ಜಿ ಮಾಂಸ ಸೇವಿಸುತ್ತಾರೆ. ಮೊಟ್ಟೆ ಮತ್ತು ಮೀನಿನ ಸೇವನೆ ಕೂಡ ಇದೇ ಪ್ರಮಾಣದಲ್ಲಿದೆ. 1984ರಲ್ಲಿ ನ್ಯೂಯಾರ್ಕ್‌ನಲ್ಲಿ ನಡೆದ ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ಚೀನಾ ಕೇವಲ ಎರಡು ಚಿನ್ನದ ಪದಕಗಳನ್ನು ಒಳಗೊಂಡಂತೆ ಒಟ್ಟು 22 ಪದಕಗಳನ್ನು ಮಾತ್ರ ಗೆದ್ದಿತ್ತು. ಆದರೆ 2008ರಲ್ಲಿ ಬೀಜಿಂಗ್‌ನಲ್ಲಿ ನಡೆದ ಒಲಂಪಿಕ್ಸ್‌ನಲ್ಲಿ ಚೀನಾ 232 ಚಿನ್ನದ ಪದಕಗಳನ್ನೊಳಗೊಂಡಂತೆ ಒಟ್ಟು 554 ಪದಕಗಳನ್ನು ತನ್ನದಾಗಿಸಿ ಕೊಂಡಿತು. ನಾನು ಸಸ್ಯಾಹಾರಿಗಳ ವಿರುದ್ಧ ಪ್ರಚಾರ ಮಾಡುತ್ತಿಲ್ಲ.

ಬಳಕೆಯಲ್ಲಿ ಭಾರತ ಜಗತ್ತಿನ ಇತರ ಎಲ್ಲ ದೇಶಗಳನ್ನು ಹಿಂದಿಕ್ಕುತ್ತದೆ. 2008ರಲ್ಲಿ 650 ಟನ್‌ಗಳಷ್ಟು ಚಿನ್ನ ಬಳಸಿರುವ ಭಾರತ ಚಿನ್ನದ ಆಮದಿನಲ್ಲಿ ಜಗತ್ತಿನಲ್ಲಿಯೇ ಮೊದಲ ಸ್ಥಾನದಲ್ಲಿದೆ. ಆದರೆ 2008ರಲ್ಲಿ ಚೀನಾ ಬಳಸಿದ ಚಿನ್ನದ ಪ್ರಮಾಣ ಸುಮಾರು 400 ಟನ್‌ಗಳಷ್ಟು ಮಾತ್ರ. ಭಾರತದ ಒಲಂಪಿಕ್ಸ್ ಚಿನ್ನದ ಕನಸು ಈಡೇರಲಿ ಬಿಡಲಿ, ಇಲ್ಲಿ ಚಿನ್ನಕ್ಕಂತೂ ಕೊರತೆ ಇರುವುದಿಲ್ಲ ಅಲ್ಲವೇ?!

* * * * * *

ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಸಿಪಿಎಂ)ದ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ ಇತ್ತೀಚೆಗೆ ಸೈದ್ಧಾಂತಿಕ ಕಾರಣಗಳಿಗಾಗಿ ಸುದ್ದಿಯಲ್ಲಿದ್ದರು. ಇಂಗ್ಲಿಷರ ಆಹಾರ ಇಷ್ಟಪಡುವ ಕಾರಟ್, ಕಳೆದ ವರ್ಷ ತೀರಿಕೊಂಡ ತಮ್ಮ ಗುರು ಹಾಗೂ ಮಾರ್ಕ್ಸಿಸ್ಟ್ ಚಿಂತಕ ಪ್ರೊ. ವಿಕ್ಟರ್ ಕೀರ್ನನ್ ಅವರ ಜ್ಞಾಪಕಾರ್ಥ ನಡೆದ ವಿಚಾರ ಸಂಕಿರಣವೊಂದರಲ್ಲಿ ಭಾಗವಹಿಸಲು ಇಂಗ್ಲೆಂಡಿಗೆ ಹೋಗಿದ್ದರು.

ಎರಡು ವರ್ಷಗಳ ಹಿಂದೆ ಕಾಂಗ್ರೆಸ್ ಪಕ್ಷಕ್ಕೆ ಸ್ಪಷ್ಟ ಬಹುಮತವಿಲ್ಲದಾಗ ಪ್ರಭಾವಿ ನಾಯಕರಾಗಿದ್ದ ಕಾರಟ್ ವಿಚಾರ ಸಂಕಿರಣದಲ್ಲಿ ಮಾತನಾಡಿದರು. ಭಾರತೀಯ ಮಾಧ್ಯಮಗಳಲ್ಲಿ ವರದಿಯಾಗಿರುವಂತೆ ತಮ್ಮ ಭಾಷಣದಲ್ಲಿ ಕಾರಟ್ ಮೂರು ಐತಿಹಾಸಿಕ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ.

* ಭಾರತದಲ್ಲಿ ಎಡಪಕ್ಷಗಳು ಜಾತಿಯನ್ನು ಕಡೆಗಣಿಸಿ ಐತಿಹಾಸಿಕ ತಪ್ಪು ಮಾಡಿದೆ.

* ಎಡಪಂಥೀಯ ಶಕ್ತಿಗಳು ಈಗಲೂ ಕೂಡ 1940ರ ಸಿದ್ಧಾಂತಗಳಿಗೆ ಜೋತು ಬಿದ್ದಿವೆ.

* ಭಾರತದಲ್ಲಿ ಘಟಿಸುತ್ತಿರುವ ಮಹತ್ತರ ಬದಲಾವಣೆಗಳನ್ನು ಎಡಪಂಥೀಯರು ಅರ್ಥೈಸಿಕೊಳ್ಳುವ ಅಗತ್ಯತೆ ಇದೆ.

ಭಾರತದಲ್ಲಿ ಸುಮಾರು 85 ವರ್ಷಗಳ ಇತಿಹಾಸ ಹೊಂದಿರುವ ಎಡಪಂಥೀಯ ಚಳವಳಿಯ ನಾಯಕರೊಬ್ಬರು, ಜಾತಿಯನ್ನು ಕಡೆಗಣಿಸಿ ಎಡಪಕ್ಷಗಳು ಐತಿಹಾಸಿಕವಾದ ತಪ್ಪು ಮಾಡಿದೆ ಎಂದು ಸಾರ್ವಜನಿಕವಾಗಿ ಒಪ್ಪಿಕೊಳ್ಳುವ ಛಾತಿ ತೋರಿಸಿರುವುದು ನಮ್ಮಲ್ಲಿ ಬಹಳಷ್ಟು ಮಂದಿಗೆ ಸಂತಸ ಉಂಟುಮಾಡಿತು. ಕಾರಟ್ ಭಾರತದ ಎಡಪಂಥೀಯರ ಮನಸ್ಸುಗಳನ್ನು ಬದಲಾಯಿಸುವ ಪ್ರಯತ್ನ ನಡೆಸುತ್ತಿರುವುದನ್ನು ತಿಳಿದು ರೋಮಾಂಚನವಾಯಿತು. "ಭಾರತದಲ್ಲಿ ಘಟಿಸುತ್ತಿರುವ ಮಹತ್ತರ ಬದಲಾವಣೆಗಳನ್ನು ಎಡಪಂಥೀಯರು ಅರ್ಥೈಸಿಕೊಳ್ಳುವ ಅಗತ್ಯತೆ ಇದೆ" ಎಂಬ ಅವರ ವಿಚಾರ ನಿಜಕ್ಕೂ ಅಚ್ಚರಿ ಮೂಡಿಸಿತು.

ಆದರೆ ಭಾರತಕ್ಕೆ ಬಂದೊಡನೆ ಕಾರಟ್ ತಮ್ಮ ಭಾಷಣವನ್ನು ತಪ್ಪಾಗಿ ವರದಿ ಮಾಡಲಾಗಿದೆ ಎಂದು ಸ್ಪಷ್ಟೀಕರಣ ನೀಡಿದರು. ವಿಶೇಷವಾಗಿ ಜಾತಿ ಮತ್ತು ಎಡಪಂಥೀಯರ ನಿಷ್ಕ್ರಿಯತೆ ಕುರಿತ ವರದಿ ಸತ್ಯಕ್ಕೆ ದೂರವಾಗಿದೆ ಎಂದರು.

ಜಾತಿ ಕುರಿತು ತಾವು ಇಂಗ್ಲೆಂಡ್‌ನಲ್ಲಿ ಆಡಿದ ಮಾತುಗಳು ಹೀಗಿವೆ: 'ಭಾರತದ ವರ್ಗ ವ್ಯವಸ್ಥೆ ಸಿದ್ಧಾಂತ ಮತ್ತು ಆಚರಣೆಯಲ್ಲಿ ಹೇಗೆ ಶ್ರೇಣೀಕರಣ, ತಾರತಮ್ಯ ಮತ್ತು ಶೋಷಣೆಯಿಂದ ಕೂಡಿದ ಜಾತಿವ್ಯವಸ್ಥೆಯಿಂದ ಪ್ರಭಾವಿತವಾಗಿವೆ ಮತ್ತು ಹೇಗೆ ಇವೆರಡೂ ಒಂದರೊಳಗೊಂದು ಬೆರೆತಿವೆ ಎಂಬುದನ್ನು ನಾವು ಅರ್ಥೈಸಿಕೊಳ್ಳಬೇಕಿದೆ.' ಭಾರತದಲ್ಲಿ ಸಾಮಾಜಿಕ- ಆರ್ಥಿಕ ಸಂರಚನೆಯಲ್ಲಿ ಜಾತಿಯ ಪಾತ್ರವನ್ನು ಕಮ್ಯೂನಿಸ್ಟರು ಮಾನ್ಯ ಮಾಡುತ್ತಾರೆ ಎಂದಷ್ಟೇ ಹೇಳಿದರೆ ಅದು ಸತ್ಯಕ್ಕೆ ದೂರವಾಗುತ್ತದೆ ಎಂದು ಕಾರಟ್ ಸ್ಪಷ್ಟೀಕರಣ ನೀಡಿದರು. ನಲವತ್ತರ ದಶಕದಲ್ಲಿ ಭೂ ಸುಧಾರಣೆ ಮತ್ತು ಭೂ ಸಂಬಂಧಿತ ಚಳವಳಿ ಮತ್ತಿತರ ಕಾರ್ಯಸೂಚಿಯನ್ನು ಕಮ್ಯೂನಿಸ್ಟರು ಈಗಲೂ ಮುಂದುವರೆಸುತ್ತಿದ್ದಾರೆ ಎಂದು ಭಾಷಣವನ್ನು ಮುಗಿಸಿದ್ದೆ ಎಂದರು.

ಜಾತಿ ಪ್ರಶ್ನೆಯ ಬಗ್ಗೆ ಕಾರಟ್ ನೀಡಿರುವ ಸ್ಪಷ್ಟೀಕರಣದ ಆಧಾರದ ಮೇಲೆ ವಿಶ್ಲೇಷಣೆ ಮಾಡೋಣ. ಕಾರಟ್ ಪ್ರಕಾರ ಜಾತಿ, ವರ್ಗವಲ್ಲದೆ ಮತ್ತೇನೂ ಅಲ್ಲ. ವರ್ಗವನ್ನು ವ್ಯಾಖ್ಯಾನಿಸುವಲ್ಲಿ ಸಣ್ಣಪುಟ್ಟ ಮಿತಿಗಳಿರಬಹುದು. ಇದು ಅವರ ಸೈದ್ಧಾಂತಿಕ ನಿಲುವು. ಭಾರತದ ಎಡಪಂಥೀಯರು ಸೈದ್ಧಾಂತಿಕವಾಗಿ ನಲವತ್ತರ ದಶಕದ ಕಾರ್ಯಸೂಚಿಗೆ ಮಾನ್ಯತೆ ನೀಡುವುದರಲ್ಲಿ ಕಾರಟ್‌ಗೆ ತಕರಾರುಗಳಿಲ್ಲ. ಆದರೆ ಅದರ ಅನುಷ್ಠಾನದ ವಿಚಾರದಲ್ಲಿ ಅವರಿಗೆ ಅಸಮಧಾನವಿರುವಂತಿದೆ. ಕಾರಟ್ ಅವರ ಸಾಮಾಜಿಕ ಹಿನ್ನೆಲೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡುವುದಾದರೆ ಅವರ ವಾದ ಸರಿಯಾಗಿಯೇ ಇದೆ.

ದುರದೃಷ್ಟವಶಾತ್ ಭಾರತದ ಎಡಪಂಥೀಯರು ಬದಲಾಗುತ್ತಿದ್ದಾರೆ ಎಂಬ ಆಶಾವಾದ ನಾಲ್ಕು ದಿನ ಕೂಡ ನಿಲ್ಲಲಿಲ್ಲ. ಭಾರತಕ್ಕೆ ಬಂದೊಡನೆ ಕಾರಟ್ ತಮ್ಮ ಭಾಷಣವನ್ನು ತಪ್ಪಾಗಿ ವರದಿ ಮಾಡಲಾಗಿದೆ ಎಂದು ಮಾಧ್ಯಮಗಳ ಮೇಲೆ ಹರಿಹಾಯ್ದರು. ಜಾತಿ ಕಾರಣದಿಂದ ಶೋಷಿತರಾದವರಿಗೆ ಒಟ್ಟಾರೆ ಜಾತಿ ವ್ಯವಸ್ಥೆಯ ಕ್ರೂರತೆಯ ಪರಿಚಯ ಬಾಲ್ಯದಲ್ಲಿಯೇ ಆಗಿರುತ್ತದೆ. ಆದರೆ ಎಡಪಂಥೀಯ ಧೋರಣೆಯ ರಾಜಕಾರಣಿಗಳು ಮತ್ತು ಬುದ್ಧಿಜೀವಿಗಳು ಜನರ ಜೀವನದಲ್ಲಿ ಜಾತಿ ಗಂಭೀರವಾದ ಪರಿಣಾಮ ಬೀರುವುದಿಲ್ಲ ಎಂಬ ವಾದಕ್ಕೆ ಈಗಲೂ ಜೋತುಬಿದ್ದಿದ್ದಾರೆ. ಮನುಷ್ಯ ಜನಾಂಗಕ್ಕೆ ಗೊತ್ತಿರುವ ಅತ್ಯಂತ ಕ್ರೂರವಾದ ಸಾಮಾಜಿಕ ಸಂಸ್ಥೆಗಳಲ್ಲಿ ಜಾತಿ ವ್ಯವಸ್ಥೆ ಕೂಡ ಒಂದು ಎಂಬ ಸತ್ಯವನ್ನು ಗುರುತಿಸಲು ಎಡಪಂಥೀಯರು ನಿರಾಕರಿಸುವುದಷ್ಟೇ ಅಲ್ಲದೆ, ಜಾತಿ ದಬ್ಬಾಳಿಕೆಯ ವಿರುದ್ಧ ಹೋರಾಡುವವರನ್ನು ಹಾಸ್ಯ ಮಾಡಿದ್ದೂ ಉಂಟು. ಇಂದಿನ ಉದಾರವಾದ, ಪ್ರಜಾತಂತ್ರ, ಸ್ವಾತಂತ್ರ್ಯ ಮತ್ತು ಸಮಾನತೆಯ ವಿಚಾರಗಳು, ಅಷ್ಟೇ ಏಕೆ ಮಾರ್ಕ್ಸ್‌ವಾದ ಕೂಡ ಸೃಷ್ಟಿಯಾಗಿದ್ದು ಪಶ್ಚಿಮದಲ್ಲಿಯೇ. ಆದರೆ ಜಾತಿ ವಿರೋಧಿ ನಾಯಕರು ಈ ಮೇಲಿನ ವಿಚಾರಗಳ ಪರವಾಗಿ ಮಾತನಾಡಿದರೆ ಅಂತಹವರನ್ನು ಹೀಗಳೆಯಲಾಗುತ್ತದೆ. ಇದೂ ಹೊಸದೇನಲ್ಲ. ಎಡಪಂಥೀಯರ ಸೈದ್ಧಾಂತಿಕ ಸರ್ವಾಧಿಕಾರವನ್ನು ನಾವು ಹಲವು ದಶಕಗಳಿಂದ ನೋಡುತ್ತಾ ಬಂದಿದ್ದೇವೆ.

ಕಾರಟ್ ಅವರ ಕೇಂಬ್ರಿಡ್ಜ್ ಭಾಷಣದ ವಿಚಾರಕ್ಕೆ ಬರುವುದಾದರೆ, ತಮ್ಮ ಭಾಷಣದ ಒಂದು ಮುಖ್ಯವಾದ ವಿಚಾರವನ್ನು ಕಾರಟ್ ಅಲ್ಲಗಳೆಯಲಿಲ್ಲ. "ಭಾರತದಲ್ಲಿ ಘಟಿಸುತ್ತಿರುವ ಮಹತ್ತರ ಬದಲಾವಣೆಗಳನ್ನು ಎಡಪಂಥೀಯರು ಅರ್ಥೈಸಿಕೊಳ್ಳುವ ಅಗತ್ಯತೆ ಇದೆ" ಎಂಬ ಅವರ ವಿಚಾರ ಆಸಕ್ತಿ ಕೆರಳಿಸುವಂತಿದೆ.

"ಭಾರತದಲ್ಲಿ ಘಟಿಸುತ್ತಿರುವ ಮಹತ್ತರ ಬದಲಾವಣೆಗಳು" ಯಾವುವು? ಇಲ್ಲಿ ಕಾರಟ್ 1990ರ ನಂತರದ ಬೃಹತ್ ಆರ್ಥಿಕ ಸುಧಾರಣೆಯ ಬಗ್ಗೆ ಮಾತನಾಡುತ್ತಿರುವರೆ? ಅಥವಾ ಭಾರತದ ಜಾಗತಿಕ ಸಂಪರ್ಕದ ಬಗ್ಗೆ ಮಾತನಾಡುತ್ತಿರುವರೆ? ಭಾರತಕ್ಕೆ ವಿದೇಶಿ ಬಂಡವಾಳ, ಬಹುರಾಷ್ಟ್ರೀಯ ಸಂಸ್ಥೆಗಳ ಪ್ರವೇಶವಾಗುತ್ತಿರುವುದರ ಬಗ್ಗೆ ಮಾತನಾಡುತ್ತಿರುವರೇ? ಅಥವಾ 1990ರ ನಂತರ ಸೃಷ್ಟಿಯಾದ ಮಾರುಕಟ್ಟೆ ಆರ್ಥಿಕ ವ್ಯವಸ್ಥೆಯ ಬಗ್ಗೆ ಮಾತನಾಡುತ್ತಿರುವರೆ? 1990ರ ನಂತರ ಭಾರತದಲ್ಲಿನ ನಗರೀಕರಣದ ಬಗ್ಗೆ ಮಾತನಾಡುತ್ತಿರುವರೇ? ಅಥವಾ ಕೆಳವರ್ಗಗಳ ಜೀವನ ಶೈಲಿ ಮತ್ತು ಆಹಾರ ಪದ್ಧತಿಯಲ್ಲಾಗುತ್ತಿರುವ ಬದಲಾವಣೆಯ ಬಗ್ಗೆ ಮಾತನಾಡುತ್ತಿರುವರೇ?

ತಮ್ಮ ವಿಚಾರಕ್ಕೆ ಈ ಮೇಲಿನ ಯಾವುದಾದರೂ ಒಂದೇ ಒಂದು ಅರ್ಥ ಇದ್ದರೆ, ಮೊಟ್ಟಮೊದಲ ಬಾರಿಗೆ ಎಡಪಂಥೀಯ ನಾಯಕರೊಬ್ಬರು ಹೊಸ ಆರ್ಥಿಕ ವ್ಯವಸ್ಥೆಯನ್ನು ದೂಷಿಸುವ ಬದಲು, ಆರ್ಥಿಕ ಸುಧಾರಣೆ ಮತ್ತು ಜಾಗತೀಕರಣವನ್ನು ಒಪ್ಪಿಕೊಂಡಂತಾಗುತ್ತದೆ. ಕಾರಟ್ ಅವರನ್ನು ಅರ್ಥೈಸಿಕೊಳ್ಳುವಲ್ಲಿ ತಪ್ಪಾಗಿದ್ದರೆ, "ಭಾರತದಲ್ಲಿ ಘಟಿಸುತ್ತಿರುವ ಮಹತ್ತರ ಬದಲಾ ವಣೆಗ

ಭಾರತದಲ್ಲಿ ಸುಮಾರು 85 ವರ್ಷಗಳ ಇತಿಹಾಸ ಹೊಂದಿರುವ ಎಡಪಂಥೀಯ ಚಳವಳಿಯ ನಾಯಕರೊಬ್ಬರು, ಜಾತಿಯನ್ನು ಕಡೆಗಣಿಸಿ ಎಡಪಕ್ಷಗಳು ಐತಿಹಾಸಿಕವಾದ ತಪ್ಪು ಮಾಡಿದೆ ಎಂದು ಸಾರ್ವಜನಿಕವಾಗಿ ಒಪ್ಪಿಕೊಳ್ಳುವ ಛಾತಿ ತೋರಿಸಿರುವುದು ನಮ್ಮಲ್ಲಿ ಬಹಳಷ್ಟು ಮಂದಿಗೆ ಸಂತಸ ಉಂಟುಮಾಡಿತು. ಕಾರಟ್ ಭಾರತದ ಎಡಪಂಥೀಯರ ಮನಸ್ಸುಗಳನ್ನು ಬದಲಾಯಿಸುವ ಪ್ರಯತ್ನ ನಡೆಸುತ್ತಿರುವುದನ್ನು ತಿಳಿದು ರೋಮಾಂಚನವಾಯಿತು. "ಭಾರತದಲ್ಲಿ ಘಟಿಸುತ್ತಿರುವ ಮಹತ್ತರ ಬದಲಾವಣೆಗಳನ್ನು ಎಡಪಂಥೀಯರು ಅರ್ಥೈಸಿಕೊಳ್ಳುವ ಅಗತ್ಯತೆ ಇದೆ" ಎಂಬ ಅವರ ವಿಚಾರ ನಿಜಕ್ಕೂ ಅಚ್ಚರಿ ಮೂಡಿಸಿತು.

ನವ-ಉದಾರವಾದಿ ಪ್ರಕಾಶ್ ಕಾರಟ್?!

ಎಡಪಂಥೀಯರ ಬಲಪಂಥೀಯ ನಿಲುವುಗಳು

ಇನ್ನು ಎಡಪಂಥೀಯರು ಅರ್ಥೈಸಿಕೊಳ್ಳುವ ಅಗತ್ಯತೆಇದೆ" ಎಂಬ ಅವರ ಮಾತಿಗೆ ಯಾರಾದರೂ ಎಡ ಪಂಥೀಯ ನಾಯಕರು ವಿವರಣೆ ನೀಡಿದರೆ ನಾನು ಕೃತಜ್ಞ.

* * * * *

ಎಡಪಂಥ ಮತ್ತು ಬಲಪಂಥ ಸೈದ್ಧಾಂತಿಕವಾಗಿ ಒಂದಕ್ಕೊಂದು ವಿರುದ್ಧವಾದುದು. ಈ ಎರಡು ಸೈದ್ಧಾಂತಿಕ ಗುಂಪುಗಳು ಎಲ್ಲ ವಿಷಯಗಳಲ್ಲಿಯೂ ಸಂಪೂರ್ಣ ವಿರುದ್ಧವಾದ ನಿಲುವನ್ನು ತಳೆಯುತ್ತವೆ. ಆದರೆ ತೀರ ವಿರಳವಾದ ಸಂದರ್ಭಗಳಲ್ಲಿ ಎಡ ಮತ್ತು ಬಲಗಳು ಸಹಮತಕ್ಕೆ ಬರುತ್ತವೆ. ಎಡ ಮತ್ತು ಬಲಪಂಥಗಳು ಸಮಾನ ನಿಲುವು ತಳೆಯುವ ಕೆಲವೇ ವಿಚಾರಗಳಲ್ಲಿ ಜಾತಿ ಕೂಡ ಒಂದು. ಜಾತಿವ್ಯವಸ್ಥೆಗೆ ಮಾರಕವಾಗಬಹುದಾದ ಅಂಶಗಳ ಬಗ್ಗೆ ಕೂಡ ಎರಡೂ ಸೈದ್ಧಾಂತಿಕ ಪಂಥಗಳು ಸಮಾನ ವಿಚಾರ ಹೊಂದಿವೆ.

ಆರಂಭದಿಂದಲೂ ಎಡಪಕ್ಷಗಳು ಬಂಡವಾಳಶಾಹಿತ್ವದ ವಿರುದ್ಧ ಹೋರಾಟ ಮಾಡುತ್ತಾ ಬಂದಿವೆ. ಹಾಗೆ ಸಂಘ ಪರಿವಾರ ಕೂಡ ಭಾರತೀಯ ಸಮಾಜದ ಪಾವಿತ್ರ್ಯಕ್ಕೆ ಧಕ್ಕೆ ತರುತ್ತದೆ ಎಂಬ ಕಾರಣವೊಡ್ಡಿ ಕೈಗಾರಿಕೀಕರಣವನ್ನು ವಿರೋಧಿಸುತ್ತಾ ಬಂದಿತ್ತು. ಕೃಷಿ ಆಧಾರಿತ ಜಮೀನ್ದಾರಿ ವ್ಯವಸ್ಥೆಯನ್ನು ಹೊಂದಿದ್ದ ಸಮಾಜದಲ್ಲಿ ಹುಟ್ಟಿದ ಜಾತಿ, ಬಂಡವಾಳಶಾಹಿ ವ್ಯವಸ್ಥೆ ಮತ್ತು ಕೈಗಾರಿಕಾ ಆಧಾರಿತ ಸಮಾಜದಲ್ಲಿ ಸಂಕಷ್ಟಕ್ಕೆ ಸಿಲುಕುತ್ತದೆ. ಜಾತಿವ್ಯವಸ್ಥೆಯ ಬಲಿಪಶುಗಳು ಇದನ್ನು ಅರ್ಥೈಸಿಕೊಳ್ಳಬಲ್ಲರು. ಶೋಷಿತರು ರಾಜಾ ಭಯ್ಯಾ ಅವರಂತಹ ಜಮೀನ್ದಾರರ ಕೈಕೆಳಗೆ ಕೆಲಸ ಮಾಡುವುದಕ್ಕಿಂತ ರತನ್ ಟಾಟಾ ಅವರಂತಹ ಉದ್ಯಮಿಗಳ ಕೈಕೆಳಗೆ ಕೆಲಸ ಮಾಡಲು ಸಿದ್ಧರಿರುತ್ತಾರೆ.

ಬಂಡವಾಳಶಾಹಿಯ ಮೊದಲ ಶತ್ರು ಕೃಷಿ ವ್ಯವಸ್ಥೆ. ಜಾತಿ ಕೃಷಿ ವ್ಯವಸ್ಥೆಗೆ ಯಾವಾಗಲೂ ಹತ್ತಿರ. ಎಡಪಂಥೀಯರ ಸಮಾಜವಾದ, ಮತ್ತು ಬಲಪಂಥೀಯರ ಸಾಮಾಜಿಕ ಪಾವಿತ್ರ್ಯತೆ, ಜಾತಿವ್ಯವಸ್ಥೆಯ ಮೂಲ ಕಾರಣವಾದ ಕೃಷಿ ವ್ಯವಸ್ಥೆಯನ್ನು ರಕ್ಷಿಸುತ್ತದೆ. ಇಲ್ಲಿ ಇದಕ್ಕೆ ಪೂರಕವಾದ ಒಂದು ಉದಾಹರಣೆಯನ್ನು ಪ್ರಸ್ತಾಪಿಸುತ್ತೇನೆ.

1948ರವರೆಗೆ ಕೊರಿಯಾ ವಿಘಟನೆಯಾಗಿರಲಿಲ್ಲ. ಎರಡನೆಯ ಮಹಾಯುದ್ಧದ ನಂತರ ಕೊರಿಯಾ ಎರಡು ರಾಷ್ಟ್ರವಾಗಿ ವಿಭಜನೆಯಾಯಿತು. ಆಗ ಕಮ್ಯೂನಿಸ್ಟ್ ಸಿದ್ಧಾಂತ ನಿಷ್ಠ ಉತ್ತರ ಕೊರಿಯಾ ಮತ್ತು ಬಂಡವಾಳಶಾಹಿ ವ್ಯವಸ್ಥೆ ಒಪ್ಪಿಕೊಂಡ ದಕ್ಷಿಣ ಕೊರಿಯಾ ದೇಶಗಳು ಸೃಷ್ಟಿಯಾದವು. ವಿಭಜನೆಗೆ ಮುಂಚೆ ಉತ್ತರ ಕೊರಿಯಾ, ದಕ್ಷಿಣ ಕೊರಿಯಾಗಿಂತ ಸಮೃದ್ಧವಾಗಿತ್ತು – ಕೈಗಾರಿಕೀಕರಣಗೊಂಡಿತ್ತು. ಆದರೆ ಈಗ ಕೈಗಾರಿಕೀಕರಣದ ವಿಚಾರದಲ್ಲಿ ಈ ಎರಡು ದೇಶಗಳ ಸ್ಥಾನಮಾನ ಏನಾಗಿದೆ?

ಪ್ರಸಕ್ತ ಅಂಕಿ ಅಂಶಗಳ ಪ್ರಕಾರ ಉತ್ತರ ಕೊರಿಯಾದ ಶೇ. 37ರಷ್ಟು ಭಾಗ ಗ್ರಾಮೀಣ ಪ್ರದೇಶದಿಂದ ಕೂಡಿದೆ. ದಕ್ಷಿಣ ಕೊರಿಯಾದಲ್ಲಿ ಈ ಪ್ರಮಾಣ ಕೇವಲ ಶೇ. 3ರಷ್ಟಿದೆ. ಉತ್ತರ ಕೊರಿಯಾದ ಒಟ್ಟಾರೆ ಸಮಗ್ರ

ಆರಂಭದಿಂದಲೂ ಎಡಪಕ್ಷಗಳು ಬಂಡವಾಳಶಾ ಹಿತ್ವದ ವಿರುದ್ಧ ಹೋರಾಟ ಮಾಡುತ್ತಾ ಬಂದಿವೆ. ಹಾಗೆ ಸಂಘ ಪರಿವಾರ ಕೂಡ ಭಾರತೀಯ ಸಮಾಜದ ಪಾವಿತ್ರ್ಯಕ್ಕೆ ಧಕ್ಕೆ ತರುತ್ತದೆ ಎಂಬ ಕಾರಣವೊಡ್ಡಿ ಕೈಗಾರಿಕೀಕರಣವನ್ನು ವಿರೋಧಿಸುತ್ತಾ ಬಂದಿತ್ತು. ಕೃಷಿ ಆಧಾರಿತ ಜಮೀನ್ದಾರಿ ವ್ಯವಸ್ಥೆಯನ್ನು ಹೊಂದಿದ್ದ ಸಮಾಜದಲ್ಲಿ ಹುಟ್ಟಿದ ಜಾತಿ, ಬಂಡವಾಳಶಾಹಿ ವ್ಯವಸ್ಥೆ – ಕೈಗಾರಿಕಾ ಆಧಾರಿತ ಸಮಾಜದಲ್ಲಿ ಸಂಕಷ್ಟಕ್ಕೆ ಸಿಲುಕುತ್ತದೆ. ಜಾತಿವ್ಯವಸ್ಥೆಯ ಬಲಿಪಶುಗಳು ಇದನ್ನು ಅರ್ಥೈಸಿಕೊಳ್ಳಬಲ್ಲರು. ಶೋಷಿತರು ರಾಜಾ ಭಯ್ಯಾ ಅವರಂತಹ ಜಮೀನ್ದಾರರ ಕೈಕೆಳಗೆ ಕೆಲಸ ಮಾಡುವುದಕ್ಕಿಂತ ರತನ್ ಟಾಟಾ ಅವರಂತಹ ಉದ್ಯಮಿಗಳ ಕೈಕೆಳಗೆ ಕೆಲಸ ಮಾಡಲು ಸಿದ್ಧರಿರುತ್ತಾರೆ.

ಆಂತರಿಕ ಉತ್ಪನ್ನಕ್ಕೆ ಕೃಷಿಯ ಕೊಡುಗೆ ಶೇ. 23.3ರಷ್ಟಿದ್ದರೆ, ದಕ್ಷಿಣ ಕೊರಿಯಾದಲ್ಲಿ ಶೇ. 7.2ರಷ್ಟಿದೆ.

ಇದರರ್ಥ ಏನು? ಉತ್ತರ ಕೊರಿಯಾದಲ್ಲಿ 1948ರ ನಂತರ ಸಮಾಜವಾದಿ ಆಡಳಿತ ವ್ಯವಸ್ಥೆ ಬಂದ ಮೇಲೆ, ಈ ಹಿಂದೆ ಸಮೃದ್ಧವಾಗಿದ್ದ ದೇಶ ಮತ್ತೆ ದಕ್ಷಿಣ ಕೊರಿಯಾದ ಮಟ್ಟದಲ್ಲಿ ಕೈಗಾರಿಕೀಕರಣಗೊಳ್ಳಲಿಲ್ಲ. ಇದರ ಜೊತೆಗೆ ಆಹಾರದ ಸಮಸ್ಯೆಯಿಂದ ಬಳಲುತ್ತಿರುವ ಉತ್ತರ ಕೊರಿಯಾದ ಲಕ್ಷಾಂತರಮಂದಿ ಪ್ರಪಂಚದ ಇತರ ದೇಶಗಳ ಸಹಾಯವನ್ನು ನೆಚ್ಚಿಕೊಂಡು ಬದುಕುತ್ತಿದ್ದಾರೆ.

ದ. ಕೊರಿಯಾದ ಆರ್ಥಿಕ ವ್ಯವಸ್ಥೆಗೆ ಹೋಲಿಸಿದರೆ ಉ. ಕೊರಿಯಾ ಸಮಾನತೆ ಕಾಯ್ದುಕೊಂಡ ಸಮಾಜ ಎಂದು ಹೇಳಿಕೊಳ್ಳಬಹುದು. ಆದರೆ ಇಲ್ಲಿ ಸಮಾನತೆಗೆ ಬೇರೆಯೇ ಅರ್ಥ ಇದೆ. ಇಲ್ಲಿನ ಸಮಾನತೆ ಬಡತನಕ್ಕೆ ಮಾತ್ರ ಮೀಸಲು, ಶ್ರೀಮಂತಿಕೆಗೆ ಅಲ್ಲ. ಭಾರತದಲ್ಲಿ ಜಾತಿಯಾಧಾರಿತ ಅಸಮಾನತೆಯಿಂದ ದಲಿತರು ಶೋಷಣೆಗೆ ಒಳಗಾಗುತ್ತಿದ್ದರೂ ಕೂಡ ಸಂವೇದಿಸದ ಎಡಪಂಥೀಯರ ಹಾಗೆ ಉತ್ತರ ಕೊರಿಯಾದ ಸಮಾಜವಾದಿಗಳಿಗೂ ಅಲ್ಲಿನ ನಿಜವಾದ ಸಮಸ್ಯೆಗಳು ಗ್ರಹಿಕೆಗೆ ನಿಲುಕುತ್ತಿಲ್ಲ.

ಒಂದು ವೇಳೆ ಸ್ವಾತಂತ್ರ್ಯಾನಂತರ ಭಾರತದಲ್ಲಿ ಎಡಪಕ್ಷಗಳು ಅಧಿಕಾರಕ್ಕೆ ಬಂದಿದ್ದರೆ ಈ ಹೊತ್ತು ದೇಶದಲ್ಲಿ ಜಾತಿವ್ಯವಸ್ಥೆಯ ಸ್ಥಿತಿ ಏನಾಗುತ್ತಿತ್ತು? ಖಂಡಿತ ಭಾರತ ಸಮಾನತೆಯನ್ನು ಸಾಧಿಸಿರುತ್ತಿತ್ತು. ದಲಿತರನ್ನೊಳಗೊಂಡಂತೆ ಎಲ್ಲರೂ ಸಮಾನರಾಗಿರುತ್ತಿದ್ದರು ನಿಜ. ಆದರೆ ಅದರ ಜೊತೆಗೆ ಭಾರತ ಇನ್ನೂ ಕೃಷಿ ಪ್ರಧಾನ ರಾಷ್ಟ್ರವಾಗಿಯೇ ಉಳಿದಿರುತ್ತಿತ್ತು. ಅಂದರೆ ಜಾತಿವ್ಯವಸ್ಥೆ ಹಿಂದೆಂದಿಗಿಂತಲೂ ಶಕ್ತಿಯುತವಾಗಿರುತ್ತಿತ್ತು.

ಪಶ್ಚಿಮ ಬಂಗಾಳದ ಉದಾಹರಣೆಯನ್ನು ಇಲ್ಲಿ ಪ್ರಸ್ತಾಪಿಸಬೇಕಿದೆ. ಗ್ರಾಮೀಣ ಪ್ರದೇಶದ ಸಾಮಾಜಿಕ ಕಟ್ಟುಪಾಡುಗಳಿಂದ ಬಿಡುಗಡೆ ಹೊಂದಲು ಉತ್ತರ ಪ್ರದೇಶ ಮತ್ತು ಬಿಹಾರದ ಬಡವರು ಕೆಲವು ದಶಕಗಳ ಹಿಂದೆ ಅಂದಿನ ಕಲ್ಕತ್ತೆಗೆ ವಲಸೆ ಬರುತ್ತಿದ್ದರು. ಆದರೆ ಇದಕ್ಕೆ ತದ್ವಿರುದ್ಧವಾಗಿ, ಈಗ ಬಂಗಾಳದ ಬಹಳಷ್ಟು ಮಂದಿ ಕಾನ್ಪುರ ಮತ್ತು ದೆಹಲಿಗೆ ಉದ್ಯೋಗವನ್ನರಸಿ ವಲಸೆ ಬರುತ್ತಿದ್ದಾರೆ. ಕೈಗಾರಿಕೆಗಳಿಲ್ಲದೆ ಸೊರಗಿರುವ ಪಶ್ಚಿಮ ಬಂಗಾಳ ಕೆಳವರ್ಗದ ಬಡ ಕೂಲಿ ಕಾರ್ಮಿಕರಿಗೆ ಉದ್ಯೋಗಾವಕಾಶ ನೀಡುವ ಸ್ಥಿತಿಯಲ್ಲಿಲ್ಲ.

ಆದಾಯ ಮತ್ತು ಶ್ರೀಮಂತಿಕೆಯ ಅಸಮಾನತೆ ಹಾಗೂ ಜಾತಿ ಶ್ರೇಣೀಕರಣ ವ್ಯವಸ್ಥೆಯ ಅಸಮಾನತೆಯ ನಡುವೆ ಸಾಕಷ್ಟು ವ್ಯತ್ಯಾಸವಿದೆ. ಜಾತಿವ್ಯವಸ್ಥೆಯಿಂದ ಶೋಷಿತರಾದವರಿಗೆ ಆರ್ಥಿಕ ಸಮಾನತೆಗಿಂತ ಸಾಮಾಜಿಕ ಸಮಾನತೆ ಮುಖ್ಯವಾಗುತ್ತದೆ.

ಜಾಗತೀಕರಣವನ್ನು ವಿರೋಧಿಸಿ ಸಂಘ ಪರಿವಾರ ಕೂಡ ಸ್ವದೇಶಿ ಚಳವಳಿ ಆರಂಭಿಸಿತು. ಜಾಗತೀಕರಣದ ವಿಷಯಕ್ಕೆ ಬಂದಾಗ ಎಡಪಂಥೀಯರು ಯಾವ ರೀತಿಯಲ್ಲಿ ಬಲಪಂಥೀಯರಿಗಿಂತ ಭಿನ್ನರಾಗಿದ್ದಾರೆ? ಅದಕ್ಕೂ ಮುಂಚೆ ಇಲ್ಲಿ ಇನ್ನೊಂದು ಪ್ರಮುಖ ಪ್ರಶ್ನೆ ಇದೆ: ಜಾಗತೀಕರಣ ಜಾತಿಗೆ ಪೂರಕವೋ, ಮಾರಕವೋ?

ಭಾರತದ ಜಾಗತಿಕ ಸಂಪರ್ಕದ ಬಗ್ಗೆ ಜಾತಿವ್ಯವಸ್ಥೆಯನ್ನು ಪ್ರತಿಪಾದಿಸುವ ಶಾಸ್ತ್ರಗಳು ಏನು ಹೇಳುತ್ತವೆ ಪರೀಕ್ಷಿಸೋಣ. ಹಿಂದೂಗಳ ಪ್ರಮುಖ ಧರ್ಮ ಗ್ರಂಥ ಮನುಸ್ಮೃತಿಯು ಸಾಗರದ ಮೂಲಕ ಪ್ರಯಾಣ ಮಾಡುವುದನ್ನು ನಿಷೇಧಿಸಿದೆ. ಹಿಂದೆ ಸಾಗರದ ಮೂಲಕ ಪ್ರಯಾಣ ಮಾಡುತ್ತಿದ್ದುದು ವಿದೇಶಗಳಿಗೆ ಮಾತ್ರ. ಜಾತಿವಾದಿ ಹಿಂದೂಗಳು ವಿದೇಶಿಯರನ್ನು ಅಪವಿತ್ರ ಎಂದು ಪರಿಗಣಿಸುತ್ತಿದ್ದರು. ಅವರನ್ನು 'ಮ್ಲೇಚ್ಛರು' ಎಂದು ಕರೆಯಲಾಗುತ್ತಿತ್ತು. ಮನುಸ್ಮೃತಿಯಲ್ಲಿ ಅಸ್ಪೃಶ್ಯರನ್ನು ಕೂಡ ಮ್ಲೇಚ್ಛರು ಎಂದು ಕರೆಯಲಾಗಿದೆ.

ಎರಡು ಶತಮಾನಗಳ ಹಿಂದೆ ವಿದೇಶಗಳಿಗೆ ಪ್ರಯಾಣ ಮಾಡುವುದು ಜಾಗತೀಕರಣದ ಉಚ್ಛ ಸ್ವರೂಪವಾಗಿತ್ತು. ಭಾರತದ ಎಡ ಮತ್ತು ಬಲಪಂಥಗಳು ಮನುಧರ್ಮದ ಕೆಲವು ವಿಚಾರಗಳಲ್ಲಿ ಸಾಮ್ಯತೆ ಹೊಂದಿರುವುದು ಕೇವಲ ಕಾಕತಾಳೀಯವೇ?

ಇನ್ನು ಇಂಗ್ಲಿಷ್ ಭಾಷೆಯ ಬಗ್ಗೆ ಎಡಪಂಥೀಯರು ಯಾವ ಧೋರಣೆ ಹೊಂದಿದ್ದಾರೆ? ಇವರ ಧೋರಣೆ ಬಲಪಂಥೀಯರಗಿಂತ ಏನಾದರೂ ಭಿನ್ನವಾಗಿವೆಯೇ? ಎಡಪಂಥೀಯ ಸರ್ಕಾರ ಪಶ್ಚಿಮ ಬಂಗಾಳದ ಶಾಲೆಗಳಲ್ಲಿ ಇಂಗ್ಲಿಷ್ ಭಾಷೆಯನ್ನೇಕೆ ನಿಷೇಧಿಸಿತು?

ಸಂಸ್ಕೃತ ಮತ್ತು ಅರಬ್ಬಿ ಶಿಕ್ಷಣ ಮಾದರಿಯನ್ನು ಕೆಡವಿ ಇಂಗ್ಲಿಷ್ ಶಿಕ್ಷಣವನ್ನು ಆರಂಭಿಸಿದ, ಜಾತಿವ್ಯವಸ್ಥೆಯ ವಿರುದ್ಧ ಮಾತನಾಡಿದ, ಐಪಿಸಿ ಮತ್ತು ಸಿಆರ್‌ಪಿಸಿ ಶಾಸನ ರಚಿಸಿ ಎಲ್ಲ ಭಾರತೀಯರನ್ನು ಶಾಸನದ ಮುಂದೆ ಸಮಾನರೆಂದು ಪರಿಗಣಿಸಿದ ಲಾರ್ಡ್ ಮೆಕಾಲೆ ಬಗ್ಗೆ ನಮ್ಮ ಎಡಪಂಥೀಯ ಬುದ್ಧಿಜೀವಿಗಳು ಏನು ಹೇಳುತ್ತಾರೆ? □

ಲೋಕವೇ ವಿಚ್ಛಿನ್ನ; ನಾನೇನು ವರವ ಬೇಡಲಿ?!

ಬುದ್ಧಾಯಣ

೬೩

ಪೂರ್ವ ಕಾಲದಲ್ಲಿ ವಾರಣಾಸಿ ರಾಜ್ಯವನ್ನು ಬ್ರಹ್ಮದತ್ತ ರಾಜನು ಆಳುತ್ತಿದ್ದನು. ಅಂತಹ ಸಮಯದಲ್ಲಿ ಬೋಧಿಸತ್ವರು ರಾಜನ ಮಗನಾಗಿ ಜನ್ಮ ತಾಳಿದನು. ತಂದೆಯ ಮರಣ ನಂತರ ರಾಜ ಪದವಿಯನ್ನು ಸ್ವೀಕರಿಸಿದನು. ತಂದೆಯ ಕಾಲದಲ್ಲಿ ಇದ್ದ ರಾಜ ಪುರೋಹಿತನೇ ಬೋಧಿಸತ್ವರಿಗೂ ಮುಂದುವರೆದ. ಆದರೆ ಆತನ ಬಗ್ಗೆ ಬೋಧಿಸತ್ವರಿಗೆ ನಂಬಿಕೆ ಪ್ರೀತಿ ವಿಶ್ವಾಸವಿರಲಿಲ್ಲ. ಅದಕ್ಕೆ ಕಾರಣ ಆತನಲ್ಲಿದ್ದ ಕುಟಿಲ ಬುದ್ಧಿಯೇ ಆಗಿತ್ತು. ಈ ಹಿಂದೆ ಒಬ್ಬ ಪ್ರಾಮಾಣಿಕ, ದಕ್ಷ ಮತ್ತು ಸೂಕ್ಷ್ಮ ಬುದ್ಧಿಯ ರಾಜಪುರೋಹಿತನಿದ್ದ. ಆತನಬಗ್ಗೆ ತಂದೆಯಲ್ಲಿ ಇಲ್ಲದ ಚಾಡಿಯ ಮಾತನ್ನು ಹೇಳಿ ಪುರೋಹಿತ ಆತನನ್ನು ಪದವಿಯಿಂದ ಚ್ಯುತಿಗೊಳಿಸಿದ್ದ.

ಸಿ. ಹೆಚ್. ರಾಜಶೇಖರ್

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಸಾವಸ್ಥಿಯ ಜೇತವನದಲ್ಲಿ ತಮ್ಮ ಅಪಾರ ಶಿಷ್ಯರೊಂದಿಗೆ ತಂಗಿದ್ದರು. ಅದಕ್ಕೂ ಪೂರ್ವ ಕಾಲದಲ್ಲಿ ವಾರಣಾಸಿ ರಾಜ್ಯವನ್ನು ಬ್ರಹ್ಮದತ್ತ ರಾಜನು ಆಳುತ್ತಿದ್ದನು. ಅಂತಹ ಸಮಯದಲ್ಲಿ ಬೋಧಿಸತ್ವರು ರಾಜನ ಮಗನಾಗಿ ಜನ್ಮ ತಾಳಿದನು. ತಂದೆಯ ಮರಣ ನಂತರ ರಾಜ ಪದವಿಯನ್ನು ಸ್ವೀಕರಿಸಿದನು. ತಂದೆಯ ಕಾಲದಲ್ಲಿ ಇದ್ದ ರಾಜ ಪುರೋಹಿತನೇ ಬೋಧಿಸತ್ವರಿಗೂ ಮುಂದುವರೆದ. ಆದರೆ ಆತನ ಬಗ್ಗೆ ಬೋಧಿಸತ್ವರಿಗೆ ನಂಬಿಕೆ ಪ್ರೀತಿ ಮತ್ತು ವಿಶ್ವಾಸವಿರಲಿಲ್ಲ. ಅದಕ್ಕೆ ಕಾರಣ ಆತನಲ್ಲಿದ್ದ ಕುಟಿಲ ಹಾಗೂ ಕುತಂತ್ರದ ಬುದ್ಧಿಯೇ ಆಗಿತ್ತು. ಈ ಹಿಂದೆ ಒಬ್ಬ ಪ್ರಾಮಾಣಿಕ, ದಕ್ಷ ಮತ್ತು ಸೂಕ್ಷ್ಮ ಬುದ್ಧಿಯ ರಾಜಪುರೋಹಿತನಿದ್ದ. ಆತನ ಬಗ್ಗೆ ತಂದೆಯಲ್ಲಿ ಇಲ್ಲದ ಚಾಡಿಯ ಮಾತನ್ನು ಹೇಳಿ ಇದೆ ಪುರೋಹಿತ ಆತನನ್ನು ಪದವಿಯಿಂದ ಚ್ಯುತಿಗೊಳಿಸಿದ್ದ.

ಒಮ್ಮೆ ಬೋಧಿಸತ್ವರಿಗೆ ಆತನ ಬಗ್ಗೆ ಆಸಕ್ತಿ ಮೂಡಿತು. ಆತ ಈಗ ಎಲ್ಲಿರುವನು ಏನು ಮಾಡುತ್ತಿರುವನು ಎಂಬ ಬಗ್ಗೆ ಕುತೂಹಲ ಮೂಡಿತು. ತನ್ನ ಗುಪ್ತಚಾರರನ್ನು ಕರೆದು ಆತನ ಬಗ್ಗೆ ವಿಚಾರಿಸಲು ವಿವರವು ದೊರೆಯಿತು. ಒಂದು ರಾತ್ರಿ ಮಾರುವೇಷದಲ್ಲಿ ಆತನ ನಿವಾಸದತ್ತ ನೆಡೆದರು. ಅದೇ ಸಮಯದಲ್ಲಿ ಕಳ್ಳರ ಗುಂಪೊಂದು ಕಳ್ಳತನ ಮಾಡಿಕೊಂಡು ಬರುವಾಗ ಮಾರ್ಗ ಮಧ್ಯೆಯಲ್ಲಿ ಮತ್ತೇರುವಷ್ಟು ಹೆಂಡ ಕುಡಿದರು. ಅಷ್ಟೂ ಸಾಲದೆಂದು ಒಂದು ಗಡಿಗೆಯಲ್ಲಿ ಹೆಂಡವನ್ನು ತುಂಬಿಸಿಕೊಂಡು ತೂರಾಡುತ್ತಾ ಬರುತ್ತಿದ್ದರು. ಬೀದಿಯ ಚೌಕದಲ್ಲಿ ಮಾರುವೇಷದ ರಾಜ ಮತ್ತು ಕಳ್ಳರ ಮುಖಾಮುಖಿಯಾಯಿತು.

ಕುಡಿದು ಮತ್ತರಾಗಿದ್ದ ಅವರಿಗೆ ಈತ ರಾಜನೆಂಬ ಗುರುತು ಸಿಗದೆ ಯಾರೋ ದಾರಿಹೋಕನೆಂದು ಭ್ರಮಿಸಿದರು. ಈತ ನಮ್ಮ ಚಹರೆಯನ್ನು ಗುರುತು ಹಿಡಿದು ನಾಳೆ ರಾಜನಿಗೆ ದೂರು ಕೊಟ್ಟರೆ ನಮಗೆ ಶಿಕ್ಷೆಯಾಗುವುದರಲ್ಲಿ ಸಂದೇಹವೆ ಇಲ್ಲ ಎಂದು ಬಗೆದ ಅವರು ರಾಜನನ್ನು ಬಂಧಿಸಿ;

"ಯಾರು ನೀನು? ಎಲ್ಲಿಗೆ ಹೋಗುತ್ತಿರುವೆ? ನಿನ್ನ ಹೆಸರೇನು? ನಿನ್ನ ಕಸುಬೇನು? ನೀನು ಶತ್ರು ರಾಜನ ಬೇಹುಗಾರನೇ? ಅಥವಾ ಕಳ್ಳನೇ?" ಎಂದು ಬಗೆ ಬಗೆಯಾಗಿ ವಿಚಾರಿಸುತ್ತಾ ಆತ ಹೊದ್ದ ಕಂಬಳಿಯಿಂದ ಆತನ ಕೈಗಳನ್ನು ಹಿಂದಕ್ಕೆ ಕಟ್ಟಿ ಬಂಧಿಸಿ ಮುನ್ನೆಡೆಯುತ್ತಿದ್ದರು. ಆದರೆ ರಾಜನ ಉತ್ತರ ಎಲ್ಲಕ್ಕೂ ಮೌನವೇ ಆಗಿತ್ತು. ಅಷ್ಟರಲ್ಲಿ ರಾಜನು ಹಿಂದಿನ ಪುರೋಹಿತನ ಮನೆಯ ಬಳಿ ಬಂದಿದ್ದನು. ಅದೇ ಸಮಯಕ್ಕೆ ಸರಿಯಾಗಿ ಎಂದಿನಂತೆ ಆ ಪುರೋಹಿತನು ನಕ್ಷತ್ರ ಮತ್ತು ಗ್ರಹಗಳನ್ನು ನೋಡುವ ಸಲುವಾಗಿ ಹೊರ ಬಂದು ಆಕಾಶಕ್ಕೆ ಮುಖ ಮಾಡಿ ವೀಕ್ಷಿಸುತ್ತಿದ್ದನು. ದೂರದಲ್ಲಿ ಯಾರದೋ ವಿಲಕ್ಷಣ ಸಂಭಾಷಣೆ ಕೇಳಿಬರುತ್ತಿತ್ತು. ಆತ ತನ್ನ ಗಮನವನ್ನು ಹರಿಸಿದ. ಸೂಕ್ಷ್ಮಮತಿಯಾದ ಆತ ಕಳ್ಳರು ರಾಜನನ್ನು ಬಂಧಿಸಿ ಎಳೆದು ತರುತ್ತಿರುವ ವಿಲಕ್ಷಣ ದೃಷ್ಯವನ್ನು ಕಂಡ. ಮಹಾ ಪರಾಕ್ರಮಿಯಾದ ರಾಜನು ಏಕೆ ಮೌನವಾಗಿ ನೆಡೆದು ಬರುತ್ತಿರುವ ಎಂಬ ವಿಚಾರವು ಅವನ ಮನದಲ್ಲಿ ಹೊಳೆಯಲು ಇದರ ಹಿಂದೆ ಏನೋ ರಹಸ್ಯ ಇರಬೇಕೆಂದು ಊಹಿಸಿದ. ಆದರೂ ಮನಸ್ಸು ಸಮಾಧಾನಕ್ಕೆ ಬರಲಿಲ್ಲ. ತನ್ನ ಹೆಂಡತಿಯನ್ನು ಕರೆದು ವಿಷಯವನ್ನು ತಿಳಿಸಿದ. ಆಕೆಗೆ ತನ್ನ ಗಂಡನಿಗೆ ಆದ ಅನ್ಯಾಯದ ಬಗ್ಗೆ ಮೊದಲೇ ಕೋಪವಿತ್ತು. ಆದುದರಿಂದ ಆಕೆ;



"ಸ್ವಾಮಿ, ನಿಮಗೆ ಅನ್ಯಾಯ ಮಾಡಿದ ಆ ರಾಜನ ಮಗನಲ್ಲವೆ ಈತ? ತಂದೆ ಮಾಡಿದ ತಪ್ಪಿಗೆ ತಕ್ಕ ಶಾಸ್ತಿಯಾಗಿದೆ. ಒಳ್ಳೆಯದೆ ಆಯಿತು ನೀವು ನೋಡಿದರೂ ನೋಡದವರಂತೆ ಸುಮ್ಮನೆ ಒಳ

ಬನ್ನಿ!" ಎಂದು ಮೂಗು ಮುರಿದ ಆಕೆ ಬರಬರನೆ ಒಳ ಹೊಕ್ಕು ಮರೆಯಾದಳು. ಇದನ್ನೆಲ್ಲ ಸೂಕ್ಷ್ಮವಾಗಿ ಗಮನಿಸಿದ ರಾಜ ಕಳ್ಳರನ್ನು ಉದ್ದೇಶಿಸಿ;

"ಅಯ್ಯಾ, ನಾನು ಕಳ್ಳನಾಗಲೀ ಅಥವಾ ನೀವು ಎಣಿಸಿದಂತೆ ಶತ್ರು ರಾಜನ ಕಡೆಯವನೂ ಅಲ್ಲ. ನಾನು ದಾರಿಹೋಕ ದಾರಿ ತಪ್ಪಿ ಈ ಕಡೆ ಬಂದಿದ್ದೇನೆ. ನನ್ನ ಬಳಿ ಇರುವ ಹಣ ಕಾಸು ಒಡವೆಗಳ ನ್ನೆಲ್ಲ ನೀವೇ ತೆಗೆದುಕೊಳ್ಳಿ ನನ್ನನ್ನು ಜೀವ ಸಹಿತ ಬಿಟ್ಟು ಬಿಡಿ" ಎಂದ. ಅವರುಗಳು ಹಾಗೆಯೇ ಮಾಡಿದರು.

ಮರುದಿನ ಮುಂಜಾನೆ ಎಂದಿನಂತೆ ಅರಮನೆಯ ರಾಜಪು ರೋಹಿತ ರಾಜನನ್ನು ಕಾಣಲು ಬಂದ. ಆತನಿಗೆ ವಂದಿಸಿ ತನ್ನ ಪೀಠದಲ್ಲಿ ಕುಳಿತುಕೊಂಡ . ಆತನನ್ನು ಉದ್ದೇಶಿಸಿದ ರಾಜನು;

"ಪುರೋಹಿತರೇ, ರಾಜ್ಯದಲ್ಲಿ ಎಲ್ಲವೂ ಸೌಖ್ಯವೆ?"

"ಮಹಾರಾಜ, ಎಲ್ಲವು ಕ್ಷೇಮ !"

"ನೆನ್ನೆ ರಾತ್ರಿ ಏನಾದರೂ ಅವಘಡ ಸಂಭವಿಸಿತೆ"

"ಯಾವ ವಿಘ್ನವು ಇಲ್ಲ ದೇವಾ!"

"ರಾತ್ರಿಯ ನಕ್ಷತ್ರಗಳನ್ನು ನೋಡಿದಿರೇ"

"ನೋಡಿದೆ ಪ್ರಭು!"

"ನಕ್ಷತ್ರಗಳು ಶುಭವಾಗಿದ್ದವೆ ಅಥವಾ ಅಶುಭವಾಗಿದ್ದವೆ?"

"ಪ್ರಭು ಶುಭವಾಗಿದ್ದವು!"

"ಯಾವುದಾದರೂ ಗ್ರಹವನ್ನು ಕಂಡಿರೆ!"

"ಇಲ್ಲ ಪ್ರಭು!" ಎನ್ನಲು ತನ್ನ ಸೇನಾಧಿಪತಿಯನ್ನು ಕರೆದು

"ಇಂಥಹ ಬೀದಿಯಲ್ಲಿ ಇಂಥಹ ಮನೆಯಲ್ಲಿರುವ ಹಿಂದಿನ ರಾಜಪುರೋಹಿತನನ್ನು ಕರೆದು ತನ್ನಿ" ಎಂದು ಆಜ್ಞೆ ಮಾಡಿದ. ಅವನು ಹಾಗೆಯೆ ಮಾಡಿದ. ರಾಜ ಪರಿಷತ್ತಿಗೆ ಬಂದ ಹಿಂದಿನ ಪುರೋ ಹಿತನು ತಲೆಬಾಗಿ ವಂದಿಸುತ್ತ;

"ಮಹಾರಾಜ, ನನ್ನನ್ನು ಕರೆಸಿದ ಕಾರಣವೇನು?"

"ಆಚಾರ್ಯರೇ, ನೆನ್ನೆ ರಾತ್ರಿ ಆಕಾಶದಲ್ಲಿ ನಕ್ಷತ್ರಗಳನ್ನು ಕಂಡಿರೇ?"

"ಕಂಡೆ ದೇವಾ"

"ಅದೇ ರೀತಿ ಯಾವುದಾದರು ಗ್ರಹವನ್ನು ಕಂಡಿರೆ"

"ಕಂಡೆ ಪ್ರಭು, ಅಷ್ಟೇ ಅಲ್ಲ ಅಪರಾಧಿ ಎಂಬ ಗ್ರಹವು ರಾಜನೆಂಬ ಗ್ರಹವನ್ನು ಕಬಳಿಸಿದ್ದನ್ನು ಕಂಡು ಬೆಚ್ಚಿ ಬಿದ್ದೆ ದೇವಾ!"

"ಆಚಾರ್ಯರೇ, ಅಪರಾಧಿ ಎಂಬ ಗ್ರಹವನ್ನು ನೀವು ಗುರುತಿಸ ಬಲ್ಲಿರಾ ?"

"ಗುರುತಿಸ ಬಲ್ಲೆ ಮಹಾರಾಜ! ಆ ಗ್ರಹವು ಇಂಥಹ ಕಾಡಿನಲ್ಲಿ, ಇಂಥಹ ಗುಹೆಯಲ್ಲಿ ಅಡಗಿರುವುದ ಬಲ್ಲೆ ದೇವಾ!" ಎನ್ನಲು ಮಹಾರಾಜನು ತನ್ನ ಸೇನಾಧಿಪತಿಯನ್ನು ಕರೆದು ಆ ಕಳ್ಳರನ್ನು ಹಿಡಿದು ತರಲು ಆಜ್ಞೆ ಮಾಡಿದ. ನೆನ್ನೆ ರಾತ್ರಿ ರಾಜನನ್ನು ಬಂಧಿಸಿದ ಕಳ್ಳರ ಕೂಟವನ್ನು ಸೆರೆ ಹಿಡಿದು ತಂದು ರಾಜನ ಮುಂದೆ ನಿಲ್ಲಿಸಿದರು. ಆ ಕಳ್ಳರು ಹೆಂಡದ ಮತ್ತಿನಲ್ಲಿ ನಾವು ನೆನ್ನೆ ರಾತ್ರಿ ಸೆರೆ ಹಿಡಿದದ್ದು ರಾಜ ನನ್ನೆಂದು ಗುರುತಿಸಿ ಭೂಮಿಗೆ ಕುಸಿದರು. ರಾಜ ಅವರುಗಳ ಕೈಯನ್ನು ಕತ್ತರಿಸಿ ಸೆರೆಮನೆಗೆ ಅಟ್ಟಿದ. ಬಳಿಕ ತನ್ನ ಪ್ರಸ್ತುತ ರಾಜಪುರೋಹಿತನನ್ನು ಉದ್ದೇಶಿಸಿ;

ಕಳ್ಳರು ಹೆಂಡದ ಮತ್ತಿನಲ್ಲಿ ನಾವು ನೆನ್ನೆ ರಾತ್ರಿ ಸೆರೆ ಹಿಡಿದದ್ದು ರಾಜ ನನ್ನೆಂದು ಗುರುತಿಸಿ ಭೂಮಿಗೆ ಕುಸಿದರು. ರಾಜ ಅವರುಗಳ ಕೈಯನ್ನು ಕತ್ತರಿಸಿ ಸೆರೆಮನೆಗೆ ಅಟ್ಟಿದ. ಬಳಿಕ ತನ್ನ ಪ್ರಸ್ತುತ ರಾಜಪು ರೋಹಿತನನ್ನು ಉದ್ದೇಶಿಸಿ; "ಪುರೋಹಿತರೇ, ಗ್ರಹಗಳು ಎಂದರೆ ಏನೆಂದು ತಿಳಿಯಿತೇ? ಕೇವಲ ಆಕಾಶ ಕಾಯದಲ್ಲಿರುವ ಗ್ರಹಗ ಳನ್ನು ಗುರುತಿಸಿ ಪೂಜಿಸಿದರಷ್ಟೇ ಸಾಲದು. ಅಥವಾ ಆಕಾಶ ಕಾಯದ ಗ್ರಹಗಳನ್ನು ಹೆಸರಿಸಿ ಮನುಷ್ಯರ ಭವಿ ಷ್ಯವನ್ನು ನುಡಿದರಷ್ಟೇ ಸಾಲದು. ಭೂಮಿಕಾಯದ ಇಂಥಹ ಕೆಟ್ಟ ಗ್ರಹಗಳ ಬಗ್ಗೆ ಅರಿವಿರಬೇಕು. ಆಗಲೇ ನಾವು ಪ್ರಜೆಗಳ ಬದುಕಿಗೆ ನೆಮ್ಮದಿಯನ್ನು ತರಬಲ್ಲೆವು. ಬರೀ ಚಾಡಿ, ಕುತಂತ್ರ, ಸ್ವಾರ್ಥ ಮತ್ತು ದುರಾಸೆ ಹಾಗೂ ತಳುಕಿನಿಂದ ಬಹು ಕಾಲ ಬಾಳಲು ಸಾಧ್ಯವಿಲ್ಲ.

"ಪುರೋಹಿತರೇ, ಗ್ರಹಗಳು ಎಂದರೆ ಏನೆಂದು ತಿಳಿಯಿತೇ? ಕೇವಲ ಆಕಾಶ ಕಾಯದಲ್ಲಿರುವ ಗ್ರಹಗಳನ್ನು ಗುರುತಿಸಿ ಪೂಜಿಸಿದರಷ್ಟೇ ಸಾಲದು. ಅಥವಾ ಆಕಾಶ ಕಾಯದ ಗ್ರಹಗಳನ್ನು ಹೆಸರಿಸಿ ಮನುಷ್ಯರ ಭವಿ ಷ್ಯವನ್ನು ನುಡಿದರಷ್ಟೇ ಸಾಲದು. ಭೂಮಿಕಾಯದ ಇಂಥಹ ಕೆಟ್ಟ ಗ್ರಹಗಳ ಬಗ್ಗೆ ಅರಿವಿರಬೇಕು. ಆಗಲೇ ನಾವು ಪ್ರಜೆಗಳ ಬದುಕಿಗೆ ನೆಮ್ಮದಿಯನ್ನು ತರಬಲ್ಲೆವು. ಬರೀ ಚಾಡಿ, ಕುತಂತ್ರ, ಸ್ವಾರ್ಥ ಮತ್ತು ದುರಾಸೆ ಹಾಗೂ ತಳುಕಿನಿಂದ ಬಹು ಕಾಲ ಬಾಳಲು ಸಾಧ್ಯವಿಲ್ಲ. ಏಕೆಂದರೆ, ಸತ್ಯದ ಕಣ್ಣಿಗೆ ಸದಾ ಬಟ್ಟೆ ಕಟ್ಟಲು ಸಾಧ್ಯವಿಲ್ಲ. ಆದುದರಿಂದ ತಮ್ಮ ಅಗತ್ಯ ನಮಗಿಲ್ಲ ತಾವಿನ್ನು ಹೊರಡ ಬಹುದು" ಎಂದು ಆಜ್ಞೆ ಮಾಡಿದ. ಹಿಂದಿನ ಸೂಕ್ಷ್ಮ ಮತಿಯಾದ ಹಳೆಯ ಆಚಾರ್ಯನನ್ನು ತನ್ನ ರಾಜಪು ರೋಹಿತನನ್ನಾಗಿ ಮತ್ತೆ ನಿಯಮಿಸಿಕೊಂಡ. ನಂತರ ಅವನನ್ನು ಕುರಿತು;

"ಆಚಾರ್ಯರೇ, ನಾನು ನಿಮ್ಮ ದಕ್ಷತೆಗೆ ಮೆಚ್ಚಿದ್ದೇನೆ. ನಿಮಗೆ ನಾನು ವರವನ್ನು ಕೊಡಲು ಬಯಸುತ್ತೇನೆ. ತಮಗೆ ಯಾವ ವರವು ಬೇಕೋ ಅದನ್ನು ಕೇಳಿರಿ ಎನ್ನಲು ಆತ;

"ಪ್ರಭು, ನನಗೆ ಸ್ಪಷ್ಟವಾಗಿ ಯಾವ ಬಗೆಯ ವರವನ್ನು ಕೇಳಬೇಕೆಂಬ ಪರಿಜ್ಞಾನವಿಲ್ಲ. ಆದುದರಿಂದ ಸ್ವಲ್ಪ ಕಾಲಾವಕಾಶವನ್ನು ಕೊಡಿ. ಮನೆಗೆ ಹೋಗಿ ನನ್ನ ಹೆಂಡತಿ ಮಕ್ಕಳನ್ನು ಕೇಳಿ ತಿಳಿದುಕೊಂಡು ಬರುತ್ತೇನೆ" ಎಂದು ಹೇಳಿ ಅನುಮತಿಯನ್ನು ಪಡೆದು ಆತ ಮನೆಗೆ ಬಂದ. ಅಲ್ಲಿ ನಡೆದ ವಿಷಯವನ್ನು ತಿಳಿಸಿದ. ಮನೆ ಮಂದಿಯೆಲ್ಲ ಸಂತೋಷಗೊಂಡರು. ಬಳಿಕ ತನ್ನ ಕುಟುಂಬ ವರ್ಗವನ್ನು ಕುರಿತು;

"ರಾಜನು ನನ್ನ ದಕ್ಷತೆಗೆ ಪ್ರಸನ್ನಗೊಂಡು ವರವೊಂದನ್ನು ನೀಡಲು ಬಯಸಿದ್ದಾನೆ. ಆತನಲ್ಲಿ ಯಾವ ವರವನ್ನು ಬೇಡಲಿ?" ಎನ್ನಲು ಅವರುಗಳ ಕಿವಿಯು ನಿಮಿರಿತು. ಅವರವರ ಮನೋಭಾವಕ್ಕೆ ತಕ್ಕಂತೆ ವರವನ್ನು ಕೇಳಲು ಸಜ್ಜಾದರು. ಮೊದಲಿಗೆ ಅವರ ಹೆಂಡತಿಯು ಮುಂದೆ ಬಂದು;

"ಸ್ವಾಮೀ, ನನಗಾಗಿ ನೂರು ಗೋವುಗಳನ್ನು ನೀಡುವಂತಹ ವರವನ್ನು ಬೇಡಿರಿ" ಎಂದಳು. ಅವರ ಮಗನು;

"ತಂದೆಯೇ, ಬೇಡುವುದಾದರೆ ನನಗಾಗಿ ಕುಮುದ ವರ್ಣದ ಕುದುರೆಯುಳ್ಳ ರಥವನ್ನು ಬೇಡಿ ಪಡೆಯಿರಿ" ಎಂದ. ಮಗಳು ಮುಂದೆ ಬಂದು;

"ತಂದೆಯೇ, ಬೇಡುವುದಾದರೆ ನನಗಾಗಿ ಸಕಲ ಬಗೆಯ ಚಿನ್ನಾಭರಣಗಳನ್ನು ಬೇಡಿರಿ" ಎಂದಳು. ಸೊಸೆಯು ಮುಂದೆ ಬಂದು;

"ಮಾವ, ಬೇಡುವುದಾದರೆ ನನಗಾಗಿ ಮಣಿಕುಂಡಲದಿಂದ ಹಿಡಿದು ಇಡೀ ದೇಹವ್ಯಾಪ್ತಿ ಲೇಪಿಸಿಕೊಳ್ಳುವ ಪ್ರಸಾಧನಗಳು ಮತ್ತು ಅಲಂಕಾರ ಸಾಧನಗಳನ್ನು ಬೇಡಿ ಪಡೆಯಿರಿ" ಎಂದಳು. ಕೊನೆಯದಾಗಿ ರಾಜಪುರೋಹಿತರು ತನ್ನ ದಾಸಿಯನ್ನು ಕುರಿತು;

"ಎಲೈ ದಾಸಿಯೇ, ನಿನ್ನ ಅಪೇಕ್ಷೆ ಏನು?"ಎನ್ನಲು

"ಸ್ವಾಮೀ, ಮನೆಯಲ್ಲಿದ್ದ ಒನಕೆ, ಕೇರುವ ಮೊರ ಮತ್ತು ಪೊರಕೆ ಹಳತಾಗಿದೆ. ಆದುದರಿಂದ ಬೇಡುವುದಾದರೆ ಅವುಗಳನ್ನು ಬೇಡಿ ಪಡೆಯಿರಿ ಎಂದಳು. ಇದರಿಂದ ಕಂಗೆಟ್ಟ ರಾಜಪುರೋಹಿತನು ಸಪ್ಪ ಮೋರೆ ಹಾಕಿಕೊಂಡು ಬಂದು ರಾಜನ ಎದುರಿಗೆ ನಿಂತುಕೊಂಡ. ಆಗ ರಾಜನು ಪ್ರಶ್ನಿಸಿದ;

"ಆಚಾರ್ಯರೇ, ಏಕೆ ಗೊಂದಲಗೊಂಡವರಂತೆ ಕಾಣ ಬರುತ್ತಿರುವಿರಿ? ಏನನ್ನು ಬೇಡಲು ನಿರ್ಧರಿಸಿರುವಿರಿ?" ಎನ್ನಲು, ರಾಜಪುರೋಹಿತರು ತನ್ನ ಮನೆಯವರ ವಿಭಿನ್ನ ಅಭಿಲಾಷೆಯನ್ನು ವಿವರಿಸಿದರು. ಅದನ್ನೆಲ್ಲ ಸಾವುದಾನದಿಂದ ಕೇಳಿದ ರಾಜನು;

"ಆಚಾರ್ಯರೇ, ಅಂತಿಮವಾಗಿ ತಮ್ಮ ಬೇಡಿಕೆ ಏನು?"

"ದೇವಾ, ನಾನು ಬೇಡುವುದಾದರೆ ಒಂದು ಶ್ರೇಷ್ಠ ಗ್ರಾಮವನ್ನು ಬೇಡಬೇಕೆಂದು ಬಯಸಿದ್ದೆ!" ಎಂದನು.

ಆಚಾರ್ಯರೇ, ಅಷ್ಟಕ್ಕೆ ಏಕೆ ಅಂಜುತ್ತಿರುವಿರಿ? ನಿಮ್ಮ ಕುಟುಂಬದವರು ಮತ್ತು ನೀವು ಕೇಳಿದ ವರವನ್ನೆಲ್ಲ ಕರುಣಿಸಿದ್ದೇನೆ. ಇಂದಿನಿಂದ ನಮ್ಮ ಕೆಲಸವನ್ನು ಮಾಡುವಲ್ಲಿ ಉತ್ಸುಕರಾಗಿರಿ ಅಂದು ಆಜ್ಞೆ ಮಾಡಿದ. ಆಗ ರಾಜನ ಉದಾರತೆಗೆ ರಾಜಪುರೋಹಿತನು ತಲೆಬಾಗಿ;

"ದೇವಾ, ನಿನ್ನ ನ್ಯಾಯಪರತೆ ಅನನ್ಯವಾದದ್ದು. ಲೋಕವೇ ವಿಭಿನ್ನ ರುಚಿಯುಳ್ಳದ್ದು ಆಗಿರುವಲ್ಲಿ ನಾನೇನು ಬೇಡಲೀ ಎಂದು ಕನವರಿಸುತ್ತಿದ್ದೆ. ಅಂಥಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕೇಳಿದ್ದನ್ನೆಲ್ಲ ಕರುಣಿಸಿದಿರಿ. ಜೊತೆಗೆ ನನ್ನ ಪಾಲಿಗೆ ಆಗಿದ್ದ ಅನ್ಯಾಯವನ್ನೂ ಸರಿಪಡಿಸಿ ನನ್ನನ್ನು ಧನ್ಯರನ್ನಾಗಿ ಮಾಡಿಬಿಟ್ಟಿರಿ. ನಿಮ್ಮ ಕರುಣೆಗೆ ಸಮರಿಲ್ಲ!" ಎಂದು ತಲೆಬಾಗಿ ವಂದಿಸಿದರು. □

'SAMVADA' Kannada Monthly, DECember 2010 RNI-KAR KAN/2002/9246 CPMG/KA/BGW-70
Office of Posting: Mail Business Center, Bangalore GPO, Date of Posting: 1st & 7th of Eve

Nutrition Health Hope



For Every Child



For Immuno challenged

Protein (g)	Fat (g)	Carbo-hydrate (g)	Folic acid mcg	Energy (Kcal)	Calcium (mg)	Iron (mg)
15.5	5.5	72	50	400	300	5

Protein (g)	Fat (g)	Carbo-hydrate (g)	Folic acid mcg	Energy (Kcal)	Calcium (mg)
15.5	5.5	72	200	400	400

★ Made with ORGANIC cereals and pulses ★ Rich in Omega 3 essential fatty acids ★ High Fiber ★ Delivers essential micro

CSR* Is Our Business

Partnering with NGOs to reach out

PRISTINE

- Freedom Foundation
- Myrada
- World Vision India
- St. John's Hospital Bangalore
- Karnataka Health Promotion Trust
- Yuvalok Bangalore
- Indira Gandhi Institute For Child Health
- Lok Biradari Prakalp
- Action Aid
- NEDHIV Nagaland

- Providing low cost nutrition supplement for malnourished woman and children.
- Training Self Help Groups for production of low cost nutrition supplement.
- Nutrition support for Immuno-challenged • Nutrition consultancy for Miday Meal program.

PRISTINE
An ISO 22000 Company

PRISTINE ORGANICS PVT LTD
No.44/2A, Kodigehalli Gate, NH-7, Sahakarnagar Post, Bengaluru -560 092
Phone: +91 80 43438484 Fax: +91 80 23620879
Mobile: +91 9538898022 email: sumakrishnan@pristineorganics.com www.pristineorganics.com